ಜನಪ್ರಿಯ
ಪುಸ್ತಕ ಮಾಲೆ

# ಜೀವನ

ಕೃಷ್ಣಕುಮಾರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

# ಜೀವನ

(ಸಣ್ಣ ಕಥೆಗಳ ಸಂಕಲನ)

ಕೃಷ್ಣಕುಮಾರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ,
ಚಾಮರಾಜ ಪೇಟೆ, ಬೆಂಗಳೂರು.

**JEEVANA** - A Collection of Short Stories by Krishna Kumar
Published by Kannada Pusthaka Pradhikara
(Kannada Book Authority) Chamaraj Pet, Bangalore -560018.

Pages : 142 + X

ಪುನರ್ಮುದ್ರಣ: ೧೯೯೬

ಹಕ್ಕುಗಳು : ಕನ್ನಡ ಪುಸ್ತಕ ಪ್ರಾಧಿಕಾರ

ಬೆಲೆ : ೨೫ (ಇಪ್ಪತ್ತೈದು ರೂಪಾಯಿಗಳು)

ಮುದ್ರಣ :

ವೆಂಕಟೇಶ್ವರ ಪ್ರಿಂಟರ್ಸ್

ನಂ. 50, ಮುಖ್ಯರಸ್ತೆ

ಕೆಂಪೇಗೌಡ ನಗರ, ಬೆಂಗಳೂರು - 560 019.

# ಅಧ್ಯಕ್ಷರ ಮುನ್ನುಡಿ

ಜ್ಞಾನಾರ್ಜನೆಗೆ ಅಕ್ಷರ ಮಾಧ್ಯಮವೇ ಪ್ರಮುಖ ಸಾಧನ. ಆಧುನಿಕ ಕಾಲದಲ್ಲಿ ತಿಳುವಳಿಕೆಯನ್ನು ನೀಡಲು ಅನೇಕ ಮಾಧ್ಯಮಗಳು ಸಿದ್ಧವಾಗಿದ್ದರೂ ಸಾಹಿತ್ಯ ಕೃತಿಗಳಿಗೆ ಮಾತ್ರ ಅಪೂರ್ವವಾದ ಅನನ್ಯತೆ ಇದೆ. ಸಾಹಿತ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಅನುಭವ ಜ್ಞಾನದಿಂದ ಮಾನವನ ಹೃದಯದಲ್ಲಿ ಆತ್ಮಸೌಂದರ್ಯ ವೃದ್ಧಿಸುತ್ತದೆ. ಭವ್ಯವಾದ ಪರಂಪರೆಯನ್ನು ನಿರಂತರವಾಗಿ ಮುಂದುವರಿಸಲು ಭಾಷೆಯ ಮೂಲಕ ಅನುವಾಗುವ ಗ್ರಂಥಗಳು ಸಂಸ್ಕೃತಿಯ ಜೀವನಾಡಿಯಾಗಿ ಮುಂದುವರಿಸಲು ಭಾಷೆಯ ಮೂಲಕ ಅನುವಾಗುವ ಗ್ರಂಥಗಳು ಸಂಸ್ಕೃತಿಯ ಜೀವನಾಡಿಯಾಗಿ ಜೀವಂತವಾಗಿ ಸಾಗಬೇಕಾಗುತ್ತದೆ. ಈ ಸಾಗುವಿಕೆಯಲ್ಲಿ ಮಾನವರು ತಂತಮ್ಮ ನಡುವಿನ ತಿಳುವಳಿಕೆಯನ್ನು ಪರಸ್ಪರ ಅರಿಯುತ್ತ ವಿಸ್ತರಿಸುತ್ತ ಸಾಮರಸ್ಯಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ಜೀವನ ಇಂತಹ ಅಪರೂಪ ಜ್ಞಾನಶಕ್ತಿಯನ್ನು ಒಳಗೊಂಡ ಸಾಹಿತ್ಯವನ್ನು ವಾಚಕರಿಗೆ ತಲುಪಿಸುವ ಜವಾಬ್ದಾರಿಯನ್ನು 'ಕನ್ನಡ ಪುಸ್ತಕ ಪ್ರಾಧಿಕಾರ' ಹೊತ್ತಿದೆ.

ಕರ್ನಾಟಕ ಸರ್ಕಾರ ಬಹುದಿನಗಳಿಂದ ಇಂತಹ ಮೌಲಿಕವಾದ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿಯ ಪ್ರಸರಣ ಕಾರ್ಯಕ್ಕೆ ಒತ್ತಾಸೆಯಾಗಿದ್ದರು. ಕುವೆಂಪು ಮತ್ತು ಮಾಸ್ತಿಅವರು ಸೇರಿ ಸಂಪಾದಿಸಿಕೊಟ್ಟ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಈ ಇಲಾಖೆಯಿಂದ ಪ್ರಕಟವಾದ 'ಕುಮಾರ ವ್ಯಾಸ ಭಾರತ' ಗ್ರಂಥ ಇಂದಿಗೂ ವಿದ್ವಾಂಸರ ಜನಸಾಮಾನ್ಯರ ಮೆಚ್ಚಿಗೆಗೆ ಪಾತ್ರವಾಗಿದೆ. ಅನಂತರ `ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ'ದ ಕಾಲಕ್ಕೆ ಕರ್ನಾಟಕ ಸರ್ಕಾರವು ಇದೇ ಇಲಾಖೆಯ ಮೂಲಕ ಕನ್ನಡದ ಮೌಲಿಕವಾದ ಹಾಗೂ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ನೂರಕ್ಕೂ ಹೆಚ್ಚಿನ

ಗ್ರಂಥಗಳನ್ನು `ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಆಯ್ದು ಪ್ರಕಟಿಸಿ ಓದುಗರ ಮೆಚ್ಚಿಗೆ ಗಳಿಸಿತು.

ಕರ್ನಾಟಕ ಸರ್ಕಾರ ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಪ್ರಕಟಿಸುತ್ತಿದ್ದ ಇಂತಹ ಅಪರೂಪದ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಲಿದೆ. ಅಲಭ್ಯವಾದ ಕನ್ನಡದ ಗ್ರಂಥಗಳನ್ನು ಜನಸಾಮಾನ್ಯರಿಗೆ ಎಟುಕುವ ಬೆಲೆಯಲ್ಲಿ ಮತ್ತೆ ಪ್ರಕಟಿಸಿ ತಲುಪಿಸುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯ ಗುರಿ. ಹಿಂದಿನ ಪೀಳಿಗೆಗಳ ಅನೇಕ ಉತ್ತಮ ಕೃತಿಗಳು ಇಂದಿನ ಪೀಳಿಗೆಯ ಓದುಗರಿಗೆ ಲಭ್ಯಗೊಳಿಸುವುದೇ ಈ ಯೋಜನೆಯ ಆಶಯವಾಗಿದೆ. ಅಲಭ್ಯವಾಗಿರುವ ಇತ್ತೀಚಿನ ಲೇಖಕರ ಉತ್ತಮ ಕೃತಿಗಳನ್ನೂ ಈ ಮಾಲೆಯಲ್ಲಿ ಪ್ರಕಟಿಸಲು ಉದ್ದೇಶಿಸಿದೆ.

ಈ ಮಾಲೆಯಲ್ಲಿನ ಪುಸ್ತಕಗಳನ್ನು ಪ್ರಕಟಿಸಲು ನೆರವಾದ ಜನಪ್ರಿಯ ಪುಸ್ತಕ ಮಾಲೆಯ ಉಪಸಮಿತಿಯ ಸದಸ್ಯರಿಗೆ, ಪುಸ್ತಕ ಪ್ರಾಧಿಕಾರದ ಸದಸ್ಯರಿಗೆ, ಪುಸ್ತಕ ಪ್ರಕಟಿಸಲು ನೆರವಾದವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ವೆಂಕಟೇಶ್ವರ ಪ್ರಿಂಟರ್ಸ್‌ರವರಿಗೆ ಕೃತಜ್ಞತೆಗಳು.

ನೆಲಮನೆ ಕೆ. ದೇವೇಗೌಡ

ಅಧ್ಯಕ್ಷರು

(ಕನ್ನಡ ಪುಸ್ತಕ ಪ್ರಾದಿಕಾರ)

# ಮೊದಲ ಮುದ್ರಣಕ್ಕೆ ಬರೆದ ಮುನ್ನುಡಿ

೧

ಇಂದಿನ ಕನ್ನಡದ ಕೆಲವು ಸಾಹಿತಿಗಳಲ್ಲೂ ಸಾಹಿತ್ಯ ಸೇವಕರಲ್ಲೂ, ಈಗಿನ ಕನ್ನಡ ಸಾಹಿತ್ಯ ಬಹುಮಟ್ಟಿಗೆ ಅನುಕರಣ ಸಾಹಿತ್ಯ ಎಂಬ ತಪ್ಪು ತಿಳಿವಳಿಕೆ ಬೇರೂರುತ್ತಲಿದೆ. ಅವರಲ್ಲಿಯೂ ಸಣ್ಣಕತೆ ಕೇವಲ ಅನುಕರಣವೇ ಎಂಬುದು ಸಿದ್ಧಾಂತವಾದಂತಾಗಿದೆ. ಸಾಹಿತ್ಯದ ಮೂಲತತ್ತ್ವಗಳ ಮರ್ಮವನ್ನರಿಯಬಲ್ಲವರಿಗೆ ಈ ಬಗೆಯ ಸಿದ್ಧಾಂತ ಎಷ್ಟು ವ್ಯರ್ಥವಾದುದು ಎಂಬುದು ಒಮ್ಮೆಲೆ ಗೊತ್ತಾಗುವುದು. ನಿಜವಾದ ಸಾಹಿತ್ಯ ಎಂದರೆ ನಾಲ್ಕೈಪ್ಪತ್ತು ತಾಳಿ ಬಾಳಬಲ್ಲ ಸಾಹಿತ್ಯ ಅನುಕರಣಶೀಲವಾಗುವುದು ಶಕ್ಯವೇ ಇಲ್ಲ. ಅನುಕರಣವು ಒಂದು ಬಾಹ್ಯ ವಿಕಾರ; ಕ್ಷಣಿಕವಾದುದು. ಅದಕ್ಕೆ ಶಾಶ್ವತ ಸಾಹಿತ್ಯದಲ್ಲಿ ಸ್ಥಾನವಿಲ್ಲ. ಬಳಿಗೆ ಮರಗಟ್ಟಿದ ಗಿಡಬಳ್ಳಿಗಳ ತೊಗಟೆಯಂತೆ, ಅನುಕರಣ ಸಾಹಿತ್ಯ ತನ್ನ ಕಾಲ ಬಂದೊಡನೆ ಉದುರಿ ಬೀಳುವದು. ಅಂಥ ಸಾಹಿತ್ಯ ಭವಿಷ್ಯತ್ತಿಗೆ ಯಾವ ಸೊತ್ತನ್ನೂ ಕೊಡಲಾರದು.

ಹಾಗಾದರೆ, ಇಂದಿನ ನಮ್ಮ ಕನ್ನಡ ನಾಡಿನಲ್ಲಿ ಹುಟ್ಟುತ್ತಿರುವದು ಇಷ್ಟು ಪೊಳ್ಳು-ಸಾಹಿತ್ಯವೇ? ಭಾವೀ ಜೀವನಕ್ಕಾಗಿ ಇಂದಿನ ನಮ್ಮ ಸಾಹಿತ್ಯ ಸ್ಥಿರವಾದ ತಳಹದಿಯನ್ನೂ ಹಾಕುತ್ತಿಲ್ಲವೇ? ಎಂಬ ಪ್ರಶ್ನೆಗಳು ಸಹಜವಾಗಿ ಏಳುವವು. ಸಾಹಿತ್ಯಗಳ ಜೀವನ ಕಲಹದಲ್ಲಿ, ಕನ್ನಡವು ಸಂಸ್ಕೃತವನ್ನು ಮಿಕ್ಕಿಮೀರಿ ತಾಳಿಬಾಳಿದ ಸಾಹಿತ್ಯ. ಹಾಗೆಯೇ, ಇನ್ನು ಮುಂದೆಯೂ ಅದು, ಬಾಳಿ ಬೆಳೆದು ವಿಶ್ವಸಾಹಿತ್ಯದಲ್ಲಿ ತನ್ನದೊಂದು ಸ್ಥಿರಪೀಠವನ್ನು ಪಡೆದುಕೊಳ್ಳಲು ಹಾತೊರೆವ ಸಾಹಿತ್ಯ ಎಂದ ಮೇಲೆ ಇಂದಿನ ನಮ್ಮ ಸಾಹಿತ್ಯ ಕೇವಲ ಅನುಕರಣ ಸಾಹಿತ್ಯದಷ್ಟು ಪೊಳ್ಳು ಸಾಹಿತ್ಯವಾಗಿರುವದು ಶಕ್ಯವೇ ಇಲ್ಲ. ಇದು ತತ್ತ್ವತಃ ಅಸಾಧ್ಯ.

ಯಾಕೆಂದರೆ, ಸಾಹಿತ್ಯವೂ ಜೀವನವೂ ಸಂಸ್ಕೃತಿಯ ಎರಡು ಕಾಲುಗಳು. ಒಂದು ಮತ್ತೊಂದನ್ನು ಯಾವಾಗಲೂ ಮುಂದೆಳೆಯುತ್ತಲೇ ಇವೆ, ಈ ವಿಶ್ವ ಜೀವನದ ಅನಂತಯಾತ್ರೆಯಲ್ಲಿ. ಒಮ್ಮೆ ಸಾಹಿತ್ಯ ಜೀವನಕ್ಕೆ ಆದರ್ಶದ ದಾರಿಯನ್ನು ತೋರುವದು. ಮತ್ತೊಮ್ಮೆ ಜೀವನ ಸಾಹಿತ್ಯಕ್ಕೆ ಮೂಲ ಬಿಂಬವಾಗುವುದು. ಹೀಗೆ ಯಾವಾಗಲೂ ಸಾಹಿತ್ಯ-ಜೀವನಗಳೆರಡೂ ಒಂದನ್ನೊಂದು ಉದ್ಧರಿಸುತ್ತಿರುವದೇ ಅವೆರಡರ ಸಾಮರಸ್ಯವೇ ನಿಜವಾದ ಪ್ರಗತಿ. ಸಾಹಿತ್ಯವು ಯಾವಾಗಲೂ ಸಮಾಜಜೀವನದ ಪ್ರತಿಬಿಂಬ ಎನ್ನುವದಾಗಲೀ, ಇಲ್ಲವೇ ಅದು ಯಾವಾಗಲೂ ನೆರಳಿನಂತೆ, ಸಮಾಜಜೀವನವನ್ನು ಅನುಸರಿಸುತ್ತಲೇ ಇರುತ್ತದೆನ್ನುವದೂ ತಪ್ಪು ಗ್ರಹಿಕೆ.

ಸಾಹಿತ್ಯವು ಜೀವನದ ಪ್ರತಿಬಿಂಬವೆಂದು ಕೆಲವರು ಹೇಳುತ್ತಾರೆ. ನನಗೆ ತಿಳಿದ ಮಟ್ಟಿಗೆ ಸಾಹಿತ್ಯವು, ಮುಖ್ಯತಃ ಉದಾತ್ತ ಸಾಹಿತ್ಯವು ಎಂದಿಗೂ ಜನ-ಜೀವನದ ಪ್ರತಿಬಿಂಬವಲ್ಲ; ಅದು ಕವಿ-ಜೀವನದ ಪ್ರತಿ-ಭಾ! ಕವಿಜೀವನದ ಪ್ರತಿ-ಭೆಯಾದೀ ಸಾಹಿತ್ಯ ಜನ-ಜೀವನಕ್ಕೆ ಒಂದು ದೀವಟಿಗೆ. ಕವಿಗಳು (ಸಾಹಿತಿಗಳು) ಜನಜೀವನಕ್ಕೆ ದಾರಿ ತೋರಿಸುವ ದೀವಟಿಗೆಗಾರರು.

ಇಂದಿನ ನಮ್ಮ ಸಾಹಿತ್ಯ 'ಆದರ್ಶ'-ಸಾಹಿತ್ಯ ಎನ್ನಬಹುದು. ಎಂದರೆ ಅದು ನಮ್ಮ ಇನ್ನು ಮುಂದಿನ ಜೀವನದ ಆದರ್ಶಗಳನ್ನು ಈಗಲೇ ಹುಟ್ಟಿಸುತ್ತಲಿದೆ ಎಂದರ್ಥ. ಇದೀಗ ನಮ್ಮ ನಾಡಜೀವನ ಹೊಸದಾರಿ ಹಿಡಿಯತೊಡಗಿದೆ. ಇಂದಿನ ನಮ್ಮ ಸಾಹಿತ್ಯ ಆ ಜೀವನಕ್ಕಿಂತಲೂ ಮುಂದಿದ್ದು ಆ ಹೊಸದಾರಿಯ ಹೊಳವು ಹಾಕುತ್ತಲಿದೆ. ಇಂದಿನ ನಮ್ಮ ಸಾಹಿತಿಗಳು ಮುಂದಿನ ಜೀವನದ ಉದಾತ್ತ ದೃಷ್ಟಾಂತಗಳನ್ನು ಕಂಡು ಅವುಗಳನ್ನು ಸಾಹಿತ್ಯದಲ್ಲಿ ಹೆಣೆಯುತ್ತಿದ್ದಾರೆ. ಆದುದರಿಂದ ಇಂದಿನ ಉದಾತ್ತ ಸಾಹಿತ್ಯ ಆ ಮುಂದಿನ ಜೀವನದ ಆವಿಷ್ಕಾರವೇ ಹೊರತು, ಕೇವಲ ಇಂದಿನ ಜೀವನದ ಪಡಿನೆಳಲಲ್ಲ. #ಇಂದಿನ ನಮ್ಮ ಜೀವನದ ಪಡಿನೆಳಲು ಆ ತರದ ಸಾಹಿತ್ಯದಲ್ಲಿ ಕಾಣದಿದ್ದ ಮಾತ್ರಕ್ಕೇ, ಅದು ಯಾವುದೋ ಒಂದರ ಅನುಕರಣವೆಂದು ಬಗೆಯುವದು ಸರಿಯಾದ ತರ್ಕವಾಗಲಾರದು. ಮುಖ್ಯ ಮಾತೆಂದರೆ, ಈಗಿನ ಯುಗದಲ್ಲಿ ಇಡೀ ವಿಶ್ವಜೀವನವೇ ಮಾರ್ಪಡುತ್ತಲಿದೆ. ಆ ಮಾರ್ಪಾಟನ್ನು ಅನುಲಕ್ಷಿಸಿ, ವಿಶ್ವಸಾಹಿತ್ಯದ ಅಂಗಾಂಗಗಳಾದ ಎಲ್ಲ ಸಾಹಿತ್ಯಗಳೂ ಹೊಸಹೊಸ ಹೊಳವುಗಳನ್ನು ಉಂಟು ಮಾಡುತ್ತಲಿವೆ. ಇಂದಿನದು, ಅಥವಾ ಇನ್ನು ಮುಂದಿನದು ವಿಶ್ವಸಂಸ್ಕೃತಿಯ ಉದಯಕಾಲ. ಅದಕ್ಕಾಗಿ ಎಲ್ಲ ಸಾಹಿತ್ಯಗಳು ತಮ್ಮ ತಮ್ಮ ಸಿದ್ಧತೆ ಮಾಡುತ್ತಲಿವೆ. ಕನ್ನಡ ಸಾಹಿತ್ಯವು ಆ ಉದಯದ ಮುಂಗುರುಹನ್ನು ಕಂಡುಕೊಂಡಿದೆ. ಈ ಉದಯ ಬೆಳಕು ಬೆಳಕುಗಳೆಲ್ಲ ಬೆರೆಯುವ ಕಾಲ; ಅದೊಂದು ಪ್ರಭಾಪೂರ. ಆದುದರಿಂದ ಕನ್ನಡವೂ ಬೆಳಕಿನ ಕಿರಣಗಳನ್ನು ಎಲ್ಲೆಡೆಗಳಿಂದಲೂ ಕಲೆಹಾಕಿ ತನ್ನ ಬೆಳಕಿನಲ್ಲಿ ಬೆರೆಸಿಕೊಳ್ಳುತ್ತಿದೆ; ಹಾಗೆಯೇ ತನ್ನ ಬೆಳಕಿನ ಕಳೆಯನ್ನು ಬೆಳೆಯಿಸುತ್ತಲಿದೆ. ಅಂತೇ ಇಂದಿನ ಕನ್ನಡ ಸಾಹಿತ್ಯ, ಕನ್ನಡದ ನಾಡು ತನ್ನ ಜನಜೀವನದ ಮುಂದಿನ ಮಾರ್ಪಾಟಿಗಾಗಿ ಸಂಗ್ರಹಿಸುತ್ತಿರುವ ಅಂತಃಶಕ್ತಿಯ ಆವಿಷ್ಕಾರ ಎನ್ನಬಹುದು. ಆ ಮಾರ್ಪಾಟಿನ ಮುಂಗುರುತಾಗಿ ಕನ್ನಡದಲ್ಲಿ, ಸಣ್ಣಕಥೆ, ಭಾವಗೀತೆ, ಹರಟೆ, ಭಾವನಾಚಿತ್ರ ಮೊದಲಾದ ಹೊಸ ಸಾಹಿತ್ಯರೂಪಗಳು ಹುಟ್ಟುತ್ತಲಿವೆ. ಸಾಹಿತ್ಯವು ಹೀಗೆ ಹೊಸ ದಾರಿಯಲ್ಲಿ ಹೊರಳಿದಾಗಲೆಲ್ಲ, ಸಾಹಿತ್ಯ ರೂಪಗಳೂ ಬದಲಾಗುವವು; ಹೊಸ ಹೊಸ ರೂಪ ತಾಳುವವು. ಇದು ನಿಸರ್ಗ ಸಿದ್ಧವಾದ ಮಾತೆನ್ನಬಹುದು. ಇದಕ್ಕೆ, ನಮ್ಮ ಕನ್ನಡ ಸಾಹಿತ್ಯ ಬಂದಿರುವದೇ ಸಾಕ್ಷಿ. ಒಂದು ಕಾಲಕ್ಕೆ ಸಂಸ್ಕೃತದ ಪ್ರೌಢವೃತ್ತಗಳು ಬೇಕಾದವು. ಮತ್ತೊಮ್ಮೆ ಷಟ್ಪದಿಗಳು ಸಾಮ್ರಾಜ್ಯವಾಳಿದವು; ಇನ್ನೊಮ್ಮೆ ರಗಳೆಗಳು ರಾಜ್ಯಭಾರ ಮಾಡಿದವು; ಮಗುದೊಮ್ಮೆ ವಚನಗಳು ಒಡೆತನ ಮಾಡಿದವು; ಬೇರೊಮ್ಮೆ ಸಾಂಗತ್ಯ ಸಾರ್ವಭೌಮವಾಯಿತು; ಮಾರೊಮ್ಮೆ, ಕಿರಿದರಲ್ಲಿ ಹಿರಿಯರ್ಥದ ತ್ರಿಪದಿಗಳೂ, ದಾಸರ ಪದಗಳೂ ಪಟ್ಟಕ್ಕೆ ಬಂದವು; ಕೊನೆಗೆ ಮುದ್ದಣ್ಣ ಬಂದು ಗದ್ಯವನ್ನು ಗದ್ದುಗೆಗೇರಿಸಿದ. ಆಮೇಲೆ ನಾಟಕ-ಕಾದಂಬರಿಗಳ ಕಾಲ. ಈ ಪ್ರಗತಿಯನ್ನು ನೋಡಿದರೆ ಆಗಾಗ ಹೊಸ ಹೊಸ ರೂಪಗಳನ್ನು ತಾಳುವದೇ ಸಾಹಿತ್ಯದ ಲಕ್ಷಣವೆಂದು ಹೇಳಬಹುದು. ಇಂದಿನ ನಮ್ಮ ಸಾಹಿತ್ಯದಲ್ಲಿ ಕಾಣುವ ಹೊಸಹೊಸ

---

#ಕನ್ನಡದಲ್ಲಿ ಇಂದಿನ ಜೀವನವನ್ನೇ ಅನುಸರಿಸುವ ಸಾಹಿತ್ಯ ಹುಟ್ಟುತ್ತಲಿಲ್ಲವೆಂದಲ್ಲ. ಆದರೆ ನಾನಿಲ್ಲಿ ಮಾತನಾಡುತ್ತಿರುವದು, ಇಂದಿನ ನಮ್ಮ ಜೀವನಕ್ಕೆ ಸಂಬಂಧವಿಲ್ಲದಂತಿದ್ದು ಕೇವಲ ಆದರ್ಶಾತ್ಮಕವಾದ ಸಾಹಿತ್ಯದ ಬಗೆಗೆ. ಕನ್ನಡದಲ್ಲಿ ಇದೀಗ ಈ ಎರಡನೆಯ ತರಹದ ಸಾಹಿತ್ಯವೇ ಹೆಚ್ಚು ಎನ್ನಬಹುದು.

ಸಾಹಿತ್ಯ ರೂಪಗಳೂ ನಮ್ಮ ಸಾಹಿತ್ಯದ ಒಡಲಲ್ಲೇ ಮೂಡಿ ಬಂದವು. ಅವುಗಳಲ್ಲಿ ಆನುಷಂಗಿಕವಾದ ಹೊರಬೆಳಕಿನ ಒಪ್ಪವಿರಬಹುದು. ಆದರೆ ಅವುಗಳ ಅಂತಃಶಕ್ತಿ (Native Genius) ಕನ್ನಡದ್ದೇ.

ಶ್ರೀನಿವಾಸರು ಹೇಳಿದಂತೆ, ಸಾಹಿತ್ಯದ ಉದ್ದೇಶ ಜೀವನವನ್ನು ಹೊಸದು ಮಾಡುವದು. ಜೀವನಕ್ಕೆ ಹೊಸತನವನ್ನೀಯಬಲ್ಲ ಸಾಹಿತ್ಯ ತಾನು ನವೋನವರೂಪ ತಾಳುವ ಶಕ್ತಿಯುಳ್ಳದ್ದಾಗಿರಬೇಕು. ಸಾಹಿತ್ಯ ಹೊಸ ಹೊಸದಾಗಬೇಕಿದ್ದರೆ, ಅದು ಎಲ್ಲಿದ್ದರೂ ಅಲ್ಲಿಂದ ಬೆಳಕಿನ ಎಳೆಗಳನ್ನು ಎಳೆದು ತನ್ನಲ್ಲಿ ಬೆರೆಸಿಕೊಂಡು ಹೊಸ ಹೊಸ ರೀತಿಯಲ್ಲಿ ಹೆಣೆಯುತ್ತಲಿರಬೇಕು. ಇಂಥ ಸಮನ್ವಯವೇ ಸಾಹಿತ್ಯ; ಇಂಥ ಸಮನ್ವಯವೇ ಜೀವನ. ಆದುದರಿಂದ, ಸಾಹಿತ್ಯ ತನ್ನ ಬೆಂಕಿ ಬೆಳಗುತ್ತಿರುವವರೆಗೂ ಹೊರಗಿನ ಕಿಡಿಗಳನ್ನೆಳೆದುಕೊಳ್ಳಲು ಹಿಂಜರಿಯಲಾಗದು. ನಿಜವಾಗಿ ನೋಡಿದರೆ ಇದೀಗ ಜಗತ್ತಿನ ಸಾಹಿತ್ಯಗಳು ತಮ್ಮ ಮೇರೆ ಮೀರಿ ಹರಿದು ಒಂದರೊಂದರಲ್ಲಿ ಬೆರೆಯುತ್ತಲಿವೆ. ಹಾಗೆಯೇ, ಕನ್ನಡವು, ಬರೀ ಇಂಗ್ಲಿಷು, ಬಂಗಾಲಿ, ಸಂಸ್ಕೃತಗಳಿಂದಷ್ಟೇ ಅಲ್ಲ; ಭಾರತದ ಒಳಹೊರಗಿನ ಸಾಹಿತ್ಯಗಳಿಂದ ಸಾಧ್ಯವಾದಷ್ಟೂ ಬೆಳಕಿನ ಕಿರಣಗಳನ್ನೆಲ್ಲ ತನ್ನಲ್ಲಿ ಎಳೆದುಕೊಂಡು ತನ್ನದಾಗಿ ಮಾಡಿಕೊಳ್ಳಬೇಕು. ಇದಕ್ಕೆ ನಾವು ಹೆದರಬೇಕಾದುದಿಲ್ಲ. ಏಕೆಂದರೆ ಇದು ಅನುಕರಣವಲ್ಲ; ಸಮೀಕರಣ. ಇಂಥ ಸಮೀಕರಣ (synthetic) ಸಾಹಿತ್ಯವೇ ನಮಗೀಗ ಬೇಕಾದುದು.

## ೨

ಈ ಬಗೆಯ ಹೊಸ ಸಾಹಿತ್ಯದಲ್ಲಿ ಸಣ್ಣಕತೆಗೆ ಬಹಳ ಮಹತ್ತ್ವದ ಸ್ಥಾನವಿದೆ. ಇಂದಿನ ಸಾಹಿತ್ಯ ಜೀವನದ ಅಂತಃಶೋಧನೆಯನ್ನು ನಡೆಸಿದೆ. ವ್ಯಕ್ತಿಗಳಲ್ಲಿಯ ಶಕ್ತಿವಿಕಾಸದ ಆವಿರ್ಭಾವವೇ ಅದರ ಗುರಿ; ಪ್ರತಿಜೀವಿಗಳ ಅನುಭವ ಅನುಭೂತಿಗಳಲ್ಲಿಯ ರಸಾವಿಷ್ಕರಣವೇ ಸಿದ್ಧಿ. ಈ ಎರಡೂ ಕಾರ್ಯಗಳಲ್ಲೂ ಸಣ್ಣಕತೆ ಒಂದು ಮಹತ್ತರವಾದ ಸಾಧನ.

ಹಿಂದಿನಂತೆ ಇಂದು ತತ್ತ್ವಪ್ರತಿಪಾದನೆಯೇ ಸಾಹಿತ್ಯದ ಕಾರ್ಯವಲ್ಲ; ಅದು ಈಗ ಸಂಸಾರದ ಸತ್ಯಸಂಪಾದನೆಯಲ್ಲಿ ತೊಡಗಿದೆ. ಹಿಂದಿನದು ಸಾಹಿತ್ಯ ಜೀವನದ ನೀತಿಯನ್ನು ಬೋಧಿಸುತ್ತಿತ್ತು; ಇಂದಿನದು ಜೀವನದ ರೀತಿಗಳನ್ನು ಶೋಧಿಸುತ್ತಿದೆ. ವ್ಯಕ್ತಿ ವ್ಯಕ್ತಿಗಳ ಶಕ್ತಿ ವಿಕಾಸದ ಆವಿರ್ಭಾವವೇ ಅದರ ಗುರಿ; ಪ್ರತಿಜೀವದ ಅನುಭವ-ಅನುಭೂತಿಗಳಲ್ಲಿಯ ರಸಾವಿಷ್ಕರಣವೇ ಸಿದ್ಧಿ. ಈ ಎರಡೂ ಕಾರ್ಯಗಳಲ್ಲಿ ಸಣ್ಣಕತೆ ಒಂದು ಮಹತ್ತರವಾದ ಸಾಧನ.

``ಸಣ್ಣಕತೆ'' ಯ ರೂಪ ಕನ್ನಡದಲ್ಲೇ ಬೆಳೆದುದು; ಅದರಲ್ಲಿ ತುಂಬಿದ ಜೀವಾಳ ಕನ್ನಡದ್ದೇ. #ಹೆಸರು ಮಾತ್ರ (ವ್ಯಾಖ್ಯೆ ಸಹಿತ) ಇಂಗ್ಲಿಷಿನಿಂದ ಎತ್ತಿಕೊಂಡದ್ದೇನೋ ನಿಜ.

---

#[ಈ ಮಾತು ನನ್ನ ಕತೆಗಳ ಮಟ್ಟಿಗಂತೂ ಕೇವಲ ಸತ್ಯವಾದದ್ದು. ಯಾಕೆಂದರೆ ಈವರೆಗೂ ನಾನು ಬೇರೆ ಭಾಷೆಯಲ್ಲಿ ಹೆಚ್ಚಾಗಿ ಕತೆಗಳನ್ನು ಓದಿಲ್ಲ; ಅಷ್ಟೇ ಅಲ್ಲ, ದುರ್ದೈವ: ಇಂಗ್ಲಿಷಿನಲ್ಲಿಯ ನಾಲ್ಕು ಒಳ್ಳೆಯ ಕತೆಗಾರರ ಹೆಸರು ಕೂಡ, ಈ ಕ್ಷಣ ಕೇಳಿದರೆ, ನಾನು ಅರಿಯೆ]

``ಸಣ್ಣಕತೆ'' ಗಳು ಕೇವಲ ಭಾವನಾಪ್ರಧಾನವಾದವೇ. ಅವಕ್ಕೆ ಕಥಾತ್ಮಕವಾದ ಗದ್ಯಭಾವಗೀತಗಳೆಂದರೂ ಎನ್ನಬಹುದು. ಯಾವ ಕಥೆ ಸನಿಯುಕ್ತ ಭಾವಗೀತದ ಮಟ್ಟಿಗೆ ಸರಿಯಾಗಿ ನಿಲ್ಲಬಲ್ಲುದೋ ಅದು ಸಣ್ಣಕತೆ. ಎಂದರೆ, ದೇಶ, ಕಾಲ, ಪಾತ್ರ, ವಸ್ತು, ಘಟನೆಗಳು ಇರಬಾರದೆಂತಲ್ಲ; ಅವು ಹೇಗೆಯೇ ಇದ್ದರೂ ಅವಕ್ಕೆ ಪ್ರಾಧಾನ್ಯತೆ ಇರಕೂಡದು. ಅವೆಲ್ಲವುಗಳನ್ನೂ ಮೀರಿ ತೋರಬಲ್ಲ ಭಾವಜ್ಯೋತಿಯ ಮಿಂಚು ಬೆಳಕೇ ಸಣ್ಣಕತೆಯಲ್ಲಿಯ ಜೀವಾಳ. ಸಣ್ಣಕತೆಯಲ್ಲಿ ನಾವು ನೋಡಬೇಕಾದುದು ವ್ಯಕ್ತಿಗಳನ್ನಲ್ಲ; ಆ ವ್ಯಕ್ತಿಗಳ ಅಂತಃಶಕ್ತಿಯನ್ನು.

೩

ಈ ಪುಸ್ತಕದಲ್ಲಿ ಬಂದ ಕತೆಗಳಲ್ಲಿ ಈ `ಅಂತಃಶಕ್ತಿ' ಎಷ್ಟರಮಟ್ಟಿಗೆ ವ್ಯಕ್ತವಾಗಿದೆಯೋ, ಎಷ್ಟರ ಮಟ್ಟಿಗೆ ಅದು ಓದುಗರ ಒಳಗಣ್ಣಿಗೆ ಹೊಳೆಯಬಲ್ಲದೋ ಅಷ್ಟರ ಮಟ್ಟಿಗೆ ಮಾತ್ರ ನನ್ನ ಕೃತಾರ್ಥತೆ. ಇದರಲ್ಲಿಯ ಎಂಟೂ ಕತೆಗಳು ಸಂಪೂರ್ಣವಾಗಿ ``ಸಣ್ಣಕತೆ''ಯ ಒರೆಗೆ ಹತ್ತುವವೆಂದೇ ಹೇಳಲಾರೆ. ಆದರೆ ಸಣ್ಣಕತೆಯ ತಿರುಳು ಮುಕ್ಕಾಲು ಪಾಲಾದರೂ ಇಲ್ಲದ ಕತೆ ಯಾವುದೂ ಇಲ್ಲವೆಂದು ಹೇಳಬಲ್ಲೆ.

``ಗೆಳೆತನದ ಗೆಲವಿ''ನಲ್ಲಿ ಬರುವ ಮೊದಲ ಕವಿತೆಯ ತುಣುಕು ನನ್ನ ಮಿತ್ರರಾದ ಶ್ರೀ. ನಾರಾಯಣ ಸಂಗಮ ಅವರದು; ಎರಡನೆಯದು ಶ್ರೀ ಮಧುರಚೆನ್ನರದು. ಶ್ರೀಬೇಂದ್ರೆಯವರ ಕವಿತೆಯೊಂದೆರಡನ್ನು ಉಪಯೋಗಿಸಿದುದನ್ನು ಬೇರೆ ಹೇಳುವ ಕಾರಣವಿಲ್ಲ; ಅವರ ಕವಿತೆ ಎಲ್ಲರೂ ಬಲ್ಲರು. ಮುಖಚಿತ್ರ ಬರೆದುಕೊಟ್ಟವರು ಶಾಂತಿನಿಕೇತನದ ಶ್ರೀಮಾರ್ತಾಂಡ ಜೋಶಿ ಅವರು. ಈ ಕಲಾವಿದರಿಗೆಲ್ಲ ನಾನು ಉಪಕೃತ.

ನನ್ನಲ್ಲಿ ಹೆಚ್ಚಾದ ಆಸ್ಥೆಯಿಟ್ಟು, ನನಗೆ ಬಿಡುವಿಲ್ಲದಾಗಲೂ ಬಲುಮೆಯ ಸಲಿಗೆಯಲ್ಲಿ ಹಸ್ತಪ್ರತಿಯನ್ನು ನನ್ನಿಂದ ಸಿದ್ಧಪಡಿಸಿಕೊಂಡು ಅದಕ್ಕಾಗಿ ಅದೆಷ್ಟೋ ಅನನುಕೂಲತೆಗಳನ್ನು ಸಹಿಸಿಯೂ. ಅಕ್ಕರೆಯಿಂದ ಅಚ್ಚುಹಾಕಿಸಿ ಈ ಪುಸ್ತಕವನ್ನು ಪ್ರಕಟಮಾಡುವುದಕ್ಕೆ ಮುಂದುವರಿದು ಬಂದ ಮನೋಹರ ಗ್ರಂಥಮಾಲೆಯ ಸಂಚಾಲಕರಿಗೆಲ್ಲರಿಗೂ ತುಂಬಾ ಅಭಿವಂದನೆಗಳು.

**ಮಂಗಲ ಮಂದಿರ** **ಕೃಷ್ಣಕುಮಾರ**

ಬಡೋದಾ: ತಾ: ೯-೯-೧೯೩೪

# ಜೀವನ

"ರಸವೆ ಜನನ
ವಿರಸ ಮರಣ
ಸಮರಸವೇ ಜೀವನ"

*-ಅಂಬಿಕಾತನಯದತ್ತ*

# ಪರಿವಿಡಿ


| | |
|---|---|
| ೧. ಜೀವನ | ೦೧ |
| ೨. ಚಿರಕುಮಾರಿ | ೬೩ |
| ೩. ಗೆಳೆತನದ ಗೆಲುವು | ೬೩ |
| ೪. ಜೀವನ-ಕಲಹ | ೬೩ |
| ೫. ನಂದಾದೀಪ | ೬೩ |
| ೬. ಗುಬ್ಬಿಗಳ ಸಂಸಾರ | ೭೩ |
| ೮. ಆಚೆಯ ಬೆಳಕು | ೮೩ |
| ೯. ಪುನರಾವರ್ತ | ೧೦೩ |

# ಜೀವನ

೧

"........... ಇನ್ನು ಮೇಲೆ ನಾನು ಆ ಚಂಡಾಲನ ಮೋರೆಯನ್ನಾದರೂ ನೋಡೇನೇ? ನನ್ನ ಹೊಟ್ಟೆಯಲ್ಲಿ ಹುಟ್ಟಿ ಇಂಥಾ ಹೇಸಿಗೆ ಕೆಲಸಕ್ಕೆ ಕೈ ಹಾಕಿದಾ, ನೀಚಾ! ಇನ್ನೇನು ಉಳಿಯಿತು? ನಮ್ಮ ಕುಲದ ಪಿತೃಗಳೆಲ್ಲಾ ನರಕಕ್ಕೆ ಇಳಿದೇ ಹೋದರು! ಇಷ್ಟು ದಿನಗಳವರೆಗೂ ನಾವು ಪರೋಪರಿಯಿಂದ ಧರ್ಮಕರ್ಮಗಳನ್ನು ಕಾದುಕೊಂಡು ಬಂದದ್ದು ಈಗ ಏನಾಯಿತು? ಹಸುಗೂಸು ಆದಂದಿನಿಂದ ಬಾಯತುತ್ತು ಕೊಟ್ಟು ಬೆಳೆಸಿ ದೊಡ್ಡವನನ್ನಾಗಿ ಮಾಡಿದ್ದಕ್ಕೆ ಈತ ಉಪಕಾರ ತೀರಿಸುವುದು ಈ ಪರಿಯೇ? ಈತ ಇನ್ನೂ ಮೂರು ವರ್ಷದ ಮಗುವಿರುವಾಗಲೇ ಅವರು ತೀರಿಹೋದರು. ಅಲ್ಲಿಂದ ಇಲ್ಲಿಯವರೆಗೆ ಈತನಿಗಾಗಿ ನಾನು ಪಟ್ಟಕಷ್ಟವೆಷ್ಟು? ಬಟ್ಟ ಭವಣೆಯೆಷ್ಟು? ಈತ ದೊಡ್ಡವನಾಗಿ ಬೆಳಕಿಗೆ ಬಂದರೆ ನಮ್ಮ ಮನೆತನದ ಕೀರ್ತಿ ಬೆಳಗೀತೆಂಬ ಹಂಬಲದಿಂದ, ನಾನು ಸ್ವತಃ ಉಪವಾಸ ವನವಾಸ ಮಾಡಿ, ಈತನನ್ನು ಸಲಹಿ ಈ ಮನೆಗೆ ತಂದೆ. ಅದಕ್ಕಾಗಿ ಮಾನ-ಮರ್ಯಾದೆ ನೋಡಲಿಲ್ಲ; ಕೀಳು-ಮೇಲು ಅನ್ನಲಿಲ್ಲ. ಸಿಕ್ಕ ಮನೆಯ ಅಡಿಗೆ-ನೀರು ಮಾಡಿದ್ದು ಯಾರ ದಸಿಂದ? ನಿಮ್ಮಂಥಾ ಗಂಡಸರಿಗೆ ನೂರು ವರ್ಷದಾಯುಷ್ಯದಲ್ಲಿ ತೀರಿಸಲಿಕ್ಕೆ ಆಗದಷ್ಟು ಸಾಲದ ಭಾರಾ ಅವರು ನನ್ನ ಕೊರಳಿಗೆ ಕಟ್ಟಿಹೋದರು. ಹತ್ತು ವರ್ಷದೊಳಗೆ ನಾನೊಬ್ಬಳೆ ಅದನ್ನೆಲ್ಲಾ ತೀರಿಸಿದೆ. ಈತನ ಅಭ್ಯಾಸ ಕೆಟ್ಟೀತೂ; ಈತನ

ಜೀವಕ್ಕೆ ಕಸಿವಿಸಿಯಾದೀತೂ ಅಂತ ನಾನಽ ಎಷ್ಟು ಕಷ್ಟ ಬಂದರೂ ನುಂಗಿಕೊಂಡು ಒಳಗಿಂದೊಳಗಽ ಸಣ್ಣಾಗತಿದ್ದೆ. ನನ್ನ ಸುಖದುಃಖದ ಕಡೆಗೆ ಕಣ್ಣುಹಾಕಿ ನೋಡದೆ ಈತನ ಹೊಟ್ಟೆಗೆ-ನೆತ್ತಿಗೆ ಎಲ್ಲಿ ಕಡಿಮಿ ಆದೀತೋ ಅಂತ ಆಸರಂತ ಚಿಂತಿ ಮಾಡತಿದ್ದೆ. ನಾನು ಅಷ್ಟೆಲ್ಲಾ ಕಷ್ಟಪಟ್ಟದ್ದು ಯಾತಕ್ಕ?.. ಯಾತಕ್ಕಽ? ನೀವಾದರೂ ಹೇಳ್ರೀ! ನಾ ಬಂಗಾರದ ಸಿದಿಗೀ ಮ್ಯಾಲೆ ಸುಡಗಾಡಕ್ಕ ಹೋಗಬೇಕೂಂತ ಅಷ್ಟೆಲ್ಲಾ ಮಾಡಿದೆನೋ? ಹೇಳ್ರಿ! ಈಗ ದೊಡ್ಡಿಸ್ತನದಿಂದ ಕರೀಲಿಕ್ಕೆ ಬಂದೀರಿ. ಹೇಳ್ರಿ....... ಏನು ಬೇಕಾದ್ದಾದರೂ ನಾಯೇನು ಬರುವವಳಲ್ಲಾ. ಆತ ನನ್ನ ಮಗನೇ ಅಲ್ಲಾ. ಈ ಹೆತ್ತ ಹೊಟ್ಟೀ ಬಂಜೀ ಅಂತ ನಾ ತಿಳಕೊಂಡೇ ಇದ್ದೇನಿ. ನನಗೀಗ ಯಾರಿಂದೇನಾಗಬೇಕು? ಈ ಮಗಾ ಅನ್ನಿಸಿಕೊಳ್ಳಾವನಿಂದ ನನಗ ಬಂದ ಸುಖಾ ಏನು? ಇಂಥಾ ಮಕ್ಕಳು ಹುಟ್ಟಿಯಾದರೂ ಏನು ಫಲಾ! ಮುಪ್ಪಿನ ಮುದುಕಿ ನಾನು; ಮೈಯೆಲ್ಲಾ ಬಾಗಿ ಹೋಗೇದ; ಕಾಲೆಲ್ಲಾ ತಡವರಸ್ತಾವಽ; ಕೈಯೆಲ್ಲಾ ನಡಗತಾವ, ಕಣ್ಣು ನೋಡಿದರ ಮಂಜ ಮಂಜು! ಇಂಥಾ ಪರಿಯಿಂದ ನಾನಿಲ್ಲೆ ಒದ್ದಾಡುವಾಗ ಈತ ಮುಂಬೈಯೊಳಗ ತಾನು ಮಾತ್ರ ಚಕ್ಕಂದದಿಂದ ಮೆರೀತಾನ! ನನ್ನ ಸುಖ ದುಃಖಾ ಏನು ಈತ ನೋಡಿದ ಹಾಗಾಯಿತೂ!..... ಇರಲಿ; ಇರಲಿ. ನನ್ನ ದೈವ ಖೊಟ್ಟಿ. ಸುಮ್ಮನೆ ಮಂದಿಗೆ ಬೈದೇನು ಫಲಾ!........ನಾ ಸತ್ತು ಅಡವೀ ಹೆಣಾ ಆದರೂ ಅಡ್ಡಿಯಿಲ್ಲ. ನಾಳೆ ನನ್ನ ಶ್ರವಾನ ಮುನಸೀಪಾಲ್ಟೀಯವರು ಎಳೆದು ಹಾಕಿದ್ರೂ ಹಾಕಲಿ! ನಾಯೇನ ಆ ಕುಲಗೇಡಿ ಇದ್ದಲ್ಲಿ ಬರುವವಳಲ್ಲ,..... ನನ್ನ ಕೈ ಸಾಗಿದಷ್ಟು ದಿನಾ ಯಾರದಾದರೂ ಮನೆಯಲ್ಲಿ ಅಡಿಗೆ-ನೀರು ಮಾಡಿ ಕಾಲಾ ಹಾಕತೀನಿ. ಈತನ ದುಡ್ಡು ಬೇಡಾ; ದುಗ್ಗಾಣಿ ಬೇಡಾ! ನನ್ನಷ್ಟಕ್ಕ ನಾನು ತಣ್ಣಗೆ ರಾಮಾ, ಕೃಷ್ಣಾಂತ ಜೀವಾ ನೀಗಿ ಹೋದರ ಸಾಕು. ಮುಖ್ಯ, ನನ್ನ ದೈವ ಖೊಟ್ಟಿ! ನನ್ನ ದೈವ ಖೊಟ್ಟಿ! .. ನನ್ನ ದೈವ ಖೊಟ್ಟೀ !.... ಅದಕ್ಕ ಯಾರೇನು ಮಾಡ್ಯಾರೂ...!!"

ಮಾತನಾಡುತ್ತಿರುವಂತೆಯೇ, ರಮಾಬಾಯಿಯವರು, ಉದ್ವೇಗ ಹವಣುದಪ್ಪಲು, ಹಣೆ ಹಣೆ ಬಡಿದುಕೊಂಡು, ನೆಲಕ್ಕೆ ಕೈಯೂರಿ ಬಿದ್ದು

ಬಿಟ್ಟರು. ಇದ್ದಕ್ಕಿದ್ದ ಹಾಗೆ ಅವರ ಕಣ್ಣುಕುಣಿಕೆಯಿಂದ ನೀರಹನಿಗಳು ಹೊರಕ್ಕೆ ಹಣಿಕೆ ಹಾಕಹತ್ತಿದವು. ಎಚ್ಚರದಪ್ಪಿ ಅಳುತ್ತಿರುವಂತೆಯೇ ಅವರು ಇನ್ನು ಹೆಚ್ಚಾಗಿ ತಮ್ಮನ್ನೇ ಬೈದುಕೊಳ್ಳತೊಡಗಿದರು. ಪಾಪ! ಮುದುಕಿ ಎಂಟು ದಿನಗಳ ನಸಿಜ್ವರದಿಂದ ಮೊದಲೇ ಹಣ್ಣಾಗಿದ್ದಿತು. ಮೇಲೆ ಅವರ ಮಾನಸಿಕ ಉದ್ವೇಗದ ಕಿಚ್ಚು ಬೇರೆ ಹೆಚ್ಚಿತ್ತು. ಇಂಥದರಲ್ಲಿಯೇ ಕೇಶವರಾಯರೂ, ರಂಗರಾಯರೂ ಅವರನ್ನು ಕಾಣುವುದಕ್ಕೆ ಬಂದುದರಿಂದ, ಅವರಿಗೆ ಸಮಾಧಾನದ ಬದಲು ದುಃಖವೇ ಇಮ್ಮಡಿಸಿದ್ದಿತು. ರಮಾಬಾಯರು ಹಣ್ಣುಹಾಗಲಕಾಯಿಯಂತಹ ಮುದುಕಿ. ಮಾತಿನ ಆವೇಶದಿಂದ ಅವರ ಕಸಿವಿಸಿ ಕೈಮೀರಿತು. ಕುಳಿತವರು ಹಾಗೆಯೇ ಒರಗಿಕೊಂಡು ಉಬ್ಬಸಬಡಹತ್ತಿದರು. ಒಡನೆಯೆ, ರಂಗರಾಯರು ಬದಿಯಲ್ಲಿ ಕುಳಿತು ಗಾಳಿ ಬೀಸಹತ್ತಿದರು. ಕೇಶವರಾಯರು ಡಾಕ್ಟರರನ್ನು ಹುಡುಕಿಕೊಂಡು ಬರುವುದಕ್ಕೋಡಿದರು. ಅವರಿಬ್ಬರಿಗೂ ಸಂಗತಿಗಳು ಒಡಿತ ತಪ್ಪುತ್ತಿರುವಂತೆ ಎನ್ನಿಸತೊಡಗಿತು.

*  *  *  *  *

೨

ಗೋಪಾಲ ರಮಾಬಾಯರಿಗೆ ಒಬ್ಬನೇ ಒಬ್ಬ ಮಗ. ಆತ ಎಂ. ಎ. ಪಾಸಾಗಿ ಮುಂಬೈಯ ಕಾಲೇಜೊಂದರಲ್ಲಿ ಪ್ರೊಫೇಸರನಾಗಿದ್ದ. ಗೋಪಾಲನ ತಂದೆ ಮಾಡಿದ ಸಾಲದ ಫಲವಾಗಿ ತಾಯಿ-ಮಕ್ಕಳು ಬಹಳದಿನ ಬಡತನದಲ್ಲೇ ಕಾಲ ಕಳೆದಿದ್ದರು. ಆದರೂ ರಮಾಬಾಯರು ಜಾಣತನದಿಂದ ಮಗನಿಗೆ ಪೂರ್ಣ ವಿದ್ಯಾಭ್ಯಾಸ ಮಾಡಿಸಿದ್ದರು. ಕೇಶವರಾಯ ರಂಗರಾಯರಂಥ ಗೆಳೆಯರ ನೆರವಿನಿಂದಲೂ ತನ್ನ ಜಾಣತನದ ಬಲದಿಂದಲೂ, ಗೋಪಾಲ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲೆಲ್ಲ ಹೌದೆನ್ನಿಸಿಕೊಳ್ಳುವಂತೆ ತೇರ್ಗಡೆ ಹೊಂದಿದ್ದ. ರಮಾಬಾಯರು ಮುಪ್ಪಿನ ಮುದುಕಿಯಾದರೂ, ಮಗನ ಮುಂದಿನ ಸೌಭಾಗ್ಯವನ್ನೊಮ್ಮೆ ನೋಡಿ ಕಣ್ಣು ಮುಚ್ಚಬೇಕೆಂದು ಹಾರೈಸಿಕೊಂಡಿದ್ದರು.

ಅವರ ಹಾರೈಕೆ ತುಂಬಿಬರುವ ಅವಧಿಯೂ ಬಂದಂತಾಗಿದ್ದಿತು. ಮಗನು ಪ್ರೊಫೇಸರನಾದುದರಿಂದ, ತಮ್ಮ ಕಷ್ಟವೆಲ್ಲವನ್ನು ಅವರು ಒಂದು ಕನಸೆಂದು ಭಾವಿಸಿದರು. ವಾಡಿಕೆಯಲ್ಲಿ ಹೇಳುವಂತೆ, ಅವರಿಗೆ ಅವರ ಸುಖಸ್ವರ್ಗ ಮೂರೇ ಬೆರಳು ಉಳಿದಿದ್ದಿತೆನ್ನಬೇಕು. ಆದರೇನು! ಅಂಥ ಸಕಾಲದಲ್ಲಿಯೂ ಅವರ ಸುಖದಾಸೆಯು ಮಣ್ಣುಗೂಡುವಂಥ ಸಂಗತಿಯೊಂದು ಒದಗಿದ್ದಿತು. ಅದರಿಂದ ಅವರು ಎದೆಯೊಡೆದುಕೊಂಡು ಬಿಟ್ಟಿದ್ದರು. ಅವರು ಜೀವಿಸುತ್ತಿದ್ದುದು ಕೇವಲ ಸಾವಿನ ದಾರಿಯನ್ನು ಕಾಯುವುದಕ್ಕೆ ಮಾತ್ರ. ಸೀತಾ-ದಮಯಂತಿ ಮೊದಲಾದವರು ಅಪಾರ ಕಷ್ಟಕ್ಕೀಡಾದವರೆಂದು ರಮಾಬಾಯರು ಪುರಾಣದಲ್ಲಿ ಕೇಳಿ ತಿಳಿದಿದ್ದರು. ಆದರೆ ತಮಗೊದಗಿದ ದುಃಖದ ಮುಂದೆ ಸೀತಾ-ದಮಯಂತಿಯರ ದುಃಖ ಮಾತಿಗೆ ಬಾರದ್ದೆಂದು ಅವರ ಭಾವನೆ. ಆ ದುಃಖದ ಆವೇಗಕ್ಕೆ ಗುರಿಯಾದ ರಮಾಬಾಯರಿಗೆ ಇತ್ತೀಚೆ ಅರೆಹುಚ್ಚುತನ ಬೇರೆ ಸೇರಿದಂತಾಗಿದ್ದಿತು.

ರಮಾಬಾಯರಿಗೆ ಬಂದ ಕುತ್ತು ಅವರ ದೃಷ್ಟಿಯಿಂದ ಕಲ್ಪನಾತೀತವಾದದ್ದೇ ನಿಜ. ತಮ್ಮ ಅಕ್ಕರೆಯ ರೆಕ್ಕೆಯಲ್ಲಿ ಬೆಳೆದು ದೊಡ್ಡವನಾದ ಗೋಪಾಲ, ತಮ್ಮ ಸುಖ-ದುಃಖಗಳನ್ನು ಎಳ್ಳಷ್ಟೂ ಲೆಕ್ಕಿಸದೆ, ಒಬ್ಬ ಕ್ರೈಸ್ತ ಹುಡುಗಿಯನ್ನು ಮದುವೆಮಾಡಿಕೊಳ್ಳಬಹುದೆಂದು ಅವರು ಕನಸು-ಮನಸಿನಲ್ಲಿಯೂ ಎಣಿಸಿರಲಿಲ್ಲ. ಆ ಸುದ್ದಿ ಅವರಿಗೆ ತಿಳಿದು ಬಂದಂದಿನಿಂದ ರಮಾಬಾಯರ ಅನುತಾಪಕ್ಕೆ ಎಣೆಯಿಲ್ಲದಂತಾಗಿದ್ದಿತು. ತುಟಿಯವರೆಗೂ ಬಂದ ಅಮೃತದ ಗುಟುಕು ಒಮ್ಮೆಲೇ ಮಾಯವಾದಂತಾಯಿತು. ಹೀಗಾಗಿ ಅವರ ಜೀವನ ಸಂಧ್ಯಾ ಸಮಯವು ಮತ್ತೆ ಮೇಘಚ್ಛನ್ನವಾಯಿತು.

* * * * *

ಗೋಪಾಲ ಕಾಲೇಜ್ ಸೇರಿದಾಗಿನಿಂದಲೇ ರಮಾಬಾಯರು ಅಡಿಗೆ-ನೀರಿನ ಕೆಲಸಕ್ಕೆ ಕೈ ಮುಗಿದಿದ್ದರು. ಅಷ್ಟೊತ್ತಿಗೆ ಸಾಲದ ಉರುಳು ತಪ್ಪಿತ್ತು; ಅಲ್ಲದೆ ಮಗನು ಶಿಷ್ಯವೃತ್ತಿ, ಓದು ಹೇಳುವುದು ಮೊದಲಾದುದರಿಂದ

ಹಣಗಳಿಸಿ ಕಳಿಸುತ್ತಿದ್ದ. ಮುಂಬೈಯಲ್ಲಿ ಗೋಪಾಲನ ಗಳಿಕೆಗಾವಾಗಲೂ ತೊಂದರೆಯಾಗಿರಲಿಲ್ಲ. ಇದರಿಂದ ಕೆಲಕಾಲ ಮುದುಕಿಯು ಕಷ್ಟ ಹರಿದಂತಾಗಿದ್ದಿತು. ಮಾತೃವತ್ಸಲನಾದ ಗೋಪಾಲ ತನ್ನ ಮುಪ್ಪಿನ ತಾಯ ಸುಖ ಸಂತೋಷಕ್ಕಾಗಿ ತನ್ನ ಜೀವನವನ್ನೇ ಮೀಸಲು ಮಾಡಬೇಕೆಂದು ಹಂಬಲಿಸುತ್ತಿದ್ದನೇನೋ ನಿಜ!...... ಆದರೆ ಫ್ಲಾರೆನ್ಸಳ ಪ್ರೀತಿಯೊಂದು, ಆತನನ್ನು ಆ ಹಂಬಲದ ಮೇರೆದಪ್ಪಿಸಿ ಎಳೆದೊಯ್ದಿದ್ದಿತು.

ಗೋಪಾಲನ ಮದುವೆಯ ಸುದ್ದಿ ರಮಾಬಾಯರ ಕಿವಿಗೆ ಬಿದ್ದ ದಿನದಿಂದ ಅವರು ಮಗನ ಮೇಲಿನ ಸಂತಾಪಕ್ಕಾಗಿ ಆತ ಕಳಿಸಿದ ಹಣವನ್ನು ಕೂಡ ಮುಟ್ಟಿರಲಿಲ್ಲ. ಬಂದ ಹಣ ಎರಡು-ಮೂರುಸಲ ಹಾಗೇ ಹಿಂದಿರುಗಿ ಹೋಯಿತು. ತಾಯಿಯೆದುರು ತಾನೇ ಬರಲು ಹೆದರಿ, ಗೋಪಾಲ, ಹಲವು ಸಲ ಬೇರೆಯವರ ಮುಖಾಂತರ ತಾಯಿಗೆ ಹೇಳಿಕಳಿಸಿದ್ದ; ಹಣ ಕಳಿಸಿಕೊಟ್ಟಿದ್ದ. ಆದರೆ ಯಾವುದಕ್ಕೂ ಮುದುಕಿಯ ಸಿಟ್ಟು ಹಣೆಯಲೆ ಇಲ್ಲ. ಅತ್ತ, ತಾಯಿಯ ದುಃಖದ ಪರಿಯನ್ನು ಬಲ್ಲವನಾದ ಗೋಪಾಲ ಎಷ್ಟೆಷ್ಟೋ ತೆರನಾಗಿ ಅವರ ಮನವೊಲಿಸಲು ಹೆಣಗುತ್ತಲೇ ಇದ್ದ. ಆದರಿತ್ತ, ಮುದುಕಿಯ ಸಿಟ್ಟು, ಸಂತಾಪ-ಅರೆ ಹುಚ್ಚುಗಳಿಗೆ ಹಟಮಾರಿತನದ ಗಟ್ಟಿಬೆಸಿಗೆ ಹಾಕಿದಂತಾಗಿದ್ದಿತು.

೨

ಫ್ಲಾರೆನ್ಸಳು ಶಾಲೆಯ ಕೆಲಸವನ್ನು ಮುಗಿಸಿ, ಕಾನ್ವೆಂಟ್‌ನಿಂದ ಮನೆಗೆ ಬಂದಾಗ ಗೋಪಾಲನಿನ್ನೂ ಮರಳಿರಲಿಲ್ಲ. ಅವಳಿಗೆ ``ಅದೇಕೋ?'' ಎನ್ನಿಸಿತು. ತನ್ನ ಪುಸ್ತಕಗಳನ್ನು ಶೆಲ್ಫಿನಲ್ಲಿಟ್ಟು ಕಿಟಕಿಯ ಹೊರಗೆ ಬಾಗಿ ಉತ್ಸುಕತೆಯಿಂದ ನೋಡೇ ನೋಡಿದಳು. ನಾಲ್ಕು ಅಂತಸ್ತಿನ ಕೆಳಗೆ, ಮಗ್ಗದಲ್ಲೋಡಾಡುವ ಲಾಳಿಗಳಂತೆ `ಕ್ವೀನ್ಸ್‌ರೋಡಿನ' ತುಂಬಾ ಮೋಟಾರುಗಳು ಅತ್ತಿಂದಿತ್ತ ಎಡೆಬಿಡದೆ ಸಾಗುತ್ತಿದ್ದವು. ಬಲಮಗ್ಗುಲು ಸ್ವಲ್ಪ ದೂರದಲ್ಲಿಯೇ ಚರ್ನಿರೋಡ್ ಸ್ಟೇಷನ್ನಿನಲ್ಲಿ, `ಅಂಧೇರೀ ಲೋಕಲ್ಲಿ''ಗಾಗಿ ಕಾದು ನಿಂತ ಸಾಲೆ ಹುಡುಗರ ಹಿಂಡು, ಅದರಾಚೆ, ಜಗತ್ತಿನ ಸುಖ-ದುಃಖಗಳ ಪರಿವೆಯಿಲ್ಲದೆ

ತಾಂಡವಿಸುವ ನಟರಾಜನ ರುದ್ರವೀಣಾವಿತಾನದ ನಾದ ತರಂಗಗಳಂತೆ `ಬಾಕ್‌ಬೇ' ದ ತೆರೆಗಳು ಎತ್ತೆತ್ತಲೋ ತೂರಿಕೊಂಡು ಹರಿದಾಡುತ್ತಲಿದ್ದ ನೋಟ. ಮಗ್ಗುಲಲ್ಲೇ `ಚೌಪಾಟಿ' ಯ ಉಸುಬಿನಲ್ಲಿ ಸಂಜೆಯ ವಿರಾಮಕ್ಕಾಗಿ ನೆರೆದ ಜನದ ಜಂಗುಳಿಯೊಳಗಿನಿಂದ ಕೇಳಿಬರುವ ಮಿಠಾಯಿಗಾರರ ಅಬ್ಬರವ ಅಸ್ಪಷ್ಟಧ್ವನಿ. ಹಾಗೇ ಕಣ್ಣು ಹೊರಳಿಸಿ ನೋಡಿದರೆ, ಮುಂಬೈಯ ಆ ಬಗೆಯ ಜಗ್ಗಾಟ-ಸುಗ್ಗಾಟದ ಜೀವನಕ್ಕೆ ಗಾಬರಿಗೊಂಡು ಕಲ್ಲಾಗಿ ನಿಂತಂತಿರುವ `ವಿಲ್ಸನ್ ಕಾಲೇಜಿ'ನ ಕಟ್ಟಡ.

ಕಾಲೇಜಿನ ಕಟ್ಟಡ ಅವಳ ಕಂಗಳೆವೆಯಲ್ಲಿ ಬಂದೊಡನೆ, ಫ್ಲಾರೆನ್ಸಳ ಕಣ್ಣು ತಾವಾಗಿಯೇ ಏನನ್ನೋ ಹುಡುಕಿದಂತೆ ಮಾಡಿದವು. ಸ್ವಲ್ಪಕಾಲ ಅದನ್ನೇ ಎವೆ ಹಳಚದೆ ನೋಡುತ್ತಿದ್ದು, ``ಯಾಕ ಬಂದಿಲ್ಲೋ?''..... ಯಾಕೋ ಬಂದಿಲ್ಲಿನ್ನೂ!'' ಎಂದು ಗುಣುಗುಟ್ಟುತ್ತ ಅವಳು ಮೆಲ್ಲ ಮೆಲ್ಲನೆ ಬದಿಯ ಕೋಣೆಗೆ ಹೋಗಿ, ಡ್ರೆಸ್ಸು ಬಿಚ್ಚಿಟ್ಟು, ಸೀರೆಯುಟ್ಟು, ಹಣೆಗೆ ತಿಲಕವನ್ನಿರಿಸಿ, ಚಹಾದ ಏರ್ಪಾಡು ಮಾಡಲು ಅಡಿಗೆಯವಳಿಗೆ ಅಪ್ಪಣೆಯಿತ್ತು ಮತ್ತೊಮ್ಮೆ ಕಿಡಿಕಿಯಲ್ಲಿ ಹಣಿಕೆಹಾಕಿ ಬಂದಳು. ಆದರೂ ಅವಳ ಕಣ್ಣಲ್ಲಿಯ ಕುತೂಹಲ ಅಡಗಲಿಲ್ಲ. ಹಾಗೇ ಗೋಪಾಲನ ಫೋಟೋ ಕೈಯಲ್ಲೆತ್ತಿಕೊಂಡು ನೋಡಿ, ``ಹುಚ್ಚು!!!'' ಎನ್ನುತ್ತ ಒಂದು ನಗೆಮುಗುಳನ್ನರಳಿಸಿದಳು. ಒಡನೆಯೆ, ಅವಳ ಕಣ್ಣು ಎದುರಿನ ಗೋಡೆಗೆ ತಗುಲಿಸಿದ ರಮಾಬಾಯಿಯರ ಫೋಟೋದ ಕಡೆ ಎಳೆಯಿತು. ಫ್ಲಾರೆನ್ಸಳು, ಹತ್ತಿರ ಹೋಗಿ ಒಂದು ಬಗೆಯ ಉತ್ಸುಕತೆಯಿಂದ ನೆಟ್ಟ ನೋಟವನ್ನು ನೆಲಿಸಿ ಅದನ್ನೇ ನೋಡುತ್ತ ನಿಂತಳು. ನೋಡುತ್ತಿರುವಂತೆಯೆ, ``ಇದೂ ಒಂದು ಹುಚ್ಚು'' ಎಂಬ ಮಾತು ಅವಳ ಅರೆ ನಗೆಯೊಳಗಿಂದ ಉರುಳಿ ಬಂತು.

* * * * *

``ಫ್ಲೋರಾS.........''

``ಇದೇನಿಷ್ಟು, ತಡಾ, ಇವೊತ್ತು..?''

ಬೆರಗುಗಣ್ಣುಗಳನ್ನರಳಿಸುತ್ತ ಫ್ಲಾರೆನ್ಸಳು ಮುಂದರಿದು ಬಂದು ಗೋಪಾಲನ ಕೈಯಲ್ಲಿಯ ಅಟ್ಯಾಚ್ ಬಾಕ್ಸನ್ನು ಇಸಿದು ಬದಿಗಿರಿಸಿ, ಆತನ ಕೋಟನ್ನೂ ಹ್ಯಾಟನ್ನೂ ತೆಗೆದು ಗೂಟಗಳಿಗೆ ತಗುಲಿಸ ತೊಡಗಿದಳು. ಬೂಟಿನ ಲೇಸು ಸಡಲಿಸುತ್ತ ಗೋಪಾಲ ಮಾತನಾಡಿದ-

``ಫ್ಲೋರಾ, ಪತ್ರ ಬಂತು ನೋಡಿವೊತ್ತು......"

``ಯಾರದೂ? ಕೇಶವರಾಯರದs? ವಸಂತs? ಕರಕೊಂಡು ಬರ್ತಾರಂತೇನು?"

ಬಳಿಯ ಕುರ್ಚಿಯ ಮೇಲಿದ್ದ ತನ್ನ ಅಟ್ಯಾಚ್ ಬಾಕ್ಸಿನಿಂದ ಪತ್ರವನ್ನು ತೆಗೆದು ಫ್ಲಾರೆನ್ಸಳ ಕೈಗೆ ಕೊಡುತ್ತ ಗೋಪಾಲ ಮಾತನಾಡಿದ-

``ಆದರೊಂದು ಕರಾರು ಅದs...."

``ವಸಂತs.....?"

``ಓದೇ ನೋಡಲ್ಲಾ!"

ಫ್ಲಾರೆನ್ಸಳು ಲವಲವಿಕೆಯ ಲಗುಬಗೆಯಿಂದ ಪತ್ರವನ್ನೋದಿದಳು; ತಲೆದೂಗಿ ಮುಗುಳಾಗಿ ನಕ್ಕಳು. ಆದರೆ ಮರುಗಳಿಗೆಯಲ್ಲೇ ಸ್ವಲ್ಪ ಗಂಭೀರಭಾವವನ್ನು ತಳೆದು-

``ಆಗಲಿ, ಹಾಗೇ ಆಗಲಿ; ಅವಕ್ಕ ನಾ ಯಾಕ್ ಅಡ್ಡ ಬರಲೀ-" ಎಂದಳು.

``ಅಂದರs....., ಆ ಕರಾರಕ್ಕೊಪ್ಪಿ, ಕರಕೊಂಡು ಬರೋಣಾಂತೀಯಾ ನಮ್ಮ ತಾಯಿನ್ನ!"

``ಯಾಕಾಗಬಾರದು. ಇಷ್ಟು ದಿನ ನನ್ನ ಸಲುವಾಗಿ ಇಷ್ಟೆಲ್ಲಾ ಕಷ್ಟ ಆತು. ಇನ್ನಾದರೂ ಅವರು ನಿನ್ನೊಂದಿಗೆ ಸುಖದಿಂದ ಇರತಿದ್ದರ ನಾ ಅದಕ್ಕೂ ತಯಾರಾಗ್ತೇನಿ; ಮತ್ತೇನ್ಮಾಡೋದು! ಮುಖ್ಯ, ನಿನ್ನ ಸುಖಾ ನನ್ನ ಸಂತೋಷ ಗೋಪೂ!"

..... ನಡುಗುವ ದನಿಯಿಂದ ಮಾತನಾಡುತ್ತ ಫ್ಲಾರೆನ್ಸಳು ಮುಂದರಿದು ಬಂದು ಗೋಪಾಲನ ತಲೆಯನ್ನು ಎದೆಗವಚಿ ಆತನ ತಲೆ-ಗೂದಲನ್ನು ನೀವ

ತೊಡಗಿದಳು. ಅವಳ ಭಾವವನ್ನರಿತು, ಗೋಪಾಲ ಮೇಲಕ್ಕೆ ಕಣ್ಣೆತ್ತಿ ನೋಡಿದ; ಅವಳ ಕಂಣಲ್ಲಿ ಕಂಬನಿಯೊಂದು ತೆರೆಯಾಗಿ ತೇಲುತ್ತಿದ್ದಿತು. ಆತನಿಗೂ ಏನು ಹೇಳಬೇಕೆಂದು ತೋಚದೆ ಹೋಯಿತು. ಸುಮ್ಮನೆ ಫ್ಲಾರೆನ್ಸಳನ್ನು ಇನ್ನೂ ಹತ್ತರ ಎಳೆದುಕೊಂಡು ಮೈದಡವಿ ಸಂತವಿಸಹತ್ತಿದ. ಕೆಲಹೊತ್ತು, ಪತಿ ಪತ್ನಿಯರಿಬ್ಬರೂ, ಕಾರ್ಮೋಡದಲ್ಲಿ ಹೊಳೆದಡಗುವ ಮಿಂಚಿನ ಬೆಳಕಿನಂತೆ, ದುಃಖದ ಮರೆಗಿರುವ ಯಾವದೋ ಒಂದು ಬಗೆಯ ಸಂತಸವನ್ನು ತಿಳಿದೂ ತಿಳಿಯದಂತೆ ಅನುಭವಿಸುತ್ತಲಿದ್ದರು.

❄ ❄ ❄ ❄ ❄

ಗೋಪಾಲ, ಬೇಕೆಂದೇ ಮಾತು ಬದಲಿಸಿದ:-

``ಫ್ಲೋರಾ, ನಿನ್ನ ರಜಾ ಮಂಜೂರಾತೇನು?''

``ಹೂಂ; ಇವೊತ್ತೇ ಆರ್ಡರು ಬಂತು. ಆದರ, ಅಕ್ಟೋಬರ ಹತ್ತರಿಂದ ನಾಲ್ಕು ತಿಂಗಳು.''

``ಐದರಿಂದ ಸಿಕ್ಕಿದ್ದರ ಒಳ್ಳೇದಾಗತ್ತಿತ್ತು. ಏನಗ ಈಗಾಗಲೇ ದಿನಾ ತುಂಬಿದಂತಾಯ್ತು. ಆಗಲಿ, ನೀನು ಹೆರುವ ಹೊತ್ತಿಗೆಂದರೆ, ನನಗೂ ಹತ್ತು ದಿನದ ರಜಾ ಸಿಕ್ಕಬಹುದು.''

ಗೋಪಾಲ ಮಾತನಾಡುತ್ತಿರುವಾಗಲೇ, ಫ್ಲಾರೆನ್ಸಳು ಚಹಾ ಅಣಿಮಾಡಿದಳು. ಚಹ ಕುಡಿಯುತ್ತಿರುವಂತೆಯೆ, ಗೋಪಾಲ ಒಂದು ಬಗೆಯ ನಿರುತ್ಸಾಹದ ಉತ್ಸುಕತೆಯಿಂದ ಮಾತನಾಡತೊಡಗಿದ.

``ಹಾಗಾದರೆ, ಫ್ಲೋರಾ, ಈ ಮಾತೊಂದು ಹ್ಯಾಗೆ ಬಗೀಹರಿಸಬೇಕೋ ತಿಳೀವೊಲ್ಲದಲ್ಲಾ!''

``ಯಾವ ಮಾತೂ?.....'' ಬೇರಾವುದೋ ಎಣಿಕೆಯಲ್ಲಿದ್ದ ಫ್ಲಾರೆನ್ಸಳು ಅನಿಮಿತ್ತ ಕುತೂಹಲದಿಂದ ಕೇಳಿದಳು.

``ಅಲ್ಲಾs......ನಾನು ನಿನ್ನ ಬಿಟ್ಟರೆ ಮಾತ್ರ ಇಲ್ಲಿಗೆ ಬರ್ತೀನಿ ಅನ್ನೋ ನಮ್ಮ ತಾಯೀ ಕರಾರಾ!''

ಫ್ಲಾರೆನ್ಸಳ ಕುತೂಹಲ ಒಮ್ಮೆಲೇ ಕರಗಿ, ಅನಿಸಿಯೂ ಅನಿಸಿದ ಕಸಿವಿಸಿಯಾಯಿತು. ಸುಮ್ಮನೆ ಉಗುಳು ನುಂಗುತ್ತ ತಾನೇ ಚಹಾದ

ಸಾಮಾಗ್ರಿಗಳನ್ನು, ಒಂದೊಂದಾಗಿ ಒಳಗೊಯ್ಯುವುದರಲ್ಲಿ ತೊಡಗಿದಳು. ಫ್ಲಾರೆನ್ಸಳ ಭಾವವನ್ನು ತಿಳಿದು, ಗೋಪಾಲ ಅರೆನೋವಿನ ಗಾಬರಿಯಿಂದ ಕುಳಿತಲ್ಲಿಂದ ತಾನೂ ಎದ್ದು, ಒಂದು ಗೋಲ್ಡ್‌ಫ್ಲೇಕ್ ಹೊತ್ತಿಸಿ, ಆರಾಮು ಕುರ್ಚಿಯಲ್ಲಿ ಬಿದ್ದುಕೊಂಡು ಹೊಗೆಯ ಹೆಗಲನ್ನು ಹತ್ತಿಸಿ ವಿಚಾರಗಳನ್ನು ಮೆಲ್ಲ-ಮೆಲ್ಲನೆ ತೂರಿಬಿಡಹತ್ತಿದ.

ಕೆಲಹೊತ್ತಿನ ಮೇಲೆ, ಫ್ಲಾರೆನ್ಸಳು ಒಳಗಿನಿಂದ ಬಂದು ಮತ್ತೊಮ್ಮೆ ಆ ಪತ್ರವನ್ನೋದಿಕೊಂಡಳು. ಹಲವು ತರದ ವಿಚಾರಗಳು ಅವಳ ಮೊಗದಲ್ಲಿ ಮೂಡಿ ಮೂಡಿ ಮರೆಯಾಗುತ್ತಿದ್ದವು.

``ಗೋಪಾಲಾ, ನಾಳಿನ ಏಳನೇ ತಾರೀಖಿಗೇ ಹೊರಡತೀವಿ ಅಂತ ಬರದಾರಲ್ಲ, ಕೇಶವರಾಯರು! ಅವರು ನಿನ್ನ ಉತ್ತರದ ಹಾದೀನೂ ನೋಡುವಂತೆ ಕಾಣೂದುಲ್ಲಲ್ಲಾ!''

``ಅವರಿಬ್ಬರೂ ಏನೋ ಹಂಚಿಕಿಹಾಕಿ ಮುದುಕೀನ್ನ ಮೋಸಗೊಳಿಸಿ ಒಪ್ಪಿಸಿರಬೇಕು ಹಾಗಾದರೆ. ಕೇಶವರಾಯ ಇದ್ದ ಮ್ಯಾಲೆ ನಾವೇನು ಚಿಂತೀ ಮಾಡೋ ಹಾಗಿಲ್ಲ ಬಿಡು. ನೀ ಅದನ್ನೆಲ್ಲಾ ಸುಮ್ಮನ ಹಚ್ಚಿಕೋ ಬ್ಯಾಡ, ಫ್ಲೋರಾ! ನನ್ನ ನೋಡಿದ ಮ್ಯಾಲೆ ನಮ್ಮ ತಾಯೀ ಸಿಟ್ಟು ಎಷ್ಟೋ ತಗ್ಗಬಹುದು.''

ಫ್ಲಾರೆನ್ಸಳು ಗೋಪಾಲನ ಮಾತಿಗೆ ಬದಲು ಕೊಡಲಿಲ್ಲ. ಹಾಗೇ ಮಲಗುವ ಕೋಣೆಯತ್ತ ತೆರಳಿದಳು.

``ಫ್ಲೋರಾ, ನನ್ನ `ಪರ್ಸ' ನೊಳಗೆ ಏನದs, ನೋಡು!''

ಫ್ಲಾರೆನ್ಸಳು ಒಳಗೆ ಹೋಗುತ್ತಿದ್ದವಳು ತಡೆದು ಗೋಪಾಲನ ಕೋಟಿನಿಂದ ಆತನ ರೊಕ್ಕದ ಚೀಲವನ್ನು ತೆಗೆದು ನೋಡಿದಳು; `ಪ್ಯಾಥೇಟಾಕೀಜ'ದ ಎರಡು ಟಿಕೇಟುಗಳು.

``ಯಾವದಿವೊತ್ತಿನ ಪ್ರೋಗ್ರಾಂ......?''

``ಸಿಟಿ-ಲಾಯಿಟ್ಸ್....!!''

``ಹಾಂ! ಚಾರ್ಲಿಛಾಪ್ಲಿನ್.....!!''

ಫ್ಲಾರೆನ್ಸಳ ಮೋರೆಯಲ್ಲಿ ಚಕ್ಕನೆ ಉಲ್ಲಾಸದ ಮಿಂಚು ಹೊಡೆಯಿತು.

* * * * *

೪

``ಗೋಪಣ್ಣಾ, ಏ ಗೋಪಣ್ಣಾ; ಆಸ್ಪತ್ರಿಗೆ ಹೋಗಿ ಬಂದೇನೋs?''........

ರಮಾಬಾಯರು, ಮೇಲಟ್ಟದ ಮೆಟ್ಟಲುಗಳ ಕೆಳಬದಿಯಲ್ಲಿ ನಿಂತು ಒಮ್ಮೆ ಕೂಗಿದರು; ಮತ್ತೊಮ್ಮೆ ಕೂಗಿದರು; ಮಗುದೊಮ್ಮೆ ಕೂಗಿದರು. ಆದರೆ ಮೇಲಿನಿಂದ ಗೋಪಾಲನ ಮರುದನಿ ಬರಲೇ ಇಲ್ಲ. ರಮಾಬಾಯರಿಗೆ ತುಸು ಕುತೂಹಲವಾಯಿತು. ತಡತಡವರಿಸುತ್ತಲೇ ಒಂದೊಂದಾಗಿ ಮೆಟ್ಟಲುಗಳನ್ನೇರುತ್ತ ಮೇಲೆ ಹೋಗಿ ನೋಡಿದರು; ಗೋಪಾಲ ಅಲ್ಲಿರಲಿಲ್ಲ. ಆತನಿನ್ನೂ ಹೊರಗಿನಿಂದ ಬಂದೇ ಇಲ್ಲವೆಂದರಿತು, ಮತ್ತೊಂದು ಬಗೆಯ ಕುತೂಹಲಕ್ಕೊಳಗಾಗಿ, ಆ ರೂಮನ್ನು ಪರೀಕ್ಷಿಸ ಹತ್ತಿದರು. ಮುಂಬೈಗೆ ಬಂದು ಹತ್ತು ದಿನವಾಗಿದ್ದರೂ, ಆ ಮೊದಲು ಅವರು ಒಮ್ಮೆ ಕೂಡ ಮೇಲೆ ಹತ್ತಿ ನೋಡಿರಲಿಲ್ಲ. ಮೊತ್ತ ಮೊದಲಿನ ಎರಡು ಮೂರು ದಿನಗಳಂತೂ ಉರಿಗಿಚ್ಚಿನ ಕಾವಿಗೆ ಸಿಕ್ಕು ಕಮರಿ ಹೋಗಿದ್ದವು. ರಮಾಬಾಯರು ಮುಂಬೈಗೆ ಬಂದ ನಂತರ ಗೋಪಾಲನೊಡನೆ ಮಾತನಾಡಿದ್ದು ಸಹ ಇತ್ತೀಚಿನ ಮೂರು ನಾಲ್ಕು ದಿನಗಳಲ್ಲಿಯೇ.

ಆದರೀಗ, ಗೋಪಾಲನ ಕೋಣೆಯಲ್ಲಿ ಮೊಟ್ಟಮೊದಲು ಹೊಕ್ಕಾಗ ರಮಾಬಾಯರ ಕುತೂಹಲದೊಡನೆ ಕರುಳು ಮತ್ತೆ ಮೆಲ್ಲಮೆಲ್ಲನೆ ಕೊನರಹತ್ತಿತು. ಒಂದು ಬಗೆಯ ಅಂತಃಕರಣದ ಆಸ್ಥೆಯಿಂದ, ಆತನ ಅಭ್ಯಾಸದ ಕೋಣೆಯನ್ನೂ ಮಲಗುವ ಕೋಣೆಯನ್ನೂ ಒಂದೊಂದಾಗಿ ನೋಡಿಬಂದರು. ಅಲ್ಲಿ ಇದ್ದ ಒಂದೊಂದು ಒಡವೆಯೂ ಒಂದೊಂದು ತರದ ಸೋಜಿಗವನ್ನೂ ಸಂತಸವನ್ನೂ ಉಂಟು ಮಾಡತೊಡಗಿದವು.

ಗೋಪಾಲನ ಅಭ್ಯಾಸದ ಕೋಣೆಯಲ್ಲಿ, ಕಪಾಟುಗಳನ್ನು ತುಂಬಿ ತುಂಬಿ ಇಟ್ಟ ಪುಸ್ತಕಗಳನ್ನು ನೋಡಿ ರಮಾಬಾಯರು ದಂಗಾಗಿ ಹೋದರು. ``ಎಷ್ಟ

ಪುಸ್ತ್ಯಾ ಓತ್ತಾನ್ ನಮ್ಮ ಗೋಪೂ!'' ಎಂದು ಬಾಯಮೇಲೆ ಬೆರಳಿಟ್ಟುಕೊಂಡರು.

ಮಲಗುವ ಕೋಣೆಯಲ್ಲಿ ಹೋದಾಗ ಗೋಪಾಲನ ಪಲ್ಲಂಗ ಅವರ ಮನಸ್ಸನ್ನು ಹೆಚ್ಚಾಗಿ ಎಳೆಯಿತು. ಅದನ್ನು ಮತ್ತೆ ಮತ್ತೆ ಮುಟ್ಟಿ ತಟ್ಟಿ, -- ``ಅವರದೂ ಇಂಥಾದ್ದs ಇತ್ತು. .......... ಅದ್ಯಾಕ, ಇದಕ್ಕೂ ಚಂದs ಇತ್ತು. ಆದರ, ಅದು ಕಬ್ಬಣದ್ದೂ; ಇದು ಹಿತ್ತಾಳೀದು........ ಮಾರದಿದ್ದರ ಅವರ ಪಲ್ಲಂಗಾನs ಗೋಪಣ್ಣಗೂ ಬರ್ತಿತ್ತೂ......'' ಎನ್ನುತ್ತ ರಮಾಬಾಯರು ಹಸನಾಗಿ ಹೊಳೆಯುತ್ತಿದ್ದ ಪಲ್ಲಂಗದ ಕಾಲು-ತೋಳುಗಳನ್ನು ಒಂದು ಬಗೆಯ ಪ್ರೀತಿಯಿಂದ ಸವರಿ ಸವರಿ ನೋಡಿದರು. ಅವುಗಳಲ್ಲಿ ಉದ್ದವಾಗಿ ಮೂಡಿದ್ದ ತಮ್ಮ ಮೋರೆಯ ಪಡಿನೆಳಲನ್ನು ನೋಡಿಕೊಂಡು ನಕ್ಕರು.

ಮತ್ತೆ, ನಡುವಿನ ಕೋಣೆಗೆ ಬಂದು ಅಲ್ಲಿದ್ದ `ಮೋಹಗನಿ' `ರೋಜುಡ್ಡ್' ಕುರ್ಚಿಗಳಲ್ಲಿ ಕೂತು ಕೂತು ನೋಡಿದರು. ``ಅವರೂ ಮಾಡ್ಸಬೇಕಂತ ಮಾಡಿದ್ದು ಇಂಥಾವs ಇದ್ದು ಎಂದೆನ್ನುತ್ತಿರುವಾಗಲೆ ಎದುರಿನ ಗೋಡೆಗೆ ತೂಗು ಹಾಕಿದ ಮಾಧವರಾಯರ ದೊಡ್ಡ ಫೋಟೋ ಕಣ್ಣಿಗೆ ಬಿತ್ತು. ರಮಾಬಾಯರು ಚಂಗನೆದ್ದು ಹತ್ತಿರ ಹೋಗಿ ನೋಡಿದರು; ಹಳೆಯ ಪಳಕೆಯ ಕನಸೊಂದು ಅವರ ಕಣ್ಣೆದುರು ಬಂದು ಸುಳಿದಾಡುವಂತೆನಿಸಿತು. ಎವೆಗಳಲ್ಲಿ ತೊಡಕಿ ತುದಕಳಿಸಿ ನಿಂತ ಕಣ್ಣೀರಿನ ಮಂಜಿನೊಳಗಿಂದ ನೋಟವನ್ನು ನಾಟಿಸಿ ಅವರು ಕೆಲಹೊತ್ತು ನೋಡುತ್ತಲೆ ನಿಂತುಬಿಟ್ಟರು. ಮುಪ್ಪಿನ ರಮಾಬಾಯರಿಗೆ ಆ ಚಿತ್ರದಲ್ಲಿಯ ನಡುಹರೆಯದ ಮಾಧವರಾಯರು ತಮ್ಮ ಮಗನೇನೋ ಎನ್ನುವಂತೆನಿಸಿತು...... ರಮಾಬಾಯರು ಮತ್ತೊಮ್ಮೆ ಕಳೆದುಹೋದ ತಮ್ಮ ಹರೆಯದ ಹೊಂಗನಸಿನಲ್ಲಿ ಹೊಕ್ಕು ನೋಡಲು ಹೆಣಗಿದರು; ಸಾಧ್ಯವಾಗಲಿಲ್ಲ. ಆವುದೋ ಒಂದು ಆವೇಗವು ಒತ್ತರಿಸಿ ಬರಲು, ಅದೇಕೋ,........``ನಮ್ಮ.......ಗೋಪೀ........ನಮ್ಮ ಗೋಪೀ'' ........... ಎಂಬ ಬಿಕ್ಕಳಿಕೆಯ ದನಿಯೊಂದಿಗೆ ಒಂದೆರಡು ಕಂಣ ಹನಿಗಳನ್ನು ಮಿಡಿದು, ಮೆಲ್ಲನೆ ಈಚೆಗೆ ಸರಿದು ಬಂದರು.

ಆ ಫೋಟೋದ ಕೆಳಗಿನ ಮೂಲೆಯಲ್ಲಿ ಕಟ್ಟಿಗೆಯ ಸ್ಟ್ಯಾಂಡಿಗೆ ತೂಗಾಡುತ್ತಲಿದ್ದ ಗೋಪಾಲನ ಹ್ಯಾಟುಗಳೆರಡೂ ರಮಾಬಾಯರ ಮನವನ್ನೆಳೆಯದಿರಲಿಲ್ಲ. ``ಡಬರೀಟೊಪಿಗೀ ಮಾಡ್ಯಾನ ನಮ್ಮ ಗೋಪೂ: ಪ್ರೊಫೇಸರಾ ಆಗ್ಯಾನ ಮತ್ತ s! ಪ್ರೊಫೇಸರಾಗೋದಂದ್ರ ಸಾಹೇಬಾ ಆಧಾಂಗs ಕಾಣಸ್ತದ!!'' ಎಂದು ಒಟಗುಟ್ಟುತ್ತ ಅವೆರಡನ್ನು ಕೈಯಿಂದ ಹಿಡಿಹಿಡಿದು ನೋಡಿ ಇಟ್ಟರು. ಅದರ ಬದಿಯ ಗೋಡೆಗೆ ಇದ್ದ ಗೋಪಾಲನ ಟೇನಿಸ್ ವೇಷದ ಫೋಟೋ ನೋಡಿ, `ಅಯ್ಯ s, ಝಾರೀ ಸೌಟು!'' ಎಂದು ಶರಾ ಹಾಕಿ ಮುಂದೆ ಸಾಗಿದರು.

ಈಚೆಯ ಗೋಡೆಗೆ ಒಂದು ಟೇಬಲ್ಲು. ಆ ಟೇಬಲ್ಲಿನ ಮೇಲ್ಗಡೆ ತಮ್ಮದೇ ಫೋಟೋ! ರಮಾಬಾಯರೂ ಅದನ್ನೂ ನಿಟ್ಟಿಸಿ ನೋಡಿ, ``ನಂದೂ ಫೋಟೋ ಹಾಕೇದ; ಹುಚ್ಚಾ! ಯಾತಕ್ಕೋ, ಬೆಂಕಿ ಹಚ್ಚಲಿ!!'' ಎಂದು ಗುಣಗುಟ್ಟುತ್ತ ಮತ್ತೆ ಮುಂದುವರಿದರು. ಇಷ್ಟರಲ್ಲಿ, ಗೋಪಾಲನ ಟೇಬಲ್ಲಿನ ಮೇಲೆಯೇ ಜಾಗಿಸಿ ಇಟ್ಟ ಮತ್ತೊಂದು ಬೆಳ್ಳೀಕಟ್ಟಿನ ಫೋಟೋ ರಮಾಬಾಯರ ಕಣ್ಣುಗಳನ್ನು ಜಗ್ಗಿ ಜಗ್ಗಿ ಕರೆಯಿತು. ಅವರು ಸನಿಯಕ್ಕೆ ಹೋಗಿ ಆ ಫೋಟೋದೆದುರು ಬೊಗ್ಗಿನಿಂತು ಕಣ್ಣು ಕಿವುಚಿ ನೋಡಿದರು. ಒಡನೆಯೆ ``ಈಕೀನs ಕಾಣಸ್ತsದ ಆ ಬೋಕಾಣಿ!'' ಎಂದು, ಹೇಸಿಕೊಂಡವರಂತೆ, ಒಮ್ಮೆಲೆ ಹಿಂದಿರುಗಿ ತಲೆಬಾಗಿಲ ಕಡೆಗೆ ಹೊರಟರು.

ಬಾಗಿಲವರೆಗೂ ಹೋದ ರಮಾಬಾಯರು ಬಾಗಿಲ ದಾಟಲಿಲ್ಲ. ಸ್ವಲ್ಪ ತಡವರಿಸಿದರು. ಮತ್ತೇನು ಹೊಳೆಯಿತೋ, ಹಿಂದುರಿಗಿ ಬಂದು ಮತ್ತೊಮ್ಮೆ ಅದನ್ನೇ ನೋಡುತ್ತ ನಿಂತರು. ಕೆಲಹೊತ್ತು ಹಾಗೇ ನೋಡುತ್ತಿದ್ದು, ಮೆಲ್ಲನೆ ಅದನ್ನು ಕೈಯಲ್ಲಿ ತೆಗೆದುಕೊಂಡು ಬಾಗಿಲ ಬೆಳಕಿಗೆ ಬಂದು ಮತ್ತಿಷ್ಟು ನಿರೀಕ್ಷೆಯಿಂದ ಪರೀಕ್ಷಿಸತೊಡಗಿದರು. ``ನೋಡಲಿಕ್ಕೆ ಮಾತ್ರ ಗೌರಿ ಆಗ್ಯಾಳ ಹುಡಿಗಿ'' ಎಂಬ ಉದ್ಗಾರವು ಅವರ ಮೈಮರೆತ ಮನದಿಂದ ಜಾರಿಬಿದ್ದಿತು. ಆದರೂ ತಮ್ಮ ಒಳ-ಒಳಗಿನ ಅನಿಸಿಕೆಯೊಂದು ಅರವುಮೀರಿ ಹೊರಬಿದ್ದುದರಿಂದ ವಾಗತ್ಯಪಟ್ಟುಕೊಂಡವರಂತೆ ರಮಾಬಾಯರು,

``ಆದರೀಕಿ ನಮ್ಮ ಕುಲಾ ಧರ್ಮಾ ಎಲ್ಲಾ ಹಾಳುಮಾಡಿದಳಲ್ಲಾ, ಹುಚ್ಚುಮುಂಡಿ!'' ಎಂದು ಸೇಡಿನ ಸಿಟ್ಟಿನ ದನಿಯಲ್ಲಿ ಆವೇಶದಿಂದ ಶಪಿಸುತ್ತ, ಕೈಲಿದ್ದ ಫೋಟೋ ಒಯ್ದು ಟೇಬಲ್ಲಿನ ಮೇಲೆ ಅಪ್ಪಳಿಸಿದರು.

ಹೊತ್ತಿಗೆ ಸರಿಯಾಗಿ ಗೋಪಾಲ ಬಂದ. ಬಾಗಿಲಲ್ಲಿರುವಾಗಲೆ, ರಮಾಬಾಯರು ಆ ಫೋಟೋ ತಮ್ಮ ಕೈಯಿಂದ ಹಿಡಿದುಕೊಂಡೇ ``ಈಕಿ ಸುಟ್ಟ ಫೋಟೋ ನನಗ ನೆಟ್ಟಗ ಇಡ್ಲಿಕ್ಕೆ ಸಹಿತ ಬರವಲ್ದು'' ಎಂದು ಒಟಗುಟ್ಟುತ್ತಿರುವುದು ಕೇಳಬಂತು. ಒತ್ತಿ ಬಂದ ನಗೆಯನ್ನು ಹತ್ತಿಡುತ್ತ ಮಾತನಾಡಿದ ಗೋಪಾಲ-

``ಅದನ್ಯಾಕ ಮುಟ್ಟಿದೇ ಅವ್ವಾ! ಮೈಲಿಗಿ! ಮೈಲಿಗಿ! ಮೈಲಿಗೀ!!!..... ಅದೂ, ಯಾರ ಫೋಟೋ ಅಂತ ತಿಳಿದೀದಿ?''

``ನನಗೆಲ್ಲಾ ಗೊತ್ತದs ಬಿಡೋ; ಸಾಕು!''

ರಮಾಬಾಯರು ಗೋಪಾಲನ ದನಿಗೆ ಒಮ್ಮೆಲೆ ಮೆಟ್ಟಿಬಿದ್ದರೂ ಸಾವರಿಸಿಕೊಂಡು ಮಾತನಾಡಿದರು.

``ಮತ್ತs ಹಾಗಾದರ ನೀನೂ ಕುಲಗೆಟ್ಟ ಹಾಗಾಯಿತಲ್ಲಾ!''

``ಇರ್ಲಿ ಬಿಡೋ; ಫೋಟೋ ಮುಟ್ಟಿದಾಕ್ಷಣಕ್ಕ ಕುಲಾ ಎಲ್ಲ್ಯಾದರೂ ಕೆಡ್ತಿರ್ತದೇನೂ........?''

``ಹಾಗಲ್ಲಾ? ಮತ್ತ, ಆಕೀ ಮೋರೆ ನೋಡಿದ್ರ ಮೂರು ಜನ್ಮಕ್ಕೂ ನರಕಾ ಅಂತಿದ್ದೀ, ಅದಕ್ಕಂದೆ! ಇಷ್ಟು ಪ್ರೀತಿ ಬಂತೇನು ಈಗಾಗಲೇ ಸೊಸೀ ಮ್ಯಾಲೆ!!''

``ಫೋಟೋ ನೋಡಿದ್ರ ಆಕೀನ್ನ ನೋಡಿದ ಹಾಗಾತೇನು! ಇನ್ಮ್ಯಾಲೆ ನೋಡು ಗೋಪೂ; ನನ್ನಾಣಿ ಆಗೇದ....; ನನ್ನ ಎದುರಿಗೆ ಆ ದುರಗವ್ವನ ಮಾತು ಎತ್ತಿದೆಂದರೆ,..... ನೋಡು,..... ನಾನಂತೂ ಎದ್ದು ಧಾರವಾಡಕ್ಕೆ ಹೋಗಿಬಿಡ್ತೇನಿ''

``ಹಾಗಾದರ, ನಾಳಿಲ್ಲ ನಾಡದು, ಬಾಣಂತಿತನಾ ತೀರಿಸಿಕೊಂಡು ಆಕಿ ಆಸ್ಪತ್ರೆಯಿಂದ ಮನೀಗೆ ಬರ್ತಾಳಲ್ಲ ಮತ್ತ!'' ಗೋಪಾಲ ಕೆಣಕುವ ದನಿಯಲ್ಲಿ ಮಾತನಾಡಿದ.

ರಮಾಬಾಯಿಯವರ ಸಂತಾಪಕ್ಕೆ ಎದೆ ಸಾಲದಾಯಿತು. ಗಂಡುಸಾಗಿದ್ದರೆ ಅದು ಅವರ ನೆತ್ತಿಯನ್ನು ಭೇದಿಸಿ ಮೂರನೇ ಕಣ್ಣಿನ ಜ್ವಾಲಾಗ್ನಿಯಲ್ಲಿ ಗೋಪಾಲನನ್ನು ಸುಟ್ಟು ಬಿಡಬಹುದಾಗಿತ್ತು. ಆದರೆ ಆ ಹೆಣ್ಣು-ಸಿಟ್ಟು, ಹೊಟ್ಟೆಯಿಂದ ಹೊರಟದ್ದು ಹೊರಬರುವಷ್ಟರಲ್ಲಿ ಕರಗಿ ಕಣ್ಣೀರಾಗಿ ಹರಿಯಹತ್ತಿತು. ತನ್ನ ಅಜಾಗರೂಕತೆಗಾಗಿ ಗೋಪಾಲ ಗಾಬರಿಗೊಂಡ.

``.........ಅಯ್ಯೋ....! ಗೋಪೂ;.... ನನ್ಯಾಕ ಈ ನರಕಕ್ಕ ತಂದು ಹಾಕಿದ್ಯೋ? ನಾ ಯೆಂಥಾ ಸಂತೋಷದ್ಲೆ ಇದ್ದೆ ಧಾರವಾಡದೊಳಗ!..... ನಾ ಹೋಗ್ತೀನಪ್ಪಾ;.. ನಾ ಒಲ್ಲೆ ಇಲ್ಲೆ!........ ಇಲ್ನೋಡು ಗೋಪ್ಯಾ...... ಫಕ್ಕನ ಆಕಿ ನನ್ನ ಕಣ್ಣಿಗೊಂದs ಬಿದ್ರ, ಈ ಅಟ್ಟದ ಮ್ಯಾಲಿಂದ ಹಾರಿಕೊಂಡು ಪ್ರಾಣಾಕೊಟ್ಟು ಈ ಮುಂಬೈ ಶಹರದವರು ನಿಮ್ಮಿಬ್ಬರ ಮೋರೆಗೂ ಶಗಣೀ ತಿಕ್ಕೊ ಹಾಗೆ ಮಾಡಿಬಿಡ್ತೇನಿ! .....`ನನ್ನ...... ಇಷ್ಟು ತಳತಳಾ ಅನಿಸಿದ ಮ್ಯಾಲ, ನನ್ನ ಗೋಳು ಹತ್ತದs ಬಿಟ್ಟೀತs?''

ರಮಾಬಾಯರು ಸಿಡಿ ಸಿಡಿಹಾಯುತ್ತ ಅಲ್ಲಿಂದ ಹೊರಟೇ ಬಿಟ್ಟರು. ಮುದುಕಿಯ ತಳಮಳಕ್ಕೆ ಗೋಪಾಲ ಬಲು ನೊಂದುಕೊಂಡ. ಬಾಗಿಲವರೆಗೂ ಹೋಗಿ ನೋಡಿದ; ರಮಾಬಾಯರು ಕಣ್ಣೀರಿನ ಮುಸುಕಿನಲ್ಲಿ ದಾರಿಗಾಣದೆ ಮುಗ್ಗರಿಸುತ್ತ ಒಂದೊಂದೇ ಮೆಟ್ಟಲನ್ನು ತಡವರಿಸಿ ತಡವರಿಸಿ ಇಳಿಯುತ್ತಲಿದ್ದರು. ಗೋಪಾಲ ಎಷ್ಟೋ ಹೊತ್ತು ತಾಯಿಯ ಪರಿಯನ್ನು ನೋಡುತ್ತ ನಿಂತುಕೊಂಡ. ಹೊಟ್ಟೆಯಲ್ಲಿ ಹಿಡಿಸಲಾರದ ಕಸಿವಿಸಿಯಾಯಿತು. ಆದರೂ ಹಾಗೇ ನೋಡುತ್ತಿದ್ದ. ರಮಾಬಾಯರು ಮೆಟ್ಟಲಿಳಿದು ಅರ್ಧದಾರಿ ಹೋಗಿದ್ದರು; ಅವರಿಗೆ ದಣಿವಾದಂತೆನಿಸಿತೇನೋ;- ಮೆಟ್ಟಲೊಂದರ ಮೇಲೆ ಕುಪ್ಪಳಿಸಿ ಕುಳಿತು ನಿಟ್ಟುಸಿರುಬಿಟ್ಟರು. ಒಮ್ಮೆ ಹಿಂದಿರುಗಿ ನೋಡುವ ಎತ್ತುಗಡೆಯನ್ನೂ ಮಾಡಹೋದರು. ಆದರೆ ಅದೇಕೋ ಬೇಡವೆನಿಸಿ ಇನ್ನುಳಿದ ಮೆಟ್ಟಲುಗಳನ್ನಿಳಿಯತೊಡಗಿದರು. ಪೂರಾ ಇಳಿಯುವಷ್ಟರ ದಣಿವಿಕೆಯಲ್ಲಿ ಅವರ ಸಿಟ್ಟೆಲ್ಲಾ ಸುಟ್ಟುಹೋಯಿತು. ತಮ್ಮ ಕೋಣೆಯಲ್ಲಿ ಹೋಗುವವರು, ಸ್ವಲ್ಪ ತಡೆದು ಮೇಲೆ ನೋಡಿದರು. ಗೋಪಾಲ ಇನ್ನೂ ನೆಟ್ಟ ನೋಟದಿಂದ

ತಮ್ಮನ್ನೆ ನೋಡುತ್ತಿದ್ದುದನ್ನು ಕಂಡು ರಮಾಬಾಯರಿಗೆ ಅದೆಷ್ಟೋ ಸಮಾಧಾನ ವೆನ್ನಿಸಿತು; ತಡವರಿಸುವ ದನಿಯಲ್ಲೆ ಕೂಗಿ ಹೇಳಿದರು, ``ಗೋಪೂ ಇವೊತ್ತು ನೀನು ಊಟದ ಡಬ್ಬಿಯೇನು ತರಿಸಬ್ಯಾಡಪ್ಪಾ, ಇಲ್ಲೇ ಅಡಿಗಿ ಮಾಡತೇನಿ; ಊಟಕ್ಕೆ ಬಾ! ನಿನ್ನ ಹುಟ್ಟಿದ ದಿವಸಾ ಇಂದು; ಅಂ! ನಿನಗ ಹೇಳ್ಲಿಕ್ಕಂತs ಮ್ಯಾಲ ಬಂದಿದ್ನೆಪ್ಪಾ!''

ಗೋಪಾಲ ಗಡಬಡಿಸುತ್ತಲೆ ``ಹೂಂ!'' ಎಂದ. ಸ್ವಲ್ಪ ಹಂಗಿಸೋಣವೇ ಎಂದು ಮನಸ್ಸು ಮುಂದರಿದಿತ್ತು; ಆದರೆ ಆತನ ಹೃದಯ ಅದಕ್ಕೆಡೆಗೊಡಲಿಲ್ಲ.

೫

ಗೋಪಾಲ ಊಟಕ್ಕೆ ಅಣಿಯಾಗಿ ಬಂದ. ರಮಾಬಾಯರು ತಾಟುಮಣೆ ಹಾಕಿಟ್ಟಿದ್ದರು. ಗೋಪಾಲ ಬಾಗಿಲಲ್ಲೇ ನಿಂತು, ಕೇಳಿದ -

``ಅವ್ವಾ ಒಳಗೆ ಬರ್ಲೇನೂ-?''

``ಬಾರೋ, ಗೋಪೂ; ಯಾಕs!''

ಅರ್ಥಶೂನ್ಯದೃಷ್ಟಿಯಿಂದ ಗೋಪಾಲನನ್ನು ನೋಡುತ್ತ ರಮಾಬಾಯರೆಂದರು. ತನ್ನ ಮಾತಿನ ಮರ್ಮ ತಾಯಿಗೆ ತಿಳಿಯಲಿಲ್ಲವೆಂದು ಗೋಪಾಲ ಮತ್ತಿಷ್ಟು ಕೆಣಕಲು ಮುಂದರಿದ-

``ಅವ್ವಾ, ನಿನ್ನ ದೇವರ ಮ್ಯಾಲೆ ನನ್ನ ನೆರಳು ಬಿದ್ದರ, ಮೈಲಿಗಾದೀತು? ಇತ್ಲಾಗ ಬಾಗಲಹತ್ತರ ಹಾಕಬಾರ್ದs ನನ್ನ ತಾಟೂ?''

``ಗೋಪಣ್ಣಾ, ನೀ ಇಲ್ಲದs ತಗೀಬ್ಯಾಡಪ್ಪಾ....! ನಿನ್ನ ನೆರಳು ಬಿದ್ದರ ದೇವರಿಗೆ ಮೈಲಿಗಿ ಆಗ್ತದೇನು? ಹಾಗೆ ನೋಡಿದರ ದೇವರಿಗೆ ಮೈಲಿಗೆಲ್ಲೀದು!''

* * * * *

ಬಲುದಿನಗಳ ಮೇಲೆ ತಾಯಿಯ ಕೈಯೂಟವು ಸಿಕ್ಕುದದರಿಂದ ಗೋಪಾಲನಿಗೆ ಅಂದಿನ ಊಟ ಅಮೃತವಾಗಿತ್ತು. ತಾಯಿ ಎದುರಿನಲ್ಲಿ ಕುಳಿತು ಬೇಕಾದುದನೆಲ್ಲ ಅಕ್ಕರತೆಯಿಂದ ಇಕ್ಕುತ್ತಿದ್ದಳು; ಗೋಪಾಲ ಸವಿಸವಿ ಮಾಡಿಕೊಂಡು ಎಲ್ಲಾ ಕೆಚ್ಚುತ್ತಿದ್ದ.

``ಆಸ್ಪತ್ರಿಗೆ ಹೋಗಿದ್ದೇನೋ ಗೋಪೂ?''

ಖೀರಿನ ಬಟ್ಟಲ ಬಾಯಲ್ಲಿರುವಾಗಲೆ, ತಾಯಿ ಆಸ್ಪತ್ರಿಯ ಮಾತೆತ್ತಿದುದರಿಂದ, ಗೋಪಾಲನಿಗೆ ನಗು ಬಂದು, ಬಾಯಬಟ್ಟಲವನ್ನು ಹೊರದೆಗೆಯುವುದು ಎಷ್ಟೋ ಕಷ್ಟವಾಯಿತು. ಆದರೂ ತಡಕೊಂಡು ಮಾತನಾಡಿದ.

``ಹೂಂ, ಹೋಗಿದ್ದೆ; ಡಾಕ್ಟರ್‍ರು, ಕಂಪೌಂಡ್ರು, ಎಲ್ಲಾರು ನೆಟ್ಟಗಿದ್ದಾರ.''

ಸಾಕು ಬಿಡೋ ನಿನ್ನ ಚಾಷ್ಟೀ! ಕೂಸು ಹ್ಯಾಗದs ಅಂದೆ.''

``ಕೂಸs; ಯಾ ಕೂಸು? ಅಲ್ಲೊಂದು ನೂರಾರು ಕೂಸು ಅವs!''

``ನಮ್ಮ ಕೂಸೋ! ಉಳಿದವರ ಚಿಂತಿ ನನಗ್ಯಾತಕ್ಕಪ್ಪಾ!''

``ಅಂತೂ, ಆ ಕೂಸು ನಿಮ್ಮದೂಂತ'' ಒಪ್ಪಿಕೋತೀಯಲ್ಲಾ!'' ನೋಡು, ಮತ್ತ, ಮೈಲಿಗ್ಗೀಲಿಗಿ ಆದೀತು!''

ಗೋಪಾಲ ನೀರು ಕುಡಿಯುತ್ತಿರುವಾಗಲೆ ಥಾಲಿಯ ಅಂಚಗುಂಟ ಅರೆಗಣ್ಣಿನ ಬಿರುನಗೆಯನ್ನು ಚಾಚಿ ಮಾತನಾಡಿದ. ಆದರೂ ನನ್ನ ಮಾತು ಎಲ್ಲಿ, ಯಾವಾಗ, ತಾಯಿಯ ಅಳುಕನ್ನು ಕೊಂಕುವದೋ ಎಂಬ ಎದೆಗುದಿ ಒಳಗೇ ಇದ್ದಿತು. ಆದರೆ ಈ ಸಲ ರಮಾಬಾಯರ ಸಮಾಧಾನದಿಂದಲೇ ಮಾತನಾಡಿದರು-

``ನಾವೊಲ್ನೆಪ್ಪಾ, ಗೋಪಾಲಾ! ನೀ ಪ್ರತಿಯೊಂದಕ್ಕೂ ಹೀಗೆ ಹಂಗಿಸಿ ಮಾತಾಡಿದರs! ಕೇಳಿದಷ್ಟು ಹೇಳಿದರಾಯಿತೂ!''

``ಯಾಕೋ ಮೊಮ್ಮಗನ ಮ್ಯಾಲೆ ಎಷ್ಟು ಪ್ರೀತಿ ಬಂದದಲ್ಲವ್ವಾ ನಡೀ, ಇವೊತ್ತು ನಿನ್ನs ಆಸ್ಪತ್ರಿಗೆ ಕರಕೊಂಡು ಹೋಗಿ ತೋರಿಸ್ತೇನಿ''

``ನಾsವೊಲ್ಲೆ ಮಾರಾಯಾ! ಆ ಶಟವೀ ಸಂಸರ್ಗಾನs ಬ್ಯಾಡಾ ನಾ ನನ್ನಷ್ಟಕ್ಕ ತಣ್ಣಗ ಇರ್‍ತೇನಿ ರಾಮಾ ಕೃಷ್ಣಾಂತ.''

ಗೋಪಾಲ ಊಟ ಮುಗಿಮುಗಿಸುತ್ತ ಮಾತನಾಡಿದ-

``ನನ್ನ ತಾಟು ನಾನs ತೊಳಕೊಳ್ಳತೇನಿ ಅವ್ವಾ; ಮತ್ತೆ ನಿನಗ ಮೈಲಿಗೀ?''

ಈ ಸಲವೂ ಗೋಪಾಲನ ಕೊಂಕಿನಿಂದ ರಮಾಬಾಯರ ಸಿಡುಕು ಸೆಟೆಯದೆ ಹೋಯಿತು; ಗೋಪಾಲ ಸೋತ.

``ಬ್ಯಾಡ, ಗೋಪು; ನನ್ನ ಊಟಾದ ಮ್ಯಾಲೆ ಬಿಳೇದು ಹಚ್ಚಿಕೊಂಡು ನಾಯೆಲ್ಲಾ ತೊಳೀತೇನಿ. ಇವೊತ್ತು ನಿನ್ನ ಹುಟ್ಟಿದ ದಿವಸಪ್ಪಾ; ನಿನ್ನಷ್ಟಕ್ಕ ನೀ ಸುಮ್ಮನ ಏಳು. ನೀ ಉಂಡ ತಾಟು ತೊಳದರ ಮೈಲಿಗ್ಯಾಕ ಆದೀತು ನನಗ!''

ಕೈ ತೊಳೆಯುತ್ತಿದ್ದಾಗ ಗೋಪಾಲ ಮತ್ತೊಂದು ಚುಚಂದ್ರಿ ಬಿಟ್ಟ.

``ಕೂಸಿಗೆ ಹೆಸರೇನಿಟ್ಟೇವಿ, ಗೊತ್ತದsಯೇನು?''

``ಏನೂ.....?'' ಮೈಮರೆವಿನ ಲವಲವಿಕೆಯಿಂದ ರಮಾಬಾಯರು ಕೇಳಿದರು.

``ಅಪ್ಪನ ಹೆಸರೂ......!''

ಕೇಳಿದೊಡನೆ, ರಮಾಬಾಯರ ಕೋಪದಾಟೋಪ ತಡೆಯದೆ ಗರ್ಜಿಸಿದರು-

``ಅವರು ಹೆಸರು ಯಾಕಿಟ್ರ್ಯೋ, ಆ ಗಯ್ಯಾಳಿ ಮಗ್ಗs.....! ನೀಚಾ.......!''

ಕರುಣಾವ್ಯಂಜಕವಾದ ದನಿಯಲ್ಲಿ ಗೋಪಾಲನೆಂದ-

``ಇಲ್ಲವ್ವಾ; ಹುಡುಗಾ ತೀರಾs ಅಪ್ಪನ ಹಾಗೇ ಅದs ನೋಡು.''

ಗೋಪಾಲನ ಗುಳಿಗಿ ಈ ಸಲ ಪೂರಾ ನಾಟಿತು; ರಮಾಬಾಯರ ಸಿಟ್ಟು ಒಮ್ಮೆಲೆ ಕಮರಿ ಹೋಯಿತು. ಅದರೆಡೆಯಲ್ಲಿ ಅವರೂ ಅರಿಯದ `ಅಂತರಃ ಕೋಪಿ' ಆಶಾಂಕುರವೊಂದು ಮೊಳೆತು ಬೇರೊಡೆಯ ತೊಡಗಿತು.

❄ ❄ ❄ ❄ ❄

## ೬

ಬೇರೊಡೆದ ಆಶೆಯ ಬಳ್ಳಿ ಚಿಗುರಿ ಕೊನರಿ ಕುದುರುತ್ತಲಿರುವಾಗಲೆ, ಫ್ಲಾರೆನ್ಸಳು ಮಗುವಿನೊಡನೆ ಮನೆಗೆ ಹಿಂದಿರುಗಿ ಬಂದು ಒಂದು ವರ್ಷದ ಮೇಲಾಯಿತು. ಗೋಪಾಲ ತನ್ನ ಚಿಕ್ಕ ಕುಟುಂಬದೊಂದಿಗೆ

ನಾಲ್ಕನೆಯ ಅಂತಸ್ತಿನಲ್ಲಿ; ರಮಾಬಾಯರೂ ತಮ್ಮ ಕುಟುಂಬ- (ಅಡಿಗೇ ಒಲೆ, ಕಲ್ಪರಟಿ, ಧಾಬಳಿ, ಮುದ್ರೀಪೆಟ್ಟಿಗೆ, ಕಕ್ಷಪಾಳ) - ದೊಂದಿಗೆ ತಮ್ಮಷ್ಟಕ್ಕೆ ತಾವು ಮೂರನೆಯ ಅಂತಸ್ತಿನ ತಮ್ಮ ಕೋಣೆಯಲ್ಲಿ;- ಇದ್ದೇ ಇರುತ್ತಿದ್ದರು.

ಮುದುಕಿ ದಿನವೊಂದಕ್ಕೂ ತೊಂದರೆಪಟ್ಟುಕೊಳ್ಳುವುದನ್ನು ನೋಡಿ ನೋಡಿ ಗೋಪಾಲ ಬಲು ನೊಂದುಕೊಳ್ಳುವ. ಆದರೂ ಮುಪ್ಪಿನ ತಾಯಿ ಕಣ್ಣೆದುರಿಗಿರುವಳಲ್ಲಾ ಎಂಬುದೇ ಒಂದು ಸಮಾಧಾನ. ಆದರೆ ಫ್ಲಾರೆನ್ಸಳಿಗಂತೂ ತಾನೇ ತಪ್ಪುಗಾರಳೆಂದು ತೋರಿಬಂದಾಗಲೆಲ್ಲ ಜೀವ ಹಿಂಡಿದಂತಾಗುವುದು. ಈ ಪರಿಯನ್ನು ಅರಿತರಿತು ಗೋಪಾಲ ಇನ್ನೂ ಕಸಿವಿಸಿ ಪಡುವ.

ಆದರೆ ರಮಾಬಾಯರ ಮಟ್ಟಿಗೆ, ಒಬ್ಬ ಸ್ಥಿತಪ್ರಜ್ಞನ ಆಲಿಪ್ತತೆಯಿಂದ ತಮ್ಮ ಜೀವನದ ಒಂದೊಂದೇ ದಿನಗಳನ್ನು ದಾಟುತ್ತಿದ್ದಂತೆ ತೋರುತ್ತಿದ್ದಿತು. ಬೆಳಿಗ್ಗೆದ್ದರೆ, ``ಏಳು ನಾರಾಯಣಾ....'' ``ಶುಂಡಾಲಪುರದೊಳಗೆ.....'' ತಪ್ಪುತ್ತಿರಲಿಲ್ಲ. ಆಮೇಲೆ ಕಸಗೂಡಿಸುವದು, ರಂಗೋಲಿ, ಉಪಕರಣ; ಧಾಬಳಿ ಹಚ್ಚಿಕೊಂಡು ಮಡಿನೀರು ತುಂಬಿಕೊಳ್ಳುವದು; ಅಕ್ಕಿಬೇಳೆ ಹಸಮಾಡಿ ಎಸರಿಗಿಡುವದು; ಮೈ ತೊಳೆದು ``ಹರಿಹರಿ ಮನವೇ ಹರಿಪಾದದ ಬಳಿಗೇ........,'' ``ತುಳಸೀ, ತುಳಸೀ, ತುಂಗಭದ್ರಾ.....,'' ``ನಾರಾಯ್ಣಾ ನಿಮ ನಾಮಾದಿಂದ......'' ಮುಂತಾದ ಮಂತ್ರಗಳನ್ನು ಹೇಳುತ್ತ ತುಳಸಿಗೆ ನೀರುಹಾಕಿ ನಮಸ್ಕಾರ ಮಾಡುವುದು; ಅಡಿಗೆಗಿಟ್ಟು ಒಲೆಯೆದುರು ಜಪಮಾಲೆ ಹಿಡಿದು ಕಣ್ಣುಮುಚ್ಚಿ ಒಟಗುಟ್ಟುತ್ತಿರುವದು; ಊಟವಾದ ಮೇಲೆ ತುಸು ಅಡ್ಡಾಗಿ ಏಳುವದು; ಆಮೇಲೆ ಕಐಮ ಕಐಮ ಮಾಡುತ್ತ ಗಳಗನಾಥರ ಭಾಗವತಾಮೃತವನ್ನೋದುತ್ತ ಕೂಡುವದು; ನಂತರ ಹಾಗೂಹೀಗೂ ಸಂಜೆಯ ಸಣ್ಣಪುಟ್ಟ ಕೆಲಸ; ರಾತ್ರಿ ಅವಲಕ್ಕೀ ಮೊಸರೋ, ಬೆಲ್ಲಾಹಿಟ್ಟೋ, ಬಾಳೇಹಣ್ಣೋ ಮೆದ್ದು ರಾಮ ರಾಮ ಎನ್ನುತ್ತ ಹಾಸಿಗೆ ಕಾಣುವದು;- ಇದು ರಮಾಬಾಯರ ದಿನಚರ್ಯೆ. ಇದನ್ನೆಲ್ಲ ಮನದಂದು ಬಗೆದಾಗಲೆಲ್ಲ ಗೋಪಾಲನಿಗೂ ಫ್ಲಾರೆನ್ಸಳಿಗೂ `ರಮಾಬಾಯರ ಜೀವನದ ಎಳೆಗಳು ಎಷ್ಟು ನುರಿಯಾಗಿ ಹುರಿಗೊಂಡಿರುವವಲ್ಲಾ' ಎಂದೆನಿಸಿ ಬೆರಗುಂಟಾಗುವದು.

ಆದರೆ ರಮಾಬಾಯರಿಗೆ ಮಾತ್ರ ಮುಂಬೈಗೆ ಬಂದಂದಿನಿಂದ ತಮ್ಮ ಜೀವನ ಹೆಚ್ಚು ತೆರವು ತೆರವಾದಂತೆ ತೋರುತ್ತಿದ್ದಿತು. ಧಾರವಾಡದಲ್ಲಿಯ ಬೆಳಗಿನ ಹುಚ್ಚಾಚಾರ್ಯರ ದಶಮಸ್ಕಂಧ, ಮಧ್ಯಾಹ್ನ ಸೀತಾರಾಮಾಚಾರ್ಯರ ಅರಣ್ಯಪರ್ವ, ವಿರಾಟಪರ್ವ ಮೊದಲಾದವೆಲ್ಲ ಆಗೀಗೊಮ್ಮೆ ಮರುಕಳಿಸಿ ಬಂದು ಅವರ ನೆನಪನ್ನು ಕೆಣಕುತ್ತಿದ್ದವು. ಹಾಗೆಯೇ ಮಧ್ಯಾಹ್ನದ ಪುರಾಣಕ್ಕೆ, ಎರಡುಗಂಟೆ ಮೊದಲೇ ಹೊರಟು, ಬೆಟಗೇರಿ ಭೀಮಾಬಾಯರ ತಲೆಬಾಗಿಲ ಮೆಟ್ಟುಗಟ್ಟೆಯ ಮೇಲೆ ಕುಳಿತುಕೊಂಡಾಗಿನ,- ``ಮಾರ್ತಾಂಡಭಟ್ಟರ ಮಥುರಿ ಮೈನರೆದದ್ದೂ'';- ``ಬೋಧರಾಯರ ಬಾಳಿ ಬಸುರಿದ್ದದ್ದೂ'';- ``ಕೂಸನೂರ ಕೃಷ್ಣಿಗೆ ಕುಬಸಾ ಮಾಡಿದ್ದೂ'';- ``ಸುಬ್ಬಣ್ಣಬಟ್ಟರ ಸರಸೋತೀ ಶ್ರೀಮಂತಾ''- ``ಹಯವದನಾ ಚಾರ್‍ರು ಹಿರೆಸೊಸಿ ಹಡದದ್ದೂ'';- ``ಗುಡಿಗೇರೀ ಗುಂಡಿ ಗುಡಿಗೆ ಹೋದದ್ದೂ'';- ``ಹುಬ್ಬಳ್ಳೀಕರ್ ಹಣಮೀನ್ನ ಹೆತ್ತನಿಬ್ಬಣಾ ಕಳಿಸಿದ್ದೂ'';- ``ಗೌಡರ ಗಂಗೀನ್ನ ಗಂಡಬಿಟ್ಟದ್ದೂ'';- ``ಪಾಟೀಲರ ಪಾರೋತೀ ಪತ್ತೆ ಆಗದ್ದೂ'';- ``ವಿಲಾಯತೀ ಮ್ಯೆಲಿಗೀ ದಸಿಂದ ಬಹಿಷ್ಕಾರಾ ಹಾಕಿದ್ದೂ ಬೀಡೀ ಬಳವಂತರಾಯರ ಮನಿಯೊಳಗ ಮಡಿ ಮಾಧವಾಚಾರ್‍ರು, ಮಠದ ಮಧ್ವಾಚಾರ್‍ರು ರುಪರುಪಾಯಿ ಕರಾರದ ಪ್ಯಾಲ ಉಂಡಬಂದದ್ದೂ'';- ``ಸಕೇಶೀನ್ನ ಮದವೀ ಮಾಡಿಕೊಂಡ ಕುಂದಗೋಳ ಡಾಕ್ಟರ ಮನೀಯೊಳಗ ಕಂಠೀ ಕೂರ್ಮಾಚಾರ್‍ರು ಕರ್ಮಾ ಮಾಡಿಸಿದ್ದೂ''- ಮೊದಲಾದ ವಿವಿಧ-ರಸ-ರಂಜಕವಾದ ಮಾತುಗಳು ಒಂದೊಂದೇ ಸವಿ ನೆನಪಾಗಿ ಬಂದು ಅವರ ಮನದ ಮುಗಿಲಲ್ಲಿ ಸುಳಿ ಸುಳಿದು ಸಂಚರಿಸಿ ಚದರುತ್ತಿದವು. ಅವಿಲ್ಲದಿದ್ದರೆ,- `ಅಣ್ಣಾಚಾರಮನೀ ಅವಲಕ್ಕೀ ಕುಟ್ಟೋದು';- `ಕಮಲಾಬಾಯರ ಕೂಸಿಗೆ ಎರಡು ದಿನಕ್ಕೊಮ್ಮೆ ಎರೀಲಿಕ್ಕೆ ಹೋಗೋದೂ';- `ಕುಪ್ಪೇಲೂರ ತಿಪ್ಪಕ್ಕನ ಮನೀ ಹಪ್ಪಳಾ ಮಾಡಿದ್ದೂ'- ಇತ್ಯಾದಿ. ಇದೂ ತಪ್ಪಿದರೆ,- ``ರಿಂದವ್ವನ ರುಷಿಪಂಚಮಿ ಉದ್ಯಾಪನಿ ಆಗಿದ್ದೀತೂ'';- ``ಮೈನೀ ಮದಿವ್ಯಾಗ ವರದಕ್ಷಿಣಿ ಎಷ್ಟು ಕೊಟ್ಟರೋ, ವಸ್ತಾ ಪಸೇನಿಟ್ಟರೋ;''- ಗುಣಾರಿ ಗೋದೂ ಹಡದಾಳ ಕಾಣಸ್ತದ; ಕೂಸಿಗೆ ಹೆಸರೇನಿಟ್ಟಿದ್ದಾರೂ'';- ``ಕೋಟುಮಚಿಗಿ ಕಾವೇರೀ ಕೂಸಿಗೆ ಕಾಲ್ಮಡಗ ಮಾಡಿಸಿಕೊಡಬೇಕಂತ ಮಾಡಿದ್ದೆ; ಆಗಲೇ ಇಲ್ಲಾ''- ಎಂಬ ಆಲೋಚನೆಗಳಾದರೂ ಅವರ ತಲೆಯಲ್ಲಿ ಸುಗ್ಗಾಡುತ್ತಿದ್ದವು.

ಆದರೆ, ಹೀಗಿರುತ್ತಿರುವಾಗಲೆ, ರಮಾಬಾಯರ ಎದೆಯಲ್ಲಿ ಬೇರೊಂದು ಆಶೆಯ ಬಳ್ಳಿ ಹಬ್ಬಿ ಹರವುತ್ತಿದ್ದುದರಿಂದ ಈ ಬಗೆಯ ವಿಚಾರಗಳು ಒಂದೊಂದಾಗಿ ಹಳಸಿ ಹಳೆಯವಾಗಿ ಕಳಚತೊಡಗಿದವು. ತಮ್ಮ ಕರುಳ ಬಳ್ಳಿಯ ತುತ್ತತುದಿಗೆ ಹೊಚ್ಚ ಹೊಸದಾಗಿ ಅರೆ ಅರಳಿದ ತನಿಹೂವೊಂದು ತನ್ನ ನರುಗಂಪಿನಿಂದ ತಮ್ಮ ಜೀವನದ ಅಂತರಂತರೀಕ್ಷವನ್ನೆಲ್ಲ ಘಮಘಮಿಸುತ್ತಿದ್ದುದು ರಮಾಬಾಯರಿಗೂ ಅನಿಸಹತ್ತಿತ್ತು.

ಆ ತನಿಹೂವೆ ಗೋಪಾಲನ ಹಸುಗೂಸು ವಸಂತಮಾಧವ.

❄ ❄ ❄ ❄ ❄

೭

``ಫ್ಲೊರಾ, ಇವೊತ್ತೂ ನೀನೊಬ್ಬಳೆ ಊಟ ಮಾಡಬೇಕಲ್ಲಾ!''- ಜಳಕದ ಕೋಣೆಯಿಂದ ಹೊರಬರುತ್ತಿದ್ದ ಗೋಪಾಲ ನಸುನಗುತ್ತ ಮಾತನಾಡಿದ.

``ಅದ್ಯಾಕೋ ತಾಯಿಯವರ ಔತಣ ಬಹಳ ಬರಲಿಕ್ಕೆ ಹತ್ತ್ಯಾವಲ್ಲಾ.......!'' ದಾದಿಯ ಕೈಯಲ್ಲಿದ್ದ ಮಗುವಿಗೆ ಫ್ಲ್ಯಾನೆಲ್ ಕಟ್ಟುತ್ತ ಫ್ಲಾರೆನ್ಸಳು ಗಂಡನಿಗೆ ಮರುಮಾತನಾಡಿದಳು........``ಜಾನೀ ಕೂಸಿನ್ನ ದೂರ ಕರಕೊಂಡು ಹೋಗಬ್ಯಾಡಾ; ಗ್ಯಾಲರಿಯೊಳಗ ಆ ಕುರ್ಚಿಮ್ಯಾಲ ಕೂತುಕೊಂಡು ಕೂಸಿನ್ನ ಆಡಿಸು''

``ನಮ್ಮ ವಸಂತ ಗ್ಯಾಲರಿಯೊಳಗ ಕೂಡಲಿಕ್ಕೆ ಒಳ್ಳೇ ಮೆಚ್ಚಿಗೊಂಡಾನಲ್ಲ, ಫ್ಲೊರಾ!'' ತಲೆಬಾಚಿಕೊಳ್ಳುತ್ತಿದ್ದ ಗೋಪಾಲ, ಜಾನಿ ಮಗುವನ್ನು ಎತ್ತಿಕೊಂಡು ಹೊರಕ್ಕೆ ಹೋಗುವದನ್ನು ಮಾಲಿಸುತ್ತ ಮಾತನಾಡಿದ.

`ವಸಂತ ಮೆಚ್ಚಿಕೊಂಡದ್ದು ಗ್ಯಾಲರೀಗಲ್ಲಾS; ತಮ್ಮ ಅಜ್ಜಿಗೆ!'

``ಅಂದರೇನೊ.......?''

``ಅಂದರೇನೂ! ನಿನಗ ಗೊತ್ತಿಲ್ಲ ಗೋಪೂ, ನಿಮ್ಮ ತಾಯಿಯವರು ವಸಂತನ ಜೊತೆಗೆ ನಡಸ್ತಿರೋ ಪ್ರೇಮಚೇಷ್ಟಾ!.... ನಾನು ಆಸ್ಪತ್ರಿಯಿಂದ ಬಂದ

ಹೊಸದಾಗಿಯಂತೂ, ಜಾನಿ, ಆತನ್ನ ಕೂಡಿಸಿಕೊಂಡು ಆ ಕುರ್ಚೀಮ್ಯಾಲ ಕೂತರ, ಅವರು ಮಿನೀಟಿಗೆ ಹತ್ತ ಸಲ ಅಟ್ಟದ ಕಡೆ ಹಣಿಕಿ ಹಾಕಿ ಹೋಗುತ್ತಿದ್ದರು. ಈಗಂತೂ ಉಸಿರಿಗೊಮ್ಮೆ ಓಡಾಡ್ತಾರ"

ಇದೇ ಹೊತ್ತಿಗೆ, ಕೆಳಗಣಿಂದ ರಮಾಬಾಯರ ಕೂಗು ಕೇಳಬಂತು-

``ಗೋಪ್ಪೂ, ಹಾಗಾದ್ರ, ನಾ ಊಟಕ್ಕ ಕೂಡ್ಲೇನಪ್ಪಾs?"

ಗೋಪಾಲ ಬಾಗಿಲವರೆಗೆ ಬಂದು ಕೆಳಮೆಟ್ಟಿಲ ಮೇಲೆ ನಿಂತಿದ್ದ ತಾಯನ್ನು ಕಂಡು, ಹೇಳಿದ-

``ಹೂನವ್ವಾ, ನೀ ಊಟಕ್ಕ ಕೂತುಕೊಂಡು ಬಿಡು; ಎರಡು ಏಕಾದಶೀ ಉಪವಾಸದವಳು ನೀನು! ನಿನ್ನದಾದ ಮ್ಯಾಲ ನನಗ ಬಡಸೀ ಅಂತ."

ಗೋಪಾಲ ಮಾತನಾಡುತ್ತಿದ್ದಾಗ ರಮಾಬಾಯರು ಜಾನಿಯ ಕೈಯಲ್ಲಿದ್ದ ಕೂಸನ್ನೇ ಕಣ್ಣರಳಿಸಿ ನೋಡುತ್ತಲಿದ್ದರು. ಗೋಪಾಲನ ಮರೆಯಲ್ಲಿ ನಿಂತು ಫ್ಲಾರೆನ್ಸಳೂ ಅದನ್ನು ನೋಡಿದಳು. ಒಳಗೆ ಬರುವಾಗ ಅರ್ಥಗರ್ಭಿತ ದೃಷ್ಟಿಯಿಂದ ಫ್ಲಾರೆನ್ಸಳನ್ನು ಮಾಲಿಸುತ್ತ ಗೋಪಾಲ- ``ಅಯ್ಯೋ..... ಅಯ್ಯೋ...... ಪಾಪ......" ಎಂದು ಮೆಲ್ಲನೆ ಉಸುರಿದ. ಆತನ ನೋಟ ತನ್ನೆದೆಯಲ್ಲಿ ನಾಟಿಸಿದ ನಾಚಿಕೆಯನ್ನು ನಗೆಯಲ್ಲಿ ಮರೆಸುತ್ತ ಫ್ಲಾರೆನ್ಸಳು ಮೋರೆದಿರುವಿ, ಜಾನಿಯ ತೊಡೆಯ ಮೇಲಿನ ಮಗುವನ್ನೀಕ್ಷಿಸುತ್ತ-

``ಮೊನ್ನೆ..... ಏನು..... ಮೋಜಾತೂ..... ಗೊತ್ತದs ಏನು...... ಗೋಪ್ಪೂ?--

ಹೇಳುತ್ತಿದ್ದಂತೆಯೆ ಫ್ಲಾರೆನ್ಸಳು ತಾಳಗೆಟ್ಟು, ತಡೆಯದೆ ಬರುವ ನಗೆಯ ತೆರೆಗಳೊಡನೆ ತೂಗಾಡಿ ಜೋಲೀ ಹೊಡೆಯಹತ್ತಿದಳು.

``ಏನೂ?..... ಏನಾತೂ......"

ನಗೆಯ ನಾಟ್ಯದಲ್ಲಿ ಮೈಮರೆತು ತನ್ನ ಕೌತುಕವನ್ನೂ ಉತ್ಸುಕತೆಯನ್ನೂ

ಲೆಕ್ಕಿಸದೆ ಒಂದೇಸಮನೆ ನಕ್ಕೇ ನಗುತ್ತಿದ್ದ ಫ್ಲಾರೆನ್ಸಳನ್ನು ತೆರವುಗಣ್ಣಿನಿಂದ ನೋಡುತ್ತ ಗೋಪಾಲ ಕೆಲಹೊತ್ತು ಉತ್ತರದ ದಾರೀ ಕಾಯಬೇಕಾಯಿತು.

ನಗೆಯಲೆಗಳ ಅಬ್ಬರವನ್ನು ತಡೆತಡೆದುಕೊಳ್ಳುತ್ತ, ಕಂಣ ನೀರನ್ನು ಕರವಸ್ತ್ರದಿಂದ ಒರೆಸಿಕೊಂಡು ಫ್ಲಾರೆನ್ಸಳು ಹೇಳಿದಳು--

``ಮೊನ್ನೆ....., ಮೊನ್ನೆ ಶನಿವಾರ, ನಾನು ಸ್ಕೂಲಿನಿಂದ ಎರಡು ಗಂಟೇಕ್ಕs ಬಂದೆ,.... ನೀಯಿನ್ನೂ ಬಂದಿರಲಿಲ್ಲ. ಆವೊತ್ತು ನಾ ಅಷ್ಟು ಬೇಗ ಬರ್ತೀನಿ ಅಂತ ಅವರಿಗೇನು ಗೊತ್ತೂ! ಆ ಕಿಡಿಕೀ ಹತ್ತರ ನಿಂತು ನಿಮ್ಮ ತಾಯಿಯವರು ಜಾನೀ ಕೈಯೊಳಗಿನ ವಸಂತನ್ನ ಕಟ್ಟಾಡಿಸಿ ನಗಸ್ತಿದ್ದರು; ಕೂಸು ಕ್ಯಾಕೀ ಹೊಡಕೋತ ಕೂತಲ್ಲೇ ಹಾರಿ ಹಾರಿಬಿದ್ದು ನಗ್ತಿತ್ತು. ನನಗೇನು ಗೊತ್ತು ಮಣ್ಣೂ! ದಷ್ಟತನಾ ಮಾಡಿ ಧಡಾ ಧಡಾ ಅಂತ ಮ್ಯಾಲಹತ್ತಿ ಬಂದೆ. ನನ್ನ ಬೂಟಿನ ಸಪ್ಪಳಕ್ಕ ಅವರು ಕಕ್ಕಾವಿಕ್ಕಿಯಾಗಿ ಗೋಡೆಗೋಡೆ ಹಾಯ್ಕೋತ ಗಡಬಡಿಸಿ ಮಲಗೂ ಕೋಣೆಯಲ್ಲಿ ಹೊಕ್ಕರು. ದಿನದಂತೆ, ನಾನೂ ಅಲ್ಲೇ ಹೋಗುವಾಕಿ; ಆದರ, ನನಗ ಲಕ್ಷಣಾ ಗೊತ್ತಾತು; ನೆಟ್ಟಗೆ ಜಳಕದ ಕೋಣೆಗೆ ಬಂದು ಬಾಗಿಲ ಬಿರುಕಿನಲ್ಲಿ ನೋಡ್ತಾನಿಂತೆ. ಅವರು ಸುಮ್ಮಸುಮ್ಮನೆ ``ಗೋಪಾಲಾ, ಗೋಪಾಲಾ'' ಎಂದು ಕೂಗಿದಂತೆ ಮಾಡಿ ನಾನು ಅಡಗಿದ ಕಡೆಗೆ ಕಳ್ಳಗಣ್ಣಿನಿಂದ ನೋಡ್ತಾ ಅವಸರದಿಂದ ಹೊರಬಿದ್ದು ವಸಂತನ ಕೈಯೊಳಗ ಆ ಹಲ್ವಾದ ಪುಡಕೀ ಕೊಟ್ಟು ಮೆತ್ತಗೆ ಜಾರಿಕೊಂಡರು. ಒಂಧೆರಡು ಮೆಟ್ಟಿಲಿಳಿದು, ಗಟ್ಟಿಯಾಗಿ ಖೇಖರಿಸಿ, ``ಏ ಜಾನೀ, ನಗಣೀ ತಂದುಕೊಡು ಅಂತ ನಿನಗ ಹೇಳ್ಲಿಕ್ಕೆ ಬಂದಿದ್ನೇ''--! ಅಂತ ನನಗೂ ಕೇಳುವಂತೆ ಕೂಗಿ ಹೇಳಿದರು. ಅಷ್ಟೊತ್ತಿಗೆ ನಾನು ಹೊರಗ ಬಂದಿದ್ವೆ; ಅವರ ಮಾತು ಕೇಳಿ ನಾನೂ ಜಾನಿ ಎಷ್ಟೊ ಹೊತ್ತಿನತನಕಾ ನಕ್ಕೇನಕ್ಕಿವಿ.''

ಫ್ಲಾರೆನ್ಸಳು ಮಾತನಾಡುತ್ತಿದ್ದಂತೆ, ಗೋಪಾಲ ಆ ನೋಟವನ್ನೆಲ್ಲಾ ಕಣ್ಣೆದುರು ಕಲ್ಪಿಸಿಕೊಳ್ಳುತ್ತ ಅವಳೊಡನೆ ಬೆರೆತು ಮನಸಾರೆ ನಕ್ಕುಬಿಟ್ಟ. ಆದರೆ ಆ ನಗೆಯ ಹೆಗಲನ್ನೇರಿ ಒಂದು ಬಗೆಯ ಕನಿಕರವೂ ಇಣುಕಿ ಮಿಣಕುತ್ತಿತ್ತು.

``ಆದರ ನಿನಗ ಇನ್ನೊಂದು ಸಂಗ್ತಿ ಗೊತ್ತಿಲ್ಲ ಫ್ಲೋರಾ! ದಿನಾಲು ನಾನು

ಕಾಲೇಜಕ್ಕ ಹೋಗಬೇಕಾದ್ರೆ ನೀನು ವಸಂತನ್ನ ಕರಕೊಂಡು ಕೆಳ ಅಂತಸ್ತಿನ ತನಕಾ ಕಳಿಸಿಲಿಕ್ಕೆ ಬರ್ತೀಯಲ್ಲಾ--, ಆಗ ನಾನು ಬೇಕಂತಽ ನಿನ್ನ ಕೆಳಮೆಟ್ಟಲಿನ ಮ್ಯಾಲ ನಿಲ್ಲಿಸಿ ವಸಂತಗ ಮುದ್ದುಕೊಟ್ಟು, ನಿನಗ `ಶೇಕ್‌ಹ್ಯಾಂಡ್' ಮಾಡಿ ಹೋಗ್ತೀನಲ್ಲಾ; ಯಾಕ ಗೊತ್ತೇನು? ಆಗ ಅವ್ವ ಕಿಡಕೀ ಮರೀಗೆ ನಿಂತು ನಾವು ಮೊಡೋದಽ ನೋಡ್ತಿರ್ತಾಳ.''

``ಅದ್ಯಾಕ; ನನಗೇನು ಗೊತ್ತಿಲ್ಲೇನದೂ? ನೀ ಹೋದಮ್ಯಾಲ ನಾನೂ ಬೇಕಂತ ಮೈಮರಿಸಿ ಗರಕ್ಕನ ತಿರುಗಿ ಅವರ ಕಡೆ ನೋಡಿದಂತೆ ಮಾಡ್ತೀನಿ. ಆಗ ಅವರು ಹೊಸ ಹರೆದ ಹುಡಿಗಿ ಥಟಕ್ಕಂತ ಗಂಡನ್ನ ಕಂಡಹಾಗೆ ಕಳಿವಿನಿಂದ ಮರೀಗೆ ಹೋಗ್ತಾರ. ಮುಂದ ನಾನು ಸ್ಕೂಲಿಗೆ ಹೋಗಬೇಕಾದ್ರೂ ಜಾನೀ ವಸಂತನ್ನ ಕರಕೊಂಡು ಅಲ್ಲೀ ತನಕಾ ಬಂದಾಗ ಮತ್ತ ಇಡೀ ನಾಟಕ `ಒನ್ಸಮೋರ್' ಆಗೋದೇ! ನಾವಿಬ್ಬರೂ ಹೋದಮ್ಯಾಲಂತೂ, ದಿನಾ ಜಾನಿಗೆ ನಾಕು ತಾಸಿನ ಸೂಟೀನಽ ಸೂಟಿ!''

❄ ❄ ❄ ❄ ❄

ಮಾತನಾಡುತ್ತಿದ್ದಂತೆಯೇ, ಫ್ಲಾರೆನ್ಸಳ ಕಣ್ಣು ಬಾಲ್ಕನಿಯಲ್ಲಿದ್ದ ಜಾನಿಯ ಮೇಲೆ ಬಿತ್ತು. ಬೆಳಗಿನ ಸುಳಿಗಾಳಿಗೆ ಅವಳು ಅರೆಗಣ್ಣು ಮುಚ್ಚಿದ್ದಾಳು; ಮಡಲಲ್ಲಿ ಮಗುವಿರಲಿಲ್ಲ. ಫ್ಲಾರೆನ್ಸಳು ತಟ್ಟನೆ ಹೊರಗೆ ಬಂದು ನೋಡಿದಳು; ವಸಂತ ಬಾಲ್ಕನಿಯಲ್ಲಾಗಲೀ ಇರಲೇ ಇಲ್ಲ. ಜಾನಿಯನ್ನು ಬಡಿದೆಬ್ಬಿಸಿ ಕೇಳಿದರೆ ಅವಳು ಸುಮ್ಮನೆ ಅತ್ತಿತ್ತ ತಡವರಿಸಿ ಬಿಟ್ಟಳು. ಫ್ಲಾರೆನ್ಸಳ ಕುತೂಹಲಕ್ಕೆ ಕಲ್ಪನೆ ಕೈಗೊಟ್ಟಿತು; ಅವಳು ಮೆಲ್ಲಮೆಲ್ಲನೆ ಒಂದೊಂದೆ ಮೆಟ್ಟಲಿಳಿದಳು. ಕಿಡಕಿಯ ಮರೆಗೆ ನಿಂತು ರಮಾಬಾಯರ ಕೋಣೆಯಲ್ಲಿ ಹಣಿಕಿ ಹಾಕಿದಳು. ಮಗು ಅಲ್ಲಿ ಇತ್ತು. ಒಡನೆಯೆ ಗೋಪಾಲನನ್ನು ಕರೆಯೆಂದ ಜಾನಿಗೆ ಮೆಲ್ಲನೆ ಸನ್ನೆ ಮಾಡಿದಳು. ಆತನೂ ಕಳ್ಳ ಹೆಜ್ಜೆಯಲ್ಲೇ ಇಳಿದು ಬಂದ. ಒಂದು ಬಗೆಯ ಕೌತುಕವೂ, ಇನ್ನೊಂದು ಬಗೆಯ ಕುತೂಹಲವೂ, ಬೇರೊಂದು ಬಗೆಯ ಸೋಜಿಗವೂ, ಮತ್ತೊಂದು ಬಗೆಯ ಸಂತಸವೂ, ಮಗುದೊಂದು ಬಗೆಯ ಕನಿಕರವೂ ಆ ಗಂಡಹೆಂಡಿರೆದೆಯೆರಡರಲ್ಲೂ ಗುದುಮುರಿಗೆ ಹಾಕುತ್ತಲಿರಲು, ಇಬ್ಬರು ಮರೆಯಲ್ಲೇ ನಿಂತು ನೋಡತೊಡಗಿದರು.

ಅಂದು ದೀವಳಿಗೆಯ ದ್ವಾದಶಿಯೆಂದೂ ಗೋಪಾಲ ಊಟಕ್ಕೆ ಬರುವವನೆಂದೂ ರಮಾಬಾಯರು ಸವಿಸವಿಯಾಗಿ ಅಡಿಗೆ ಮಾಡಿದ್ದರು. ದೀಪಾವಳಿಯ ಹಬ್ಬಕ್ಕೂ ಇರಲೆಂದು ಪಾಕದ ಚರೋಟಿ ತಯಾರಾಗಿದ್ದಿತು. ಈಚೆಯ ಗೋಡೆಯ ಹತ್ತರ ಹಾಕಿದ್ದ ಗೋಪಾಲನ ತಾಟು ಆ ಪಕ್ವಾನ್ನದ ರುಚಿಗೆ ಬಾಯ್ಬಿಡುತ್ತಿದ್ದಿತು. ರಮಾಬಾಯರು ಒಲೆಯೆದುರು ತುಸು ಅಂತರದಲ್ಲಿ ತಮ್ಮ ಎಲೆ ಹಾಕಿಕೊಂಡಿದ್ದರು. ಪುಟ್ಟವಸಂತ ಕೋಣೆಯ ನಟ್ಟನಡುವೆ ಕುಳಿತು, ಎದುರಿಗೆ ಹರವಿದ್ದ ಚಿಕ್ಕಗಂಟೆ, ಜಾಂಬು, ಬಟ್ಟಲ, ನಿರಾಜನಗಳನ್ನು ತನ್ನ ಬಲಗೈಯಿಂದ ಅತ್ತಿತ್ತ ಬೀಸಾಡುತ್ತ, ಎಡಗೈಯ ಚರೋಟಿಯನ್ನು ಅರೆಯರೆಯಾಗಿ ಕುಡಿದುಗುಳುತ್ತ, ತುಟಿ-ಮೂಗು-ಗಲ್ಲಗಳಿಗೆಲ್ಲ ಪಾಕದ ರಸ ಸವರಿಕೊಂಡು ಆಟದಲ್ಲಿ ಮುಳುಗೇಳುತ್ತಲಿದ್ದ.

ರಮಾಬಾಯರು ಸೂರ್ಯ ನಮಸ್ಕಾರ ಮುಗಿಸಿದ ಮೇಲೆ ಊಟಕ್ಕೆ ಕೂಡುವ ಮೊದಲು ವಸಂತನ ಹತ್ತಿರಬಂದು, ನೋಡಿ, ``ಅಯ್ಯs, ವಸಂತಾ!'' ಎಂದರು. ಮಗು ಮೋರೆ ಮೇಲಕ್ಕೆತ್ತಿ ಅಜ್ಜಿಯನ್ನು ಹುಳುಹುಳು ನೋಡಿತು. ರಮಾಬಾಯರು ಮತ್ತಷ್ಟು ಮುಂದಕ್ಕೆ ಬಾಗಿ, ``ಎಂಥಾ ಕೆಟ್ಟ ಕೂಸ ಇದೂ, ನನ್ನ ಭಂಗಾರಾ!-; ಥೀ ನಿನ ನಿನ ನಿನ ನಿನ-; ಮುಸುರೀ ಹರವತೀಯ ಮನೀ ತುಂಬ!...... ಅಯ್ಯ ಬಚ್ಚಬಾಯಿ ತಗೀತಕದs-'' ಎಂದೆನುತ್ತ ಮಗುವಿನ ಮುದ್ದುತನಕ್ಕೆ ಮರುಳಾಗಿರುವಾಗಲೇ, ನರನರಗಳಲ್ಲೆಲ್ಲಾ ಪ್ರೀತಿ ಒತ್ತರಿಸಿ ಹರಿದು ಬಂತೇನೋ ಎಂಬಂತೆ ಮಗುವಿನ ಹಾಲುಗಲ್ಲಗಳನ್ನು ಹಿಂಡಬೇಕೆಂದು ಹಾತೊರೆಯುವ ಅವರ ಕೈಗಳು ಮುಂಬರಿದು ಬಂದವು. ಅವರ ಮಾತಿನಿಂದ ಏನೋ ತಿಳಿದವನಂತೆ ಮಗು ತನ್ನ ಕೈ ಕೊಡವಿ ನಕ್ಕು ಬಿಟ್ಟಿತು. ತಾವು ಮಡಿಯಲ್ಲಿದ್ದುದನ್ನೇ ಮರೆತ ತಮ್ಮ ಕೈಗಳನ್ನು ತಟ್ಟನೆ ಹಿಂದೆಳೆದುಕೊಂಡರು. ``ಕೆಟ್ಟ ಕೂಸು; ಮುಟ್ಟಲಿಕ್ಕೇ ಬರ್ತದ-'' ಎಂದು ಗೊಣಗುತ್ತ, ಹೋಗಿ ಎಲೆಯೆದುರು ಕುಳಿತು ಊಟಕ್ಕೆ ಮೊದಲು ಮಾಡಿದರು. ಇದನ್ನೆಲ್ಲ ಕಣ್ಣಲ್ಲೇ ಕಣ್ಣಿಟ್ಟು ನೋಡುತ್ತಿದ್ದ ಗಂಡಹೆಂಡಿರಿಬ್ಬರೂ ಒಬ್ಬರೊಬ್ಬರ ಮೊಗವನ್ನು ನೋಡಿ ಕಣ್ಣಲ್ಲೇ ನಕ್ಕರು.

ಇತ್ತ ವಸಂತನ ಚಿನ್ನಾಟ- ಚೆಲ್ಲಾಟ ನಡೆದೇ ಇತ್ತು. ಅತ್ತ ರಮಾಬಾಯರ ಊಟ ಮೆಲ್ಲಗೆ ಸಾಗಿತ್ತು. ಆದರೆ ಅವರ ಚಿತ್ತ ಊಟದ ಮೇಲೆ ಇದ್ದಂತಿರಲಿಲ್ಲ. ಪ್ರತಿಯೊಂದು ತುತ್ತೂ ಒಂದೊಂದು ವಿಚಾರದ ಒಜ್ಜೆಯನ್ನು ಹೊತ್ತುಕೊಂಡಂತೆ ಕಾಣುತ್ತಿತ್ತು. ಗಳಿಗೆಗಳಿಗೆಗೂ ಅವರು ಹಿಂದಿರುಗಿ ಆಟದಲ್ಲಿ ಮುಳುಗಿದ ಮಗುವನ್ನು ಭಾವನೆಗಳ ಭಾರದಿಂದ ಕುಸಿದುಬೀಳುವಂತಿರುವ ಕಣ್ನೋಟದಿಂದ ನಿರೀಕ್ಷಿಸುತ್ತಲಿದ್ದಾಗ, ಬಾಯಲ್ಲಿಯ ತುತ್ತು ನುಂಗುವುದನ್ನೂ ಅವರು ಮರೆಯುತ್ತಿದ್ದರು. ಆಗ, ಕೈಯಲ್ಲಿಯ ತುತ್ತು ಕೈಯಲ್ಲಿಯೇ ಉಳಿದು ಅಗುಳಗುಳಾಗಿ ಜಾರಿ ಬೀಳುತ್ತಿದ್ದಿತು. ಬರುಬರುತ್ತ, ಎಲೆಯಲ್ಲಿಯ ಪದಾರ್ಥಗಳಿಗಾಗಿ ಕೈಯು ಅತ್ತಿತ್ತ ತಡವರಿಸುವುದು ಕಂಡು ಬರುತ್ತಿತ್ತು. ಆಗ ಅವರ ದೃಷ್ಟಿ ಯಾವುದೋ ಒಂದು ಗುರಿಗೆ ನಿರಿಯಾಗಿ ತಿರುಗಿತ್ತು. - ಅದು ಒಳಗೋ.....! ಹೊರಗೋ.....!! ಬಲ್ಲವರಾರು!!!

ಹೀಗಿರುವಾಗಲೆ, ತನ್ನ ಚರೋಟಿಯ ಚೂರನ್ನು ಅರ್ಧ ತಿಂದು ಅರ್ಧ ಅತ್ತಿತ್ತ ಚೆಲ್ಲಾಡಿ ಕೈ ಬರಿದು ಮಾಡಿಕೊಂಡ ವಸಂತನ ಕಣ್ಣು ರಮಾಬಾಯರ ಎಲೆಯ ಕಡೆಗೆ ಹೊರಳಿತು. ಮಗು ಮೆಲ್ಲಮೆಲ್ಲನೆ ಅಂಬೇಗಾಲಿಡುತ್ತ ಹತ್ತರ ಹೋಗಿ, ಸಾಗರಬಿದ್ದು, ಬಲಗೈಯನ್ನು ನಿಡಿಧಾಗಿ ನೀಡಿ ಎಲೆಯ ತುದಿಗಿದ್ದ ಅಂಬೋಡಿಯನ್ನು ಎಳಕೊಂಡ. ತಮ್ಮ ಎಲೆಯ ಕಡೆಗೆ ಏನೋ ಹರಿದು ಬಂದಂತೆನಿಸಲು ರಮಾಬಾಯರು ಮೆಟ್ಟಿ ಬಿದ್ದು ನೋಡಿದರು; ಮಗುವಿನ ಕೈ! ಅವರು ತಟ್ಟನೆ ಸರಿದು ಕುಳಿತು ಮಗುವನ್ನು ತೀವ್ರವಾದ ನೋಟದಿಂದ ದುರುದುರು ನೋಡಿದರು. ಅಂಬೋಡಿಯನ್ನು ಕಡಿಯಲು ಯತ್ನಿಸುತ್ತಲಿದ್ದ ಮಗು ಅವರ ನೋಟಕ್ಕೆ ಹೆದರಲಿಲ್ಲ; ನಕ್ಕು ಬಿಟ್ಟಿತು. ಹಾಗೆಯೇ, ಕಣ್ಣಲ್ಲಿ ಕಿಡಿಗೇಡಿತನದ ಕನಿಕರವನ್ನು ತುಂಬಿಕೊಂಡು ರಮಾಬಾಯರ ಮೊಗವನ್ನೇ ನಿಟ್ಟಿಸುತ್ತ ನೆಲೆನೆಲೆಯಾಗಿ ನಗೆಯ ನೆರೆಯನ್ನು ಹರಿಸಹತ್ತಿತ್ತು. ಆ ನೆರೆಯ ಸೆಳವಿಗೆ ಸಿಕ್ಕ ರಮಾಬಾಯರ ಆವೇಗ ಒಂದು ನಿಮಿಷದಲ್ಲಿ ಉದ್ವೇಗವಾಗಿ, ಮರುನಿಮಿಷದಲ್ಲಿ ಅನುರಾಗದಲ್ಲಿ ಮಾರ್ಪಟ್ಟಿತು. ಅಷ್ಟರಲ್ಲಿ ವಸಂತ ತನ್ನ ನಗೆಯ ತೆರೆಗಳನ್ನೇ ಏರಿದವನಂತೆ

ಮೆಲ್ಲನೆ ಜೋಲೀಹೊಡೆಯುತ್ತ ಎದ್ದುನಿಂತು, ಮುಂಬಾಗಿ ಬಂದು ರಮಾಬಾಯರ ಬೆನ್ನು ಹಿಡಿದುಕೊಂಡೇ ಬಿಟ್ಟಿತು.

ರಮಾಬಾಯರಿಗೆ ಹೆಚ್ಚು ತಡೆಯುವದೇ ಆಗಲಿಲ್ಲ. ``ಏನ್ ದುಷ್ಟ ಹುಡುಗ ಹುಟ್ಟಿತಪ್ಪಾ ನಮ್ಮನಿಯೊಳಗ ಇದು......'' ಎನ್ನುತ್ತ ಎಂಜಲಗೈಯಿಂದಲೇ ಬದಿಗಿದ್ದ ಮಗುವನ್ನು ಅಮುಕಿ ಹಿಡಿದು ಎದುರಿಗೆ ಎಳೆದುಕೊಂಡರು. ಅವರ ಎದೆಯಲ್ಲಿ ಅಡಗಿದ್ದ ಪ್ರೀತಿ, ನಾಚಿಕೆಗೆಟ್ಟು, ಕಣ್ಣ ಬಾಗಿಲಲ್ಲಿ ನಿಂತು ಹಣುಕುತ್ತಿರುವಾಗಲೇ, ಮಗುವನ್ನು ಬಿಗಿದಪ್ಪಿ ಮುದ್ದಿಡಬೇಕೆಂದು ತುಟಿ ಮುಂದರಿದಿರಲು, ತನ್ನ ಹಲ್ಲಿಗೆ ಹರಿಯದೆ ಉಳಿದ ಅಂಬೋಡೀ ಚೂರನ್ನು ವಸಂತ ರಮಾಬಾಯರ ಬಾಯಲ್ಲಿ ತುರುಕಿ ಬಿಟ್ಟ. ಪ್ರೇಮಪೂರದಲ್ಲಿ ತೇಲಿ ಲೋಲಾಡುತ್ತಿದ್ದರೂ, ರಮಾಬಾಯರು, ಯಾಕೋ ಕಳ್ಳಗಣ್ಣಿನಿಂದ ಅತ್ತಿತ್ತ ನೋಡಿದಂತೆ ಮಾಡುತ್ತಿರುವಾಗಲೆ, ಅಂಬೋಡಿಯ ಚೂರು ಕೊರಳಿನ ಕೊಳವೆಯೊಳಗಿಂದ ಜಾರಿಪಾರಾಗಿ ಬಿಟ್ಟಿದ್ದಿತು.

ರಮಾಬಾಯರ ಆ ತೆರದ ಲಗುಬಗೆಯಿಂದ ಮೋಜುಗೊಂಡ ಮಗು ಮತ್ತೊಂದು ಅಟ್ಟಹಾಸದ ಅಲೆಯನ್ನು ತೇಲಿಸಿಬಿಟ್ಟ. ಆವರೆಗೂ ಬಳಕೆಯಿಲ್ಲದೆ ಜಂಗು ತಿಂದಂತಿದ್ದ, ರಮಾಬಾಯರ ಜೀವನದ ಯಾವುದೋ `ಸ್ವಿಚ್ಚು' ಒತ್ತಿದಂತಾಗಲು, ಅವರು ಅರವುಗೆಟ್ಟು ಮಗುವನ್ನು ಎದೆಗೊತ್ತಿಕೊಂಡು ಮುದ್ದಿನ ಮಳೆ ಸುರಿಸಹತ್ತಿದರು. ಅದರ ತಾಲದಲ್ಲಿ ಲೀನವಾದಂತೆ, ಕಣ್ಣಲ್ಲಿ ಕಾದುನಿಂತ ಪ್ರೀತಿ ಹನಿಹನಿಯಾಗಿ ಚಿಮ್ಮ ಹತ್ತಿತು.

ರಮಾಬಾಯರು ಆ ವಿಭ್ರಮದ ಸಂಭ್ರಮದಲ್ಲಿರುವಾಗಲೇ ಕಿಡಿಕಿಯೊಳಗಿಂದ ಕೇಳಬಂತು ಒಂದು ಕಳ್ಳದನಿ- `` ಅಬ್ರಹ್ಮಣ್ಯಂ, ಶಾಂತಂ, ಪಾಪಂ!'' ದನಿಯ ಹಿಂದಿನಿಂದ ಗೋಪಾಲ ಒಳಗೆ ಬಂದು ಕೈ ತಟ್ಟಿ ಕುಣಿಯುತ್ತ ಕೇಕೆ ಹಾಕಿ ನಗಹತ್ತಿದ. ಫ್ಲಾರೆನ್ಸಳೂ ಬಾಗಿಲಬಳಿ ನಿಂತುಕೊಂಡಳು.

ರಮಾಬಾಯರು ಗೋಪಾಲನ ದನಿಗೆ ಹೌಹಾರಿ ಮೆಟ್ಟಿಬಿದ್ದರು. ಹದಿನಾಲ್ಕು

ಲೋಕಗಳ ತಲೆ ಮೆಟ್ಟಿನಿಂತ ಆನಂದಲೋಕದ ಆಕಾಶದಾಚೆಗೆ ಚುಂಚು ಚಾಚಿ ಹಾರುತ್ತಲಿದ್ದ ಅವರ ಹೃದಯದ ಹಕ್ಕಿ, ಒಮ್ಮೆಲೆ ಪಕ್ಕ ಕಡಿದು ಪಾತಾಳಕ್ಕೆ ಬಿದ್ದಂತಾಯಿತು. ಅವರಿಗೆ ತಾವಿದ್ದ ಸಂನಿವೇಶದ ಅರ್ಥವೇ ಆಗಲಿಲ್ಲ. ಮರುಳು ಹಿಡಿದವರಂತೆ ತೇಲುಗಣ್ಣಿನ ನೋಟವನ್ನು ತುಳುಕಿಸುತ್ತ ಗೋಪಾಲನ ಮೋರೆಯನ್ನು ಮಿಕಿ ಮಿಕಿ ನೋಡತೊಡಗಿದರು. ಅವರು ಎದೆಗವಚಿಕೊಂಡಿದ್ದ ಕೂಸು ಕೂಡಾ ಕಳಚಿ ಅವರ ತೊಡೆಯ ಮೇಲೆ ಬಿದ್ದುಬಿಟ್ಟಿತ್ತು.

ತನ್ನ ನಗೆಯಲ್ಲೇ ನೂಗಾಡುತ್ತಲಿದ್ದಗೋಪಾಲನಿಗೆ ಇದೆಲ್ಲದರ ಅರ್ಥವಾಗಲಿಲ್ಲ. ಆತನ ನಗೆಯಿಂದ ರಮಾಬಾಯರ ಚೈತನ್ಯ ಮೆಲ್ಲನೆ ಚಲಮಲಿಸಿ ಎಚ್ಚರಿಯ ಹತ್ತಿತು. ಆಗ ಗೋಪಾಲ ಮತ್ತೂ ಒಮ್ಮೆ ಕೆಣಕಿದ-

``ಕ್ರಿಶ್ಚನ್ನರ ಕೈಲೆ ಉಂಡು ಕುಲಗೆಟ್ಟಂತಾಯಿತಲ್ಲವ್ವಾ''

ಮೆಲ್ಲ ಮೆಲ್ಲನೆ ಮನದಮಂಜು ಹರಿದು ಬೆಳಕಾಗಲು ರಮಾಬಾಯರು ಸಾವರಿಸಿಕೊಂಡು ಮಾತನಾಡಿದರು--

``ಕುಲಗೆಡಲಿಕ್ಕೇನಾತೋ ಈಗ? ಸಣ್ಣಕೂಸು ದೇವರಿದ್ದ ಹಾಗೇಳು''- ಮಾತನಾಡುತ್ತಿರುವಾಗಲೆ ಅವರು ಮತ್ತೆ ತೊಡೆಯ ಮೇಲಿನ ಮಗುವನ್ನೆತ್ತಿ ಎದೆಗವಚಿಕೊಂಡು- ``ನನ್ನ ವಸಂತವ್ವಾ, ಇದೂ-; ನನ್ನ ಗೋಪಾಲಕಿಟ್ಟಾ!....'' ಎಂದು ಮತ್ತೆ ಮೂರು ಮೂರು ಸಲ ಮುದ್ದಿಟ್ಟರು; ಅದು ಅವರ ಹೃದಯದ ಗುಮ್ಮಟದಲ್ಲಿ ನೂರು ನೂರು ಸಲ ಮಾರ್ನುಡಿಯಾಗಿ ನಿನದಿಸಿತು.

ಈ ನೋಟವನ್ನೆಲ್ಲ ನೋಡುತ್ತಿದ್ದ ಫ್ಲಾರೆನ್ಸಳಿಗೆ ರಮಾಬಾಯರ ಹೃದಯ ಸಾಗರದ ಪ್ರೇಮವೀಚಿಗಳ ಮೇಲೆ ಹಂಬಲದ ಹಸುರೆಲೆಯಲ್ಲಿ ಪವಡಿಸಿದ ಅನಂತಲೀಲಾವಿಲೋಲವಾದ ಕೂಸೊಂದು ಅಸಂಖ್ಯ ರೂಪಗಳನ್ನು ಧರಿಸಿ ತೇಲುತ್ತಿದ್ದುದು ಗೋಚರವಾಯಿತು.

ತಾಯಿಯ ಆ ಪರಿಯ ಇರುವನ್ನರಿತು ಗೋಪಾಲ, ಮಾತನಾಡಿದ- ``ಅವ್ವಾ ನಾವೂ ನಿನ್ನ ಕೂಸು ಅಂಬೋದು ಮರೀಬ್ಯಾಡವ್ವಾ.....! ಇಷ್ಟs, ನೀ ಹಾಗೆ

ತಿಳುಕೊಳ್ಳಲಿಕ್ಕೆ ತಯಾರಾಗಬೇಕು!!"

ರಮಾಬಾಯರು ಮರುಮಾತನಾಡಲಿಲ್ಲ. ಕಣ್ಣರಳಿಸಿ ಒಮ್ಮೆ ಫ್ಲಾರೆನ್ಸಳನ್ನೂ ಒಮ್ಮೆ ಮಗುವನ್ನೂ ನೋಡಿ ನೋಡಿ ಆವುದೋ ಒಂದು ಸಾಮ್ಯವನ್ನು ಕಾಣಲು ಹವಣಿಸುತ್ತಿದ್ದಂತೆ ಕಂಡಿತು.

೮

ಮರುದಿನ ನರಕಚತುರ್ದಶಿಯ ಬೆಳಿಗ್ಗೆ ರಮಾಬಾಯರು ಆರತಿಯ ಏರ್ಪಾಡು ಮಾಡಿದರು. ಅಂದಿನ ಆರತಿಗೆ ಮುತ್ತೈದೆ ಫ್ಲಾನ್ಸಳೆ. ಅದೆಲ್ಲ ಅವಳಿಗೆ ಏನೋ ವಿಚಿತ್ರ ಎನ್ನಿಸಿರಬೇಕು. ಆದರೂ ರಮಾಬಾಯರ ಹೃದಯಮಂದಿರದಲ್ಲಿ ತಾನು ಕಂಡ ದಿವ್ಯ ಜ್ಯೋತಿಗೆ ನಮೋ ನಮೋ ಎಂದ ಅವಳು ಏನನ್ನು ಮಾಡುವುದಕ್ಕೂ ಸಿದ್ಧಳಾಗಿದ್ದಳು.

❄ ❄ ❄ ❄ ❄

``ಗೋಪಣ್ಣಾ, ಬಾರೋ ಇಲ್ಲೇ;-'' ತಮ್ಮ ಹಳೇ ಟ್ರಂಕಿನೆದುರಿಗೆ ಕುಳಿತು ರಮಾಬಾಯರು ಕೂಗಿದರು ``ನಿನ್ನ ಹೆಂಡತಿಗೆ ಇದನ್ನು ಉಟ್ಟುಕೋ ಅಂತ್ಹೇಳು ಆರತೀ ಮಾಡುವಾಗ'' ಎನ್ನುತ್ತ ತಾವು ಅಷ್ಟು ದಿನವೆಲ್ಲ ಬಲು ಅಕ್ಕರತೆಯಿಂದ ಗೋಪಾಲನ ಹೆಂಡತಿಗೆಂದೇ ಕಾದಿಟ್ಟ ಜರದ ಪತ್ತಲವನ್ನೊಂದು ತೆಗೆದುಕೊಟ್ಟರು. ವಸಂತನಿಗಾಗಿ, ಬಡತನದಲ್ಲೂ ಜೋಪಾನವಾಗಿಟ್ಟಿದ್ದ ಗುಂಡು, ಬಿಂದಲಿ, ಕಡಗಗಳೂ ಹೊರಗೆ ಬಂದವು.

ಫ್ಲಾರೆನ್ಸಳು ತಾವುಕೊಟ್ಟ ಪತ್ತಲವುಟ್ಟು ಮಗುವನ್ನೆತ್ತಿಕೊಂಡು ಬಂದಾಗ ಅವಳು ತಮ್ಮ ಕನಸಿನ ಸೊಸೆಯೇ ಎಂದೆನಿಸಿತು ರಮಾಬಾಯರಿಗೆ. ಅವಳನ್ನೂ ಮಗುವನ್ನೂ ವಾತ್ಸಲ್ಯದಿಂದ ನೋಡುತ್ತ-

``ಅಲ್ಲೋ, ಗೋಪೂ; ನೀಯೇನೋ ಅಂತೀಯಲ್ಲ ಈಕೀಗೆ? ನನಗೆ ಬರೂದುಲ್ಲಪ್ಪಾ ಅದು ಅನ್ನಲಿಕ್ಕೆ. ನನಗೆ ಕರೀಲಿಕ್ಕೆ ಬರೂವಂಥಾ ನಮ್ಮ ಹೆಸರು ಒಂಧು ಇಡಬಾರದs!'' ಎಂದರು.

``ಅವ್ವಾ, ನೀನs ಹೇಳು; ಏನಂತಿಡೋಣಾ-?''

``ಸುಮಿತ್ರಾ ಅಂತಿಡು; ನಿನ್ನ ತಂಗೀ ಹೆಸರು''

``ಹೆಸರು ಮಾತ್ರ ಸುಂದರ ಅದs;'' ಎಂದಳು ಫ್ಲಾರೆನ್ಸ ಮಗುವನ್ನು ಗಂಡನ ಕೈಗೆ ಕೊಡುತ್ತ.

ಅಂದು ರಮಾಬಾಯರಿಗೆ ಕಂಣಹಬ್ಬವಾಗುವಂತೆ ಗೋಪಾಲನಿಗೂ ವಸಂತನಿಗೂ ಸುಮಿತ್ರೆಯ ಆರತಿ ನಡೆಯಿತು. ರಮಾಬಾಯರು ``ಎತ್ತಿ ಬೆಳಗಿರೆ ಮುತ್ತಿನಾರುತೀಯಾ'' ಹಾಡಿದರು. ಹಾಡು ಹರುಷವಾಗಿ ಹರಿಯುತ್ತಿರಲು ಕಂಣಲ್ಲಿ ತುಂಬಿಕೊಂಡ ಆ ಹರುಷ ಹನಿಹನಿಯಾಗಿ ಕೊರಳಿಗೆ ಇಳಿದು ದನಿಯನ್ನು ಗದ್ಗದಿಸುತ್ತಲಿತ್ತು.

(ಜಾನೆವರಿ ೧೯೩೩)

# ಚಿರ-ಕುಮಾರಿ

ಮೊನ್ನೆ ಒಮ್ಮೆ ನಾನು ಶಾಂತೇಶ ವಾಚನಾಲಯಕ್ಕೆ ಹೋಗಿದ್ದೆ. ಅದೇ ಆಗ ಒಬ್ಬರು ನನ್ನದೊಂದು ಕತೆಯನ್ನೋದಿ ಮುಗಿಸಿ ಒಂದು ನಿಟ್ಟುಸಿರನ್ನೆಳೆದರು. ಬದಿಯಲ್ಲೇ ಕುಳಿತ ಅವರ ಗೆಳೆಯರೊಬ್ಬರು ``ಯಾಕ್ರೀ, ಕಥೆ ಚೆನ್ನಾಗಿದ್ದಿಲ್ಲವೇನು" ಎಂದರು. ``ಕಥೆಯೇನೋ ಚೆನ್ನಾಗಿದೆರೀ; ಆದರೆ ಕೊನೆಯಲ್ಲಿ ದುಃಖಮಯ. ಇಲ್ಲಿ ನೋಡ್ರೀ ಮೊದಲೇ ಸಂಸಾರದ ಏಟುಗಳಿಂದ ಕೋಟಲೆಗೊಂಡ ಜೀವಕ್ಕೆ ಏನಾದರೂ ರಂಜನೆಯಾಗಲೆಂದು ಕಥೆ ಓದಹೋದರೆ ಈ ಹಣೇಬರಹ ನಮ್ಮದೇ ನಮಗೆ ಸಾಕಾಗೇದ್ರೀ. ಇನ್ನು ಹೆರವರ ದುಃಖಕ್ಕೆಲ್ಲಿಂದ ತರೋಣ ಕಣ್ಣೀರು!" ಎಂದು ಮೊದಲಿನವರೆಂದರು. ಇವರ ಗೆಳೆಯರು ಇದನ್ನೆಲ್ಲ ಕೇಳಿ ಇಂದಿನ ಕತೆಗಾರರ ಮೇಲೆ ಚೆನ್ನಾಗಿ ನಾಲಗೆ ಹಾಕಿ ಬಿಟ್ಟರು. ನಾನು ಅಲ್ಲಿಯೇ ಇದ್ದುದನ್ನು, ಪಾಪ, ಅವರು ಅರಿತಿರಲಿಲ್ಲವೆಂತ ಕಾಣುತ್ತದೆ. ಅಂತೇ ಅವರಿಗೆ ಅಷ್ಟು ಧೈರ್ಯ. ಅವರು ಎಲ್ಲರೊಡನೆ ನನ್ನದೂ ಉದ್ಧಾರ ಮಾಡಿಯೇ ಇದ್ದರು.

ಇಂಥವರ ಸಲುವಾಗಿ `ಡೇಂಜರ್ ಸಿಗ್ನಲ್' ಎಂದು ಮೊದಲಿಗೆ ಹೇಳಿಬಿಡುತ್ತೇನೆ ಈ ಕತೆಯಲ್ಲಿ ಒಬ್ಬರು ಸಾಯುತ್ತಾರೆಂದು.

೧

ಶ್ರೀಮತಿಯ ಹೆಣವನ್ನು ನದಿಯಿಂದ ಎತ್ತಿಕೊಂಡು ಬಂದಾ ವಕೀಲ ಶಾಮರಾಯರ ಮನೆಯಲ್ಲಿ ಊಟದ ಉತ್ಸಾಹ ತಾಂಡವವಾಡುತ್ತಿದ್ದಿತು. ಆಗ ಸಾಯಂಕಾಲ ಆರುವರೆ-ಏಳುಗಂಟೆಯಾಗಿರಬಹುದು. ಊಟಕ್ಕೆ ಕುಳಿತ ಬ್ರಾಹ್ಮಣರು

ಅರ್ಧ ಊಟ ಮುಗಿಸಿ ಖೀರಿನ ದಾರಿಯನ್ನು ನೋಡುತ್ತಿದ್ದರು. ಅಷ್ಟರಲ್ಲಿ ಅವರೆಲ್ಲರ ಗಂಟಲಿಗೆ ಬೆಣೆ ಬಡೆದಂತೆ ಬಂತು ಸುದ್ದಿ. ಸುದ್ದಿಯ ಹಿಂದೆಯೇ ಶ್ರೀಮತಿಯ ಹೆಣವೂ ಮದುವೆಯ ಹಂದರಕ್ಕೆ ಬಂದೇ ಬಿಟ್ಟಿತು.

`ಮದುವೆಯ ಹಂದರ' `ಊಟದ ಉತ್ಸವ' ಮೊದಲಾದ ಮಾತಿನಿಂದ `ಶಾಮರಾಯರ ಮನೆಯಲ್ಲಿ ಮದುವೆಯೊಂದು ನಡೆಯಿತೆಂದು' ನೀವೆಲ್ಲ ತರ್ಕಿಸಿದ್ದೀರಿ. ಹಾಗೆಯೇ `ಮದುವೆ ಶ್ರೀಮತಿಯದೆ; ಅವಳನ್ನು ಒಬ್ಬ ಮುದುಕನಿಗೋ, ಇಲ್ಲವೆ ಅವಳಿಗೆ ಬೇಡವಾದವನೊಬ್ಬನಿಗೋ ಕೊಟ್ಟಿರಬೇಕು; ಅದಕ್ಕಾಗಿ ಅವಳು ಜೀವ ನೀಗಿರಬೇಕು' ಎಂದೂ ನೀವೆಲ್ಲ ತರ್ಕಿಸಿರಬಹುದು. ಆದರೂ ವಸ್ತುಸ್ಥಿತಿ ಹಾಗಿಲ್ಲದ್ದರಿಂದ, ನಿಮ್ಮ ಜಾಣತನದ ಮುಂಜಾವು ಜಾರಿತೆಂದು ಖೇದದಿಂದ ಹೇಳಬೇಕಾಗಿದೆ.

ಮದುವೆ ನಡೆದದ್ದು ಶ್ರೀಮತಿಯದಲ್ಲ; ಅವಳ ತಂದೆ ಶಾಮರಾಯರದೇ? ಶಾಮರಾಯರಿಗೆ ಈಗ ನಡೆದದ್ದು ಎರಡನೆಯ ಸಂಬಂಧವೆಂದು ಹೇಳಿದರೆ ಅವರು ಮುದುಕನೆಂದು ಮಾತ್ರ ಯಾರೂ ತಿಳಿಯಬಾರದು. ಪಾಪ, ಅವರಿಗೆ ಅಷ್ಟು ವಯಸ್ಸೇ ಆಗಿರಲಿಲ್ಲ. ಇದೀಗ ನಾಲ್ವತ್ತೈದು. ನಾಲ್ವತ್ತೈದು ಎಂದ ಮೇಲೆ ಮುದುಕರಲ್ಲೇ ಗಣನೆ ಎಂದೆನ್ನಬಹುದು ಕೆಲವರು. ಆದರೆ ಶಾಮರಾಯರ ಭವ್ಯವಾದ ಬಂಗಲೆಯನ್ನೂ, ಅವರ ಎರಡು `ಕಾರು' ಗಳನ್ನೂ ಅವರ ಮನೆಗೆ ಬರಹೋಗುವ `ಸಾಬ'ರ ಸಂಖ್ಯೆಯನ್ನು ಅವರಿಗೆ ಆಗಲೆ ರಾವ್‌ಬಹಾದ್ದೂರ ಪದವಿ ಬಂದುದನ್ನೂ ಇಷ್ಟನ್ನೂ ಮೀರಿ ತಿಂಗಳೊಂದಕ್ಕೆ ಸಾವಿರಗಟ್ಟಲೆ ಬರುವ ಅವರ ಗಳಿಕೆಯನ್ನೂ ಮನದಂದು ಬಗೆದರೆ, ನಿಮ್ಮಲ್ಲಿ ಬಹಳ ಜನರು ಅಭಿಪ್ರಾಯವನ್ನು ಬದಲಿಸಬಹುದು. ಕನ್ಯಾಪಿತೃಗಳಾಗಿದ್ದವರಂತೂ ಖಂಡಿತ ಹೀಗೆ ಮಾಡಿಯೇ ಮಾಡುವರು. ಏಕೆಂದರೆ ಶಾಮರಾಯರಿಗೆ ಹರೆಯದ ಶಿಫಾರಸು ಪತ್ರಗಳನ್ನು ಕೊಟ್ಟವರೆಲ್ಲರೂ ಕನ್ಯಾಪಿತೃಗಳೇ.

ಶಾಮರಾಯರು ಹಳೇ ಪದ್ಧತಿಯವರೋ ಹೊಸ ಪದ್ಧತಿಯವರೋ

ಎಂಬುದು ಬಲು ಬಿಗಿಯಾದ ಮಾತು. `ದ ಟ್ವೇನ್ ಶ್ಯಾಲ್ ನೆವರ್ ಮೀಟ್' ಎಂದು ಕಿಪ್ಲಿಂಗನು ಸಾರಿದ್ದನ್ನು ಸುಳ್ಳು ಮಾಡಲು ಪಣತೊಟ್ಟವರಂತೆ, ಅರ್ಧ ಹಳೆ, ಅರ್ಧ ಹೊಸ ಪದ್ಧತಿಗಳೊಡನೆ, ಸ್ವಲ್ಪ ಪೌರ್ವಾತ್ಯ ಸ್ವಲ್ಪ ಪಾಶ್ಚಾತ್ಯ ಪದ್ಧತಿಗಳನ್ನು ಹೇಗೋ ಬೆರೆಯಿಸಿಕೊಂಡು ಒತ್ತಟ್ಟಿಗೆ ತಾವು ತಮ್ಮ ಪೂರ್ವಜರನ್ನು ಅಲ್ಲಗಳೆದಿಲ್ಲವೆಂಬ ಅಭಿಮಾನದಿಂದಲೂ, ಇನ್ನೊತ್ತಟ್ಟಿಗೆ ತಾವು ಇಂದಿನ ಕಾಲಮಾನಕ್ಕಿಂತ ಎಳ್ಳಷ್ಟೂ ಹಿಂದುಳಿದಿಲ್ಲವೆಂಬ ಹೆಮ್ಮೆಯಿಂದಲೂ ತಮ್ಮನ್ನೇ ತಾವು ಗೌರವಿಸಿಕೊಳ್ಳುವ ಜನರು, ಈಗಿನ ದಿನಗಳಲ್ಲಿ ಹಲವರು ಕಾಣಬರುತ್ತಾರೆ. ನಮ್ಮ ಶಾಮರಾಯರೂ ಇವರ ಗುಂಪಿನಲ್ಲೊಬ್ಬರು.

ಆದುದರಿಂದಲೇ ಎನ್ನಬೇಕು; ಅವರಿಗೆ ಸ್ತ್ರೀ ಶಿಕ್ಷಣದಲ್ಲಿ ಅಚಲ ಶ್ರದ್ಧೆಯಿಲ್ಲದಿದ್ದರೂ ಶ್ರೀಮತಿಗೆ ಬಿ. ಎ. ದವರೆಗೂ ಶಿಕ್ಷಣ ಕೊಡಿಸಿದ್ದರು. ನಾಲ್ಕು ಜನರು, ಮುಖ್ಯತಃ `ಸಾಬ'ರು ಯಾವುದಕ್ಕೆ ಹೌದೆನ್ನಬಹುದೋ ಯಾವುದನ್ನು ಮಾಡುವುದರಿಂದ ಅವರೆಲ್ಲ ತನಗೆ ಮುಂದಾಳು ಎನ್ನಬಹುದೋ ಅಂಥದನ್ನೆಲ್ಲ ನಮ್ಮ ಶಾಮರಾಯರು ಕಣ್ಣು ಮುಚ್ಚಿ ಮಾಡುತ್ತಿದ್ದರು. ಸುಧಾರಣೆಯಲ್ಲಿ ನಿಜವಾಗಿ ಪ್ರೀತಿಯಿಲ್ಲದಿದ್ದರೂ ಸುಧಾರಕನೆನ್ನಿಸಿಕೊಳ್ಳುವುದರಲ್ಲಿ ಅವರಿಗೆ ತುಂಬ ಪ್ರೀತಿ. ಇದಕ್ಕಾಗಿ ಶ್ರೀಮತಿಯ ತಾಯಿಯ ನಂತರ ಒಮ್ಮೆ ವಿಧವಾ ವಿವಾಹದ ವಿಚಾರವನ್ನು ಕೂಡ ಅವರು ತಲೆಯಲ್ಲಿ ಹಾಕಿಕೊಂಡಿದ್ದರು. ಆದರೆ ಇಲ್ಲಿಯ ವೈದಿಕರ ಹಾಗೂ ಅಲ್ಲಿಯ ತನ್ನ ಪೂರ್ವಜರ ಪ್ರೀತಿಗಾಗಿ ಅವರು ಕೊನೆಗೆ ಹದಿನಾರು ವರ್ಷದ ಎಳೆಯ ಕನ್ನೆಯನ್ನೇ ಆರಿಸಿದ್ದರು.

೨

ಶಾಮರಾಯರಿಗೆ ಶ್ರೀಮತಿಯೊಬ್ಬಳೇ ಮಗು. ಆದುದರಿಂದ, ಅಥವಾ ಅದಕ್ಕಿಂತ ಹೆಚ್ಚಾಗಿ ಅವಳಲ್ಲಿ ತಮ್ಮ ಮನೆತನದ ಗೌರವವನ್ನು ಬೆಳೆಯಿಸುವ ಬುದ್ಧಿಶಕ್ತಿ ಸಾಕಷ್ಟು ಬಲವಾಗಿದ್ದುದರಿಂದ-ಶಾಮರಾಯರು ಶ್ರೀಮತಿಯಲ್ಲಿ ಬಹಳ ಅಭಿಮಾನ - ಆಸ್ಥೆ - ಆಸೆಗಳನ್ನಿಟ್ಟುಕೊಂಡು ವಿದ್ಯಾಭ್ಯಾಸದಲ್ಲಿ ಅವಳನ್ನು ಹೆಚ್ಚಾಗಿ

ಹುರಿದುಂಬಿಸುತ್ತಿದ್ದರು. ಅವಳೂ ಒಬ್ಬ ಸರೋಜಿನಿ ನಾಯಡೂ ಆಗಬೇಕೆಂದು ಅವರ ಬಲವಾದ ಆಕಾಂಕ್ಷೆ. ಈ ಆಸೆಯಿಂದಲೇ ಸಾಧ್ಯವಾದರೆ ಶ್ರೀಮತಿಯನ್ನು ಇಂಗ್ಲಂಡಕ್ಕೆ ಕೂಡ ಕಳಿಸಬೇಕೆಂದು ಶಾಮರಾಯರು ಹವಣಿಸುತ್ತಿದ್ದರು. ಆದುದರಿಂದಲೇ ಬಿ. ಎ. ದವರಿಗೆ, ಇಪ್ಪತ್ತೊಂದು ವರ್ಷವಾದರೂ, ಅವರು ಶ್ರೀಮತಿಯನ್ನು ಮದುವೆಯ ತೊಡಕಿಗೆ ಹಾಕಿರಲಿಲ್ಲ.

ತಂದೆಯ ಪರಿಪರಿಯಿಂದ ಲಾಲನೆ ಪಾಲನೆ ಮಾಡುತ್ತಿದ್ದರೂ, ತನ್ನ ತಾಯಿ ಬಳಿ ದೊರೆಯುತ್ತಿದ್ದ ಮನಶ್ಶಾಂತಿಯು ಶ್ರೀಮತಿಗೆ ತಂದೆಯ ಬಳಿಯಲ್ಲಿ ದೊರೆಯುತ್ತಿರಲಿಲ್ಲ. ಆತನ ಪ್ರೀತಿಗೆ ಬುರುಗು ಹೆಚ್ಚು. ತಾಯಿ ಮಾತ್ರ ಶ್ರೀಮತಿಗೆ ತಾಯಿಯಲ್ಲವೆ ಗೆಳತಿಯೂ ಆಗಿದ್ದಳು. ತಾಯಿಯ ಪ್ರೀತಿ ಶ್ರೀಮತಿಯ ಹೃದಯದಲ್ಲಿ ಮೊಳೆತು ಚಿಗಿತುಕೊಂಡಿತ್ತು. ಮನಸ್ಸು-ಬುದ್ಧಿ ಸಂಸ್ಕಾರಗಳಿಗೆ ತಂದೆ ನೀರೆರೆಯುತ್ತಿದ್ದ. ಆದರೆ ಅದಕ್ಕೆ ಹತ್ತುಪಟ್ಟು ಹೆಚ್ಚಾಗಿ ತಾಯಿ ಹೃದಯಸಂಸ್ಕಾರವನ್ನು ಪೋಷಿಸಿದ್ದಳು. ತಂದೆಯ ಬಗೆಗೆ ಶ್ರೀಮತಿಯಲ್ಲಿ ಒಂದು ತೆರದ ಗೌರವವಿತ್ತು. ಆ ತಂದೆಯೂ ಶ್ರೀಮತಿಯಿಂದ ಹೆಚ್ಚಿನದನ್ನು ಬೇಡುತ್ತಲೆ ಇರಲಿಲ್ಲ. ಆದರೆ ತಾಯಿಯ ಬಗೆಗೆ ಮಾತ್ರ, ಶ್ರೀಮತಿಯದು ಅಚಲಭಕ್ತಿ.

ಬಿ. ಎ. ಪರೀಕ್ಷೆಯವರೆಗಂತೂ ಶ್ರೀಮತಿಯು ಹಾರುವ ಹಕ್ಕಿಯಂತೆ ಹಿಗ್ಗಿನ ತೆರೆಗಳ ಮೇಲೆಯೇ ತೇಲಿ ತೇಲಿ ಲೋಲಾಡುತ್ತಲಿದ್ದಳು. ಕಲಿತು ಜಾಣಳಾಗಬೇಕು, ನಾಲ್ಕು ಜನರಲ್ಲಿ ಹೆಸರು ಪಡೆಯಬೇಕು; ತನ್ನ ಮನೆತನದ ಸಿರಿವಂತಿಕೆಗೂ ಸ್ಥಿತಿವಂತಿಕೆಗೂ ತಾನು ಕಳಸವಿಡುವಂತಾಗಬೇಕು, ಎಂಬ ಹಂಬಲ ಅವಳ ಮನದಲ್ಲಿ ತಕಪಕನೆ ಕುಣಿದಾಡುತ್ತಿದ್ದಿತು. ಅವಳಿಗಾಗ ಒಳ್ಳೇ ಹದವಾದ ಕಾಲ; ಆ ಹೃದಯದಲ್ಲಿ ಹಲವೊಂದು ಹಂಬಲಗಳು ಮೂಡಿ ಮೂರ್ತಿಗೊಳ್ಳುವ ಕಾಲ; ಆ ಹಂಬಲಗಳನ್ನೊಡೆದು ಹುಟ್ಟಿಬಂದ ಹಾರೈಕೆಗಳು ರೆಕ್ಕೆ ತೆರೆದು ಹಾರುವ ಕಾಲ; ಹರೆಯದ ಬಣ್ಣಗನಸುಗಳು ಒಂದೊಂದಾಗಿ ಹಣುವ ಕಾಲ. ಆ ಕಾಲದಲ್ಲಿ ಶ್ರೀಮತಿಗೆ ಪ್ರಪಂಚವೆಲ್ಲ ಒಂದು ಹಿಗ್ಗಿನ ಸುಗ್ಗಿಯಾಗಿದ್ದಿತು. ಈ ಹಿಗ್ಗಿನ ಸುಗ್ಗಿಯಲ್ಲಿ

ಅವಳಿಗೆ ಇಬ್ಬರು ಜೊತೆಗಾರ್ತಿಯರಿದ್ದರು. ಅವಳ ಅಚ್ಚುಮೆಚ್ಚಿನ ತಾಯಿಯೊಬ್ಬಳು, ನೆಚ್ಚು ನಂಬಿಗೆಯ ಗೆಳತಿ ಗಿರಿಜೆ ಇನ್ನೊಬ್ಬಳು.

ಆದರೆ ಶ್ರೀಮತಿಯ ಪರೀಕ್ಷೆಯ ಪರಿಣಾಮ ತಿಳಿಯುವ ಮೊದಲೇ ತಾಯಿ ತೀರಿಕೊಂಡಿದ್ದರು. ಅಂದಿನಿಂದ ಶ್ರೀಮತಿಯು ಎದೆಬಳ್ಳಿಯು ಆಸರೆನಪ್ಪಿದಂತಾಗಿದ್ದಿತು. ಅವಳು ಪರೀಕ್ಷೆಯಲ್ಲಿ ಮೊದಲವರ್ಗದಲ್ಲಿ ಪಾಸಾದದ್ದು ಕೂಡ ಅವಳಿಗೆ ಎದೆಮುಳ್ಳಾಗಿ ಅಳುಕತೊಡಗಿತ್ತು. ತನ್ನ ಹೃದಯಕ್ಕೆ ಬೇಕಾದ ಯಾವುದೋ ಒಂದು ಹಸಿವನ್ನು ಹಿಂಗಿಸುವ ಶಕ್ತಿಯನ್ನು ಶ್ರೀಮತಿಯು ತನ್ನ ತಾಯಿಯಲ್ಲಿ ಕಂಡಿದ್ದಳು. ಗಾಳಿಯ ತೆರೆಗಳನ್ನೇರಿ ಬಾಲವನ್ನು ಕುಣಿಸಿ ನವಿಲು ನಲಿದಂತೆ ನರ್ತನಮಾಡುತ್ತಿರುವ ಗಾಳಿಪಟದ ಸೂತ್ರವೇ ಕಿತ್ತುಹೋದಂತೆ, ತಾಯಿಯ ಸಾವಿನಿಂದ ಶ್ರೀಮತಿಯ ಜೀವನದ ಸೂತ್ರವೇ ಹರಿದಂತಾಗಿದ್ದಿತು. ನಿಟ್ಟುಗೆಟ್ಟ ಅವಳ ಹೃದಯ ಏತಕ್ಕೋ ಕಾತರಿಸಿ ಎತ್ತೋ ಓಡುತ್ತಿದ್ದಿತು. ಮೇಲೆ ಹರಯದ ಹದಗಾಲ ಬೇರೆ.

ಇಂಥದರಲ್ಲಿ ತನ್ನಾಸೆಗಳನ್ನೆಲ್ಲ ಒತ್ತಿಕೊಂಡು ತಂದೆಯ ಗೌರವಾಕಾಂಕ್ಷೆಯನ್ನು ಸಲ್ಲಿಸುವುದಕ್ಕಾಗಿ ಶ್ರೀಮತಿಯು ಎಂ. ಎ. ದ ಅಭ್ಯಾಸವನ್ನು ಮಾಡಬೇಕಾಗಿದ್ದಿತು. ಹಿಂದಿನ ಉತ್ಸಾಹದಿಂದಿಲ್ಲ. ಅಂದಿನ ಹಂಬಲಗಳ ಬೆಂಬಲವಿಲ್ಲ. ಜೀವನದಲ್ಲಿ ತನ್ನದೊಂದು ಗುರಿಯಿಲ್ಲ. ಒಟ್ಟಾರೆ ಅವಳು ತಂದೆಯ ಆಸೆಗಳ ದಾಸಿಯಾಗಿದ್ದಳು. ಆತ ಅವಳ ಜೀವನದ ವಿಧಾತೃ. ಗೌರವ, ಪದವಿ, ಬಿರುದುಗಳೊಡಲಲ್ಲಿ ಮಾನವ ಜೀವನದ ಒಳ-ಆಸೆಗಳನ್ನು ಹುಗಿದು ಸಮಾಧಿಕಟ್ಟಲು ಸಿದ್ಧರಾದ ಶಾಮರಾಯರು ಶ್ರೀಮತಿಯ ಹರೆಯದೆದೆಯ ಹಂಬಲಗಳು ಪಡುವ ಕಸಿವಿಸಿಯನ್ನರಿಯರು. ಅವರ ಕೈಯಲ್ಲಿ ಅವಳ ಜೀವನ ಒಂದು ಯಂತ್ರವಾದಂತಿದ್ದಿತು.

೩

`ಶ್ರೀಮತೀ ಹೊತ್ತೆಷ್ಟಾಯಿತು ನೋಡು' - ಮೇಲುಪ್ಪರಿಗೆಯ ಮೊಗಸಾಲೆಯನ್ನು ಪ್ರವೇಶಿಸುತ್ತ ಗಿರಿಜೆಯು ಮಾತನಾಡಿದಳು. ಆಗ ಶ್ರೀಮತಿಯು

ಕಿಡಿಕಿಯ ಹತ್ತರ ಟೇಬಲ್ಲಿನೆದುರಿಗೆ ಕುಳಿತು ಟೇಬಲ್ಲಿನ ಮೇಲಿದ್ದ ಕನ್ನಡಿಯಲ್ಲಿ ನೋಡುತ್ತಿದ್ದಳು. ಅವಳು ನೋಡುತ್ತಿದ್ದುದು ತನ್ನ ಮೋರೆಯನ್ನಲ್ಲ; ಕನ್ನಡಿಯನ್ನೇ. ಕನ್ನಡಿಯಲ್ಲಿ ಮೂಡಿದ ತನ್ನ ಪಡಿನೆಳಲು ಅವಳಿಗೇ ಗೋಚರವಾಗುತ್ತಿದ್ದಂತೆ ಕಾಣಲಿಲ್ಲ. ಏನೋ ಸುಮ್ಮನೆ ಯಾವುದೋ ಶೂನ್ಯದಲ್ಲಿ ಚಿತ್ತವನ್ನು ನೆಲೆಸಿ ಕುಳಿತುಬಿಟ್ಟಿದ್ದಳು. ಅವಳ ಕಣ್ಣುಗಳು ಕಳೆಗೆಟ್ಟಂತಾಗಿದ್ದವು. ಗಲ್ಲ ಬೆಳ್ಳಗಾಗಿದ್ದವು. ತುಟಿಗೆಂಪು ಮಸಳಿಸಿದಂತಾಗಿದ್ದಿತ್ತು. ಆದರೆ ಇದೆಲ್ಲವನ್ನು ಶ್ರೀಮತಿಯೇ ಅರಿಯಳು.

ಅಂದು ಮನೆಯೆಂತ ಮನೆಯೆಲ್ಲ ಸಂತಸದ ಸಂತೆಯಾಗಿದ್ದರೂ ಶ್ರೀಮತಿಗೆ ಮಾತ್ರ ಆ ಸಂತಸ ಕರುಳು ಕೊರೆವ ಕರಗಸದಂತಾಗಿತ್ತು. ಅಂತೆಯೇ ಅವಳು ಅಂದಿನ ಹಬ್ಬದುಬ್ಬಿನಲ್ಲಿ ಮೈ ಮರೆಯಲಾರದೆ, ಮೇಲಟ್ಟದ ಮೂಲೆಯಲ್ಲಿ ಹುದುಗಿಕೊಂಡಿದ್ದಳು. ಗೆಳತಿಯ ಪರಿಯನ್ನರಿತ ಗಿರಿಜೆಯು ಅವಳನ್ನೇ ಹುಡುಕಿಕೊಂಡು ಬಂದುದನ್ನು ಶ್ರೀಮತಿಯು ಗಮನಿಸಲಿಲ್ಲ. ನಿಜವಾಗಿ, ಎರಡನೇ ಸಲ ಕೂಗುವವರೆಗೆ ಗಿರಿಜೆಯು ಬಂದುದು ಅವಳಿಗೆ ಗೊತ್ತಾಗಿರಲೇ ಇಲ್ಲ.

ತನ್ನ ಮುಂಗೈಯ ಗಡಿಯಾರವನ್ನು ನೋಡಿ ಶ್ರೀಮತಿಯು ಕುಗ್ಗುದನಿಯಲ್ಲೇ ``ಆರೂವರೆಗೆ ಆರು ನಿಮಿಷ'' ಎಂದಳು.

``ಹಾಗಾದರೆ ಸ್ವಲ್ಪ ತಿರುಗಾಡಿ ಬರೋಣ ಬರುತ್ತೀಯಾ?''

``ಗಿರಿಜಾ, ನಾನು ಬರಲಾರೆನೆಂದು ತೋರುತ್ತದೆ''

``ಇವೊತ್ತಿನ ಸಂಜೆ ಚೆನ್ನಾಗಿದೆ ಶ್ರೀಮತೀ. ಸ್ವಲ್ಪ ಹೀಗೆ ಅಲೆದಾಡಿ ಬಂದರೆ ನಿನ್ನ ಹೃದಯ ತುಸು ಹಗುರಾಗಬಹುದು.''

``ಆದರೆ ಇನ್ನು ಮೇಲೆ ನಾನು ಹೊರಗೆ ಹೊರಡುವದು ತಂದೆಯವರಿಗೆ ಒಪ್ಪದ ಮಾತು.''

``ಅದೇನು ಶ್ರೀಮತೀ, ಶಾಮರಾಯರು ಹಾಗೆಂದರೇ?''

``ಅನ್ನಲಿಲ್ಲ; ಹಾಗೆ ಇಚ್ಛಿಸಿದರು.''

``ನಿನಗೆ ಇದು ಒಪ್ಪಿಗೆಯೆ?''

``ನನಗೆ ಅದು ಒಪ್ಪಿಗೆಯೋ ಅಲ್ಲವೊ ಎಂಬುದನ್ನು ನೀನು ಅರಿಯೆಯಾ? ಆದರೇನೋ, ನನ್ನ ಪರೀಕ್ಷೆ ಹತ್ತಿರ ಬಂತಂತೆ.''

``ಆದರೆ, ಶ್ರೀಮತೀ, ನೀನೆಂದೂ ಪರೀಕ್ಷೆಗಾಗಿ ಚಿಂತಿಸಿದವಳಲ್ಲ.

``ಹೌದು ಗಿರಿಜಾ; ಇಷ್ಟುದಿನ ನನ್ನ ಬುದ್ಧಿಯ ಪರೀಕ್ಷೆಯಾಯಿತು. ಆದರೀಗ ನನ್ನ ಹೃದಯದ ಪರೀಕ್ಷೆ.''

ಶ್ರೀಮತಿಯ ಮಾತುಗಳನ್ನು ಕೇಳಿ ಗಿರಿಜೆಯು ಯೋಚನಾಪರಳಾಗಿ ಕುಳಿತುಕೊಂಡಳು. ಇತ್ತ ಶ್ರೀಮತಿಯು ಆಕಾಶದ ನಿಟ್ಟುಸಿರುಗಳು ಗುಂಪುಗೂಡಿದಂತೆ ಕಾಣುವ ಮೋಡಗಳ ಒಡಲಲ್ಲಿ ಏನೋ ಒಂದು ಇಂಗಿತವನ್ನೂ ಹುಡುಕುವವಳಂತೆ ಮುಗಿಲನ್ನೆ ನೋಡುತ್ತಿದ್ದಳು. ಕೊನೆಗೆ ಗಿರಿಜೆಯೇ ಮಾತಿಗೆ ಮೊದಲು ಮಾಡಿದಳು.

``ಶ್ರೀಮತಿ, ನನಗೇನೋ ನಿನ್ನೊಡನೆ ಒಂದೆರಡು ಮಾತುಗಳನ್ನಾಡಬೇಕೆಂದೆನಿಸುತ್ತಿದೆ. ಸ್ವಲ್ಪ ಹೊರಗೆ ಹೊರಟರೆ ಚೆನ್ನಾಗಿರುವದು.''

``ಬೇಡ ಗಿರಿಜಾ, ಇಲ್ಲಿಯೇ ಕುಳಿತುಕೋ. ನನಗೇಕೋ ಈ ಕೋಣೆಯಲ್ಲಿ ಇಡುಗಿರುವ ಸಂಜೆಯ ಮಂಜುಗತ್ತಲೆಯ ಮೇಲೆಯೇ ಪ್ರೀತಿ ಹೆಚ್ಚುತ್ತಿದೆ.

``....................................''

``ಇನ್ನು ಮುಂದೆ ನನ್ನ ಜೀವನದಲ್ಲಿ ಈ ಮಂಜುಗತ್ತಲೆಯ ತೆರೆಗಳು ಹೆಚ್ಚು ಹೆಚ್ಚಾಗಿ ಒಂದುಗೂಡುತ್ತಲೇ ನಡೆಯಬಹುದು. ಇಂಥ ಸಾವಿರಾರು ತೆರೆಗಳು ಕವಿದು ಕವಿದು ನನ್ನ ಜೀವನವೆಲ್ಲ ಒಮ್ಮಿಲ್ಲೊಮ್ಮೆ ಕಾರ್ಗತ್ತಲೆಯ ಕಟ್ಟಿರುಳಿನ ನಾಟ್ಯರಂಗವಾಗಬಹುದೆಂದು ತೋರುತಿದೆ'' `` ಶ್ರೀಮತೀ, ಆ ಕತ್ತಲೆಯ ಒಡಲನ್ನು ಸೀಳಿ ನಿನ್ನ ಜೀವನವನ್ನು ಕಳೆಗೊಳಿಸುವ ಬೆಳಕು ಒಮ್ಮಿಲ್ಲೊಮ್ಮೆ ಬಂದೀತು!''

``ಬಂದೀತೆನ್ನುವಿಯಾ? ಗಿರಿಜಾ, ಆ ಆಸೆಯನ್ನು ನಾನು ಹಿಡಿಯಬಹುದೇ!'' ಶ್ರೀಮತಿಯು ಒಂದು ಬಗೆಯ ಕಾತರದಿಂದ ಕೇಳಿದಳು. ಜೀವನದ ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಕಂಡುಂಡ ಗಿರಿಜೆಯ ಆಶಾವಾದವೂ ಶ್ರೀಮತಿಯ ಕಾತರದಿಂದ ಕಂಗಾಣದಾಗಿ ಕುಸಿದು ಬಿದ್ದಿತು.

``ಹೇಳಲಾರೆ ಶ್ರೀಮತಿ, ಯಾರು ಬಲ್ಲರು! ಅಂಥ ಬೆಳಕು ಬರಲಿಕ್ಕೂ ಇಲ್ಲ.''

``ಹಾಗೆನ್ನು ಗಿರಿಜಾ, ಹಾಗೆನ್ನು''

ಮಾತನಾಡುತ್ತಿರುವಂತೆಯೇ ಶ್ರೀಮತಿಯ ಬಿಳಿಗಲ್ಲಗಳ ಮೇಲೆ ಹುಸಿನಗೆಯ ತೆರೆಯೊಂದು ತೇಲಿಹೋಯಿತು. ಶ್ರೀಮತಿಯ ಕಣ್ಣುಗಳು ಕಿಡಿಕಿಯ ಕನ್ನಡಿಯೊಳಗಿಂದ ದೂರದಲ್ಲಿ ಕಾಣಬರುತ್ತಿದ್ದ ಸಂಜೆಗೆಂಪಿನ ಕೊನೆಯ ಕುಡಿಯನ್ನು ನಿಟ್ಟಿಸುತ್ತಿದ್ದವು. ಬರಬರುತ್ತ ಅವಳ ಮುಖವು ನಿರಾಶೆಯ ಪ್ರಶಾಂತತೆಯಿಂದ ಗಂಭೀರವಾಗತೊಡಗಿತು. ಅವಳ ಎದೆಯಲ್ಲಿ ಹಲವು ಬಗೆಯ ಭಾವನೆಗಳು ತೇಲಿ ಮುಳುಗುತ್ತಿದ್ದವಾದರೂ, ಆ ಭಾವನೆಗಳ ತರಂಗಗಳು ಅವಳ ಮೋರೆಯಲ್ಲಿ ತೋರಿಬರುತ್ತಿದ್ದಿಲ್ಲ ಮಾತ್ರ.

ಹೊರಗೆ ದಿಟ್ಟಿನೆಟ್ಟು ಕುಳಿತ ಶ್ರೀಮತಿಯನ್ನೇ ನೋಡುತ್ತಿದ್ದ ಗಿರಿಜೆಯ ಕಣ್ಣುಗಳು ಅವಳ ಎದೆಯಾಳದಲ್ಲಿ ಮುಳುಗಿಕೊಂಡಿದ್ದುವು. ಗಿರಿಜೆಯು ಆ ಆಳದಲ್ಲಡಗಿದ ಶ್ರೀಮತಿಯ ಜೀವನ ರಹಸ್ಯವನ್ನು ಭೇದಿಸಿ ಭೇದಿಸಿ ಪರೀಕ್ಷಿಸುತ್ತಿದ್ದಳು. ಇದ್ದಕ್ಕಿದ್ದಂತೆಯೇ ಗಿರಿಜೆಯ ಕಣ್ಣಿನಿಂದ ನೀರು ತಡೆಯದೆ ತುಳುಕಹತ್ತಿತು. ನಾಲ್ಕು ವರ್ಷಗಳ ಹಿಂದೆ ತನ್ನ ಹೃದಯದಲ್ಲಿ ತಾಂಡವವಾಡಿದ ಯಾತನೆಗಳೇ ಭೂತವೇಷ ಹಾಕಿಕೊಂಡು ಶ್ರೀಮತಿಯ ಹೃದ್ರಂಗದಲ್ಲಿಯೂ ತಾಳಗೆಟ್ಟು ಕುಣಿಯುತ್ತಿರುವುದನ್ನು ಅವಳು ಕಂಡಳು. ಶ್ರೀಮತಿಗೂ ಇದರ ಅರಿಕೆ ಆಯಿತೋ ಏನೋ! ಆದರೆ ಅವಳ ಕಣ್ಣಿನಿಂದೇನು ನೀರು ತುಳುಕುತ್ತಿರಲಿಲ್ಲ. ಅವಳ ಕಣ್ಣುಗಳೇ ಅವುಗಳನ್ನು ಕಾತರಿಸಿ ಕುಡಿಯುತ್ತಿದ್ದಿರಬೇಕು.

ಗಿರಿಜೆ ಮೆಲ್ಲ ಮೆಲ್ಲನೆ ಮಾತನಾಡಿದಳು.

``ಶ್ರೀಮತಿ, ನೀನು ಯಾರನ್ನಾದರೂ ಪ್ರೀತಿಸಿದ್ದೀಯಾ?''

``ಹೌದು; ನನ್ನ ತಾಯಿಯನ್ನು ನಾನು ಎದೆಯಾರೆ ಪ್ರೀತಿಸಿದ್ದೇನೆ.'' ವಿಚಾರಮಗ್ನಳಾದ ಶ್ರೀಮತಿಯು ಧೈರ್ಯದ ದನಿಯಲ್ಲಿ ಹೇಳಿದಳು.

``ಆದರೆ ಆ ಆಧಾರ ತಪ್ಪಿತಲ್ಲ ಶ್ರೀಮತಿ''

``ತಂದೆಯವರನ್ನೇ ಪ್ರೀತಿಸುವುದಕ್ಕೆ ಧೈರ್ಯಸಾಲದು. ಗಿರಿಜಾ, ಅಲ್ಲದೆ ಮುಂದುವರಿವ ಪ್ರೀತಿ ಅದೇಕೋ ಹೇಸಿಕೊಂಡು ಹಿಂಜರಿಯುವದು.

``ಇನ್ನಾರನ್ನೂ ನೀನು ಪ್ರೀತಿಸಿಲ್ಲವೇ''

``ನನಗಿನ್ನಾರು ಗಿರಿಜಾ, ನೀನೊಬ್ಬಳಲ್ಲದೇ?''

``ನನ್ನಲ್ಲಿ, ಶ್ರೀಮತೀ, ನಿನ್ನ ಪ್ರೀತಿಯು ಪರಿಪೂರ್ಣತೆಯನ್ನು ಕಂಡುಕೊಳ್ಳಲಾರದು. ನಿನ್ನ ಪ್ರೀತಿ ಇನ್ನಾವುದನ್ನೊ ಬಯಸಿ ಹಾತೊರೆಯುತ್ತಿರಬೇಕು! ಶ್ರೀಮತೀ, ನೀನು ನಿನ್ನನ್ನೇ ತಿಳಿದುಕೊಂಡಂತಿಲ್ಲ. ಯಾರಲ್ಲಿಯೋ ಪ್ರೀತಿಯನ್ನಿಟ್ಟುಕೊಂಡು ಆ ಗುಟ್ಟನ್ನು ನಿನಗೂ ಹೇಳಿಕೊಳ್ಳಲಾರದೆ ನೀನು ಕಳವಳಿಸುತ್ತಿರಬೇಕು. ಶ್ರೀಮತೀ ನಿನ್ನದೊಂದು ಹೆಣ್ಣು ಹೃದಯ!''

``ಹೆಣ್ಣು ಹೃದಯ! ಹೆಣ್ಣು ಹೃದಯ!!- ಅಲ್ಲಲ್ಲ ಗಿರಿಜಾ, ನನ್ನದೊಂದು ಶೂನ್ಯ ಹೃದಯ. ನನ್ನ ಹೃದಯದಲ್ಲಿ ನಾನೀವರೆಗೆ ಯಾರಿಗೂ ಎಡೆಗೊಡಲಿಲ್ಲ. ನಾನು ನಿನ್ನಂತಲ್ಲ, ಗಿರಿಜಾ! ಕಾಲೇಜಿನಲ್ಲಿ ನನ್ನ ಪ್ರೀತಿಗಾಗಿ ಹಂಬಲಿಸಿದ ಹಲವರನ್ನು ನಾನು ಹುಲ್ಲು ಹಣಜಿಗಿಂತ ಕಡೆಯೆಂದು ಭಾವಿಸಿದ್ದು ನನಗೆ ನೆನಪಿದೆ. ನನಗೆ ಗಂಡಸೆಂದರೇ-ಅದರಲ್ಲೂ ಕಾಲೇಜಿನ ಹುಡುಗರೆಂದರೆ ಒಟ್ಟಾರೆ ಕೀಳು ಎಂಬ ನಿಶ್ಚಯವಿದ್ದಿತು. ಎಂದಮೇಲೆ ನಾನಾರಲ್ಲಿ ಪ್ರೀತಿಯನ್ನಿಟ್ಟುಕೊಂಡಿರಬಲ್ಲೆ?''

``ಹಾಗೆನ್ನಬೇಡ ಶ್ರೀಮತೀ! ನಿನ್ನ ಪ್ರೀತಿಪ್ರವಾಹಕ್ಕೆ ಇಷ್ಟು ದಿನ ದೊಡ್ಡದೊಂದು ಪರ್ವತವು ಎದುರಾಗಿ ನಿಂತಿತ್ತು. ಆದರೀಗ ಪ್ರವಾಹವು ಪರ್ವತವನ್ನೂ ಮೀರಿ ಹರಿಯುತ್ತಿದೆ. ಮೇರೆಗಾಣದ ದೂರದ ದಾರಿ ಹಿಡಿದು ಆ ಪ್ರವಾಹವು ಧುಮುಕುತ್ತಲಿದೆ.''

``ಸರಿ ಗಿರಿಜಾ; ಆದರೆ ಆ ಪ್ರವಾಹವು ಮಧ್ಯದಲ್ಲೇ ಆಧಾರ ತಪ್ಪಿ ಧೋ ಧೋ ಎಂದು ಅಧೋಗತಿಗಿಳಿಯುತ್ತಿದೆ.''

ಅದಾವ ಆವೇಗದಲ್ಲಿಯೋ ಶ್ರೀಮತಿ ಹೀಗೆಂದಳು. ತಾನಾಡಿದ ಮಾತಿನ ಅರ್ಥ ಮಾತ್ರ ಬೇಗನೇ ಅವಳ ಮನದಲ್ಲಿಳಿಯಲಿಲ್ಲ. ಆದರೆ ಮರು ನಿಮಿಷದಲ್ಲಿಯೇ ಆ ಉಪಮೆಯ ಗಿರಿಪ್ರವಾಹವು ತನ್ನ ಹೃದಯದಲ್ಲಿಯೇ ಭೋರ್ಗರೆಯುತ್ತಿರುವಂತೆ

ಅವಳಿಗೆ ತೋರಿತು. ಅಲಗು ಇರಿದಂತೆ ಬಲವಾದ ವೇದನೆ ಎದೆಯನ್ನು ತಿವಿಯ ಹತ್ತಲು, ಚಿಮ್ಮಿ ಚಿಮ್ಮಿ ಹಾರುವ ಎದೆಯನ್ನು ತನ್ನ ಅಂಗೈಗಳಿಂದ ಬಿಗಿಯಾಗಿ ಒತ್ತಿಹಿಡಿದು, ಬಿಳುಪೇರುವ ಕಣ್ಣುಗಳನ್ನು ಮೆಲ್ಲನೆ ಅರೆಮುಚ್ಚಿಕೊಂಡು, ಶ್ರೀಮತಿಯು ಕುಳಿತ ಕುರ್ಚಿಯಲ್ಲೇ ಒರಗಿಕೊಂಡು ಗೋಣು ಚೆಲ್ಲಿದಳು. ಆಗ ಅವಳ ಕಣ್ಣೆದುರಿನಲ್ಲಿ, ಅವಳ ಜೀವನದ ಹಲವು ಸವಿಗನಸುಗಳೂ, ಭೀಕರ ವೇದನೆಗಳೂ ಒಂದರ ಹೆಗಲನ್ನೊಂದು ಏರಿ ಏರಿ ಗುದುಮುರಿಗೆ ಹಾಕುತ್ತಿದ್ದವು.

ಮತ್ತೊಂದು ನಿಮಿಷದಲ್ಲಿ, ಮತ್ತೊಂದು ನೋಟ ಅವಳ ಕಣ್ಣೆದುರಿಗೆ ತೂರಿಕೊಂಡು ಬಂತು. ನನ್ನ ಹೃದಯಕ್ಕೆ ಕಡಿವಾಣ ಕಣ್ಣು ಕಟ್ಟುಗಳನ್ನು ಬಿಗಿದು ಲಗಾಮು ಜಗ್ಗುತ್ತ ತನ್ನ ಬುದ್ಧಿಯೇ ಮೇಲೇರಿ ಕುಳಿತು ಕಸರತ್ತು ಮಾಡುತ್ತಿತ್ತು. ತನ್ನ ತಂದೆ ಸರ್ಕಸ್ ಮಾಸ್ತರನಂತೆ ಚಾಬೂಕು ಚಲಾಯಿಸುತ್ತಿದ್ದ. ಆ ನೋಟ ಶ್ರೀಮತಿಗೆ ಅಸಹನೀಯವಾಯಿತು. ಕಣ್ಣೀರು ಕಕ್ಕಿಸುತ್ತ ಅವಳು ಮಗುವಿನಂತೆ ಬಿಕ್ಕಳಿಸಿ ಅಳಹತ್ತಿದಳು. ಶ್ರೀಮತಿಗೆ ಕಂಡ ನೋಟಗಳನ್ನೆಲ್ಲ ಗಿರಿಜೆಯೂ ಕಂಡಳೇನೋ. ಅವಳು ಎದ್ದುಬಂದು ಶ್ರೀಮತಿಯನ್ನು ಮೈದಡವಿ ಸಂತಯಿಸತೊಡಗಿದಳು.............

``ಕೊನೆಗೆ ನೀನೇ ಜಾಣಳಾದೆ ಗಿರಿಜಾ.''

``ಅದೇನು ಶ್ರೀಮತೀ ಹಾಗೆನ್ನುತ್ತೀ.''

``ಅಲ್ಲ! ನೀನು ನಿನ್ನ ಗಂಡನನ್ನು ಆರಿಸಿಕೊಂಡಾಗ ಕಾಲೇಜಲ್ಲಾದ ಬೊಬ್ಬಾಟವೇ ನಿನಗೆ ಸಾಕಾಗಿರಲು ನಾನು ಕೂಡ ನನ್ನ ವಿಚಾರದಂತೆ ನಿನಗೆ ತಿವಿದು ಮಾತಾಡಿದ್ದನ್ನು ನೀನು ಮರೆತಿರಲಾರೆ. ಅದು ನನ್ನ ಬುದ್ಧಿ ಕಲಿಸಿದ ಮಾತು. ಈಗ ನನ್ನ ಹೃದಯ ಹೇಳುತ್ತಿದೆ, ನೀನೇ ಜಾಣೆಯೆಂದು.''

``ಆದರೇನು ಶ್ರೀಮತೀ, ನನ್ನ ಜಾಣತನ ಗೊತ್ತಿಗೆ ಮುಟ್ಟಲಿಲ್ಲವಲ್ಲ! ನಿನಗಾದರೋ ಆಸೆಯಿದೆ. ನನಗುಳಿದುದು ಬರೀ ನೆರಳು!''

``ನಿನಗೆ ಅಷ್ಟಾದರೂ ಇದೆ; ನನಗೆ ಅದು ಇಲ್ಲ. ನಾನೊಬ್ಬ ವಿಧವೆಯೂ

ಆಗಿಲ್ಲ, ಗಿರಿಜಾ. ಹಾಗಿದ್ದಿದ್ದರೆ ನಾನೂ ಒಬ್ಬ ಪುಣ್ಯವಂತ ಎಂದು ಬಗೆದುಕೊಳ್ಳುತ್ತಿದ್ದೆ. ಗಿರಿಜಾ, ನಿನ್ನ ಮನೆ ತೆರವಾಗಿರಬಹುದು; ನಿನ್ನ ಜೀವನವೂ ತೆರವಾಗಿರಬಹುದು. ಆದರೆ ನಿನ್ನ ಹೃದಯ ಎಂದೆಂದಿಗೂ ತುಂಬಿಕೊಂಡಿರುವುದಲ್ಲವೆ! ನಿನ್ನೆದೆಯ ಗರ್ಭಗುಡಿಯಲ್ಲಿ ನಿನ್ನ ಪ್ರೇಮಮೂರ್ತಿಯ ಪ್ರತಿಷ್ಠಾಪನೆಯಾಗಿಬಿಟ್ಟಿದೆ. ಆದರೆ ನನ್ನ ಹೃದಯ, ದೇವರಿಲ್ಲದ ದೇಗುಲ ಗಿರಿಜಾ. ಇದರ ಗರ್ಭಗುಡಿಯಲ್ಲಿ ಹಂಬಲದ ಬಿರುಗಾಳಿ ದಿಕ್ಕೆಟ್ಟು, ಘೋರಾಡುತ್ತಲಿದೆ. ಮಾತ್ರ-ಗಿರಿಜಾ! ಗಿರಿಜಾ! ನನ್ನ ಜೀವನ ಅದೆಷ್ಟು ಶೂನ್ಯವಾಯಿತಲ್ಲಾ!

ಮಾತನಾಡುತ್ತಿರುವಂತೆಯೇ ಶ್ರೀಮತಿಯ ದನಿ ಕುಗ್ಗಿತು. ಕೊರಳು ಬಿಗಿಯಿತು. ನೀರು ತುಂಬಿನಿಂತ ಅವಳ ಕಂಗಳಲ್ಲಿ ಶೋಕವು ಮುಳುಗಿ ಹೋಗುತ್ತಿರುವಂತೆ ತೋರಿತು. ಮೈ ಕಸುವುಗೆಟ್ಟು, ಜೋಲುತ್ತಿರುವಾಗಲೇ ಗಿರಿಜೆಯು ಶ್ರೀಮತಿಯನ್ನು ಮೆಲ್ಲನೆ ಹಿಡಿದು ತನ್ನ ತೊಡೆಗಾನಿಸಿ, ಎದೆಗವಚಿ ಹಿಡಿದುಕೊಂಡಳು. ಆ ಅಪ್ಪುಗೆಯ ಆವೇಶದಲ್ಲಿ ಏನೋ ಒಂದು ಮಿಂಚಿನ ಸೆಳಕು ಹರಿದು ಬಂದಂತೆನಿಸಲು ಶ್ರೀಮತಿಯು ಮೆಲ್ಲನೆ ಒಮ್ಮೆ ಒಮ್ಮೆ ಕಣ್ತೆರೆದಳು. ಆಗ ಶ್ರೀಮತಿ ಗಿರಿಜೆಯರ ಕಣ್ಣುಗಳೆರಡೂ ಕಲೆತವು. ಆ ನೋಟದಲ್ಲಿ ಅವಳ ಜೀವನದ ಹಂಬಲವು ಮತ್ತೊಮ್ಮೆ ತುಂಬಿದ ಹೂವಾಗಿ ಅರಳಿತು. ಆಗ ಸಂಜೆಗೆಂಪಿನ ಸೊಬಗು ಶ್ರೀಮತಿಯ ಮೊಗವನ್ನು ಬೆಳಗಿದಂತಿತ್ತು. ಕಣ್ಣೀರ ತೆರೆಗಳನ್ನು ಭೇದಿಸಿ ಶ್ರೀಮತಿಯು ಗಿರಿಜೆಯ ಮೊಗವನ್ನು ನೋಡುತ್ತಿರುವಂತೆಯೆ, ತನ್ನ ಸೋತ ಜೋತ ಕೈಯನ್ನು ಮೆಲ್ಲನೆತ್ತಿ ಗಿರಿಜೆಯ ಗದ್ದವನ್ನು ಹಿಡಿದೆಳೆಯ ಹತ್ತಿದಳು........... ಆ ನಿಮಿಷದಲ್ಲಿ ಶ್ರೀಮತಿಗೆ ಗಿರಿಜೆಯ ಮೊಗದಲ್ಲಿ ಕಾಣಿಸಿಕೊಂಡ ಮೂರ್ತಿಯು ಗಿರಿಜೆಯದೇ ಆಗಿರಬಹುದೇ!!!

* * * * *

ಈ ಮಾತುಕಥೆ ನಡೆದ ಮಾರನೇ ದಿನವೇ ಶಾಮರಾಯರ ಮದುವೆ. ಅಂದೇ ಶ್ರೀಮತಿ ಹೊಳೆಯ ಪಾಲಾದದ್ದು.

* * * * *

ಶ್ರೀಮತಿಯು ಹಾಗೇಕೆ ಹೊಳೆಯಪಾಲಾದಳೆಂಬುದನ್ನು ನಾನಿಲ್ಲಿ ಪೂರಾ ಬಿಚ್ಚಿ ಹೇಳಲಾರೆ. ನಿಮ್ಮ ನಿಮ್ಮ ಜೀವನದ ಆಳದಲ್ಲಿ ಅಡಗಿಕೊಂಡು ಯಾವದೊಂದು ವಿಧವೆಯೂ ಆಗದ ವಿರಹಿ ಹೃದಯದ ವೇದನೆಯು ಗೋಳಿಡುತ್ತಿದ್ದರೆ, ಅದನ್ನು ಕೇಳಿ ನೋಡಿರಿ ಈ ಮಾತಿನ ಮರ್ಮವನ್ನರಿಯಬೇಕಿದ್ದರೆ.

(ಫೆಬ್ರುವರಿ ೧೯೩೩)

# ಗೆಳೆತನದ ಗೆಲುವು

ಗೆಳೆತನಕ್ಕೆ ಜಗಳವೂ ಒಂದು ಪೋಷಕವೇ ಎಂದು ಕಾಣುತ್ತದೆ. ಒಳ್ಳೇ ಗೆಳೆಯರಾದವರು ಹೊರಗೆ ಜಗಳವಾಡಿದಂತೆ, ಒಳಗೆ ಅವರ ಗೆಳೆತನ ಹೆಚ್ಚಾಗಿ ಕಳೆಗೊಳ್ಳುವುದು. ಆದರೆ ಅವರ ಗೆಳೆತನದ ಬೆಸಿಗೆ ಮಾತ್ರ ಗಟ್ಟಿಯಾಗಿರಬೇಕು. ಒಂದೇ ತೆರನಾಗಿದ್ದು ಬಿಟ್ಟರೆ ಎಲ್ಲವೂ ಬೇಸರವೇ. ವೈವಿಧ್ಯವು ಜೀವನದ ಸವಿಯು ಹಾಗೇ ಗೆಳೆತನದ ಬಾಳಿಗೆ ಜಗಳವು, ಸೀಯೂಟಕ್ಕೆ ವ್ಯಂಜನಗಳಂತೆ ರುಚಿಕೊಡುವದುಂಟು. ಗೆಳೆತನಕೆ ಜಗಳವು, ಪ್ರೇಮಿಗಳ ಅಚಿರ ವಿರಹದಂತೆ. ಈ ಮಾತಿನ ಸತ್ಯವನ್ನು ಗೆಳೆತನದ ಗುಟ್ಟನ್ನರಿತವರೇ ಕಂಡುಕೊಳ್ಳಬಲ್ಲರು.

ಬಲರಾಮನಿಗೂ ನನಗೂ ಇಂಥ ಜಗಳಗಳು ಆಗೊಮ್ಮೆ ಈಗೊಮ್ಮೆ ಆಗೇ ಆಗುತ್ತಿದ್ದವು. ಹೀಗೆ ಸಣ್ಣಪುಟ್ಟ ಜಗಳಗಳು ಅದೆಷ್ಟೋ ಆಗುತ್ತಿದ್ದರೂ, ಒಮ್ಮೆ ಮಾತ್ರ ದೀರ್ಘಕ್ಕೇ ಬಿತ್ತು. ಆ ಸಲ ನಾವು ಎಷ್ಟೋ ವರ್ಷದವರೆಗೂ ಮಾತೇ ಆಡಿರಲಿಲ್ಲ. ಆ ಜಗಳದಿಂದ ಇಬ್ಬರಿಗೂ ನಮ್ಮ ಗೆಳೆತನದ ಕೀಲವೆಲ್ಲಿ ಕಳಚುವದೋ ಎಂದು ಎದೆಗುದಿಯುಂಟಾಯಿತು. ಜಗಳದ ಬೇರು ಏನೋ ನನಗೆ ನೆನಪಿಲ್ಲ. ಅಂತೂ ಬಲುದಿನ ನೆನಪುಳಿಯುವಂತೆ ಜಗಳವಾಡಿದ್ದವೆಂಬುವ ಮಟ್ಟಿಗೆ ನಿಜ.

ಆದರೆ ಆ ಜಗಳವೆಂದರೆ ಏನು; ಹೆಸರಿಗೆ ಜಗಳ ಅಷ್ಟೇ. ಈಗ ಆ ದಿನಗಳಲ್ಲಿ ನಡೆದ ಹುಚ್ಚಾಟಗಳನ್ನು ನೆನಪಿಸಿಕೊಂಡರೆ ನಗೆ ಬರುತ್ತದೆ. ಆದರೆ ಹುಡುಗತನದ ಆ ಹುಚ್ಚಾಟದಲ್ಲಿಯೇ ಆಗ ಒಂದು ಹೆಚ್ಚಿನ ಬೆಲೆಯಿತ್ತು. ಈಗ ನಾವು ಮಾಡುತ್ತಿರುವ ಕೆಲವೊಂದು ಸಂಗತಿಗಳನ್ನು ಇನ್ನು ದೊಡ್ಡವರಾದ ಮೇಲೆ ನೆನಿಸಿಕೊಂಡರೆ ಆಗಲೂ

ಈಗಿನಂತೆ ನಗು ಬರಬಹುದು. ಯಾರಿಗೆ ಗೊತ್ತು? ಹೇವಕ್ಕೆ ಬಿದ್ದು ಉಣ್ಣುವವರಿಗೆ ಉಂಡ ಮೇಲೆ ಹೊಟ್ಟೆಯುಬ್ಬುದರ ಅರಿವು ಆಗುವುದು. ಅಲ್ಲಿಯವರೆಗೆ ಕೈಬಾಯಿಗೆ ತೆರಪೇ?

ಅಂತೂ ಆಗ ನಾನೂ ಬಲರಾಮನು ಜಗಳವಾಡಿದ್ದೆವು. ಪಾಲಾಬಿಟ್ಟಿದ್ದೆವು. ಆದರೆ ನಾನು ಆಗ ಹೃದಯಪೂರ್ವಕವಾಗಿ ಜಗಳಾಡಿ ಪಾಲಾ ಬಿಟ್ಟಿದ್ದೆವೋ, ಇಲ್ಲವೋ ಆಗಂತೂ ನಮಗೆ ತಿಳಿಯಲಿಲ್ಲ. ಪಾಲಾ ಬಿಟ್ಟಿದ್ದೆವೆಂದು ಬೊಬ್ಬಾಟ ಮಾತ್ರ ಎಲ್ಲೆಲ್ಲೂ ಹರಡಿ ಬಿಟ್ಟಿತ್ತು. ಓರಗೆಯ ಹುಡುಗರೊಳಗೆಲ್ಲ ನಮ್ಮ ಜಗಳದ ಬೊಬ್ಬಾಟ ಅಷ್ಟು ಆಗಿರದಿದ್ದರೆ ನಾವಿಬ್ಬರೂ ತಿರುಗಿ ಬೇಗ ಒಬ್ಬರೊಬ್ಬರ ಪಾಲಾ ಹಿಡಿಯಬಹುದಿತ್ತು. ಆದರೆ ನಾವು ಪಾಲಾಬಿಟ್ಟದ್ದು ಸಾಲೆಯೆಲ್ಲೆಲ್ಲಾ ಹರಡಿ ಬಿಟ್ಟಿದ್ದರಿಂದ ಇಬ್ಬರಲ್ಲಾದರೂ ಸೋಲುವುದು ನಾಚಿಕೆಯ ಮಾತಾಗುತ್ತಿತ್ತು. ಹೀಗಾಗಿ ಹುಡುಗರಲ್ಲೆಲ್ಲಾ ಎರಡೆರಡು ಪಂಗಡಗಳು, ಒಂದು ನನ್ನದು; ಇನ್ನೊಂದು ಬಲರಾಮನದು. ಒಂದು ಪಂಗಡದವರು ಇನ್ನೊಂದು ಪಂಗಡದವರಾರನ್ನಾದರೂ ಕಂಡರೆ ತೀರಿತು. ``ಅತ್ತ ನೋಡು-ನಮ್ಮ ವೈರಿ ನಾಚಿಕೆಗೆಟ್ಟು ಹ್ಯಾಂಗ ಹೋಗ್ತಾನ." -ಎಂದು ಹಂಗಿಸುವುದು. ಹೀಗೆ ಬಲರಾಮ ಕೂಡ ನನಗೆ ಎಷ್ಟೋ ಸಲ ಅಂದುದುಂಟು. ಹಾಗೆ ನಾನೂ ಕೂಡ ಬಲರಾಮನಿಗೆ ಎಂದಿದ್ದೇನೆ. ಆದರೆ ನಾನು ಹಾಗೆ ಎಂದ ಸಲವೆಲ್ಲವೂ ಹಿಂದುಗಡೆ ನಾಚಿ ನಾಲಗೆ ಕಚ್ಚಿಕೊಳ್ಳದಿಲ್ಲ. ಬಲರಾಮನಿಗೂ ಹಾಗೇ ಆಗುತ್ತಿರಬೇಕೆನ್ನುತ್ತಿದ್ದುದರಲ್ಲಿ ಸಂದೇಹವೇ ಇರದು. ಆದರೂ ನಮ್ಮ ನಮ್ಮ ಪಂಗಡದ ಹುಡುಗರು ನಮ್ಮಿಬ್ಬರ ಹೆಮ್ಮೆಯನ್ನು ಹುರಿದುಂಬಿಸುತ್ತಿದ್ದುದರಿಂದ ಜಗಳದ ಕಾವು ಬೇಗ ಸರಿಯಲಿಲ್ಲ.

ಈ ಹೊತ್ತಿನಲ್ಲೇ ನಾವು ಕನ್ನಡ ನಾಲ್ಕನೇ ಯತ್ತೆಯನ್ನು ಮುಗಿಸಿಕೊಂಡು ಇಂಗ್ಲೀಷು ಸಾಲೆಯನ್ನು ಸೇರಿದೆವು. ಆಗ ಮಾತ್ರ ನಮ್ಮಿಬ್ಬರ ದಾರಿಗಳು ಟಿಸಿಲೊಡೆದವು. ನಾನು ಸೇರಿದ್ದು ವ್ಹಿಕ್ಟೋರಿಯಾ ಹಾಯ್ಸ್ಕೂಲು. ಬಲರಾಮ ಸೇರಿದ್ದು ಧಾರವಾಡ ಹಾಯ್ಸ್ಕೂಲು. ಹಾಗೆ ಸಾಲೆಗಳೆರಡೂ ಬೇರೆ ಬೇರೆ ಆದದ್ದು ಒಳ್ಳೇದೇ ಎಂದು ಇಬ್ಬರೂ ಬಗೆದೆವು. ಏಕೆಂದರೆ ನಮ್ಮ ಜಗಳದ ಜಳವು ಇನ್ನೂ ಬಲಿಯುವುದರಲ್ಲಿಯೇ ಇತ್ತು.

ಜಗಳವು ಬಲಿಯುವುದರಲ್ಲಿಯೇ ಇತ್ತು ಎಂದರೆ, ನಮ್ಮ ಸಿಟ್ಟು ತ್ವೇಷಗಳು ಬಲಿಯುತ್ತಿದ್ದವೆಂದು ಅರ್ಥವಲ್ಲ- ಒಂದು ತರದ ಹೆಮ್ಮೆ ಬೆಳೆಯುತ್ತಲಿತ್ತು. ``ಅವನು ತಪ್ಪುಗಾರ; ಅವನೇ ಬೇಕಾದರೆ ಮೊದಲು ಮಾತನಾಡಿಸಲಿ ನಾವೇಕ ಸೋಲಬೇಕು?" ಎಂದು ಇಬ್ಬರು ಹಟತೊಟ್ಟು ಬಿಟ್ಟಿದ್ದೆವು. ಆದರೆ ಯಾವಾಗ ಮತ್ತೆ ಮೊದಲಿನಂತೆ ಮಾತನಾಡುವೆವೋ ಯಾವಾಗ ಮತ್ತೆ ನಮ್ಮ ಗೆಳೆತನ ಮೊದಲಿನಂತೆ ಬೆರೆತುಕೊಳ್ಳುವದೋ ಎಂದು ಇಬ್ಬರ ಜೀವಗಳೂ ಚುರು ಚುರು ಅನ್ನುತ್ತಿದ್ದವು. ``ಇದೊಂದು ಸಲ ಇಬ್ಬರನ್ನೂ ಕೂಡಿಸಿಬಿಡು ಮಹಾರಾಯಾ! ಇನ್ನೊಮ್ಮೆ ಎಂದೂ ಜಗಳವಾಡುವುದಿಲ್ಲ- ಒಮ್ಮೆ ಆತ ನನ್ನನ್ನು ಮೊದಲು ಮಾತನಾಡಿಸುವಂತೆ ಮಾಡಿಬಿಡು, -ನಿನಗೆ ಜೋಡೆರಡು ಕಾಯಿಗಳು" ಎಂದು ಎಷ್ಟೋ ಸಾರೆ ನಾನೇ ಸುಗ್ಗೀಕೆರೆ ಹನುಮಪ್ಪನಿಗೆ ಬೇಡಿಕೊಂಡಿದ್ದೆ. ಹಾಗೆ ಬಲರಾಮನೂ ಮಾಡುತ್ತಿದ್ದನೆಂದು ಹಿಂದಿನಿಂದ ತಿಳಿಯಿತು. ಇಲ್ಲಿಯವರೆಗೆ ನಮ್ಮ ಹೆಮ್ಮೆ ತಗ್ಗಿದರೂ, ``ಮೊದಲು ನಾನೇ ಹೋಗಿ ಮಾತನಾಡಿಸಿದರಾಯಿತು?" ಎನ್ನುವಷ್ಟು ಇಬ್ಬರೂ ಇಳಿಯಲಿಲ್ಲ.

ಮೊದಮೊದಲು ಓಣಿಯಲ್ಲಿ ಇಬ್ಬರೂ ಎದರು ಬದರು ಸಂಧಿಸಿದರೆ, ಇಬ್ಬರೂ ಸನಿಯದ ಒಂದೊಂದು ಸಂದಿಯಲ್ಲಿ ಹೊಕ್ಕು, ಹಾದಿಯನ್ನು ಬೇರೆ ಮಾಡಿಕೊಂಡು ಮೋರೆ ತಪ್ಪಿಸಿಕೊಳ್ಳುತ್ತಿದ್ದೆವು. ಹೀಗೆ ಕೆಲದಿನವಾದ ಮೇಲೆ ಸ್ವಲ್ಪ ವೈಚಳಿ ಕಡಿಮೆಯಾಗಲು ಇಬ್ಬರು ಎದರು ಬದರು ಬೆಟ್ಟಿಯಾದರೂ ಒಬ್ಬರನ್ನೊಬ್ಬರು ನೋಡಿಯೂ ನೋಡದಂತೆ ತಲೆ ತಗ್ಗಿಸಿಕೊಂಡು ಭರದಿಂದ ಮುಂದೆ ಸಾಗಿಬಿಡುತ್ತಿದ್ದೆವು. ಮತ್ತೂ ಕೆಲವು ದಿವಸಗಳ ಮೇಲೆ ಮತ್ತೂ ಒಂದು ಹೆಜ್ಜೆಯನ್ನು ಮುಂದೆ ಇಟ್ಟೆವು. ಆಗ ಮೊದಲಿನಂತೆ ಮೋರೆ ತಪ್ಪಿಸಿಕೊಳ್ಳದೇ ``ಇವಗ್ಯಾತಕ್ಕೇ ಇಷ್ಟು ಹೆದರೋದು; ಇವಾ ಏನ ಮಹಾ ಹೆಚ್ಚಿನವಾ?" ಎಂಬ ಧೈರ್ಯದಿಂದ ಇಬ್ಬರೂ ಒಬ್ಬರನ್ನೊಬ್ಬರೂ ಬಿರಿ ಬಿರಿ ನೋಡುತ್ತ ಮುಂದೆ ಸಾಗುತ್ತಿದ್ದೆವು. ಮುಂದೆ ಹೋದ ಮೇಲೆ ಇಬ್ಬರೂ ಮತ್ತೊಮ್ಮೆ ತಪ್ಪದೇ ಹಿಂದಿರುಗಿ ಒಂದು ಬಗೆಯ ಈರ್ಷೆಯಿಂದ ಒಬ್ಬರನ್ನೊಬ್ಬರೂ ನೋಡಿಯೇ ನೋಡುತ್ತಿದ್ದೆವು.

ಅನಂತರ ಕೆಲದಿನ ಕಳೆಯಲು, ನಮ್ಮ ಬಿರುನೋಟ ನಗೆಯಲ್ಲರಳಹತ್ತಿತ್ತು. ಆಗ ದೂರದಿಂದ ಒಬ್ಬರನ್ನೊಬ್ಬರು ನೋಡಿದೆವೆಂದರೆ, ಸರಿ- ನಗೆ ಬೇಡವೆಂದರೂ ಒತ್ತಿ ಒತ್ತಿ ಬರುತ್ತಿತ್ತು. ಬಿಗಿಹಿಡಿದಷ್ಟು ಒಳ್ಳೇ ಜೋರು. ಹತ್ತಿರ ಬಂದಂತೂ ನಗೆಯ ಸೆಳವನ್ನು ತಡೆಯುವದೇ ಆಗುತ್ತಿರಲಿಲ್ಲ. ಇಬ್ಬರೂ ನಕ್ಕೇ ಬಿಡುತ್ತಿದ್ದೆವು.

ಹೀಗೆ ಎಷ್ಟೋ ದಿನ ನಡೆದೇ ನಡೆಯಿತು. ಒಂದು ದಿನವಲ್ಲ; ಒಂದು ವಾರವಲ್ಲ; ವರ್ಷಗಟ್ಟಲೆಯ ಮಾತು. ಎಂದ ಮೇಲೆ ಈ ಸಂಗತಿಗಳೆಲ್ಲ ಒಂದಿಲ್ಲೊಂದು ರೂಪದಿಂದ ತಿಗರಿಯಾಗಿ ತಿರುಗುತ್ತಲೇ ಇರಬೇಕಲ್ಲ!

❋ ❋ ❋ ❋ ❋

ನಾನು ಅದೇ ಇಂಗ್ಲೀಷ ನಾಲ್ಕನೇ ವರ್ಗಕ್ಕೆ ಸೇರಿದ್ದೆ. ಅತ್ತ ಬಲರಾಮನೂ ನಾಲ್ಕನೇ ವರ್ಗಕ್ಕೆ ಬಂದಿದ್ದ. ಆದರೆ ಇಬ್ಬರದೂ ನಿಟ್ಟು ಬೇರೆ ಬೇರೆಯಾಗಿದ್ದರಿಂದ, ಒಳಗಿನ ಗೆಳೆತನವು ಒಳಗೇ ಹುಗಿದುಕೊಂಡಿದ್ದರೂ, ಬಳಕೆ ಬೆಳೆಯುವ ಸಂಭವವು ತೀರ ಕಡಿಮೆಯಾಗುತ್ತ ನಡೆದಿತ್ತು. ದೊಡ್ಡವರಾದಂತೆ, ಮೊದಲಿನ ಹುಡುಗತನದ ಚೇಷ್ಟೆಗಳೂ ಕಡಿಮೆಯಾಗುತ್ತ ಬಂದವು. ಇತ್ತೀಚೆ ಎಷ್ಟೋ ದಿನ ಇಬ್ಬರದೂ ಬೆಟ್ಟಿ ಕೂಡಾ ಆಗುತ್ತಿರಲಿಲ್ಲ. ಹೀಗಾಗಿ ``ಆಡ ಆಡುತ್ತ ಅಡವೀ ಬಿದ್ದೆವಲ್ಲ! ಯಾವ ದೇವನು ಈ ದುರ್ಬುದ್ಧಿ ಕೊಟ್ಟನೋ, ಹೀಗೇ ಹೋದರೆ ನಾನು ಬಲರಾಮನಂಥ ಒಬ್ಬ ಜೀವದ ಗೆಳೆಯನಿಗೆ ಕೊನೆಗೂ ಎರವಾಗಬಹುದಲ್ಲಾ!" ಎಂಬ ಭಯವು ನನ್ನಲ್ಲಿ ತಲೆದೋರಿ ಉಮ್ಮಳಿಸಹತ್ತಿತು.

ಒಮ್ಮೆ ಬಲರಾಮ ತನ್ನ ಕೋಣೆಯಲ್ಲಿ ಅಭ್ಯಾಸ ಮಾಡುತ್ತ ಕುಳಿತುಕೊಂಡಿದ್ದ. ಅಂದು ಮಂಗಳವಾರ; ಮಧ್ಯಾನ್ಹ ಮೂರುಗಂಟೆಯಾಗಿತ್ತು. ಪುಸ್ತಕ ಓದುವುದರಲ್ಲಿ ಮುಳುಗಿ ಕುಳಿತಿದ್ದ ಬಲರಾಮನಿಗೆ ಓಣಿಯಲ್ಲಿ ಸ್ವಲ್ಪ ಗಡಬಿಡಿಯೂ, ಅಳುವ ದನಿಯೂ ಕೇಳಿಸಿದವು. ಮನಸ್ಸಿಗೆ ಸಮಾಧಾನವೆನಿಸದ್ದರಿಂದ, ಹೊರಗೆ ಹೋಗಿ ನೋಡಿದ. ಎದುರಿನ ಮನೆಯವರ ಚಿಕ್ಕ ಹುಡುಗಿಯೊಂದು ತಪ್ಪಿಸಿಕೊಂಡು ಬಿಟ್ಟದ್ದರಿಂದ ಓಣಿಯಲ್ಲಿ ಗಲಾಟೆಯೆದ್ದಿತು.

ಬಲರಾಮನು ಮೊದಲಿನಿಂದಲೂ ಧಾರವಾಡದವನಲ್ಲ. ಅಲ್ಲದೇ ಆತ ಆ

ಓಣಿಯಲ್ಲಿ ಅದೇ ಹೊಸದಾಗಿ ಕೋಣೆ ಹಿಡಿದದ್ದರಿಂದ ಆತನಿಗೆ ಓಣಿಯವರ ಗುರುತು ಅಷ್ಟೊಂದು ವಿಶೇಷವಾಗಿರಲಿಲ್ಲ. ತಪ್ಪಿಸಿಕೊಂಡ ಮಗುವನ್ನು ಆತ ಅದಕ್ಕೂ ಮೊದಲು ಅಷ್ಟು ಚನ್ನಾಗಿ ನೋಡಿರಲಿಲ್ಲ. ಆದರೆ ತಾಯಿಯ ಅಳುವನ್ನೂ ಗಂಡಸರಾರೂ ಇಲ್ಲದೆ ಕೆಲಜನ ಹೆಂಗಸರೇ ತೊಳಲಾಡುತ್ತಿರುವದನ್ನೂ, ನೋಡಿ ಬಲರಾಮನಿಗೆ ಮರುಕ ಹುಟ್ಟಿತು. ಒಡನೆ ಪುಸ್ತಕವನ್ನು ಒಳಗೆ ಒಗೆದು, ಬಟ್ಟೆಹಾಕಿಕೊಂಡು, ಹುಡುಗಿಯನ್ನು ಹುಡುಕಲು ಹೊರಟ. ಹೊರಟ ಸುದ್ದಿಯನ್ನು ಆ ಹುಡುಗಿಯ ಮನೆಯವರಿಗೂ ತಿಳಿಸಿರಲಿಲ್ಲ.

ಸುಮಾರು ಒಂದು ಒಂದೂವರೆ ಗಂಟೆಗೆ ಬಲರಾಮ ಅತ್ತಿತ್ತ-ಸುತ್ತಾಡಿ ಬಂದ. ಹುಡುಗಿ ಸಿಕ್ಕಲಿಲ್ಲ. ಇತ್ತ ಮನೆಯವರಿಗೆ ಆ ಹುಡುಗಿ ಸಿಕ್ಕಿರಲಿಲ್ಲ. ತಾಯಿಯ ಗೋಳಾಟವನ್ನಂತೂ ಹಿಡಿಯುವವರೇ ಇಲ್ಲ. ನಾಲ್ಕೇ ವರುಷದ ಹುಡುಗಿ, ಶ್ರೀಮಂತರ ಮಗು; ಮೈಮೇಲೆ ಚೂರುಚಾರು ವಸ್ತ್ರ-ಒಡವೆಗಳು. ಮಧ್ಯಾನ್ಹ ಊಟವಾದ ಮೇಲೆ ತಾಯಿಯ ಕಣ್ಣುತಪ್ಪಿದ್ದು ಇಳಿಹೊತ್ತಾದರೂ ಮಗುವಿನ ಸುಳಿವೇ ಇಲ್ಲ.

ಅದೆಲ್ಲವನ್ನು ನೋಡಿ ಬಲರಾಮನಿಗೆ ಮತ್ತಿಷ್ಟು ಕಸವಿಸಿಯಾಗತೊಡಗಿತು. ಮನೆಯ ಮುಂದಿನ ಕಟ್ಟೆಯ ಮೇಲೆ ನಿಂತು, ಅಳುತ್ತಿರುವ ತಾಯಿಯನ್ನು ನೋಡಿ ನೋಡಿ, ಮೋರೆ ಕಿವುಚಿಕೊಳ್ಳುತ್ತ, ತಲೆ ತುರುಸಿಕೊಳ್ಳುತ್ತ ಎಣಿಕೆಹಾಕಹತ್ತಿದ. ಎಷ್ಟು ಹೊತ್ತಾದರೂ ಏನೂ ಬಗೆ ಹರಿಯದಂತಾಯಿತು. `ತಾನು ಒಬ್ಬ; ವಿಶೇಷ ಏನನ್ನೂ ಅರಿಯದವ; ಎಷ್ಟು ಓಣಿಗಳನ್ನು ತಿರುಗಬೇಕು, ಎಲ್ಲಿ ಹುಡುಕಬೇಕು ಯಾರನ್ನು ಕೇಳಬೇಕು -ಮುಂದೆ ಗತಿಯೇನು? ಹುಡುಗಿ ಕಡೆಗೂ ಸಿಕ್ಕದೆ ಹೋದರೆ ತಾಯಿಯ ಪಾಡೇನು? ಕರುಳು ಅದೆಷ್ಟು ಕಳವಳಗೊಳ್ಳುವದಲ್ಲ-' ಎಂದು ಅನೇಕ ವಿಚಾರಗಳು ಆತನ ಬಗೆಯ ಮುಗಿಲಲ್ಲಿ ತೂರಾಡಿದವು.

ಕೊನೆಗೆ ಒಂದು ವಿಚಾರ ಹೊಳೆಯಿತು. ನಿರ್ಧಾರದ ಮುಖಮುದ್ರೆಯಿಂದ, ಬಲರಾಮ ನಿಂತ ಸ್ಥಳಬಿಟ್ಟು ಒಳಗೆ ಹೋಗಿ ಮತ್ತೆ ಕೋಟು ಟೊಪ್ಪಿಗೆ ಹಾಕಿಕೊಂಡು ಹೊರಹೊರಟ.

ಬಲರಾಮ ನೆಟ್ಟಗೆ ಬಂದದ್ದು ನಮ್ಮ ಮನೆಗೇ! ಆಗ ನಾನು ನನ್ನ ಪದ್ಯ ಪುಸ್ತಕದಲ್ಲಿಯ ವರ್ಡ್ಸ್‌ವರ್ತ್‌ನ ಡ್ಯಾಫೊಡಿಲ್ಸ್ ಓದುತ್ತಿದ್ದೆ. ಓದುತ್ತಿದ್ದ ಹಾಗೆಯೇ, ನಾನು ಎಳೆತನದಲ್ಲಿ ಬಲರಾಮನೊಡನೆ ಕಳೆದ ಹಲವು ರಸನಿಮಿಷಗಳು ಗೊಂಚಗೊಂಚಲಾಗಿ ನನ್ನ ಕಣ್ಣೆದುರು ಬಂದು ಕುಣಿಯತೊಡಗಿದವು. ಆದರೆ, ಮನದ ಮಂದಾರಗಳನ್ನೇ ಮೂಸಿ ಮೂಸಿ ಮೋದಗೊಂಡ ವರ್ಡ್ಸ್‌ವರ್ತ್ ಕವಿಯ ಆನಂದಕ್ಕೆ ಬದಲಾಗಿ ನನ್ನೆದೆಯಲ್ಲಿ ಕಳೆದ ಸೊಗಸಿನ ಉಬ್ಬೆಗವೊಂದು ತಾಳಗೆಟ್ಟು ತೊಳಲುತ್ತಿದ್ದಿತು. ದುಃಖಕ್ಕೆ ಎದೆಯ ಮಡುವು ಸಾಗದಾಗಲು ಅದು ಕಂಬನಿಯ ನೆರೆಯಾಗಿ ಕಣ್ಣ ಕೋಡಿಯನ್ನೊಡೆದು ಸೆಲೆಯಾಗಿ ಪುಟಿಯುತ್ತಿದ್ದಿತು. ಆ ಹೃದ್ಗಂಗೆಯ ಮಹಾಪೂರದಲ್ಲಿ ನನ್ನ ಹೆಮ್ಮೆಯೆಲ್ಲಾ ಕರಗಿ ಕರಗಿ ಕೊಚ್ಚಿಹೋಯಿತು. ``ಏನಾದರೂ ನನ್ನದೇ ತಪ್ಪು'' ಎಂದು ಒಪ್ಪಿ, ``ಓಡಿ ಹೋಗಿ ನನ್ನ ಬಲರಾಮನ ಕಾಲು ಕಟ್ಟಿಕೊಳ್ಳಲೇ'' ಎಂದು ಪ್ರಾಯಶ್ಚಿತ್ತ ಪೂತವಾದ ನನ್ನೆದೆಯು ಗೋಳಿಡುತ್ತಿದ್ದಿತು.

ಇದೇ ಹೊತ್ತಿಗೆ ಸರಿಯಾಗಿ ಬಲರಾಮ ನಮ್ಮ ಮನೆಯ ಬಾಗಿಲಲ್ಲೇ ನಿಂತು ``ಕಿಟ್ಟೂ!'' ಎಂದು ಕೂಗಿದ. ತನ್ನ ಪರಮಾತ್ಮನನ್ನು ಕುರಿತು ಅಖಂಡವಾಗಿ ತಪಿಸುತ್ತಿದ್ದ ಧ್ರುವಕುಮಾರನಿಗೆ ಕೇಳಿ ಬಂದ ಅಶರೀರವಾಣಿಯೊಂದರಂತೆ, ಆ ಧ್ವನಿ ನನ್ನ ಉನ್ಮತ್ತ ಚೈತನ್ಯವನ್ನು ಬಡಿದೆಬ್ಬಿಸಿತು. ಹಳವಂಡದಿಂದ ಅರುವುಗೆಟ್ಟವರಂತೆ ನಾನು ಆ ದನಿಯನ್ನೇ ಬೆಂಬತ್ತಿ ಬಲರಾಮನನ್ನು ಎದುರ್ಗೊಂಡೆ. ಆಗ ನನ್ನೆದೆಯು ದಿಕ್ಕುಗೆಟ್ಟು ಅಲೆಯುತ್ತಿದ್ದರೂ ನನ್ನ ಮೋರೆಯಲ್ಲಿ ಮಾತ್ರ ಉಲ್ಲಾಸದ ವಿಲಾಸವೊಂದು ಲಾಸ್ಯವಾಡುತ್ತಿದ್ದಿತು. ಬಲರಾಮನ ಮೋರೆಯಲ್ಲಿ, ಸೋಲಿನ ಜೋಲು ಇರದೆ ದರ್ಪದ ಬಿಗುವೇ ಕಾಣುತ್ತಿದ್ದಿತು.

ಬಲರಾಮನನ್ನು ಕಂಡೊಡನೆ ಆ ಶಬರಿಯ ವೇದನೆಯ ಗುಟ್ಟು ನನ್ನ ಮನದಲ್ಲಿ ತೋರಿಕೊಂಡಿತು. ಹೃದಯವೆಲ್ಲ ನಾಲಗೆಯಾಗಿ ನನ್ನ ಬಲರಾಮನನ್ನು ಆರ್ತಸ್ವರದಿಂದ ಕೂಗುತ್ತಿದ್ದಿತು. ಆದರೆ ಇಂಥ ಸಾವಿರ ಕೂಗಿಗೆ ಒಮ್ಮೆ ಮಾತ್ರ ನನ್ನ ತುಟಿಯಿಂದ ``ಬಲರಾಮಾ'' ಎಂಬ ಮಾತು ಹೊರಹೊರಟಿತು. ನನ್ನ

ದನಿಯಲ್ಲಿದ್ದ ಕಾತರವನ್ನು ಬಲರಾಮ ತಿಳಿದುಕೊಂಡ. ಆದರೂ ಆತ ತನ್ನ ಬಿಗುವನ್ನು ಸಡಿಲಿಸಲೊಲ್ಲ; ಕರ್ತವ್ಯಪರನಾದ ಪರಶುರಾಮ ರೇಣುಕೆಯೆದರು ಕೊಡಲೆಯತ್ತಿ ನಿಂತಂತೆ ಆತ ನಿಂತುಕೊಂಡಿದ್ದ.

``ಬಾ, ಬಲರಾಮಾ, ಒಳಗೆ;" ಎಂದೆ.

``ಈಗ ಒಳಗ ಹೊಳಗ ಬರೂ ಹಾಂಗಿಲ್ಲ; ನೀನು ಈಗ ಹೊರಗ ಬರಬೇಕಾಗೇದ, ಕಿಟ್ಟೂ; ನಡೀ ಬಾ."

ಈ ಮಾತು ಮುಗಿಯುತ್ತಿರುವಂತೆಯೇ ಬಲರಾಮನ ಧನಿ ಮೊದಲಿಗಿಂತ ಎಷ್ಟೋ ಮೆತ್ತಗಾಗಿತ್ತು.

``ಏನಂಥಾ ಕೆಲ್ಸಾ ಬಹಳಾ ಜರೂರೇನು?"

``ಹೌದ್ ಕಿಟ್ಟೂ; ನೀನು ಸ್ಕೌಟ್' ಅಂತ ನಿನ್ನ ಕಡೆ ಬರಬೇಕಾಯಿತು. ನಿನಗೊಂದ ಗುಡ್ ಟರ್ನ ಮಾಡುವ ಪ್ರಸಂಗ ಬಂದsದ; ಬಾ, ಹೋಗೋಣ". ಇಷ್ಟೊತ್ತಿಗೆ ಬಲರಾಮನ ದನಿ ಮೊದಲಿನ ಬಲರಾಮನ ದನಿಯಂತೆ ಆಗಿಬಿಟ್ಟಿದ್ದಿತು. ಮೊದಲಿನ ಸಲಿಗೆಯೇ ಆತನ ಮಾತುಕಥೆಗಳಲ್ಲಿ ಸಲೀಲವಾಗಿ ಸುಳಿದಾಡುತ್ತಿದ್ದಿತು. ಬಲರಾಮ ಆ ತಪ್ಪಿಸಿಕೊಂಡ ಮಗುವಿನ ವಿಚಾರವೆಲ್ಲಾ ಹೇಳಲಾಗಿ, ನಾನು ಮೈ ಮರೆವಿನ ಹುರುಪಿನಿಂದ ಆತನೊಡನೆ ಹೊರಟೆ.

ಇಬ್ಬರ ಮನಸ್ಸನ್ನೂ ಆ ಹುಡುಗೆಯ ವಿಚಾರವೇ ತುಂಬಿದ್ದರಿಂದ, ಆವರೆಗೆ ನಮ್ಮಿಬ್ಬರ ನಡುವೆ ಉಂಟಾಗಿದ್ದ ಬಿಡುಕು ಈಗ ತನ್ನ ತಲೆ ಹಾಕಲು ಮತ್ತೆ ಎದೆ ಮಾಡಲಿಲ್ಲ. ಇಬ್ಬರೂ ಸೇರಿ, ದೊಡ್ಡ ಪೇಟೆ, ಮಾರ್ಕೇಟು; ಕೆರೆಯ ಓಣಿ; ಭೂಸಪೇಟೆ; ಲೈನಪೇಟೆ ಮೊದಲಾದ ಹಲವು ನಿಟ್ಟಿನಲ್ಲಿ ಆ ಹುಡಿಗೆಯನ್ನು ಹುಡುಕಾಡಿದೆವು. ಎಲ್ಲಾ ಪೋಲೀಸ ಠಾಣೆಗಳಿಗೆ ಸುದ್ದೀ ಕೊಟ್ಟೆವು. ನನ್ನ ಸ್ಕೌಟ್ ಗುಂಪಿನ ಗೆಳೆಯರಲ್ಲಿ ಸಿಕ್ಕ ಸಿಕ್ಕವರನ್ನೆಲ್ಲಾ ಹಿಡಿದು ಹಲವು ನಿಟ್ಟಿಗೆ ಅಟ್ಟಿದ್ದಾಯಿತು. ಎಷ್ಟಾದರೂ ಎಲ್ಲೆಲ್ಲಿ ತೊಳಲಾಡಿದರೂ ಒಬ್ಬರಿಗೂ ಆ ಹುಡಿಗಿ ಸಿಕ್ಕಲಿಲ್ಲ. ಅಷ್ಟೊತ್ತಿಗೆ ಮಬ್ಬುಗತ್ತಲೆ ಮೀರಿ ರಾತ್ರಿ ಏರತೊಡಗಿತು. ಎಂಟು ಗಂಟೆಗೆ ಅತ್ತಿತ್ತ

ಚದುರಿದ ಗೆಳೆಯರೆಲ್ಲಾ ಗಾಂಧೀ ಚೌಕಿನಲ್ಲಿ ಕಲೆತೆವು. ನಮ್ಮೆಲ್ಲರ ಹುಡುಕಾಟ ಕೊನೆಗೆ ಮಿಡುಕಾಟವೇ ಆಗಿದ್ದುದರಿಂದ, ಮೇಲಾಗಿ ಎಲ್ಲರೂ ತೊಳಲಿ ಬಳಲಿದ್ದರಿಂದ ಯಾರ ಮೋರೆಯ ಮೇಲೂ ಸಾಕಷ್ಟು ನೀರು ಇರಲಿಲ್ಲ. ಎಲ್ಲರೂ ಹೋಗಿ ಉಸ್ಸೆಂದು ಹಾಲುಪುಗೆರೆ ದಿಬ್ಬದ ಮೇಲೆ ಕುಳಿತೆವು.

ನಾನೂ, ಬಲರಾಮನೂ ಆ ಹುಡಿಗೆಯ ಬಗೆಗೇ ಎಣಿಕೆ ಹಾಕುತ್ತಿದ್ದೆವು. ನಮ್ಮ ಜೊತೆಯ ಹುಡುಗರ ಒಂದಿನಲ್ಲಿ ಮಾತ್ರ ಏನೋ ಗುಜು ಗುಜು ನಡೆದಿತ್ತು. ಅದರ ಇಂಗಿತ ನಮ್ಮಿಬ್ಬರಿಗೂ ಹೊಳೆಯಿತು. ಆದರೆ ಅದನ್ನು ಇಬ್ಬರೂ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಇಷ್ಟರಲ್ಲಿ ಕುಲಕರ್ಣಿ ವೆಂಕ ನನ್ನ ಹತ್ತಿರ ಬಂದು ``ಏನೋ ಕಿಟ್ಟ್ಯಾ, ಕೈಯಾಗಿನ ಗಂಟೇನು? ಬಿಚ್ಚಲ್ಲಾ! ಹೋಗ್ಲಿ; ಇಷ್ಟೊತ್ತನಕಾ ಪಿರಿಪಿರಿ ತಿರುಗಿದ್ದಕ್ಕ ಏನಾದರೂ ಸಾರ್ಥಕಾಗ್ಲೀ!" ಎನ್ನುತ್ತ ನನ್ನ ಎಡಗೈ ಮಡಲಲ್ಲಿದ್ದ ಕರವಸ್ತ್ರದ ಗಂಟಿಗೆ ಗಂಟೇಬಿದ್ದ. ಉಳಿದ ಗೆಳೆಯರೂ ವೆಂಕನ ಬೆನ್ನು ತಟ್ಟಿಬಿಟ್ಟರು. ನನ್ನ ಗಂಟಿನಲ್ಲಿದ್ದದ್ದು ಲೈನ ಪೇಟೆಯ ಫೇಡೇ, ``ಪಾಪ, ತಪ್ಪಿಸಿಕೊಂಡ ಮಗೂ ಎಲ್ಲಿಯಾದರೂ ಅಳುತ್ತ ನಿಂತಿದ್ದರೆ ಅದಕ್ಕ ಕೊಡಲಿಕ್ಕೆಂದು" ನಾನೂ ಬಲರಾಮನೂ ಹೊರಡುವ ಮೊದಲೇ ಒಂದು ಸೇರು ಫೇಡೇ ಕೊಂಡಿದ್ದೆವು. ಗೆಳೆಯರೆಲ್ಲರೂ ಬಲುಮೆ ಮಾಡಿದ್ದರಿಂದ ಇನ್ನು ಗಂಟನ್ನು ಬಿಚ್ಚುವವ ಅಷ್ಟರಲ್ಲಿ ಬಲರಾಮ ತಟ್ಟನೇ ಮೇಲಕ್ಕೆದ್ದ. ``ಕಿಟ್ಟ್ಯಾ, ಯಾಕೋ ನನ್ನ ಮನಸಿಗೆ ಚೈನ ಆಗಲೊಲ್ಲದಪಾ! ಅವರ ಮನೀ ತನಕಾ ಹೋಗಿ ಇನ್ನೊಮ್ಮೆ ಆ ಹುಡಿಗೀ ಸುದ್ದೀ ತಿಳಕೋ ಬೇಕು ಮೊದ್ಲು, ಸಿಕ್ಕಿರದಿದ್ರ, ಬೆಳದಿಂಗಳದಾಗ ಇನ್ನೊಮ್ಮೆ ಹುಡುಕಾಡಿ ಬರೋಣ, ನಡಿ" ಎನ್ನುತ್ತ ಆತ ಊರ ಕಡೆಗೆ ನಡೆದೇ ಬಿಟ್ಟ. ಬಲರಾಮ ಹೊರಟದ್ದರಿಂದ ಅರೆಬಿಚ್ಚಿದ ಗಂಟನ್ನು ಕಟ್ಟುತ್ತ ನಾನೂ ಎದ್ದೆ. ಗೆಳೆಯರೆಲ್ಲರ ಬಾಯಿಯ ನೀರು ನಡುವೇ ಹರಿ-ಗಡಿದಂತಾಯಿತು.

ನಾವು ಹುಡಿಗೀ ಮನಿಗೆ ಹೋಗಿ ನೋಡುವಷ್ಟರಲ್ಲಿ ಮಧ್ಯಾಹ್ನ ಅತ್ತವರೆಲ್ಲಾ ಈಗ ನಗುತ್ತಿದ್ದರು. ತಪ್ಪಿಸಿಕೊಂಡ ಮಗೂ ಕೈಯಲ್ಲೊಂದು ಸುಟ್ಟ ಹಪ್ಪಳವನ್ನು ಹಿಡಿದುಕೊಂಡು ಅರೆ ಅರೆಯಾಗಿ ತಿನ್ನುತ್ತ ಒಂದು ಕಂಭಕ್ಕೆ ನಿಂತಿತ್ತು. ಸುತ್ತಲೂ

ನಿಂತು ನಗುವವರ ಮೇಲೆ ನಡು ನಡುವೆ ಸಿಟ್ಟಿಗೇಳುತ್ತ ಕೈ ಜಾಡಿಸಿ ಅಳುತ್ತಿತ್ತು. ಮತ್ತೆ ಒಂದು ಚೂರು ಹಪ್ಪಳ ಕಡಿದುಕೊಂಡು ನಗುತ್ತಿತ್ತು.

ಆ ಮಗು ತಪ್ಪಿಸಿಕೊಂಡೇ ಇರಲಿಲ್ಲವಂತೆ. ಮಗ್ಗುಲ ಮನೆಯ ಸರಸಿಯೊಡನೆ ಆಡಹೋಗಿ ಅಲ್ಲಿಯೇ ಒಂದು ಮಂಚದ ಕೆಳಗೆ ಮಲಗಿ ನಿದ್ದೆ ಹೋಗಿತ್ತಂತೆ. ಸಂಜೆಗೆ ಎಚ್ಚತ್ತು ಹೆದರಿಕೊಂಡು ತಾನೇ ಮನೆಗೆ ಓಡಿ ಬಂದಿತ್ತಂತೆ. ಅದಕ್ಕಾಗಿ ಮನೆಯವರೆಲ್ಲಾ ಆ ಮಗುವನ್ನು ಚಿಟುಕು ಮುಳ್ಳಾಡಿಸತೊಡಗಿದ್ದರು. ಬಲರಾಮ ನಮ್ಮ ಗುಂಪಿನ ಹುಡುಗರೆಲ್ಲಾ ಪಟ್ಟಶ್ರಮವನ್ನು ತೋಡಿಕೊಂಡ. ನೆರೆದವರೆಲ್ಲಾ ಕೈತಟ್ಟಿ ತಟ್ಟಿ ನಗಹತ್ತಿದ್ದರು. ನಾವೂ ಬಿದ್ದು ಬಿದ್ದು ನಕ್ಕುಬಿಟ್ಟೆವು.

ಅಲ್ಲಿಂದ ಹೊರಬಿದ್ದೊಡನೆ ಎಲ್ಲರ ಕಣ್ಣೂ ನನ್ನ ಕೈಲಿದ್ದ ಗಂಟಿನ ಕಡೆಗೆ ತಿರುಗಿದವು. ಅಂದು ನಮ್ಮ ಮನೆಯ ಮಾಳಿಗೆಯ ಮೇಲೆ ಬೆಳದಿಂಗಳಲ್ಲಿ ಗೆಳೆಯರ ಫೇಡೆಯ ಫರಾಳ ನಡೆಯಿತು. ಅದಕ್ಕೆ ಜೊತೆಯಾಗಿ ನಮ್ಮ ತಾಯಿ ಮೊಸರು-ಅವಲಕ್ಕಿಯನ್ನು ಒದಗಿಸಿದರು.

``ಯಾಕಣ್ಣಾ; ಕಿಟ್ಟೂ! ಏನ್ ಕವಡಕಂಟಕರೋ ಇಬ್ಬರೂ ನೀವು! ನಮಗಾರಿಗೂ ಪತ್ತೆ ಆಗಧಾಂಗ ಹೌರಗ ಒಳಗಿಂದೊಳಗs ಪಾಲಾಹಿಡಿದೀರಲ್ಲs. ಎಂಥಾ ಸೋಗು ಹಾಕಿದ್ದರಪಾ ಶಾಮ್ಯಾ, ಇಷ್ಟ ದಿನಾ ಇವರಿಬ್ಬರ ಬೆರ್ಕಿ ಮಕ್ಕಳೂs!!" ಎಂದು ವೆಂಕ ಹಂಗಿಸುವ ದನಿಯಲ್ಲಿ ಒಂದು ದೀರ್ಘ ಉದ್ಗಾರವನ್ನು ಎಳೆದ. ಆ ಮಾತಿಗೆ ಬಲರಾಮನೂ ನಕ್ಕ; ನಾನೂ ನಕ್ಕೆ.

``ಅದಕ್ಕs ಪಾ, ಈಗ ತಪ್ಪದಂದಾ" ಅಂತ ಫೇಡೇ ಹಂಚತಿರೋದು ಎಂದು ನಾನಂದೆ.

``ಆತ್ ಬಿಡ್ರೋ; ಹೀಂಗ ಪಾಲಾ ಹಿಡಿದವರೆಲ್ಲಾ ಫೇಡೇ ಹಂಚತಿದ್ರ ದಿನಕ್ಕ ಹತ್ತಸಾರೆ ಜಗಳಾಡಿದ್ರು ಅಡ್ಡೀ ಇಲ್ಲ." ಅರ್ಧ ಫೇಡೇ ಬಾಯಲ್ಲಿರುವಾಗಲೇ ಶಾಮ ತಡವರಿಸುತ್ತ ಮಾತನಾಡಿದ.

``ಇನ್ಮ್ಯಾಲೆ ಎಲ್ಲಾರ ಗೆಳೆತನ ಫೇಡೇಧಾಂಗ ಸೀಯಾಗಿ ಮೊಸರೂ ಅವಲಕ್ಕೀ

ಹಾಂಗ ತಂಪಾಗಿ ಇರಬೇಕ್ ನೋಡ್ಲೇ ಸೀನ್ಯಾ" ಮೂಲೆಯಲ್ಲಿಯ ಮಾಧು ಮೆಲ್ಲನೆ ದನಿಗೂಡಿಸಿದ. ಅಷ್ಟರಲ್ಲಿ ಬಲರಾಮ ನನ್ನನ್ನು ಕೂಗಿ ``ಕಿಟ್ಟ್ಯಾ, ಪಾಪ ಆ ಹುಡಿಗೀ ಹೆಸರ್ಲೆ ತೆಗೆದುಕೊಂಡ ಫೇಡೇಯಲ್ಲಾ ನಾವs ಹೊಡೆದ್ವೆಲ್ಲೋ" ಎಂದ. ನನಗೂ ಬಲರಾಮನ ಮಾತು ನಿಜವೆನಿಸಿತು. ನಾನು ಹಂಚುವವನಾದ್ದರಿಂದ ನನ್ನ ಪಾಲಿನದನ್ನು ನಾನು ತಿಂದಿರಲಿಲ್ಲ. ಅದನ್ನು ತೆಗೆದು ನಾನು ಬಲರಾಮನ ಕೈಗೆ ಕೊಟ್ಟೆ.

ಅಂದಿನಿರುಳು ಬಲರಾಮ ನಮ್ಮಲ್ಲಿಯೇ ಊಟ ಮಾಡಿದ. ಇಬ್ಬರೂ ಒಂದೇ ಹಾಸಿಗೆಯಲ್ಲಿ ಮಲಗಿಕೊಂಡೆವು. ``ಅಂತೂ ಹೇಗಾದರೂ ಮಾಡಿ ಒಮ್ಮೆ ಮಾತನಾಡಿ ಬಿಟ್ಟೆನಲ್ಲಾ; ಇನ್ನೇನು. ಮೇಲಾಗಿ ಆತನೇ ನಮ್ಮ ಮನೆಮುಟ್ಟಿ ಬಂದು ಮಾತನಾಡಿಸಿದನಲ್ಲಾ; ಎಂದ ಮೇಲೆ ನನ್ನ ಹಟವೇ ಗೆದ್ದಂತಾಯಿತು." ಎಂದು ನಾನು ಒಳಗೊಳಗೇ ಸಂತಸ ಬಡುತ್ತಿದ್ದೆ." ಇದರಲ್ಲಿ ನಾನು ಸೋತದ್ದೇನು? ಒಂದು ಕರ್ತವ್ಯಕ್ಕಾಗಿ, ಒಂದು ಸಾಮಾಜಿಕ ಕಾರ್ಯಕ್ಕಾಗಿ, ಈತನನ್ನು ಮಾತನಾಡಿಸಿದರೆ ನಾನು ಅದೆಂತು ಸೋಲನ್ನು ಒಪ್ಪಿದಂತಾಯಿತು! ಇಂದಿನ ಕೆಲಸ ಮುಗಿದ ಮೇಲೆ ಮತ್ತೆ ಮೊದಲಿನಂತೆ ಪಾಲಾ ಬಿಡುವದಕ್ಕೆ ನಾನು ಸಿದ್ಧನೇ ಆಗಿದ್ದೆ. ಈತನೇ ಫಲಾರ ಊಟಹಾಕಿ ಮೇಲೆ ಮರ್ಜಿ ಹಿಡಿದನಲ್ಲ! ಎಂದ ಮೇಲೆ ಸೋತವ ಕಿಟ್ಟ್ಯಾನೇ" ಎಂದು ಬಲರಾಮ ತನ್ನೊಳಗೇ ತಾನು ಸಮಾಧಾನ ಹಚ್ಚಿಕೊಂಡ.

ಆದರೆ ``ನಾನೇ ಗೆದ್ದೆನೆಂದು ಕೊಚ್ಚಿಕೊಳ್ಳುವ ಹೆಮ್ಮೆಯಾಗಲೀ, `ನೀನೇ ಸೋತಿಯೆಂದು ಹೇಳುವ ಧೈರ್ಯವಾಗಲೀ ಇಬ್ಬರಿಗೂ ಬರಲಿಲ್ಲ. ಈಗಿದ್ದುದೇ ಇರಲಿ ಎಂದು ಇಬ್ಬರೂ ಸಂತೈಸಿಕೊಂಡೆವು. ನಾವಿಬ್ಬರೂ ಎಂದಾದರೂ ಜಗಳವಾಡಿದ್ದೆವೋ ಇಲ್ಲವೊ ಎಂಬಂತೆ ನಮ್ಮ ನಮ್ಮ ಭವಿತವ್ಯದ ಮಾತುಕಥೆಗಳಲ್ಲಿ ಮುಳುಗಲು ಹಿಂದಿನದೆಲ್ಲಾ ಮರೆತು ಆ ಜಗಳದ ಮೂರು ವರುಷಗಳನ್ನು ನಮ್ಮ ಜೀವನದಿಂದಲೇ ವಜಾಹಾಕಿ ಬಿಟ್ಟದ್ದರಿಂದ ನಾವಿಬ್ಬರೂ ಮತ್ತೆ ಮೊದಲಿನ ವಳೆಗೆಳೆಯರೇ ಆಗಿಬಿಟ್ಟೆವು. ಅಂದು ರಾತ್ರಿ ನಾವಿಬ್ಬರೂ ಜೊತೆಯಾಗಿ

ಮಲಗಿರುವಾಗ, ಹದಿನಾಲ್ಕು ವರುಷ ದಾರಿಕಾಯ್ದು ಚಿತಾಪ್ರವೇಶ ಮಾಡಲಿದ್ದ ಭರತನನ್ನು ರಾಮಭದ್ರನು ಓಡಿದೆತ್ತಿ ಮೈದಡವುತ್ತಿದ್ದಂತೆ ನನಗೆನ್ನಿಸಿತು.

ಮರುದಿನ ನಾನು ಧಾರವಾಡ ಹೈಸ್ಕೂಲನ್ನೇ ಸೇರಿಕೊಂಡೆ.

* * * * *

ಈ ಮಾತು ನಡೆದು ಇಂದಿಗೆ ಹತ್ತು ವರುಷವಾಯಿತು. ಈಗ ಭಾವಿಸಿದರೆ ಎನ್ನಿಸುತ್ತದೆ; `ಅಂದು ಬಲರಾಮನೂ ನಾನು ಸೇರಿ ಹುಡುಕಿದ್ದು, ತಪ್ಪಿಸಿಕೊಂಡು ಆ ಹುಡುಗಿಯನ್ನಲ್ಲ ಆದರೆ ನಮ್ಮ ಸ್ನೇಹ ಜೀವನದಲ್ಲಿ ದಾರಿತಪ್ಪಿ ದಿಕ್ಕೆಟ್ಟು ಅಲೆಯುತ್ತಿದ್ದ ಪ್ರೇಮಶಕ್ತಿಯೊಂದನ್ನು'! ಎಂದು.

* * * * *

ಇಂದಿಗೆ ನಾಲ್ಕು ದಿನಗಳ ಹಿಂದೆ ಆ ಹುಡುಗಿಯ ಮದುವೆ ನಡೆಯಿತು. ನಿಮಿತ್ತ ಮಾತ್ರಳಾಗಿದ್ದರೂ, ನಮ್ಮಿಬ್ಬರ ಗೆಳೆತನದ ಗುಡಿಗೆ ಗೋಪುರ ಕಟ್ಟಿದವಳೆಂಬ ಆದರದಿಂದ, ನಾನೂ, ಬಲರಾಮನೂ, ಅನಾಹುತರಾಗಿಯೇ ಅವಳ ಮದುವೆಗೆ ಹೋಗಿದ್ದೆವು. ಪ್ರೀತಿಪರಮೇಶ್ವರಿಯ ಪ್ರಸಾದವನ್ನುಂಡ ನನ್ನ ಬಲರಾಮ ಆ ಹುಡುಗಿಯ ನೆನಪಿಗಾಗಿ ಇಂತು ಹರಕೆಯನ್ನು ಹಾಡಿದ-

"ನಿನ್ನ ಪತಿಯ ರತಿಯು ರಾಗ-
ತಿಲಕವಿಹುದು ನೊಸಲಿನಲ್ಲಿ
ಮನ್ಮಥನ ಚಿರನವೀನ-
ಪುಷ್ಪಹಾರ ಕೊರಳಿನಲ್ಲಿ
ನನ್ನ ಎದೆಯ ಹರಕೆಯೊಂದು
ಆಸರತಿಯ ದೀಪವಿಲ್ಲಿ
ಚನ್ನಿಗನ ಕರದ ಸ್ಪರ್ಶ
ಫಲಿಸಲಮ್ಮ ಪ್ರೀತಿಯಲ್ಲಿ;"

ನಾನು ಈ ಕತೆಯನ್ನು ಬರೆದೆ. ಇದನ್ನು ನಾನು ಬಲರಾಮನಿಗೆ ಓದಿ ತೋರಿಸಿದ ಮೇಲೆ ಇಬ್ಬರೂ ಸೇರಿ ಹೀಗೆ ಗೆಳೆತನದ ಗೀತವನ್ನು ಹಾಡಿದೆವು.

``ಜೊತೆಯಿಲ್ಲದೇ ಬೆಳೆಯು, ಜೊತೆಯಿಲ್ಲದೇ ಉಳಿಯು.
    ಜೊತೆಯಿಲ್ಲದಾ ಬಾಳು ಗೋಳು ಗೋಳು!
ಜೊತೆಯಿಲ್ಲದಾ ಹೊತ್ತು ನೀಗಲಾರದ ಕುತ್ತು
    ಜೊತೆಯಿಲ್ಲದಿರಲೆಲ್ಲ ಹಾಳು ಹಾಳು!!
ಜೊತೆಯಿಂದಲೇ ಜಗದ ಕುಡಿಯು ಕೊನರುತಲಿಹುದು
    ಜೊತೆಯಿಂದಲೇ ಮಮತೆ ಮೊಳೆಯುತಿಹುದು!
ಜೊತೆಯಾಸೆ ಜೀವರಿಗೆ ಸೃಷ್ಟಿಸಮ್ಮತವಿಧಿಯು
    ಜೊತೆಯಿಂದಲೇ ಭಾವ ಬೆಳೆಯುತಿಹುದು!"

# ಜೀವನ-ಕಲಹ

## ೧

ಕಾಳಿ, ಹೆಸರಿನ ತಕ್ಕ ಕಪ್ಪೇ ಆಗಿತ್ತು. ಹೊಟ್ಟೆಯ ಕೆಳಬದಿಗೆ ಸ್ವಲ್ಪ ಬೂದಿಬಣ್ಣದ ಛಾಯೆಯಿದ್ದುದೇನೋ ನಿಜ. ನೋಡಲಿಕ್ಕೆ ಕಾಳಿಯೇನು ಅಷ್ಟೊಂದು ಚಂದವಿರಲಿಲ್ಲ. ಮೋರೆಯ ಮೇಲೆ ದಡ್ಡತನದ ಕಳೆಯೇ ಸುರಿಯುತ್ತಿತ್ತು. ಕಣ್ಣುಗಳು ಚಿಕ್ಕವು; ಸೋಮಾರಿತನದಿಂದ ತುಂಬಿದಂತೆ ಕಾಣುತ್ತಿದ್ದವು. ಆದರೆ ಕಿವಿಮಟ್ಟಿಗೆ ಒಳ್ಳೇ ಚುರುಕು. ಬಾಲ ನಾಣ್ಣುಡಿಯಂತೆ ಡೊಂಕೇ ಆಗಿತ್ತು ಎಂಬುದರಲ್ಲಿ ಸಂದೇಹವೇ ಇಲ್ಲ. ಸೀರಗಾಲುಗಳು; ನಿಲುವು ಹವಣೆಯದು. ಒಟ್ಟಿನ ಮೇಲೆ ಕಾಳಿ, ಜೋಲುಗಿವಿ ಹಾಕಿಕೊಂಡು, ಜೊಲ್ಲು ಸಾಲಿಗೆ ಓರಿದು ಕಾವಲಿ ಹಿಡಿದು ಓಡಾಡುವಾಗ ಅದು ತುಸು ಹೆಚ್ಚು ಕಡಿಮೆ ಹುಚ್ಚುನಾಯಿಯಂತೆ ಕಾಣುತ್ತಿತ್ತು.

ಆದರೆ ಕಾಳಿಯೇನು ಹುಚ್ಚಲ್ಲ. ಹೊತ್ತು ಬಂದಾಗ, ಹುರುಪು ಬಂದಾಗ, ಮೈಯುಬ್ಬಿಸಿ, ಕಣ್ಣು ಕೆರಳಿಸಿ, ಹೊಂಚುಹಾಕಿದಾಗ ಅದನ್ನು ನೋಡಬೇಕು;- ಎಂಥವರೂ ಹೆದರಬಹುದು. ಹೀಗಿದ್ದರೂ ಅದರ ನಡತೆ ಬಲು ಮಿದುವು. ಸ್ವಭಾವ ಪ್ರೇಮಲವಾದದ್ದು. ನಮ್ಮೋಣಿಯಲ್ಲಿಯ ಚಿಕ್ಕ ಚಿಕ್ಕ ಮಕ್ಕಳೂ ಕೂಡ ಅದನ್ನು ಅದೆಷ್ಟೋ ಪರಿಯಿಂದ ಕಾಡುತ್ತಿದ್ದರು. ಕಾಲು ಜಗ್ಗುವರು; ಬಾಲ ಎಳೆಯುವರು; ಕಿವಿ ತಿರುವುವರು; ಮೈಮೇಲೆ ಬೀಳುವರು; ಕಲ್ಲಿನಿಂದ ಬಿಗಿಯುವರು- ಆದರೂ ಕಾಳಿ, ಯಾರಿಗೂ ಏನೂ ಮಾಡುತ್ತಿರಲಿಲ್ಲ. ಕೂಸುಗಳು ಕೂಡ ಕೈಚಾಚಿ,

ಚೂಟು ಎಂದರೆ, ಅದು ತಟ್ಟನೆ ಬಾಲವಾಡಿಸುತ್ತ ಹತ್ತಿರ ಹೋಗಿ ನಿಲ್ಲುವದು.

ಒಂದು ಮನೆಗಲ್ಲ; ಓಣಿಯಲ್ಲಿ ಎಲ್ಲ ಮನೆಗಳಿಗೂ ಕಾಳಿ, ಬೇಕಾಗಿತ್ತು. ಎಲ್ಲರೂ ಅದನ್ನು ಹತ್ತಿರ ಕರೆಯುವವರೇ. ಹೊಟ್ಟೆಗೇನೂ ಕೊರತೆಯಿಲ್ಲ. ಊರ ಭಟ್ಟರಿಗಿಂತಲೂ ನೆಮ್ಮದಿಯಾಗಿತ್ತು. ತಾನು ತಿಂದು ಮಿಕ್ಕದ್ದನ್ನು ಬೇರೆ ಓಣಿಯ ನಾಯಿಗಳನ್ನು ಕರೆದು ತಿನ್ನಿಸುತ್ತಿತ್ತು. ಹೊಟ್ಟೆಗೆ ಸಾಕಷ್ಟು ಸಿಕ್ಕು ಪುಷ್ಟವಾಗಿದ್ದರಿಂದ, ಅದರ ಮಂದತನವೂ ಚಂದವಾಗಿಯೇ ಕಾಣುತ್ತಿದ್ದಿತು.

ಅದೇಕೊ, ಕಾಳಿಯ ವಸತಿಗೃಹ ಮಾತ್ರ ನಮ್ಮ ಮನೆಯ ಮುಂಬದಿಯ ಕಾಲುವೆಯ ಮಗ್ಗುಲಲ್ಲಿ. ಅದನ್ನು ನಾವೇನು ಬೇಕು ಎಂದು ಸಾಕಿರಲಿಲ್ಲ. ಎಲ್ಲರಂತೆ ನಾವು ಉಳಿದು ಬಳಿದುದನ್ನು ಅದಕ್ಕೆ ಇಕ್ಕುತ್ತಿದ್ದೆವು. ಕಾಳಿಯನ್ನು ಯಾರೊಬ್ಬರೂ ಸಾಕಿರಲಿಲ್ಲ. ಓಣಿಯೆ ಅದನ್ನು ಸಾಕಿತು. ಹೀಗಿದ್ದರೂ ಅದು ಯಾವಾಗಲೂ ನಮ್ಮ ಮನೆಯ ಮುಂದೆಯೆ, ಮುಂಗಾಲುಗಳ ನಡುವೆ ಮೋರೆ ನೀಡಿಕೊಂಡು ಬಿದ್ದಿರುತ್ತಿತ್ತು.

ಕಾಳಿಗೆ, ಒಬ್ಬಿಬ್ಬರು ಗೆಳೆಯರೂ ಗೆಳತಿಯರೂ ಇದ್ದರು. ಆದರೆ ಅವರ ಓಣಿ ಬೇರೆ. ತನ್ನ ಓಣಿಗೆ ತಾನೇ ರಾಣಿ. ತಾನು ಕರೆದಲ್ಲದೆ, ಬೇರೊಬ್ಬರನ್ನು ಓಣಿಯಲ್ಲಿ ಹಾಯಗೊಡುತ್ತಿರಲಿಲ್ಲ. ಅರಿಯದ ನಾಯಿಗಳು ಓಣಿಯಲ್ಲಿ ಹಾಯ್ದರಂತೂ, ಅವನ್ನು ಹರಿದು ಒಕ್ಕಲಿಕ್ಕಿ ಬಿಡುವಂತೆ ಮಾಡುವದು.

ಕಾಳಿ, ತನ್ನ ಗೆಳೆಯಂದಿರೊಡಗೂಡಿ, ಆಗಾಗ ಊರ ಪಯಣಕ್ಕೆ ಹೊರಡುತ್ತಿತ್ತು. ಊರಿನ ಸಂದಿಗೊಂದಿಗಳನ್ನೂ ಅದು ಬಲ್ಲದು. ನಾನು ಎಷ್ಟೋ ಸಲ, ಕಾಳಿಯನ್ನು ಮದಿಹಾಳದಲ್ಲಿ, ಸಪ್ಪಾಪುರದಲ್ಲಿ, ಮಾರ್ಕೆಟಿನಲ್ಲಿ, ಪೋಲಿಸಲಾಯಿನ್ಸದಲ್ಲಿ, ಹೆಡ್ಡಾಫೀಸಿನಲ್ಲಿ ಕಂಡಿದ್ದೇನೆ. ನನ್ನನ್ನು ಎಲ್ಲಿಯೇ ಕಂಡರೂ ಒಮ್ಮೆ ಓಡಿಬಂದು ಬಾಲ ಅಲ್ಲಾಡಿಸುತ್ತ ಕುಂಯಿಕುಂಯಿ ಮಾಡಿ ಮತ್ತೆ ತನ್ನ ಗೆಳೆಯರನ್ನು ಕೂಡಿಕೊಳ್ಳುವುದು ಅದರ ಕೆಲಸ. ಹೆಚ್ಚಾಗಿ ನಮ್ಮ ಮನೆ ಎದುರೇ ಇರುತ್ತಿದ್ದುದರಿಂದ, ನನ್ನೊಡನೆಯೂ, ನಮ್ಮ ಮನೆಯ ಮಕ್ಕಳು ಮರಿಗಳೊಡನೆಯೂ ಕಾಳಿಯ ಬಳಕೆ ಹೆಚ್ಚು.

ಕಾಳಿಯೆಂದು ಅದಕ್ಕೆ ಯಾರು ಹೆಸರಿಟ್ಟರೋ, ಅರಿಯೆ. ಎಲ್ಲರೂ ಕಾಳಿ ಕಾಳಿಯೆನ್ನುತ್ತಿದ್ದರಾದ್ದರಿಂದ ನಾವೂ ಕಾಳಿಯೆನ್ನುತ್ತಿದ್ದೆವು. ನಾವೇ ಸಾಕಿದ ನಾಯಿಯಾಗಿದ್ದರೆ, ಇಲ್ಲವೇ ನಾನೇ ಅದಕ್ಕೆ ಹೆಸರಿಡಬೇಕಾಗಿ ಬಂದಿದ್ದರೆ, ಇದಕ್ಕೂ ಅಂದವಾದ ಮತ್ತೊಂದು ಹೆಸರಿಡಬಹುದಾಗಿತ್ತು. ಆದರೂ ಕಾಳಿಯೆಂಬುದು, ಅಷ್ಟೇನು ಅಂದಗೆಟ್ಟ ಹೆಸರಲ್ಲ. ಆ ನಾಯಿಗೆ ಆ ಹೆಸರೇ ಹೆಚ್ಚು ಒಪ್ಪುತ್ತಿತ್ತು ಎನ್ನಬಹುದು. ಏಕೆಂದರೆ ಅಂಕಿತವಲ್ಲದೆ ಅದು ಅನ್ವರ್ಥಕವೂ ಆಗಿತ್ತು.

ದುರಗವ್ವ ದ್ಯಾಮವ್ವಗಳು ಊರಿಗೇ ಹೇಗೆ ಕಾವಲವೋ, ಹಾಗೆ, ಕಾಳಿಯು ನಮ್ಮ ಓಣೆಗೆ ಕಾವಲ. ಅದೊಂದು ಇದ್ದುದರಿಂದ ನಮ್ಮ ಓಣೆಗೆ ಅರ್ಧಚಿಂತೆಯೇ ಕಡಿಮೆಯಾಗಿತ್ತು. ಅಂತೂ ನಮ್ಮ ಓಣೆಯಲ್ಲಿ ಕಾಳಿಯಷ್ಟು ಮಹತ್ವದ ಪ್ರಾಣಿ ಇನ್ನೊಬ್ಬರಾರಾದರೂ ಇದ್ದರೋ ಇಲ್ಲವೋ ಹೇಳಲಾರೆ.

೨

ಧಾರವಾಡಕ್ಕೆ ಆಗ ಮಹಾಮಾರಿಯ ಪಿಡುಗು. ಪ್ಲೇಗು ಬಂದು, ಜನಗಳು ಅರಳುಹುರಿದಂತೆ ಪಟಪಟನೆ ಪುಟಿಯುತ್ತಿದ್ದರು. ಊರಲ್ಲಿ ಒಂದು ಪೇಟೆ, ಒಂದು ಕೇರಿ, ಒಂದು ಬೀದಿ, ಒಂದು ಓಣಿ, ಒಂದು ಸಂದಿ, ಒಂದು ಗೊಂದಿಯೆನ್ನದೆ ಎಲ್ಲೆಲ್ಲೂ ಪ್ಲೇಗುರಾಯಿತಿ ತಾಂಡವವಾಡುತ್ತಲಿದ್ದಳು. ಸೋಮಾರಿಗಳಾದರೂ, ಮುನಿಸಿಪಾಲಿಟಿಯವರು ತಮ್ಮ ಕುತ್ತಿಗೆಗೇ ಬಂದದ್ದರಿಂದ, ಮನಮುಟ್ಟಿ ಹೋರಾಡಿದರು. ಆ ಸಲ ನಮ್ಮ ಜಿಲ್ಲೆಯಲ್ಲಿಯೇ ಸರಕಾರದವರು ತೊಂಭತ್ತಾರು ಸಾವಿರ ರೂಪಾಯಿ ವೆಚ್ಚ ಮಾಡಿದರಂತೆ ಇಲಿಗಳನ್ನು ಕೊಲ್ಲುವುದಕ್ಕೆ. ಆದರೆ ಸಾವು ಯಾವುದಕ್ಕೂ ಹಣಿಯಲಿಲ್ಲ.

ಜನಗಳು ಒಂದು ಊರಿಂದ ಮತ್ತೊಂದು ಊರಿಗೆ ಹೋಗುವುದೂ ನಿರ್ಬಂಧ. ಜುಕ್ಮ ಜುಲುಮೆಯಿಂದ ಜನಗಳನ್ನು ಮನೆಯಿಂದ ಹೊರ ಹೊರಡಿಸುತ್ತಿದ್ದರು ಪೋಲಿಸಿನವರು. ಅದೆಷ್ಟೋ ಜನರು ಅದಕ್ಕಾಗಿ ಮುನಸಿಪಾಲಿಟಿಯವರೊಡನೆ

ಹೊಡೆದಾಡಿದರು ಸಹ. ಶುಕ್ರವಾರ ಪೇಟೆಯ ಒಬ್ಬ ಬ್ರಾಹ್ಮಣ ಮುದುಕನೇನೋ ಮನೆ ಬಿಡುವುದಕ್ಕೊಪ್ಪದೆ, ಅಧಿಕಾರಿಗಳೊಡನೆ ಹೊಡೆದಾಡಿ, ಜಡ್ಡೀಯವರ ಭಾವೀ ಹಾರಿಕೊಂಡು ಸತ್ತನಂತೆ.

ಊರಲ್ಲಿಯೇ ಊರಿಕೊಂಡಿರುವುದರಲ್ಲಿ ಜಾಣತನವೂ ಇರಲಿಲ್ಲ; ಉಪಯೋಗವೂ ಇರಲಿಲ್ಲ. ಊರ ಭಾವಿ ಕೆರೆಗಳಲ್ಲೆಲ್ಲ ಔಷಧ ಹಾಕಿಬಿಟ್ಟಿದ್ದರು. ಕಾರಣ ಜನರು ಊರ ಹೊರಗೆ ಜೋಪಡಿ ಗುಡಿಸಲು ಬಂಗಲೇಗಳಲ್ಲಿ ಸೇರಿಕೊಂಡಿದ್ದರು. ಪಟ್ಟಣೆಂತ ಪಟ್ಟಣವೆಲ್ಲ ಹಾಳು ಸುರಿಯುತ್ತಿತ್ತು. ಒಂದೊಂದು ಮನೆಯೂ, ಒಂದೊಂದು ಓಣಿಯೂ ರಾವು ಹೊಡೆಯುತ್ತಿದ್ದವು. ಓಣಿಯುದ್ದಕ್ಕೂ ಮನೆಗಳು ಕೀಲಿ ಬಿಗಿದುಕೊಂಡೇ ಇದ್ದವು. ಒಟ್ಟಾರೆ ಊರೆಲ್ಲ ವಿಧವೆಯ ಹಣೆಯಂತೆ, ತಲೆಯಂತೆ, ಹೇಮಂತಕಾಲದ ಹುಲ್ಲುಬನ್ನಿಗಳಂತೆ, ವಿರಹಿಗಳ ದಗ್ಧೋಚ್ಛಿಷ್ಟವಾದ ಹೃದಯದಂತೆ-ಭಣಗುಟ್ಟುತ್ತಿತ್ತು; ರಣಗುಟ್ಟುತ್ತಿತ್ತು.

ಎಲ್ಲರಂತೇ ನಾವೂ ಸಪ್ಪಾಪುರದಲ್ಲಿ ಬಂಗಲೆಯೊಂದನ್ನು ಬಾಡಿಗೆ ಹಿಡಿದುಕೊಂಡಿದ್ದೆವು. ಏನೋ ದೊಡ್ಡ ಸಂಸಾರ ಎಂದು ದೊಡ್ಡ ಮನೆಯನ್ನು ಹಿಡಿದದ್ದೇ ತಪ್ಪು. ಬಂದು ತುಂಬಿದರು, ಬಂಧುಗಳು, ಬಳಗದವರು, ಹತ್ತಿದವರು ಹೊಂದಿದವರು-ಪರಿಸ್ಥಿತಿಯೇ ಹಾಗಿತ್ತು. ಒಪ್ಪತ್ತು ತಂಗಿಕೊಳ್ಳಲಿಕ್ಕೆ ಚಪ್ಪರ ನೆರಳಾದರೂ ಸಿಕ್ಕೀತೇ ಎನ್ನುತ್ತಿತ್ತು ಜನವೆಲ್ಲ. ಕಣ್ಣಿಗೆ ರೆಪ್ಪೆ ಕೂಡ ಮರೆಯಾಗಿರದಂಥ ದುಸ್ಥಿತಿ. ಮಾಡುವದೇನು?

ಪ್ಲೇಗಿನ ಹಾವಳಿ ಹೇಳಲಿಕ್ಕಿಲ್ಲ. ಸತ್ತ ಜನಕ್ಕೆ ಅಳುವವರಾರೋ!- ಸುಟ್ಟು ಬರುವುದಕ್ಕೂ ದಿಕ್ಕಿಲ್ಲ. ನಮ್ಮ ಮನೆಯಲ್ಲೇ ಒಂದೇ ದಿನ ಐದು ಆಳು ಜೀವ ನೀಗಿದ್ದರು. ಯಾವಾಗ ಯಾರಿಗೆ ಏನೋ ಎಂದು ಹೆದರಿಕೆ. ನಮ್ಮವರನ್ನೇ ನಮ್ಮ ಹತ್ತಿರ ಬರಗೊಡಬೇಕಾದರೆ ಹತ್ತು ಸಲ ಹಿಂದುಮುಂದು ನೋಡಬೇಕಾಗುತ್ತಿತ್ತು. ಕೈಗೆ ಕಸ ಬಂದರೂ, ಹೆದರಿಕೆ-ಒಂದು ತಲೆ ನೊಂದರೂ ಹೆದರಿಕೆ-; ಒಮ್ಮೆ ಬಿಟ್ಟು ಎರಡುಸಲ ಬೈಲು ಕಡೆಗೆ ಹೋಗಬೇಕೆನಿಸಿದರೂ ಜೀವ ಕೆಳಗು ಮೇಲೆಯೆ-ನಾವೆಲ್ಲ

ಜೀವ ಕೈಯಲ್ಲಿ ಹಿಡಿದುಕೊಂಡು, ಬಾಯಲ್ಲಿ ಅಕ್ಕೀಕಾಳು ಹಾಕಿಕೊಂಡು, ಏನೋ ಮಾರಾಯಾ ಎಂದು ಎಲ್ಲ ಭಾರ ಆತನ ಮೇಲೇ ಹಾಕಿ ತಣ್ಣಗೆ ಕುಳಿತುಕೊಳ್ಳುತ್ತಿದ್ದೆವು. ದಿನದ ಅಡಿಗೆ ಊಟಗಳು ಸಹ ಒಂದೊಂದು ವಿಪತ್ತು.

ಊರಲ್ಲಿ ನಮ್ಮದು ಸ್ವಂತ ಮನೆ. ನಿಂತ ಕಾಲಮೇಲೆ, ಇದ್ದು ಬಿದ್ದದ್ದನ್ನೆಲ್ಲ, ದಿಕ್ಕೆಟ್ಟು ಒಗೆದು ಓಡಿ ಬಂದಿದ್ದೆವು. ಹೊರಡುವಾಗ ಸ್ಮೃತಿ ಯಾರಿಗೆ ! ಮನೆಮಕ್ಕಳನ್ನೆಲ್ಲಿ ಬಿಡುವೆವೋ ಎಂದು ಭಯ. ಮೇಲೆ ಪೋಲಿಸಿನವರ ಗಲಾಟೆ. ಹೀಗಾಗಿ ಮನೆಯೆಲ್ಲ ಕೆದರಿದ ತಿಪ್ಪಿಯ ಗ್ರುಂಡಿಯಂತಾಗಿಬಿಟ್ಟಿತು. ಅಲ್ಲದೆ ಊರಿಗೆ ಊರೆಲ್ಲ ತೆರವು. ಹಾಡೆ ಹಗಲು ದರೋಡೆ ಹತ್ತಿದರೂ ಯಾರೂ ಕೇಳುವಂತಿರಲಿಲ್ಲ. ಕಾರಣ ನಾವು ನಮ್ಮ ಮನೆಯ ಕಡೆಗೆ ಕಣ್ಣಿಟ್ಟುಕೊಂಡೇ ಇರಬೇಕಾಗಿತ್ತು.

ಮನೆಯನ್ನು ನೋಡಿಕೊಂಡು ಬರುವದಕ್ಕಾಗಲೀ, ಇಲ್ಲವೆ ಯಾವುದೊಂದು ಒಡವೆಯನ್ನು ತರುವದಕ್ಕಾಗಲೀ, ನಾನು ಆಸೆಗೆ ಬೇಸಿಗೆಗೊಮ್ಮೆ ಯಾದರೂ ಊರಲ್ಲಿ ಹೋಗಬೇಕಾಗುತ್ತಿತ್ತು. ಊರಲ್ಲಿ ಹೋದಾಗಲೂ ಬಹಳ ಹೊತ್ತು ನಿಲ್ಲುವಂತಿರಲಿಲ್ಲ. ಹೇಗೆ ನಿಲ್ಲಬೇಕು! ಎಷ್ಟೆಂದರೂ ಜೀವ;-ನೋಡಿ!

ಅಂದು ಬೃಹಸ್ಪತಿವಾರ. ಮನೆಗೆ ಹೋಗಿ ಕೆಲವು ಸಾಮಾನುಗಳನ್ನು ತರಬೇಕಾದ್ದರಿಂದ, ಬೆಳಗಿನಲ್ಲಿಯೇ ಕಾಲ್ಗಾಡಿ ಹತ್ತಿಕೊಂಡು ಊರ ಕಡೆಗೆ ಹೊರಟೆ.

ನಾನು ನಮ್ಮ ಓಣಿಯ ಪಶ್ಚಿಮ ಕೂಟಿನಲ್ಲಿರುವಾಗಲೇ ಪೂರ್ವದ ಕೂಟಿನಲ್ಲಿ ಕಾಳಿಯನ್ನು ಕಂಡೆ. ಆಗ ಒಮ್ಮೆಲೇ ನನ್ನ ಜೀವ ನಾಚಿಕೆಗೊಂಡಿತು. ನಾವು ಊರು ಬಿಡುವಾಗ ಕಾಳಿಯ ನೆನಪೇ ಇರಲಿಲ್ಲ. ಕಾಳಿಯು ಒಬ್ಬರ ಸೊತ್ತಾಗಿರಲಿಲ್ಲ. ಆ ಮನೆಯವರ ಸಂಗಡ ಹೋಗಿರಬಹುದು, ಈ ಮನೆಯವರ ಸಂಗಡ ಹೋಗಿರಬಹುದು ಎಂದು ಎಲ್ಲರೂ ಅದನ್ನು ಹಿಂದೆ ಬಿಟ್ಟಿದ್ದರು. ಹಾಗೇ ನಾವೂ ಮಾಡಿದ್ದೆವು. ಹಾಗಿಲ್ಲದಿದ್ದರೆ, ನಮ್ಮ ಓಣಿಯಲ್ಲಿ ನಾವೇಯೇಕೆ?-ಯಾರೇ ಆದರೂ ಅದರ ಜೋಪಾನವನ್ನು ಕೈಕೊಳ್ಳದಿರುತ್ತಿರಲಿಲ್ಲ. ಆದರೆ ನಮಗೆ ನಮ್ಮ

ಹಪಾಹಪಿ. ಹೊಗೆಹತ್ತಿದ ಜೇನ್ನೊಣಗಳಂತೆ ನಾವೆಲ್ಲ ಸಿಕ್ಕತ್ತ ಓಡಿಹೋಗಿದ್ದೆವು. ಅಂಥದರಲ್ಲಿ ನಮಗೆ ಕಾಳಿಯ ನೆನಪೆಲ್ಲಿಯದು!

ಹೀಗಾಗಿ, ನಮ್ಮ ಓಣಿಯ ಕಾಳಿ, ಆಗ ಇಡೀ ಊರಿನದೇ ಆಗಿ ದಿಕ್ಕು ತಪ್ಪಿ ಅನಾಥವಾಗಿದ್ದಿತು.

ನಾನು ನಮ್ಮ ಓಣಿಯಲ್ಲಿ ಹೋಗುತ್ತಿರುವಾಗ ಕಾಳಿ ನನಗೆ ಎದುರಾಗಿ ಓಡಿಬರುತ್ತಿತ್ತು. ನನ್ನನ್ನು ಕಂಡುದರಿಂದ `ಸ್ವಾಗತಕ್ಕಾಗಿ ಓಡಿ ಬರುತ್ತಿದೆ' ಎಂದುಕೊಂಡೆ.

ಸಾಯಕಲ್ಲನ್ನು ಕಟ್ಟೆಗೆ ಹೊಂದಿಸಿಟ್ಟು, ಜೇಬಿನಲ್ಲಿಯ ಕೀಲೀ ಕೈಯ ಸರದೊಳಗಿಂದ ಮುಂಚೆಯ ಬಾಗಿಲಿನ ಕೈಯನ್ನು ಹುಡುಕುತ್ತ ಮೆಟ್ಟಲುಗಳನ್ನು ಹತ್ತುತ್ತಿರುವಾಗ, ನಮ್ಮ ಮನೆಯಿಂದ ಸುಮಾರು ಒಂದು ನೂರಡಿ ದೂರದಲ್ಲಿ, ಓಡಿ ಬರುತ್ತಿರುವ ಕಾಳಿ ತಟ್ಟನೆ ನಿಂತುಕೊಂಡಿತು. ನಾನದನ್ನು ನೋಡಿದೆ. ಮುಂದಿನ ಗಳಿಗೆಯಲ್ಲಿಯೇ ಒಂದೆರಡು ಸಲ ಕೆಮ್ಮ ಹತ್ತಿತು. ಧಾರೆಯಾಗಿ ಜೊಲ್ಲು ಸುರಿಸುತ್ತ ಒಂದೇ ಸಮನೆ ಗಿರಿಗಿರಿ ತಿರುಗಹತ್ತಿತು. ಇನ್ನೊಂದು ಕ್ಷಣದಲ್ಲಿ ಮತ್ತೆ ಮೊದಲಿನಂತೆ ನಮ್ಮ ಮನೆಯ ಕಡೆಗೆ ಓಡಹತ್ತಿತು. ಆಗ ವಿಶೇಷವೇನೂ ಇಲ್ಲವೆಂದೆಂದುಕೊಂಡು, ಕೀಲೀ ತೆಗೆದುಕೊಂಡು ಮನೆಯ ಪ್ರತಿಯೊಂದು ಬಾಗಿಲನ್ನೂ, ಕಿಟಕಿಯನ್ನೂ ಮತ್ತೊಮ್ಮೆ ನೋಡಿ ಹೊರಟೆ.

ತಲೆಬಾಗಿಲಲ್ಲಿ ಬರುವ ಹೊತ್ತಿಗೆ-ಕಾಳಿ, ಕಾವಲಿಯ ಬಳಿಯಲ್ಲಿ ಬಿದ್ದುಕೊಂಡದ್ದನ್ನು ನೋಡಿದೆ. ಗಡಿಬಿಡಿಯಿಂದ ಹೇಗೋ ಮನೆಗೆ ಕೀಲಿಯನ್ನಿಕ್ಕಿ ಮೆಟ್ಟಲಿಳಿದು ಕೆಳಗೆ ಬಂದೆ.

ನಾನು ಬಂದುದನ್ನು ನೋಡಿ, ಕಾಳಿಯು ವಾಡಿಕೆಯಂತೆ ಮೇಲಕ್ಕೇಳಲಿಲ್ಲ; ಬಾಲವಾಡಿಸಲಿಲ್ಲ; ಕಣ್ಣೂ ಎತ್ತಲಿಲ್ಲ; ಮಿಸಿಕಾಡಲಿಲ್ಲ ಕೂಡ ಹಿರಿದ ನಾಲಿಗೆಯನ್ನು ಹಲ್ಲಿನಲ್ಲಿ ಕಚ್ಚಿ, ಒಸಡೆಗಳನ್ನು ಕಿಸಿದುಕೊಂಡು ಸತತವಾಗಿ ಜೊಲ್ಲು ಸುರಿಸುತ್ತ ಒಂದೇ ಉಸಿರಿನಲ್ಲಿ ತೇಕುತ್ತಿತ್ತು. ಕಣ್ಣುಗಳನ್ನು ಅರಳಿಸಿ ಕೆರಳಿಸಿ, ಕಾವಲಿಯ

ಕಡೆಗೇ ನಿಟ್ಟಿಸಿ ನೋಡುತ್ತಿತ್ತು. ಮುಂಗಾಲುಗಳಿಂದ ನೆಲವನ್ನು ಕೆದರುತ್ತ ಮುಂದೆ ಸರಿಯಲು ಹವಣಿಸುತ್ತಿತ್ತು. ಆದರೆ ಅದಕ್ಕೆ ಅಷ್ಟೊಂದು ತ್ರಾಣವಿರಲಿಲ್ಲ.

ಅದು ನಿಟ್ಟಿಸುವ ದಿಕ್ಕಿಗೆ ನಾನೂ ನೋಡಿದೆ. ಏನೂ ಕಾಣಲಿಲ್ಲ. ಕಾಲುವೆಯಲ್ಲಿ ಬಗ್ಗಿ ನೋಡಿದೆ; ಅಲ್ಲಿ ಮೂರು ಚಿಕ್ಕ ಮರಿಗಳು ಕಣ್ಣು ಮುಚ್ಚಿಕೊಂಡೇ ಕುಂಯಗುಡುತ್ತಿದ್ದವು. ಮನೆಯ ಮೆಟ್ಟಲಿನ ಕಲ್ಲುಗಳು ಮರೆಯಾಗಿದ್ದರಿಂದ ಕಾಳಿಗೆ ಅವು ಕಾಣುತ್ತಿರಲಿಲ್ಲ. ನಾನು ಮೂರು ಮರಿಗಳನ್ನು ಎತ್ತಿ ಅದರ ಮುಂದೆ ಹಾಕಿದೆ. ಒಡನೆ ಕಾಳಿಯು ದೈನಾಸಬಡುತ್ತ ಸಾಗರಬಿದ್ದು ಅವುಗಳನ್ನು ಮೂಸಲು ಯತ್ನಿಸಿತು. ಬಾಯ್ದೆರೆದು ಅವುಗಳನ್ನು ನೆಕ್ಕವಷ್ಟೂ ಪರಿಸ್ಥಿತಿಯಿರಲಿಲ್ಲ. ಮರಿಗಳು ಇನ್ನೂ ಕಣ್ಣು ತೆರೆದಿರಲಿಲ್ಲ. ಕುರುಡುತನದಲ್ಲೇ ಅವು ತಮ್ಮತಮ್ಮೊಳಗೆ ಹೊಕ್ಕಾಡುತ್ತಿದ್ದವು.

ನಾನು ನಿಂತಿರುವಷ್ಟರಲ್ಲಿ ಕಾಳಿಯು ತನ್ನ ಬಾಳಿನ ಆಚೆಯ ದಂಡೆಯನ್ನು ಸೇರಿತು. ಪ್ರಾಣ ಹೋದ ಮೇಲೂ, ನಿಡಿದಾಗಿ ಹಿರಿದ ಅದರ ಕಣ್ಣುಗಳು ಮರಿಯಲ್ಲಿ ನೆಟ್ಟುಕೊಂಡಿದ್ದವು. ಆ ಕಣ್ಣುಗಳ ಉನ್ಮಾದ ಭೀಷಣವಾದ ನೋಟವು, ಎಂದೆಂದಿಗೂ ಆ ಮರಿಗಳನ್ನೇ ನೋಡುತ್ತ ನಿಲ್ಲಬಹುದೆಂದು ಎನ್ನಿಸುವ ಹಾಗಿತ್ತು.

ಪ್ಲೇಗಿನ ಪಿಡುಗು, ಕಾಳಿಗೆ ವಿಷ ಹಾಕಿದ್ದರು. ನಾವು ಇರುವಾಗಲೇ ಕಾಳಿ ಗಬ್ಬವಾಗಿತ್ತು. ಸಾವಿಗೆ ಮೊದಲು, ಇದು ಬಹಳವಾದರೆ ಎರಡು ದಿನವಾಗಿದ್ದೀತು- ಅಷ್ಟೇ. ಓಣಿಯಲ್ಲಿ ಒಬ್ಬರೂ ಇಲ್ಲದಂತೆ ಹೋದ ಮೇಲೆ ಪಾಪ. ಕಾಳಿ-ಎಲ್ಲೆಲ್ಲಿ ತೊಳಲಿ ಬಳಲಿತ್ತೋ; -ಕೂಳಿಲ್ಲದೆ ಎಷ್ಟೆಷ್ಟು ಕಳವಳಿಸಿತ್ತೋ; - ಬಲ್ಲವರಾರು! ಮೇಲೆ ಪೂರ್ಣ ಗರ್ಭಿಣಿ. ಈದ ಮೇಲೂ, ಹಸಿವಿನ ಕಸಿವಿಸಿ ತಡೆಯಲಾರದೆ, ಮರಿಗಳನ್ನು ಬಿಟ್ಟೂ ಬಿಡಲಾರದೆ, ಅದು ಆಹಾರದ ಆಸೆಯಿಂದ ಅತ್ತಿತ್ತ ಹೋಗಿರಬಹುದು. ಯಮನಾಳುಗಳಂತೆ ಮುನಸೀಪಾಲ್ಟಿಯ ಸಿಪಾಯಿಗಳು, ವಿಷ ಬೆರಿಸಿದ ಆಹಾರವನ್ನಿಕ್ಕಿದಾಗ, ಅಷ್ಟು ದಿನವೆಲ್ಲ ನಮ್ಮ ಓಣಿಯವರು ಇಕ್ಕಿದ ಅನ್ನಕ್ಕಿಂತ ಸಾವಿರ ಪಾಲು ಹೆಚ್ಚಿನ ಸಂತೋಷದಿಂದ ಅದನ್ನು ಗಪಗಪನೆ ತಿಂದಿರಬಹುದು. ಆ ಮೇಲೆ, ಸಾವಿನ ಸೆಳೆತದ ಬಿಗುವು ಹೆಚ್ಚಾದಂತೆ ಮರಿಗಳ

ನೇನವಾಗಿ ಸತ್ತು ಕೆಟ್ಟು ಅವುಗಳೆಡೆಗೆ ಧಾವಿಸಿ ಓಡಿ ಬಂದಿರಬೇಕು. ಅದರೇನು ಆ ಜೀವಗಳು ಒಂದಕ್ಕೊಂದು ಎರವಾಗಲೇಬೇಕಿತ್ತು.

ಮರೆಯಿಂದ ಹೊರಕ್ಕೆ ತೆಗೆದು ಮರಿಗಳನ್ನು ಮುಂದಿರಿಸಿದೊಡನೆ ಆವರೆಗೂ ನನ್ನನ್ನು ಕಣ್ಣೆತ್ತಿ ನೋಡದ ಕಾಳಿ ಒಮ್ಮೇ ಒಮ್ಮೆ ಗುಡ್ಡೆಗಳನ್ನರಳಿಸಿ ನನ್ನನ್ನು ಮಾಲಿಸಿತು. ಆ ಮೇಲೆ ಮರಿಗಳಲ್ಲಿ ನೆಟ್ಟಹೋದ ಅದರ ನೋಟ ಮತ್ತೆ ಅಲುಗಲಿಲ್ಲ.

ನಾನು ಎಷ್ಟೋ ಹೊತ್ತು ಏನೇನೋ ವಿಚಾರಿಸುತ್ತ ನಿಂತಲ್ಲೇ ನಿಂತು ಬಿಟ್ಟೆ. ಏನು ಮಾಡುವುದಕ್ಕೂ ಕೈಯೇಳಲಿಲ್ಲ. ಕೆಲವೊಂದು ಕಾಲ ಕಳೆದ ಮೇಲೆ, ನಾನು ನಿಂತಿರುವಾಗಲೇ ಇಬ್ಬರು ಪೋಲಿಸರು ಹಾದು ಹೋದರು. ನಾನು ಹಾಗೇ ಇದ್ದೆ.

ಕೊನೆಗೆ ನಿರ್ಧಾರ ಮಾಡಿದೆ ಮರಿಗಳನ್ನು ಒಯ್ಯುವದೆಂದು. ಆವರೆಗೆ ಮರಿಗಳಲ್ಲೇ ನಿಂತು ಹೋದ ಕಾಳಿಯ ನೋಟವನ್ನು ನೋಡಿ ಅವುಗಳನ್ನು ಮುಟ್ಟುವದೇ ನನ್ನಿಂದ ಆಗಿರಲಿಲ್ಲ. ಮುಟ್ಟಿದರೆ ಕಾಳಿಯು ನನ್ನನ್ನು ಸಾವಿರ ಚೂರಾಗಿ ಹರಿದು ಬಿಡಬಹುದಲ್ಲವೇ ಎನ್ನುವ ಹಾಗಿತ್ತು ಅದರ ನೋಟ.

ನಾನಿನ್ನು ಮರಿಗಳನ್ನೆತ್ತಿಕೊಳ್ಳುವವ; ಅಷ್ಟರಲ್ಲಿ, ಹಿಂದಿನಿಂದ ಕಠೋರ ಗಂಭೀರವಾದ ದನಿಯೊಂದು ಕೇಳಬಂತು. ``ರಾಯರ, ರಾಯರ-ಮುಟ್ಟಬೇಡಿರಿ''; ಹಿಂಜರಿದು ಹಿಂದುರಿಗಿ ನೋಡಿದೆ; ಆಗಲೆ ಹೋದ ಪೋಲೀಸರು. ನಾನು ಸುಮ್ಮನೆ ನಿಂತಿರುವಾಗಲೇ ಅವರಿಬ್ಬರೂ ನನ್ನ ಪೂಜೆ ಮಾಡತೊಡಗಿದರು. ``ಪ್ಲೇಗಿನ ದಿನ, ಹೊಲಸು ಪ್ರಾಣಿಗಳನ್ನು ಮುಟ್ಟಲು ತಿಳಿಯುವದಿಲ್ಲವೇ-ನೀವು ಕಲಿತವರು, ತಿಳಿದವರು-ಹೀಗೆ ಮಾಡಿದರೆ ಸುಂಕ ಹಬ್ಬೀತೆಂಬ ಎಚ್ಚರಿಲ್ಲವೇ'' ಹಾಗೆ-ಹೀಗೆ-ಏನೇನೊ-! ನಾಚಿಕೆ ಹೆದರಿಕೆಯಿಂದ ನನ್ನ ಮನಸ್ಸು ಮುದುಡಿತು. ನಿಂತ ಕಾಲ ಮೇಲೆಯೇ ಅವರು ನನ್ನನ್ನು ಅಲ್ಲಿಂದ ದಾಟ ಹಾಕಿ ಬಿಟ್ಟರು. ನಿರುಪಾಯನಾಗಿ ಸಾಯುಕಲ್ಲು ಕೈಯಲ್ಲಿ ಹಿಡಿದುಕೊಂಡೇ ಹೊರಟೆ.

ನಾನು ಮತ್ತೊಮ್ಮೆ ಹೋದಾಗ ಆ ಮರಿಗಳು ಅಲ್ಲಿರಲಿಲ್ಲ.

* * * * *

ನಾನು ಮರಿಗಳನ್ನು ಮನೆಗೆ ತಂದಿದ್ದರೆ-ನಮ್ಮ ಮನೆಯವರೆಲ್ಲ ಪ್ಲೇಗು ಬಂದು ಸಾವಿಗೆ ತುತ್ತಾಗುತ್ತಿದ್ದರೋ-ಯಾರು ಬಲ್ಲರು!

ಏನೇ ಆದರೂ ಮನುಷ್ಯಜೀವ ಪರಮಾತ್ಮನ ಸೃಷ್ಟಿ, ನಿರ್ಮಾಣ ಕೌಶಲದ ಮುಕುಟಮಣಿಯಲ್ಲವೇ! ಅದನ್ನು ಯಾವ ಬಗೆಯಿಂದಲೂ ಕಾಯ್ದುಕೊಳ್ಳದಿದ್ದರೆ ಆತನಿಗೆ ಅಪಮಾನ.

ಡಿಸೆಂಬರ ೧೯೨೯

# ನಂದಾ ದೀಪ

## ೧

ಗಂಗಮ್ಮನವರು ಚಿಕ್ಕಂದಿನಲ್ಲೇ ಗಂಗಾಭಾಗೀರಥಿಯಾದರು. ಅಂದಿನಿಂದ ಅವರು ಒಬ್ಬಂಟಿಯಾಗಿರುತ್ತಿದ್ದರು. ಹೆಣ್ಣಿಗೆ ತೌರು ಗಟ್ಟಿಯಿರಬೇಕಂತೆ. ಅವರಿಗೆ ಹಾಗಿರಲಿಲ್ಲ. ಆದರೆ ಗಂಡನ ಮನೆತನವು ಸ್ಥಿತಿವಂತಿಕೆಯುಳ್ಳದ್ದು. ಮನೆತನದಲ್ಲಿ ಉಣ್ಣಲು ಉಡಲು ಕೊರತೆಯಿಲ್ಲ. ಗಂಡನಿಲ್ಲದುದೊಂದೆ ಕೊರತೆ. ಇನ್ನುಳಿದವರು ಇಲ್ಲದ್ದು ಕೊರತೆಯಲ್ಲ; ಒಂಮ ಬಗೆಯ ನೆರತೆಯೇ.

ಇದ್ದ ಕೆಲವು ದಿನ ಗಂಡಹೆಂಡಿರು ನೆಮ್ಮದಿಯಾಗಿದ್ದರು. ವಿಧವೆಯಾದ ಮೇಲೆ ಗಂಗಮ್ಮನವರು ದುಕ್ಕವನ್ನು ಹೇಗೋ ನುಂಗಿಕೊಂಡು ಇರುತ್ತಿದ್ದರು. ಹೊಲದ ಉತ್ಪನ್ನ ವರ್ಷಕ್ಕೆ ಏಳೆಂಟು ನೂರದಷ್ಟು ಬರುತ್ತಿತ್ತು. ಮೇಲೆ ವಿಮೆ ಇಳಿಸಿದ ಆರುಸಾವಿರ ಬ್ಯಾಂಕಿನಲ್ಲಿ ಇಡುಗಂಟಾಗಿತ್ತು. ಒಬ್ಬರೇ ಒಬ್ಬರು. ಹಿಂದಿಲ್ಲ ಮುಂದಿಲ್ಲ. ಆದುದರಿಂದ ಸಂಸಾರದ ಇನ್ನುಳಿದ ತಾಪತ್ರಯಗಳು ಗಂಗಮ್ಮನವರನ್ನು ಕಾಡುತ್ತಿರಲಿಲ್ಲ.

ಗಂಗಮ್ಮನವರು ಕಲಿತವರು. ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿಯೂ ಒಂದೆರಡು ವರ್ಷ ಕಳೆದಿರಬೇಕೆಂದು ಕಾಣುತ್ತದೆ. ಇತ್ತೀಚೆ ಇಂಗ್ಲೀಷನ್ನೂ ಅಕ್ಷರಮಟ್ಟಿಗೆ ಕಲಿತುಕೊಂಡಿದ್ದರು. ತಮ್ಮ ಕಲಿಕೆಯ, ತಮ್ಮ ಅವಕಾಶದ, ತಮ್ಮ ದುಡ್ಡಿನ ಸದುಪಯೋಗವಾಗಬೇಕೆಂದು ಅವರ ಬಲವಾದ ಹಂಬಲ ಅದಕ್ಕಾಗಿ, ಅವರು ವಿಧವೆಯಾದ ಮೇಲೆ ಹೆಚ್ಚಾಗಿ ಸಮಾಜಸೇವೆಯ ಕಾರ್ಯದಲ್ಲಿ ಮನಸ್ಸು

ಹಾಕಿದ್ದರು. ಅವರ ಸತತ ಪ್ರಯತ್ನದಿಂದಲೇ ಊರಲ್ಲಿ ``ಸತ್ಸೇವಾಸಂಘ" ವೊಂದು ಸ್ಥಾಪಿತವಾಗಿತ್ತು. ಎಷ್ಟೋ ಹೆಣ್ಣುಮಕ್ಕಳನ್ನು ಕಲೆಹಾಕಿ, ಅವರಿಗೆ ಓದುಬರಹವನ್ನು ಹೇಳಿಕೊಡುವದು, ಗೃಹಕೃತ್ಯದ ವಿಶೇಷಗಳನ್ನು ತಿಳಿಸಿಕೊಡುವದು, ದೇಶದ ಸುದ್ದಿಗಳನ್ನು ಓದಿ ತೋರಿಸುವದು ಇಂತಹ ಕೆಲಸಗಳಲ್ಲಿ ಅವರು ಯಾವಾಗಲೂ ತೊಡಗಿರುವರು.

ಹೀಗೆ ಪತಿವಿರಹದಿಂದ ಸಂತಪ್ತವಾದ ಅವರ ಹೃದಯವು ಸಮಾಜಹಿತದ ಕೆಲಸಗಳಲ್ಲಿ ಮುಳುಗಿ ತನ್ನ ನೋವನ್ನು ಮರೆಸಿಕೊಂಡು ಬಿಟ್ಟಿತು. ಅವರು ಇತ್ತೀಚೆ ಹಿಂದಿನ ದುಕ್ಖದಿಂದ ನರಳುತ್ತಿರಲೇ ಇಲ್ಲ. ತಮ್ಮ ಪಾಲಿಗೆ ಬಂದ ಪರಿಸ್ಥಿತಿಯನ್ನು ಅವರು ಮನಃಪೂರ್ವಕವಾಗಿ ಒಪ್ಪಿಕೊಂಡು ಬಿಟ್ಟಿದ್ದರು. ಅದಕ್ಕಾಗಿ ದೈವವನ್ನೂ ಹಳಿಯುತ್ತಿರಲಿಲ್ಲ. ತಂದೆತಾಯ್ಗಳ ಮೇಲೂ ಹರಿಹಾಯುತ್ತಿದ್ದಿಲ್ಲ. ಇಲ್ಲದ ನೆವದ ನೆರಳಾಟಕ್ಕೆ ಇಂಬುಗೊಡುತ್ತಲೂ ಇರಲಿಲ್ಲ.

ಗಂಗಮ್ಮನವರು ಯಾವಾಗಲೂ ತಾವೇನೊ ತಮ್ಮ ಕೆಲಸವೇನೋ ಎಂದು ಇರುತ್ತಿದ್ದರು. ಇಲ್ಲದ ಒಣ ಉಸಾಬರಿಗೆ ಅವರು ಯಾವಾಗಲೂ ಹೋಗುತ್ತಿರಲಿಲ್ಲ. ತಮ್ಮ ಸತ್ಸೇವಾಸಂಘದ ಸಾಮಗ್ರಿಗಳನ್ನು ಕೈಯಲ್ಲಿ ಅವಚಿಕೊಂಡು ಗಂಗಮ್ಮನವರು ತಮ್ಮಷ್ಟಕ್ಕೆ ತಾವು ಬೀದಿಯ ಮಗ್ಗಲನ್ನು ಹಿಡಿದು ಹೋಗುತ್ತಿದ್ದರೆ, ಶಾರದ ಮೇಘಗಳು ಮುಗಿಲಿನೋರೆಗುಂಟ ಸಾಗಿದಂತೆ ಕಾಣಿಸುವದು.

ಕೆಂಪುಕೆರೆಯ ಎದುರಿನಲ್ಲೇ ಗಂಗಮ್ಮನವರ ಮನೆ. ಬಲು ದಿನಗಳಿಂದಲೂ ಅವರು ಅಲ್ಲಿಯೆ ಇದ್ದರು. ಮನೆಯು ಅಷ್ಟು ದೊಡ್ಡದಲ್ಲ ಅಷ್ಟು ಚಿಕ್ಕದೂ ಅಲ್ಲ; ಹವಣೆಯದು. ಆದರೂ ಮನೆಯಲ್ಲಿರುವವರು ಗಂಗಮ್ಮನವರು ಒಬ್ಬರೇ ಆದುದರಿಂದ ಮನೆಯು ಹೆಚ್ಚು ಬರಿಬರಿದಾಗಿ ಕಾಣುತ್ತಿತ್ತು. ಗಂಗಮ್ಮನವರ ಅಚ್ಚುಕಟ್ಟುತನ, ಓರಣಗಳಿಂದ ಮನೆಯ ಮೋರೆಯ ಮೇಲೆ ಒಂದು ಬಗೆಯ ಶಾಂತ ಗಂಭೀರವಾದ ಕಳೆಯಿತ್ತು. ಬರಿದಾದರೂ ಮನೆ ರಣಗುಟ್ಟುತ್ತಿರಲಿಲ್ಲ.

೨

ಒಂದು ದಿನ ಒಂಭತ್ತು ಗಂಟೆಯ ಕಡೆಗೆ, ಗಂಗಮ್ಮನವರು ಸತ್ಸೇವಾಸಂಘದ

ಕೆಲಸಬೊಗಸೆಗಳನ್ನು ಮುಗಿಸಿಕೊಂಡು ತಮ್ಮ ಮನೆಯತ್ತ ನಡೆದಿದ್ದರು. ಅವರ ಮನೆಯ ಬಾಗಿಲ ಬಳಿಯಲ್ಲಿಯೇ ಕೆಲಜನರದೊಂದು ಗುಂಪು ನೆರೆದಿತ್ತು. ನಡುವೆ ಒಬ್ಬ ಪೋಲೀಸನು ಒಂದು ಮಗುವನ್ನೆತ್ತಿಕೊಂಡು ನಿಂತಿದ್ದ. ಮಗುವಿನ ಒಂದು ಕೈಯಲ್ಲಿ ಫೇಡೆಯೂ ಇನ್ನೊಂದರಲ್ಲಿ ಒಂದು ಬಾಳೆಯ ಹಣ್ಣೂ ಇದ್ದಿತು. ಆಗ ಮಗುವು ಅಳುತ್ತಿರಲಿಲ್ಲವಾದರೂ, ಗಲ್ಲದ ಮೇಲೆ ಕಣ್ಣೀರಿನ ಗೆರೆಗಳು ನಿಚ್ಚಳವಾಗಿ ಕಾಣುತ್ತಿದ್ದವು. ಮೇಲೆ ಮೇಲೆ ಒರೆಸಿದ್ದರಿಂದ ಕೆನ್ನೆಗಳ ಮೇಲೆ ಹೊಲಸಿನ ಕಲೆಗಳುಂಟಾಗಿದ್ದವು. ಕಣ್ಣುಗಳು ಊದಿಕೊಂಡಂತಿದ್ದವು. ಮೂಗೂ ಹೊಲಸಾಗಿತ್ತು. ಪೋಲೀಸನ ಕೈಯಲ್ಲಿ ಕುಳಿತುಕೊಂಡು ಮಗುವು ಆಗಾಗ ತನ್ನ ಕೈಯ ಹಣ್ಣನ್ನು ಕಡಿದುಕೊಳ್ಳುತ್ತ ಸುತ್ತಲೂ ಬೆಪ್ಪು ಬೆಪ್ಪಾಗಿ ನೋಡುತ್ತಿತ್ತು. ಯಾರಾದರೂ ಏನಾದರೂ ಕೇಳಿದರೆ ತೊದಲು ನುಡಿಯಲ್ಲೇ ಒಂದೆರಡು ಮಾತು ಏನನ್ನೊ ಹೇಳುತ್ತಿತ್ತು.

ಗಂಗಮ್ಮನವರು ಹತ್ತಿರ ಹೋಗುತ್ತಲೇ ಪೋಲೀಸನು `ತಾಯೀ' ಈ ಹುಡುಗನ ಗುರುತು ನಿಮಗೇನಾದರೂ ಸಿಕ್ಕಿತೇ' ಎಂದು ಕೇಳಿದ. ಗಂಗಮ್ಮನವರು ಚನ್ನಾಗಿ ದಿಟ್ಟಿಸಿ ನೋಡಿ ಇಲ್ಲವೆಂದರು. ಅಷ್ಟೊತ್ತಿಗೆ ಕೂಸು ಗಂಗಮ್ಮನವರೆಡೆಗೆ ಕೈ ನೀಡಹತ್ತಿತು. ಮರುಕಗೊಂಡು ಗಂಗಮ್ಮನವರು ಮಗುವನ್ನೆತ್ತಿಕೊಂಡು ಕೇಳಿದರು :-

``ಮಗು, ನೀನು ಯಾರ ಹುಡುಗನೋ''

``ಕಾಕಾ''

``ನಿಮ್ಮಪ್ಪನ ಹೆಸರೇನು''

``ಕಾಕಾ''

``ಅವ್ವನ ಹೆಸರು''

``ಅಕ್ಕ''

``ಅವ್ವೆಲ್ಲಿದ್ದಾಳಪ್ಪಾ''

``ಕಾಕಾ''

``ಕಾಕಾಯೆಲ್ಲಿದ್ದಾನಪ್ಪ''

``ಬೋ''

ಮಗುವಿನ ಮಾತು ಕೇಳಿ ಗಂಗಮ್ಮನವರಿಗೆ ಮರುಕ ಮರುಕೊಳಿಸಿತು. ``ಅಕ್ಕನ ಕಡೆಗೆ ಹೋಗೋಣಾ' ಎಂದು ಮಗುವಿಗೆ ಹೇಳಲು ಅದು ಗೋಣು ಹಾಕುತ್ತ ಫೇಡೆ ತಿನ್ನಹತ್ತಿತು. ಗಂಗಮ್ಮನವರು ಕೂಸು ತಮ್ಮ ಹತ್ತಿರ ಇರಲೆಂದೂ, ಕೂಸಿನ ತಂದೆತಾಯ್ಗಳನ್ನು ಹುಡುಕಿ ತಮಗೆ ತಿಳಿಸುವದಾಗಿಯೂ ಪೋಲೀಸನಿಗೆ ಹೇಳಿ, ಮಗುವನ್ನು ಮನೆಯಲ್ಲಿ ಕರೆದುಕೊಂಡು ಹೋದರು.

ಹುಡುಗನು ಅತ್ತು ಮೋರೆಯ ಕಳೆಕೆಟ್ಟಿತ್ತು. ಗಂಗಮ್ಮನವರು ಮೊದಲು ಆತನ ಮೋರೆ ತೊಳೆಸಿದರು. ನಂತರ, ಸ್ವಲ್ಪ ಹಾಲು ಸಕ್ಕರೆ ಕುಡಿಸಿ, ಕೈಯ್ಯಲ್ಲೊಂದು ಉಂಡಿಯನ್ನು ಕೊಟ್ಟು, ಒಂದು ಪುಸ್ತಕದೊಳಗಿನ ಪಾಪಾ ತೋರಿಸುತ್ತ ಪಡಸಾಲೆಯಲ್ಲಿ ಬಾಗಿಲೆದುರಿಗೇ ಕುಳಿತುಕೊಂಡರು.

ಹುಡುಗ ಎಲ್ಲಾ ಮರೆತು ಪಾಪಾ ನೋಡುವುದರಲ್ಲಿ ತೊಡಗಿದ. ನೋಡ ನೋಡುತ್ತ ಒಂದು ಪುಸ್ತಕ ಮುಗಿಯಿತು; ಎರಡು ಪುಸ್ತಕ ಮುಗಿಯಿತು; ಮೂರು; ನಾಲ್ಕು; ಕೊನೆಗೆ ಕೂಸು ತಾನೇ ಎದ್ದು ಗಂಗಮ್ಮನವರ ಪುಸ್ತಕಗಳನ್ನೆಲ್ಲಾ ಕಿತ್ತಿ ಹಾಕುತ್ತ, ಪಾಪಾ ಹುಡುಕಿ ಹುಡುಕಿ ಗಂಗಮ್ಮನವರಿಗೆ ತಾನೇ ತೋರಿಸಹತ್ತಿದ.

ಇಷ್ಟೊತ್ತಿಗೆ ``ಕವಳಿಹಂಣು ಬೇಕೇನಬೇ ಕವಳೀ ಹಣ್ಣೂ-'' ಬಂತು. ಗಂಗಮ್ಮನವರು ಮಗುವಿಗೆ ಕೊಂಡುಕೊಟ್ಟರು. ಹುಡುಗರ ಹಿಂಡು ಸುತ್ತುಗಟ್ಟಿಕೊಂಡು ಪೀಪೀಯವನು ಬಂದ. ಮಗುವಿಗೊಂಡು ಪೀಪೀ ದೊರೆಯಿತು. ಅದನ್ನು ಊದಿ ಊದಿ ಕೂಸು ಕುಣಿದಾಡತೊಡಗಿತು.

ಹೊತ್ತು ಹನ್ನೊಂದಾಯಿತು. ಅಷ್ಟೊತ್ತಿನಲ್ಲಿ ಏನಾದರೂ ಸುದ್ದಿ ಬಂದೀತೆಂದು ಗಂಗಮ್ಮನವರು ದಾರೀ ಕಾಯುತ್ತಲೇ ಇದ್ದರು. ಪಾಪ, ಯಾರ ಮಗನೋ-; ಎಲ್ಲಿ ಹೇಗೆ ತಪ್ಪಿಸಿಕೊಂಡಿತೋ-; ತಂದೆ ತಾಯಿಗಳೆಷ್ಟು ಕಳವಳಿಸುತ್ತಿರಬಹುದೋ ಎಂದು

ಅವರ ಎದೆಗುದಿ. ಇತ್ತ ಹುಡುಗ ಎಲ್ಲವನ್ನೂ ಮರೆತು ಅರಿಯದವರಾದರೂ ತಮ್ಮ ಹತ್ರ ಮುಗ್ಧನಾಗಿ, ಸಹಜ ರಮಣೀಯತೆಯನ್ನು ಬೀರುತ್ತ ಮುದ್ದು ಮುದ್ದಾಗಿ ಆಡುತ್ತಿರುವುದನ್ನು ಕಂಡು ಒಂದು ತೆರದ ಪ್ರೇಮ; ಒಂದು ತರದ ಮರುಕ. ಹೀಗಾಗಿ ಅವರ ಮನಸ್ಸಿನಲ್ಲಿ ಸಮಾಧಾನವಿಲ್ಲದಾಯಿತು. ಒಂದೆರಡು ಸಲ ಹುಡುಗನನ್ನು ಎತ್ತಿಕೊಂಡು ಸುತ್ತಲಿನ ಓಣಿಗಳಲ್ಲಿ ತಿರುಗಾಡಿಯೂ ಬಂದರು.

ಹೊತ್ತು ಹನ್ನೆರಡರ ಮನೆಗೆ ಬಂತು. ಪೋಲೀಸನೂ ಬರಲಿಲ್ಲ. ಇನ್ನು ಹೀಗೆ ಹೊತ್ತು ಹೋಗುತ್ತಿದ್ದರೆ ಹುಡುಗನ ಗತಿಯೇನು ಎಂದು ಗಂಗಮ್ಮನವರಿಗೆ ಡವಡವಿಕೆ ಹತ್ತಿತು. ಆಗ ಹುಡುಗನಿನ್ನೂ ಹಟ ತೆಗೆದಿದ್ದಿಲ್ಲ. ತಾಯ್ತಂದೆಗಳನ್ನೂ ನೆನೆಸಿರಲಿಲ್ಲ. ಆದರೆ ಎಷ್ಟು ಹೊತ್ತು ಹಾಗೆ ಇರಬಲ್ಲದು ಎಳೆಮಗು? ಈ ಚಿಂತೆಯಿಂದ ದಿನದ ಹೊತ್ತು ಮೀರಿಹೋಗಿದ್ದರೂ ಅವರು ಒಲೆಹೊತ್ತಿಸುವ ಎತ್ತುಗಡೆ ಮಾಡಿರಲೇ ಇಲ್ಲ. ಕೊನೆಗೆ ಹುಡುಗ ಹಸುಕೊಂಡೀತೆಂದು ಆತನನ್ನು ಎತ್ತಿಕೊಂಡೇ ಒಲೆಹೊತ್ತಿಸಿ ಎಸರಿಗಿಟ್ಟು, ಆತನೊಡನೆ, ಆ ಮಾತು ಈ ಮಾತು ಹೇಳುತ್ತ, ಆಡುತ್ತ ಕುಳಿತುಕೊಂಡರು. ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲವಾದ್ದರಿಂದ ನಡು ನಡುವೆ ಎದ್ದು ಹೊರಗೆ ಹಣಿಕಿಹಾಕಿ ಬರುತ್ತಿದ್ದರು. ಯಾರದೂ ಸುಳಿವಿಲ್ಲ.

ಅಡಿಗೆಯಾಗಲು ಮಗುವಿನ ಊಟವಾಯಿತು. ನಂತರ ಗಂಗಮ್ಮನವರೂ ತುತ್ತು ಊಟಮಾಡೋಣವೆಂದು ಕುಳಿತರು. ಮಗು ಅಲ್ಲಿಯೇ ಬಿದ್ದ ಇದ್ದಲಿಯೊಂದನ್ನು ತೆಗೆದುಕೊಂಡು ಗೋಡೆಯ ಮೇಲೆ ತನ್ನ ಕಲಾನೈಪುಣ್ಯವನ್ನು ಪ್ರದರ್ಶಿಸುತ್ತಲಿದ್ದ. ಗಂಗಮ್ಮನವರು ನಾಲ್ಕು ತುತ್ತು ಬಾಯಲ್ಲಿ ಹಾಕಿದ್ದರೋ ಇಲ್ಲವೋ ಮುಂಚೆಯ ಬಾಗಿಲು ಧಡಮ್ಮೆಂದಿತು. ಗಂಗಮ್ಮನವರು ಊಟ ಬಿಟ್ಟೇ ಮಗುನನ್ನು ಬಗಲಲ್ಲಿ ಅವಚಿಕೊಂಡು ಬಾಗಿಲಿಗೆ ಧಾವಿಸಿದರು.

ಬಾಗಿಲು ತೆರೆಯಲು, ಪೋಲೀಸಿನವ. ಆತನೊಬ್ಬನೇ ಬಂದದ್ದರ ಅರ್ಥ ಗಂಗಮ್ಮನವರಿಗೆ ತಿಳಿಯಲಿಲ್ಲ. ಮುಂದೆ, `ಆವರೆಗೆ ಆ ಹುಡುಗನ ಮನೆಯವರ ವಿಚಾರವೇನೂ ತಿಳಿಯಲಿಲ್ಲವೆಂದೂ, ಸುತ್ತಲೂ ನಾಲ್ಕೈದು ಠಾಣೆಗಳಿಗೆ ವರದಿ

ಕೊಟ್ಟಿರುವದೆಂದೂ, ಸಾಯಂಕಾಲ ತಾನು ಮತ್ತೊಮ್ಮೆ ಬರುವುದಾಗಿಯೂ' ಆ ಪೋಲೀಸನು ಹೇಳಿಹೋದ.

ಗಂಗಮ್ಮನವರ ಮನಸ್ಸು ತೆರೆದು ಮುಚ್ಚಿದಂತಾಯಿತು. ಯಾವದೋ ಭಾವನೆಯು ತೇಲಿಬರಲು ಅವರು ಮಗುವಿನ ಮೋರೆಯನ್ನು ನೋಡಿದರು; ಹುಡುಗ ಮುಗ್ಧ; ಅವರ ಮುಂದಲೆಯ ಸೆರಗು ಸರಿಸಿ ಕಿವಿಗಳನ್ನು ಹಿಡಿದುಕೊಳ್ಳುವುದರಲ್ಲಿದ್ದ.

ತಿರುಗಿ ಒಳಗೆ ಬಂದು ಹುಡುಗನನ್ನು ಮುಂದಿಟ್ಟುಕೊಂಡು ಕುಳಿತರು. ಆಡುತಾಡುತ್ತಲೇ ಹುಡುಗ ಆಕಳಿಸಿದ. ಗಂಗಮ್ಮ ಹಾಸಿಗೆ ಹಾಸಿ ಮಲಗಿಸಿ, ಕೆಲಹೊತ್ತು ಚುಕ್ಕೊಬಡಿಯುತ್ತ ಬಳಿಯಲ್ಲೇ ಕುಳಿತುಕೊಂಡರು. ಹುಡುಗನಿಗೆ ನಿದ್ದೆಹತ್ತಲು ಆತ ಕೈಯಲ್ಲಿ ಹಿಡಿದುಕೊಂಡಿದ್ದ ಆಳಸಿಂಗಾಚಾರ್ಯರ ರಾಮಾಯಣ ತೆಗೆದುಕೊಂಡು ಓದುತ್ತ ಕುಳಿತರು.

ಒಂಬತ್ತು ತಾಸಿನ ಸುಮಾರಕ್ಕೆ ಹುಡುಗ ನಿದ್ದೆಯಿಂದ ಎದ್ದು ಕುಳಿತು ಕಣ್ಣುತಿಕ್ಕಿಕೊಳ್ಳುತ್ತ ಹೊದ್ದುಕೊಂಡದ್ದರಲ್ಲಿ ಕಾಲುತೊಡಕಿಸಿಕೊಂಡು ಚಟಪಟ ಮಾಡಹತ್ತಿದ.

ಗಂಗಮ್ಮನವರು ಕೈಲಿದ್ದ ಕೆಲಸಬಿಟ್ಟು, ಮಗುವನ್ನೆಬ್ಬಿಸಿ ಮೋರೆತೊಳೆದು, ಸ್ವಲ್ಪ ಬಿಸಿ ಬಿಸಿ ಸೀಸಪ್ಪಿಗೆ ಮಾಡಿ ತಿನಿಸಿ ಹಾಲು ಕುಡಿಸಿದರು. `ಬಹಳ ಹೊತ್ತಾಯಿತು; ಇನ್ನು ಹುಡುಗ ಹಟತೆಗೆಯದಿರಲಾರ' ಎಂದು ಗಂಗಮ್ಮನವರ ಎಣಿಕೆ. ಆದರೆ ಅವರ ಎಣಿಕೆತಪ್ಪಿ, ಹುಡುಗ ಮತ್ತೆ ಮೊದಲಿನಂತೆ ಆಡಲು ತೊಡಗಿದ್ದನ್ನು ನೋಡಿ ಗಂಗಮ್ಮನವರಿಗೆ ಹಿಡಿಸಲಾರದಷ್ಟು ಸೋಜಿಗವಾಯಿತು.

ಗಂಗಮ್ಮನವರಿಗೆ ಆವೊತ್ತು ದಿನದ ಕೆಲಸಗಳೆಲ್ಲ ತಪ್ಪಿದವು. `ಸಂಘ'ದ ಕೆಲಸವು ಕೂಡ ಹಿಂದೆ ಬಿತ್ತು.

ಮೂರೂ ಸಂಜೆಗೆ ಮತ್ತೊಮ್ಮೆ ಹುಡುಗನನ್ನೆತ್ತಿಕೊಂಡು ಪೇಟೆ ಕೋಟೆಗಳನ್ನೆಲ್ಲಾ ಸುತ್ತಿ ಕಂಡಕಂಡವರನ್ನೆಲ್ಲಾ ಕೇಳಿಯಾಡಿ ಬಂದದ್ದಾಯಿತು, ಪತ್ತೆಯಿಲ್ಲ.

ಇರುಳು ಕವಿಯಿತು. ಗಂಗಮ್ಮನವರಿಗೆ ಏನು ಮಾಡುವುದಕ್ಕೂ ಹೊಳೆಯದಾಯಿತು. ಹುಡುಗನಿಗೆ ಊಟಮಾಡಿಸಿ, ಮಲಗಿಸಿದರು. ಮಧ್ಯಾಹ್ನದ ಅರೆ-ಊಟದಿಂದಲೇ ಇದ್ದ ಅವರು ಮತ್ತೇನನ್ನೂ ತೆಗೆದುಕೊಳ್ಳಲಿಲ್ಲ ಕೂಡ.

ರಾತ್ರಿ ಹತ್ತಾಯಿತು. ಉಪಾಯಗಾಣದೆ, ಗಂಗಮ್ಮನವರು ಮಗುವನ್ನು ಮಗ್ಗುಲಲ್ಲಿ ಮಲಗಿಸಿಕೊಂಡು ಮಲಗಿಕೊಂಡರು. ಎಷ್ಟೋ ಹೊತ್ತು ಅವರಿಗೆ ನಿದ್ದೆ ಬರಲೇ ಇಲ್ಲ.

ಇನ್ನು ಜಂಪು ಹತ್ತುವದು; ಅಷ್ಟರಲ್ಲೇ ತಲೆಬಾಗಿಲು ಧಡಮ್ಮೆಂದಿತು. ಮತ್ತೆ ಗಂಗಮ್ಮನವರು ಧಾವಿಸಿ ಬಾಗಿಲು ತೆಗೆದರು; ಪೋಲೀಸ; ಆತನ ಹಿಂದೆ ಇಬ್ಬರು ಗಂಡಸರು. ಪೋಲೀಸನು ಅವರ ಪರಿಚಯ ಮಾಡಿಕೊಟ್ಟು, ಮಗು ಅವರದೆಂದು ಹೇಳಿದ. ಗಂಗಮ್ಮನವರು ಅವರನ್ನು ಒಳಗೆ ಕರೆದು ಕುಳ್ಳಿರಿಸಿದರು. ಮಲಗಿದ ಮಗುವನ್ನು ಎಬ್ಬಿಸಲು ಮನಸ್ಸುಬಾರದು. ಬಂದವರು ಒತ್ತಾಯಪಡಿಸಿದ್ದರಿಂದ ಉಪಾಯಗಾಣದೆ ಕೂಸನ್ನು ಎಬ್ಬಿಸಿದರು. ಅರೆನಿದ್ದೆಯಾದ್ದರಿಂದ ಕೂಸು ಏಳುತ್ತಲೇ ದೊಡ್ಡದನಿ ತೆಗೆದು ಅಳಹತ್ತಿತು.

ಬಂದವರೂ, ಗಂಗಮ್ಮನವರೂ ಹುಡುಗನನ್ನು ರಮಿಸಿದ ಮೇಲೆ ಹುಡುಗ ಪೂರಾ ಎಚ್ಚೆತ್ತು `ಮಾಮಾ' `ಮಾಮಾ' ಎನ್ನುತ್ತ ಬಂದವರಲ್ಲೊಬ್ಬರ ಹೆಗಲನ್ನೇರಿ ಕುಳಿತ.

ಗಂಗಮ್ಮನವರು ``ಮಗುವನ್ನು ಬೆಳಿಗ್ಗೆ ಕರೆದುಕೊಂಡು ಹೋಗುವಿರಂತೆ; ಈಗ ನೀವೂ ಇಲ್ಲೇ ಇದ್ದು ಬಿಡಿರಿ-ಅಪರಾತ್ರಿ-'' ಎಂದು ಬಂದವರಿಗೆ ಹೇಳಿಕೊಂಡರು. ಅವರು ಕೇಳಲಿಲ್ಲ.

ನೆರೆಹೊರೆಯ ಮನೆಯವರು ಬಂದವರಿಗೆ ``ಎಂಥ ಎಚ್ಚರಗೇಡಿಗಳು ನೀವು? ಚಿಕ್ಕ ಮಗುವನ್ನು ಹೀಗೆ ಬಿಡಲು ತಿಳಿಯುವದಿಲ್ಲವೇ? ಪರವೂರು ಎನ್ನುವಿರಿ ಎಂದ ಮೇಲೆ ನಿಮ್ಮ ಮಕ್ಕಳ ಅರಿವಿರಬಾರದೇ ನಿಮಗೆ'' ಎಂದು ಸಿಟ್ಟು ಮಾಡಿದರು. ಗಂಗಮ್ಮನವರು ಏನೂ ಎನ್ನಲಿಲ್ಲ. ಹೋಗುವ ಕೂಸನ್ನು ಹಿಂಬಾಲಿಸಿ ತಲೆಬಾಗಿಲಿನ ಹೊಸ್ತಿಲವರೆಗೆ ಹೋಗಿ ನಿಂತುಕೊಂಡರು.

ಮಾವನ ಹೆಗಲ ಮೇಲೆ ಕುಳಿತು, ತಮ್ಮ ಮನೆಯ ಕಡೆಗೇ ಮೋರೆಮಾಡಿ, ದೂರ ಹೋಗುತ್ತಿದ್ದಂತೆಯೇ ಮಗುವು ತಮ್ಮನ್ನು ಕೈಮಾಡಿ ಕರೆಯುತ್ತಿದ್ದದ್ದು, ಗಂಗಮ್ಮನವರಿಗೆ ಮನೆಯೆದುರಿನ ಗ್ಯಾಸಲಾಯಿಟಿನ ಬೆಳಕಿನಲ್ಲಿ ಎಷ್ಟೋ ಹೊತ್ತಿನವರೆಗೂ ಕಾಣುತ್ತಲೇ ಇದ್ದಿತು.

೩

ಅಲ್ಲೆಲ್ಲಿಯೋ ಮದಿಹಾಳದಲ್ಲಿ ಅವರ ಮನೆಯಂತೆ. ಗಂಗಮ್ಮನವರು ಹುಡುಕಿಕೊಂಡು ಹೋದರು. ಆದರೆ ಆ ಮಗುವು ಮದುವೆಗಾಗಿ ಬಂದಿತ್ತೆಂದೂ, ಮದುವೆ ಮುಗಿದೊಡನೆ ತಂದೆತಾಯಿಗಳೊಡನೆ ಹೈದ್ರಾಬಾದಿಗೆ ಹೋಗಿ ಎಂಟುದಿನವಾಯಿತೆಂದೂ ಸುದ್ದಿ ತಿಳಿಯಿತು. ಗಂಗಮ್ಮನವರಿಗೆ ಮೋರೆಯ ಮೇಲೆ ಹೊಡೆದಂತಾಯಿತು. ಆನೆಯಷ್ಟು ಕೆಲಸ ತಮ್ಮ ಮೈಮೇಲೆ ಬಿದ್ದಿರಲು ಅದನ್ನೆಲ್ಲ ಬಿಟ್ಟು, ತಾವು ಅಷ್ಟು ದೂರ ಏತಕ್ಕಾಗಿ ನಡೆದು ಬಂದರೆಂಬುದರ ಅರ್ಥವು ಅವರಿಗೆ ತಿಳಿಯದಾಯಿತು. ಮಗುವು ಯಾರದೋ! ತಾವು ಯಾರೋ!! ಇದೇನು ಮರಳು! ಮುನ್ನೋಡಿ ತಮ್ಮ ಕೆಲಸವೇನೋ ತಾವೇನೋ ಇರಬಾರದೇ!!!- ಎಂದುಕೊಳ್ಳುತ್ತ ತಲೆ ತಗ್ಗಿಸಿಕೊಂಡು ಹಿಂದಿರುಗಿದರು. ಸಂಗಡ ಲೈನಪೇಟೆಯ ಪೇಡೆ ಒಯ್ದಿದ್ದರು. ಅದನ್ನು ತಂದದ್ದೇಕೆ? ಏತಕ್ಕೆ? ಯಾರಿಗೆ? ಈಗದನ್ನೇನು ಮಾಡಬೇಕು? ಯಾರಿಗೆ ಕೊಡಬೇಕು? ದಾರಿಯಲ್ಲಿ ಬರುವ ಮಕ್ಕಳಿಗೆ ಕೊಟ್ಟುಬಿಡಬೇಕೆಂದರೆ ಕೈಯೇ ಏಳಲಿಲ್ಲ. ಬರುಬರುತ್ತಾ ಏನು ತಿಳಿಯಿತೋ, ಕೈಯಲ್ಲಿದ್ದ ಪುಡಿಕೆಯನ್ನು ಮದಿಹಳ್ಳದ ಪೂಲಿನ ಕಟ್ಟೆಯ ಮೇಲಿಟ್ಟು, ಹಿಂದಿರುಗಿ ಕೂಡ ನೋಡದೆ ಭರ ಭರನೆ ಮನೆಗೆ ಬಂದುಬಿಟ್ಟರು.

೪

ಹುಡುಗನನ್ನು ಕಂಡುಬರಲು ಹೋದವರು ತೆರವು ಎದೆಯಿಂದ ತಿರುಗಿ ಬಂದರು. ಎಂದೂ ಇಲ್ಲದೆ, ಅಂದು ಮನೆಯೆಲ್ಲ ಭಣಗುಟ್ಟ ಹತ್ತಿತು; ರಣಗುಟ್ಟ

ಹತ್ತಿತು. ಆ ಹುಡುಗ ಹರಪಿ ಹೋದ ಹಾಳಿ ಪುಸ್ತಕಗಳು ಇನ್ನು ಕೆಲವು ಹಾಗೇ ಇದ್ದವು. ಅವುಗಳನ್ನೆತ್ತಿ ಮತ್ತೆ ಮೊದಲಿನಂತೆ ಓರಣದಿಂದ ಇಡುವದಾಗಲೆ ಇಲ್ಲ. ಮನೆಯಲ್ಲಿ ಮನದಲ್ಲಿ ಎಲ್ಲೆಲ್ಲಿಯೂ ನಿರುತ್ಸಾಹ.

ಗಂಗಮ್ಮನವರು, ಹೀಗೆ ಸೋಮಾರಿತನದಿಂದಿದ್ದರೆ ಸರಿಯಲ್ಲ; ಸತ್ರೀಮಾಸಂಘಕ್ಕಾದರೂ ಹೋದರಾಯಿತೆನ್ನುವರು. ಆದರೆ ಅಲ್ಲಿಯ ಕೆಲಸ ಬೊಗಸೆಗಳು ಮೊದಲಿನಂತೆ ಮನಸ್ಸು ಹಿಡಿಯುತ್ತಿರಲಿಲ್ಲ. ಅಲ್ಲಿ ಬಂದ ಎಷ್ಟೋ ಮಕ್ಕಳು `ಅಕ್ಕಾ' `ಅಕ್ಕಾ' ಎಂದು ಹತ್ತಿರ ಬಂದರೆ ಅವರೆಲ್ಲರನ್ನು ಮೊದಲಿನಂತೆ ಎತ್ತಿಕೊಳ್ಳಬೇಕು ಎಂದು ಮನಸ್ಸು ಹರಿದರೂ, ಮತ್ತೆ ಬಲವಂತದಿಂದ ಹೇಗೋ ಮುದುಡಿಕೊಂಡು ಹಿಂದಿರುಗುವರು.

ಗಂಗಮ್ಮನವರ ಹೊಟ್ಟೆಯಲ್ಲಿ ಬಲುದಿನಗಳಿಂದ ಹತ್ತೊತ್ತಿ ಹುದುಗಿಕೊಂಡಿದ್ದ ಯಾವುದೋ ಒಂದು ನಿರ್ವ್ಯಾಜ ವೇದನೆಯು ಮೂಡಿ, ಹಬ್ಬಿ, ಅವರ ಲೋಕವನ್ನೇ ವ್ಯಾಪಿಸಿತ್ತು.

೫

``ಹೈದ್ರಾಬಾದು ಎಷ್ಟೋ ದೂರ; ಹೋಗಬೇಕೇ? ಹೋದರೆ ಜನರು ಹುಚ್ಚಿಯೆನ್ನಲಿಕ್ಕಿಲ್ಲವೇ ನನಗೆ. ಅಥವಾ ಆ ಮನೆಯವರಿಗಾದರೂ ನನ್ನದೇನು ಗುರುತು? ಏನು ಸಂಬಂಧ? ಅವರೇಕೆ ನನ್ನನ್ನು ಹಚ್ಚಿಕೊಳ್ಳುವರು-! ಇಷ್ಟಾಗಿ ಆ ಕೂಸು ಸಹ ನನ್ನ ಗುರುತು ಹಿಡಿಯಲಿಕ್ಕಿಲ್ಲ. ಎರಡು ಮೂರು ವರ್ಷದ ಮಾತು. ಹುಡುಗ ಬೆಳೆದು ದೊಡ್ಡದಾಗಿದ್ದೀತು. ಈಗ ಹೇಗಿರುವದೋ ಏನೋ- ನಾನು ಅಂದು ನೋಡಿದಂತೆ, ನನ್ನ ಕಣ್ಣೆದುರಿಗೆ ದಿನಾಲು ಕಟ್ಟುವಂತೆ, ಆ ಹುಡುಗನ ರೂಪು ಇರಲಿಕ್ಕಿಲ್ಲವಲ್ಲವೇ? ಬಹಳ ಬದಲಾಗಿ ಬಿಟ್ಟಿದ್ದೀತು. ನಾನು ಕೂಡ ಅವರ ಗುರುತು ಹಿಡಿಯಲಾರದೆ ಹೋಗಬಹುದು. ಎಂದ ಮೇಲೆ ನಾನು ಹುಚ್ಚಿಯಂತೆ ಹೈದ್ರಾಬಾದಕ್ಕೆ ಹೋಗಿಯಾದರೂ ಮಾಡುವದೇನು-" ಎಂಬ ವಿಚಾರಗಳಲ್ಲೇ ಗಂಗಮ್ಮನವರು ಸರ್ವದಾ ಮುಳುಗಿಬಿಟ್ಟಿದ್ದಾರೆ.

೬

ಇತ್ತೀಚೆ, ತಮ್ಮ ಜೀವನದ ಮುಖ್ಯ ಧ್ಯೇಯವೆಂದು ಇಟ್ಟುಕೊಂಡ `ಸತ್ಸೇವಾಸಂಘ'ದಲ್ಲೂ ಗಂಗಮ್ಮನವರ ಜೀವ ಆಡಲೊಲ್ಲದು. ಸಮಾಜ ಸೇವೆಯೆಂಬ ವಿಚಾರದಿಂದ ಅವರು ತಮ್ಮ ಮನಸ್ಸನ್ನೇ ತೆಗೆದುಬಿಟ್ಟಿದ್ದಾರೆ. ಅವರ ಜೀವ ಏನನ್ನೆಳಸುತ್ತಿದೆಯೋ ಬಲ್ಲವರಾರು?

ಗಂಗಮ್ಮನವರು ಈಗಲೂ ಬೀದಿ ಹಿಡಿದು ತಿರುಗುತ್ತಲಿರುವರು. ಆದರೆ ಅವರ ಚಿತ್ತ ಮೊದಲಿನಂತೆ ಒಂದೇ ಬಗೆಯಲ್ಲಿ ಮುಳುಗಿ ಪ್ರಶಾಂತವಾದಂತೆ ಇಲ್ಲ. ಅವರ ಮೋರೆಯ ಮೇಲಿನ ಕಳೆಯು ಮಳೆಗಾಲದ ಮೋಡಗಳಂತೆ ಪ್ರಕ್ಷುಬ್ಧವಾಗಿ ತರಂಗ ತರಂಗವಾಗಿ ಹೊಯ್ದಾಡುವಂತೆ ಕಾಣುತ್ತಿದೆ. ಅವರ ತರಲವಾದ ಕಣ್ಬೆಳಕು ಸುತ್ತಲೂ ಹಂಚಿ ಹರಿದಾಡಿ ಏನನ್ನೋ ಏನನ್ನೋ ಹುಡುಕುತ್ತಿರುವಂತಿದೆ. ಯಾವವಾದರೂ ಹುಡುಗರು, ಎಲ್ಲಾದರೂ ತಪ್ಪಿಸಿಕೊಂಡು ತೊಳಲಾಡುತ್ತಿದ್ದಾವಾದೀತೇ ಎಂದು ಆ ಸಹಜ ಶೂನ್ಯ ನಯನಗಳು ಅತ್ತಿತ್ತ ಅರಸುತ್ತಿದ್ದಾವಾದೀತು. ಹೀಗೆ ಈ ಬಗೆಗಳ ಗಡಿಬಿಡಿಯಲ್ಲಿ ಅವರ ಹೃದಯ ಎಲ್ಲಿ ತಪ್ಪಿಸಿಕೊಂಡು ಹೋಗಿರುವದೋ ಏನೋ-!!!

(ಮೇ ೧೯೩೦)

# ಗುಬ್ಬಿಗಳ ಸಂಸಾರ

ಸಾಹಿತ್ಯವು ಜನಜೀವನದ ಪಡಿನೆಳಲೆಂದು, ತಿಳಿದವರು ಹೇಳುವದುಂಟು. ಈ ಮಾತನ್ನೇ ಇನ್ನೂ ಸ್ವಲ್ಪ ಹಿಂಜಿ ನೋಡಿದರೆ, ಇಡೀ ಜೀವನವೇ ಸಾಹಿತ್ಯಕ್ಕೆ ಮೂಲಬಿಂಬವಾಗಬಹುದೆಂಬುದು ತೋರುವದು. ಮಾನವ ಜೀವನದಲ್ಲಿ ಹೇಗೋ ಹಾಗಾಯೇ ಇನ್ನುಳಿದ ಪ್ರಾಣಿಕೋಟಿಗಳ ಜೀವನದಲ್ಲಿಯೂ ಒಂದೊಂದು ಬಗೆಯ ರಸಸಂವಿಧಾನವಿದೆ. ಆದರೆ ಮಾನವನು ತನ್ನ ಸಂಸಾರದ ಸುಖದುಃಖಗಳ ಸಂಕೋಲೆಯಲ್ಲಿ ಸಿಕ್ಕಿಬಿದ್ದು ಅದರಿಂದ ಪಾರುಗಾಣದೆ ನರಳುತ್ತಿರುವಾಗ, ಆತನಿಗೆ ತನ್ನ ಜೀವನದ ರಸನಿಮಿಷಗಳ ಆನಂದವನ್ನೇ ಅನುಭವಿಸುವದು ಆಗದು; ಅಂತಹದರಲ್ಲಿ, ಆತ ಇನ್ನುಳಿದ ಜೀವಿಗಳ ಸುಖದುಃಖಗಳಿಗಾಗಿ ಹಿಗ್ಗು-ಕುಗ್ಗುವ ಗೋಜಿಗೆ ಹೋಗಲಾರ.

ಆದರೆ ಸಂಸಾರದ ಅನಂತಯಾತನೆಗಳಿಂದ ನೊಂದುಬೆಂದು, ತಾಪ ಪರಿಪೂತರಾದ ರಸಜೀವಿಗಳಿಗೆ ವಿಶ್ವವೆಲ್ಲವೂ ತಮ್ಮದೇ ಒಂದು ಬಳಗವಾಗಿ ತೋರದಿರದು. ಅಂಥವರಿಗೆ ವಿಶ್ವಶಕ್ತಿಯ ಕೈತಾಲದೊಂದಿಗೆ ಕುಣಿಯುವ ಚಿಕ್ಕೆ ಚಂದ್ರಮರಿಂದ ಹುಲ್ಲು-ಹಣಜಿಯವರೆಗೆ ಈ ಸೃಷ್ಟಿಯ ಅಣುರೇಣುಗಳಲ್ಲೆಲ್ಲಿಯೂ ಮನುಷ್ಯಜೀವನದಷ್ಟೇ ಮಹತ್ತರವಾದ ಒಂದೊಂದು ಚರಿತ್ರಾಂಶವು ಕಂಡುಬರುವದು.

೧

ನನ್ನ ಮದುವೆ ಶಿರೂರಿನಲ್ಲಿ ನಡೆಯಿತು. ನಮ್ಮ ಬಳಗ ದೊಡ್ಡದು. ಅಂತೆಯೇ ನಮ್ಮನ್ನೆಲ್ಲ ಒಂದು ದೊಡ್ಡ ಮನೆಯಲ್ಲಿ ಇಳಿಸಿದ್ದರು. ಅದಕ್ಕೆ

ಮನೆಯೆನ್ನುವದಕ್ಕಿಂತ, ಒಂದು ವಠಾರ, ಇಲ್ಲವೆ ವಾಡೆ ಎಂದರೆ ಹೆಚ್ಚು ಒಪ್ಪೀತು. ಅದೇನು ಅಂಥಿಂಥ ಮನೆಯಲ್ಲ; ಈಗಿನ ಪಟ್ಟಣಿಗರ ಲೆಕ್ಕದಂತೆ ಹತ್ತು ಹನ್ನೆರಡು ಸಂಸಾರಗಳು ಅಲ್ಲಿ ನೆಮ್ಮದಿಯಾಗಿ ಇರಬಹುದು. ಸಾಮಾನ್ಯವಾಗಿ, ಆ ಮನೆಯಲ್ಲಿ, ಒಬ್ಬಿಬ್ಬರೇಕೆ? -ಹತ್ತು ಹನ್ನೆರಡು ಜನರು ಸಹ ಇರಲು ಹೆದರಬಹುದು. ಮೇಲುಪ್ಪರಿಗೆಗೆ ಹೋಗುವಾಗ ಜೋಡಿಲ್ಲದೆ ಯಾರೂ ಹೋಗುವಂತಿರಲಿಲ್ಲ.

ಮನೆ ಬಹಳ ಹಳೆಯಕಾಲದ್ದು. ಹಳೆಯವಾಗಿ ಇಲ್ಲಣ ಹತ್ತಿ ಕಪ್ಪುಗಟ್ಟಿದ ತೊಲೆಜಂತೆಗಳು, ಒಬ್ಬೊಬ್ಬರ ತೆಕ್ಕೆಗೂ ಅಮರದಂಥ ಕಂಬಗಳು, ಮಾರು ಮಾರು ದಪ್ಪವಾದ ಗೋಡೆಗಳು, ಗುದ್ದು ಮೊಳದಾಳದ ಗೂಡುಗಳು, ಜೇಡರ ಹುಳುಗಳ ಜಾಳಿಗೆಗಳಿಂದೊಪ್ಪುವ ಮೂಲೆಗಳು, ಮುಸುಕುಗತ್ತಲೆಯ ಕೋಣೆಗಳು, ಇವೆಲ್ಲ ಆ ಮನೆಗೆ ಒಂದು ಬಗೆಯ ಭೀಕರತೆಯನ್ನುಂಟು ಮಾಡಿದ್ದವು. ಅಲ್ಲದೆ, ಭವ್ಯವಾದ ಅಂಗಳ, ವಿಶಾಲವಾದ ಹಿತ್ತಲ, ಆ ಹಿತ್ತಲ ತುಂಬಾ ತರಗೆಲೆಗಳ ತಳಿಹಾಕುವ ಒಂದೆರಡು ಹುಣಸೆ-ಬೇವಿನ ಮರಗಳು, ಹಿತ್ತಲ ಗೋಡೆಯಾಚೆಗಿನ ಅಗಳತ, ಅದಕ್ಕೆ ಹೊಂದಿ ಅರ್ಧ ಹಾಳಾಗಿ ನಿಂತ ಹೂಡೆ- ಇವುಗಳೆಲ್ಲ ಆ ಮನೆಯ ಭೀಷಣತೆಗೆ ರಂಗು ಹೊಯ್ದಂತೆ ಇದ್ದವು.

ಇರುಳು ಮಲಗಿಕೊಂಡರೆ, ಜಂತೆಗಳಲ್ಲೋಡಾಡುವ ಇಲಿಗಳ ಕಿರಿಚಾಟದಿಂದಲೂ, ಅವುಗಳ ಓಡಾಟಕ್ಕೆ ಉದುರುವ ಮಾಳಿಗೆಯ ಮಣ್ಣಿನ ಸಪ್ಪಳದಿಂದಲೂ, ಮೂಲೆ ಮೂಲೆಗಳಲ್ಲೆಲ್ಲ ಮನೆಮಾಡಿಕೊಂಡಿದ್ದ ಹಲ್ಲಿಗಳ ಲೊಚಲೊಚ ಶಬ್ದದಿಂದಲೂ, ಹಿತ್ತಲ ಗಿಡಗಳಲ್ಲಿ ನೆಲೆನಿಂತ ತೊಗಲಬಾವುಲಿಗಳ ಚೀರಾಟದಿಂದಲೂ, ಅಲ್ಲಿ ಇದ್ದಷ್ಟು ದಿನವೆಲ್ಲ ನಿದ್ದೆಗೇಡಾದ ನಮ್ಮೆದೆಗಳು ಬರೀ ಡವಡವಿಸುತ್ತಿರುವದೇ! ಇಂಥ ರೌದ್ರನಿವಾಸವು ನಮಗೆ ಮದುವೆಯ ಮನೆಯಾಗಿತ್ತು!

೨

ನಾವು ಇಳುಕೊಂಡ ಆ ಮನೆಗೆ ಒಂದು ಮೇಲುಪ್ಪರಿಗೆ. ಅದರ ಮೊಗಸಾಲೆಯ ಮುಂಬದಿಗೆ ಒಂದು ಲೋವಿ. ಅದರ ಚೆಟ್ಟಿನ ಒಳಮಗ್ಗಲು ಒಂದು ಬಿರುಕಿನಲ್ಲಿ

ಒಂದು ಗುಬ್ಬಿಯಜೋಡು ಮನೆಮಾಡಿಕೊಂಡಿದ್ದಿತು. ಆ ಗುಬ್ಬಿಗಳಿಗೆ ಅದೇ ಹೊಸದಾಗಿ ಹುಟ್ಟಿದ ಎರಡು ಮಕ್ಕಳು. ಅವುಗಳಿಗಾಗಿ ಆ ಗುಬ್ಬಿಗಳೆರಡೂ ಮೆತ್ತನ್ನ ಹುಲ್ಲುಕಡ್ಡಿಗಳಿಂದ ಸೊಗಸಾದ ಗೂಡನ್ನೊಂದು ಕಟ್ಟಿದ್ದವು.

ಆ ಮನೆಗೆ ಹೋದ ದಿನವೇ ಆ ಗುಬ್ಬಿಗಳ ಸಂಸಾರವು ನನ್ನ ಮನವನ್ನೆಳೆಯಿತು. ನನ್ನ ಬಾಳುವೆಯ ಗಾಳಿಗೋಪುರಕ್ಕೆ ಕಳಸವನ್ನಿಡುತ್ತಲಿದ್ದ ನನಗೆ ಆಗ ಎಲ್ಲ ಬಗೆಯ ಸಂಸಾರವೂ ಒಂದೊಂದು ಸೊಬಗಿನ ಬೀಡೆಂಬಂತೆ ಎನಿಸುತ್ತಿದ್ದಿತು. ಆ ಗುಬ್ಬಿಗಳ ಸಂಸಾರವೂ ನನ್ನ ಹರೆಯದ ಸವಿಗನಸುಗಳಿಗೆ ಬಣ್ಣ ಬರೆಯುವಂತೆ ತೋರಲು ನಾನು ಅವುಗಳ ಕಾರ್ಯಕಲಾಪಗಳನ್ನು ಕಣ್ಮನಗಳು ತಣಿಯುವಂತೆ ನೋಡಿ ನೋಡಿ ನಲಿಯುತ್ತಿದ್ದೆ. ಹಿರಿಯ ಗುಬ್ಬಿಗಳು ತಮ್ಮ ಮರಿಗಳನ್ನು ಲಲ್ಲೆಗೈಯುವದು, ಅವಕ್ಕೆ ಗುಟುಕು ಕೊಡುವದು, ಅವನ್ನು ಮುಂಡಾಡಿ ಸಂತೈಸುವದು, ಅವುಗಳಿಗಾಗಿ ಹೊಸ ಹೊಸ ತಿನಿಸನ್ನು ತಂದುಕೊಡುವದು ಮೊದಲಾದ್ದನ್ನೆಲ್ಲ ನೋಡುತ್ತಿದ್ದ ನನಗೆ, ಅವುಗಳ ಸಂಸಾರವು ಒಂದು ಮನುಷ್ಯ ಸಂಸಾರದಂತೆಯೇ ತೋರತೊಡಗಿತು.

ಹಿರಿಯ ಗುಬ್ಬಿಗಳೆರಡೂ ತಮ್ಮ ತಮ್ಮೊಳಗೆ ಚಿಲಿಪಿಲಿಗುಟ್ಟುತ್ತಿರುವಾಗ - ಗಂಡಹೆಂಡಿರಾದ ಮನುಷ್ಯರಿಬ್ಬರು ``ನಾನು ಕಛೇರಿಗೆ ಹೋಗಬೇಕು; ಬೇಗ ಅಡಿಗೆ ಮಾಡು." - ``ಸರಿ, ಪೇಟೆಯಿಂದ ಕಾಯಿಪಲ್ಯವನ್ನೆ ತರದಿದ್ದರೆ ಅಡಿಗೆ ಏನು ಮಾಡಲಿ, ನನ್ನ ತಲೆ" - ``ಆಗಲಿ; ಹಾಗಾದರೆ ಪೇಟೆಯಿಂದ ಬರುವಾಗ ಮಗುವಿಗೆ ಏನು ತರಲಿ."- ``ಹೌದು, ನನ್ನ ಕೂಸಿಗೆ ಮೊನ್ನೆ ನೋಡಿದ್ದ ಚೇನು ತೆಗೆದುಕೊಂಡು ಬರ್ರಿ"..... ಎಂದು ಮುಂತಾಗಿ ಮುದ್ದು ಮಾತಾಡುತ್ತಿರುವಂತೆ ನನಗೆ ಎನಿಸುತ್ತಿತ್ತು. ನೋಡುತ್ತ ನಿಂತಿರುವಂತೆ, ಅದಾವದೋ ಒಂದು ತನ್ಮಯತೆಯು ನನ್ನ ತನುವಿನಲ್ಲಿಳಿಯಲು, ನಾನೇ ಆ ಗಂಡು ಗುಬ್ಬಿಯಂತೆಯೂ ನನ್ನ ಕನಸುಗಳ ರಾಣಿಯಾಗಿ ಬೆಳಗಾದರೆ ನನ್ನ ಕೈ ಹಿಡಿಯಲಿರುವವಳೇ ಆ ಹೆಣ್ಣು ಗುಬ್ಬಿಯಂತೆಯೂ, ನಮ್ಮಿಬ್ಬರ ಭಾಗ್ಯದ ಬೆಳಕಿನಂತೆ ಮುಂದೆ ಹುಟ್ಟಿ ಬರಲಿರುವ ನಮ್ಮ ಮಕ್ಕಳೇ ಆ

ಚಿಕ್ಕ ಗುಬ್ಬಿ ಮರಿಗಳಂತೆಯೂ ಭಾವನೆಯಾಗಲು, ನನ್ನ ಹೃದಯವು ತನ್ನಲ್ಲಿ ತಾನೇ ನಲಿದಾಡುವದು.

೩

ನಾವು ಶಿರೂರಿಗೆ ಹೋದ ಮರುದಿನ ನಾನು, ಅಪ್ಪಣ್ಣ, ಅನಂತ, ನಮ್ಮ ಅಬಚಿಯ ಗಂಡ ಶೇಷಪ್ಪ, ನನ್ನ ಕಕ್ಕನ ಮಗ ಲಕ್ಷ್ಮಣ, ನನ್ನ ಹಿರಿಯ ಭಾವ ವೆಂಕಟರಾಯ ಇಷ್ಟು ಜನವೆಲ್ಲ ಸೇರಿ ಮೇಲಟ್ಟದ ಮೊಗಸಾಲೆಯಲ್ಲಿ ಮಲಗಿಕೊಂಡಿದ್ದೆವು. ವಾಡಿಕೆಯಂತೆ ಇಲಿ, ಹಲ್ಲಿ, ತೊಗಲಬಾವುಲಿಗಳ ತೊಂದರೆಯೆಲ್ಲವೂ ಸಾಗಿಯೆ ಇತ್ತು. ಆದರೂ ಹತ್ತು ತರದ ಗಡಿಬಿಡಿಯಿಂದ ದಣಿದ ಕಾರಣ ಎಲ್ಲರಿಗೂ ಗಾಢನಿದ್ರೆ. ಜಿದ್ದು ಕಟ್ಟಿದಂತೆ ಒಬ್ಬರಿಗಿಂತ ಒಬ್ಬರು ಹೆಚ್ಚಾಗಿ ಗೊರಕೆ ಹೊಡೆಯುವವರೇ.

ಆದರೆ, ನನ್ನ ಸಂಸಾರ ಸ್ವರ್ಗದ ಶಚಿದೇವಿಯಾಗಬೇಕಾದವಳ ಚಿಂತನೆಯಲ್ಲಿ ತೊಡಗಿದ ನನಗೆ ಮಾತ್ರ ಉಳಿದವರಷ್ಟು ಬೇಗ ನಿದ್ದೆ ಬಾರದಿದ್ದು ಸ್ವಾಭಾವಿಕವೇ ಸರಿ. ಆದರೂ ಸರಿರಾತ್ರಿಗೆ ಹಾಯಾಗಿ ತನ್ನಷ್ಟಕ್ಕೆ ತಾನೇ ನಿದ್ದೆ ಹತ್ತಿಬಿಟ್ಟಿತು. ನಡುವೆ ಅಕಸ್ಮಾತ್ತಾಗಿ ಎಚ್ಚರಿಯುವ ಹೊತ್ತಿಗೆ ನನ್ನ ಹಗಲುಗನಸುಗಳ ಅಧಿಷ್ಠಾತೃದೇವಿಯಾದ ನನ್ನ ಭಾವೀರಾಜ್ಞಿಯು ನನ್ನ ನಿದ್ದೆಗನಸುಗಳನ್ನು ಸವಿಗೊಳಿಸುತ್ತಿದ್ದಳು. ಆಗ ಈ ಲೋಕದ ಬಂಧನವನ್ನೆಲ್ಲ ಮೀರಿನಿಂತ ಅಮರನಂತೆ ನಾನು ಅದಾವುದೋ ಒಂದು ಆನಂದನಿಕೇತನದಲ್ಲಿ ವಿಹರಿಸುತ್ತಿದ್ದೆ; ಅಂತೆ ತಿರುಗಿ ಬೇಗ ನಿದ್ದೆ ಹತ್ತದಾಗಿತ್ತು.

೪

ಛಾವಡಿಯಲ್ಲಿ ಎರಡು ಹೊಡೆಯಿತು. ಲೋವಿಯ ಚಪ್ಪರದಲ್ಲಿ ಆರ್ತ ಚೀತ್ಕಾರವೊಂದು ಕೇಳಬಂತು. ಕನಸಿನಲ್ಲಿ ಹೆದರಿಕೊಂಡವರಂತೆ ಎಚ್ಚತ್ತು ಗಡಬಡಿಸುವಾಗ ನನಗೆ ಎಲ್ಲವೂ ಒಂದು ಕಲಸುಮಲಸಿನ ಹಳವಂಡದಂತೆ ತೋರಿತು. ನಿಚ್ಚಳವಾಗಿ ಎಚ್ಚರಿಯುವ ಹೊತ್ತಿಗೆ ಆ ಆರ್ತಸ್ವರವು ಕರುಳೊಡೆಯುವಂತೆ

ಡಬಡಬಯೆನ್ನುತ್ತಿದ್ದ ನನ್ನ ಎದೆಯನ್ನು ಇನ್ನೂ ಹೆಚ್ಚಾಗಿ ತಟ್ಟಹತ್ತಿತು. ಚಟ್ಟನೆದ್ದು ಕುಳಿತು ತಲೆದಿಂಬುದೆಸೆಯ ದೀಪವನ್ನು ದೊಡ್ಡದು ಮಾಡಿ ನೋಡಿದೆ. ಆ ಚೀತ್ಕಾರವು ಆ ಗುಬ್ಬಿಗಳ ಗೂಡಿನಿಂದ ಬರುತ್ತಿದ್ದಿತು. ಆಗ ನನ್ನ ನಾಡಿಗಳಲ್ಲೆಲ್ಲ ಒಂದು ತೆರದ ಗಾಬರಿಯು ತುಂಬಿಹರಿಯುತ್ತಿರುವಂತೆ ತೋರಿತು. ಅಂತಹದರಲ್ಲಿಯೇ, ನಡುಗುವ ಕೈಗಳಿಂದ ದೀಪವನ್ನು ಎತ್ತಿ ಹಿಡಿದು ನೋಡಿದೆ; ಕಾಲಕರಾಲವಾದ ಘಟಸರ್ಪವೊಂದು, ಅಖಂಡವಾಗಿ ಕಿರುಚುತ್ತಿರುವ ಗಂಡುಗುಬ್ಬಿಯನ್ನು ಬಾಯಲ್ಲಿ ಕಚ್ಚಿಕೊಂಡು ಲೋವಿಯ ದುಂಡುಕಟ್ಟಿನಗುಂಟ ಮೆಲ್ಲನೆ ಹಿಂದಕ್ಕೆ ಸರಿದು ಹೋಗುತ್ತಲಿತ್ತು.

ಹಾವು ಅಂತಿಂಥದಲ್ಲ; ನಾಗರಹಾವು. ಒಂದು ಒಂದೂವರೆ ಮಾರು ಉದ್ದವಾಗಿತ್ತು. ಒನಕೆಯಂತೆ ದಪ್ಪವಾಗಿ ಕಗ್ಗಗೆ ಮಿರಿ ಮಿರಿ ಮಿಂಚುತ್ತಿತ್ತು. ಮೈಮೇಲೆ ಬೆರಳುದ್ದದ ಬಿರುಸಾದ ನಿಡುಗೂದಲು ಬೊಗಸೆಯಗಲದ ಹೆಡೆ. ದೀಪದ ಬೆಳಕಿಗೆ ಥಳ ಥಳ ಹೊಳೆಯುವ ಕಣ್ಣಿನ ವಕ್ರವಾದ ಉಗ್ರದೃಷ್ಟಿಯು ನನ್ನ ಕೈಕಾಲುಗಳನ್ನು ಇದ್ದಲ್ಲಿಯೇ ತಣ್ಣಗೆ ಮಾಡಿತು. ನಡುಗುವ ಕೈಯಿಂದ ದೀಪವು ಒಮ್ಮಿಂದೊಮ್ಮೆ ಜಾರಿಬಿದ್ದು ಆರಿಹೋಯಿತು; ಆದರೂ ಇದ್ದುದರಲ್ಲಿಯೇ ಸಾವರಿಸಿಕೊಂಡು ನಾನು ಬದಿಯಲ್ಲಿ ಮಲಗಿದವರನ್ನೆಲ್ಲ ಬಡಿದೆಬ್ಬಿಸಿದೆ.

ಗಂಡುಗುಬ್ಬಿಯನ್ನು ಹಾವು ಕಚ್ಚಿಕೊಂಡು ಹೋದದ್ದರಿಂದ, ಹೆಣ್ಣುಗುಬ್ಬಿಯ ಸಂತಾಪಕ್ಕೆ ಸೀಮೆಯಿಲ್ಲದಂತಾಗಿತ್ತು. ಅದು ತೆರಪಿಲ್ಲದೆ ಹಾಹಾಕಾರ ಮಾಡುತ್ತ ದಿಕ್ಕು ದಿಕ್ಕು ಹಾಯುತ್ತಿತ್ತು. ಹಾವಿನ ಬಾಯಲ್ಲಿ ಜೀವನದ ಜೊತೆಗಾರ ಕಿರುಚುತ್ತಿದ್ದಾನೆ. ಗೂಡಿನಲ್ಲಿ ತನ್ನಕ್ಕರೆಯ ಚಿಕ್ಕಮಕ್ಕಳೆರಡು ಚಿಲಿಪಿಲಿಗುಟ್ಟುತ್ತಿವೆ. ಮೇಲೆ ತನ್ನ ಪ್ರಾಣಸಂಕಟವೊಂದು. ಹೀಗೆ ಕಂಗೆಟ್ಟು ಕತ್ತಲಲ್ಲಿ ಅತ್ತಿತ್ತ ಸುತ್ತಾಡುವಾಗ ಆ ಹೆಣ್ಣುಗುಬ್ಬಿಯು ಎಷ್ಟೋ ಸಲ ಹೌಹಾರಿ ಕುಳಿತ ನಮ್ಮ ಮೈ - ಕೈಗೆ ತಾಕಿ ತಡವರಿಸುತ್ತಿತ್ತು. ಆ ಗಲಭೆಯನ್ನು ನೋಡಿ ನಮ್ಮೆಲ್ಲರಿಗೂ ಗಾಬರಿ ಇಮ್ಮಡಿಸಿಬಿಟ್ಟಿತು. ಆಗೀಗೊಮ್ಮೆ ಬೆಂಕಿಯ ಕಡ್ಡಿಗಳನ್ನು ಕೊರೆದು ಬೆಳಕು ಮಾಡಿಕೊಳ್ಳುತ್ತ ನಾವೆಲ್ಲರೂ ನಮ್ಮ ಜೀವ ರಕ್ಷಣೆಯ ಹವಣಿಕೆಯಲ್ಲಿದ್ದೆವು.

ಇಷ್ಟರಲ್ಲಿ ಮೇಲಿನವರ ಗದ್ದಲವನ್ನು ಕೇಳಿ ಕೆಳಗಿನವರು ದೀಪ ಹಚ್ಚಿಕೊಂಡು ಮೇಲೆ ಬರುವದರಲ್ಲಿದ್ದರು. ಆದರೆ ಅದಕ್ಕೂ ಮೊದಲೇ ನಮ್ಮ ಕಾಮಿ (ಬೆಕ್ಕು) ಯಾವ ಮಾಯದಿಂದಲೋ ಅಲ್ಲಿಗೆ ಬಂದು ದಿಕ್ಕೆಟ್ಟು ಅಲ್ಲರಿಯುತ್ತ ಮೊಗಸಾಲೆಯ ತುಂಬೆಲ್ಲ ಸುತ್ತಾಡುತ್ತಿದ್ದ ಹೆಣ್ಣುಗುಬ್ಬಿಯನ್ನು ಹಾರಿ ಹಿಡಿದುಬಿಟ್ಟಿತ್ತು. ಕೆಳಗಿನವರು ದೀಪ ತೆಗೆದುಕೊಂಡು ಮೇಲೆ ಬರುವದಕ್ಕೂ, ಹೆಣ್ಣು ಗುಬ್ಬಿಯನ್ನು ಬಾಯಲ್ಲಿ ಕಚ್ಚಿಕೊಂಡು ಕಾಮಿ ಕೆಳಗೋಡುವುದಕ್ಕೂ ಗಂಟೆ ಬಿತ್ತು. ಎಲ್ಲರೂ ಸೇರಿ ಕಾಮಿಯನ್ನು ಹಿಡಿದು, ಹೊಡೆದು, ಬಡಿದು ಗುಬ್ಬಿಯನ್ನು ಬಿಡಿಸಿಕೊಳ್ಳುವ ಹೊತ್ತಿಗೆ ಅದು ಗುಬ್ಬಿಯನ್ನು ಅರ್ಧಕ್ಕರ್ಧ ತಿಂದೇಬಿಟ್ಟಿತ್ತು.

ಇತ್ತ ನಾವೆಲ್ಲ ನೋಡುತ್ತಿರುವಂತೆಯೇ, ಗಂಡುಗುಬ್ಬಿಯನ್ನು ಹಿಡಿದುಕೊಂಡು ಹೊರಟ ಹಾವು, ಗುಬ್ಬಿಯ ಗೂಡಿನಿಂದ ಹತ್ತೆಂಟು ಮೊಳ ದೂರದಲ್ಲಿದ್ದ ಗುದ್ದಿನಲ್ಲಿ ಹೊಕ್ಕುಬಿಟ್ಟಿತು. ಹಾವು ಗುದ್ದಿನ ಒಳವೊಳಗೆ ಸೇರಿ ಹೋದಂತೆ, ಅದರ ಬಾಯಲ್ಲಿದ್ದ ಗುಬ್ಬಿಯ ಕರುಣಾಸ್ವರವು ಮಂದಮಂದವಾಗಿ ಕುಂದುತ್ತ ಕೊನೆಗೊಮ್ಮೆ ನಿಂತುಹೋಯಿತು.

೫

ಇತ್ತ ಆ ಗುಬ್ಬಿಗಳ ಚಿಕ್ಕಮಕ್ಕಳೆರಡೂ ಹುಟ್ಟು ಹುಟ್ಟುತ್ತಲೆ ಅನಾಥವಾಗಿ, ತಮ್ಮ ಪ್ರೇಮಕ್ಕೆ ಊರುಗೋಲೇ ಇಲ್ಲದಾಗಲು, ಅದೆಷ್ಟೊ ಹೊತ್ತು ಹಲುಬಿ ಹಲುಬಿ, ಅತ್ತತ್ತು ದಣಿದು, ಸುಮ್ಮನೆ ಬಿದ್ದುಕೊಂಡವು.

೬

ನಮಗೆಲ್ಲ ನಮ್ಮ ನಮ್ಮ ಜೀವದ ಭಯ. ಆಗ ಆ ಮನೆಗಳನ್ನಾರು ಕೇಳಬೇಕು! ಬಿಟ್ಟ ಕೆಲಸವನ್ನೆಲ್ಲ ಬಿಟ್ಟು ಅಪ್ಪಣ್ಣನೂ ವೆಂಕಟರಾಯನೂ ಹೋಗಿ, ಆ ಅಪರಾತ್ರಿಯಲ್ಲಿ ಒಬ್ಬ ಮಾಂತ್ರಿಕನನ್ನು ಹುಡುಕಿಕೊಂಡು ಬಂದರು. ಮಾಂತ್ರಿಕನು ಮನೆತನಕ ಬಂದಮೇಲೆ ಅದು ದೇವರ ಹಾವೆಂದೂ, ಅದನ್ನು ತಾವು ಹಿಡಿಯಲಾಗದೆಂದೂ, ಅದು ಇನ್ನೊಮ್ಮೆ ಯಾರ ಕಣ್ಣಿಗೂ ಬೀಳದಂತೆ ತಾನು ಮಂತ್ರಬಂಧನವನ್ನು ಮಾಡಬಲ್ಲೆನೆಂದೂ ಹೇಳಿ, ಏನೇನೋ ಒಟಗುಟ್ಟುತ್ತ,

ಅತ್ತಿತ್ತ ನಾಲ್ಕೆಂಟು ಗೆರೆ ಹಾಕಿದಂತೆ ಮಾಡಿ, ನಮ್ಮ ನಾಲ್ಕೈದು ಹಿಡಿ ಅಕ್ಕಿಯ ಕಾಳು ಹಾಳುಮಾಡಿ, ಮೇಲೆ ಒಂದು ರೂಪಾಯಿ ಕಿತ್ತುಕೊಂಡು ಹೊರಟುಹೋದನು.

ಆದರೆ ನಮ್ಮದು ಮನುಷ್ಯ ಜೀವ! ಸುಮ್ಮನೆ ಹೇಗೆ ಕುಳಿತೀತು? ನಮ್ಮ ಹೆದರಿಕೆ ನಮಗೆ. ಆ ಮಾಂತ್ರಿಕನು ಬಂದು ಹೋದ ಮೇಲೆಯೂ ನಮಗೆ ಜೀವದಲ್ಲಿ ಜೀವವಿಲ್ಲ. ಆಗಿನಿಂದಲೇ ಎರಡು ಮೂರು ಕಂದೀಲು ಹಚ್ಚಿಕೊಂಡು, ಎಲ್ಲರೂ ಇಸ್ಪೇಟು ಆಡುತ್ತ ಬೆಳತನಕ ಕುಳಿತು ಬಿಟ್ಟೆವು.

ನಸಕು ಹರಿಯುವ ಸಮಯ. ನನ್ನ ತಾಯಿ ಬಂದು ``ಸುರಗಿ ಎರಕೊಳ್ಳಲು ತಡವಾಯಿತು, ಈಗ ಬೀಗರು ಬಂದು ಬಿಡುತ್ತಾರೆ ಎಲ್ಲದಕ್ಕೂ ನಾನೇ ಬಡಕೊಳ್ಳಬೇಕು, ಒಬ್ಬರೂ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ, ಹೀಗಾದರೆ ನಾನೇ ಎಷ್ಟೆಂತ ಸಾಯಲಿ" ಎಂದು ಮೊದಲಾಗಿ ಎಲ್ಲರ ಮೇಲೆಯೂ ಹರಿಹಾಯ್ದು ಹೋದರು. ಅಕ್ಕ ಬಂದು `ಆರತಿಗೆ ತಡವಾಗುವದು ಬೇಗನೇಳು' ಎಂದು ಬಲುಮೆ ಮಾಡಿದಳು. ಆದರೆ ಹೊತ್ತು ಹರಿಯುತ್ತ ಬಂದಂತೆ ಇಸ್ಪೇಟಿನಲ್ಲಿ ಹೆಚ್ಚು ಹೆಚ್ಚು ತಲ್ಲೀನರಾಗುತ್ತಲಿದ್ದ ನಾವು, ಅವರಿಬ್ಬರನ್ನೂ ಹೂ ಹೂ ಎಂದು ಹೇಳಿ ಓಂದಕ್ಕಟ್ಟಿ ಬಿಟ್ಟೆವು. ನನಗಂತೂ ಅಂದಿನ ಆಟದಲ್ಲಿ ಇಲ್ಲದ ಹುರುಪು. ಏಕೆಂದರೆ ನಾನೇ ಮುಂದಾಳಾಗಿ ಅಪ್ಪಣ್ಣನ ಪಾರ್ಟಿಯ ಮೇಲೆ ನಾಲ್ವತ್ತೆರಡು ಹೊರಸಿ ಬಿಟ್ಟಿದ್ದೆ.

ಹೀಗೆ ನಾವೆಲ್ಲರು ನಮ್ಮಾಟದ ರಂಗಿನಲ್ಲಿಯೇ ಗುಂಗಾಗಿ ಕುಳಿತಾಗ ಗುಬ್ಬಿಯ ಗೂಡಿನಿಂದ ಮತ್ತೆ ಚೀತ್ಕಾರ! ಎಲ್ಲರೂ ತಟ್ಟನೆ ಮೆಟ್ಟಿ ಬಿದ್ದೆವು. ಮತ್ತೆ ಅದೇ ಹಾವು! ಅದೇ ಭಯಾನಕ ದೃಶ್ಯ! ಹಾವು ಮೆಲ್ಲನೆ ಲೋವಿಯ ಗುಂಟ ಹರಿದು ಬಂದು ಆ ಗುಬ್ಬಿಯ ಗೂಡಿನಲ್ಲಿ ಹೆಡೆಯನ್ನು ಸೇರಿಸಿ, ಮರಿಗಳನ್ನು ಹಿಡಿದುಕೊಳ್ಳುವದರಲ್ಲಿತ್ತು. ಅದನ್ನು ಕಂಡು ಎಲ್ಲರ ಆಟವು ಮುಗಿದೇ ಹೋಯಿತು. ಎಲ್ಲರಿಗೂ ದಿಗ್ಭ್ರಮೆ. ನೀ ಹೊಡಿ, ನಾ ಹೊಡಿ ಎನ್ನುವದರೊಳಗೆ ಹಾವು ಒಂದು ಮರಿಯನ್ನು ಹಿಡಿದುಕೊಂಡು ಮತ್ತೆ ತನ್ನ ಹೋರನ್ನು ಸೇರಿಕೊಂಡಿತು.

ಎಲ್ಲರೂ ಬರೀ ಮಾತನಾಡಿದೆವೇ ಹೊರ್ತು ಎದ್ದುಹೋಗಿ ಹಾವನ್ನು ಹೊಡೆಯುವಷ್ಟು ನೀರು ಒಬ್ಬನಲ್ಲಿಯೂ ಇಲ್ಲ. ಕೊನೆಗೆ `ಮಾಂತ್ರಿಕ ದೇವರ ಹಾವೆಂದು ಹೇಳಲಿಲ್ಲವೇ; ಅದನ್ನು ಹೇಗೆ ಹೊಡೆಯುವದು?' ಎಂದು ಒಬ್ಬರಿಗೊಬ್ಬರು ಸಮಾಧಾನ ಹೇಳಿಕೊಂಡು ಸುಮ್ಮನಾದೆವು.

ಹಾವು ಗೂಡಿನೊಳಗಿಂದ ಒಂದು ಮರಿಯನ್ನು ಹಿರಿಯುವಾಗ, ಇನ್ನೊಂದು ಮರಿಯೂ ಗೂಡಿನಿಂದ ಜಾರಿ ಹೊರಗೆ ಬಿದ್ದು ಪ್ರಾಣ ಸಂಕಟದಿಂದ ಒದ್ದಾಡುತ್ತಿತ್ತು. ಮೂರು ಜೀವಿಗಳ ಸಾವನ್ನು ಕಂಡು ಬೇವಸಗೊಂಡ ನನ್ನ ಕರುಳು ಆ ಮರಿಯ ತೊಳಲಾಟದಿಂದ ಮತ್ತೂ ಕಳವಳಿಸಿತು. ಒಂದು ಬಾಳೆಯ ದೊನ್ನೆಯಲ್ಲಿ ಆ ಮರಿಯನ್ನು ಮೆಲ್ಲನೆ ಎತ್ತಿ ಮಲಗಿಸಿ ಸ್ವಲ್ಪ ಹಾಲನ್ನು ಹಾಕಿ ಇಟ್ಟೆವು. ಪಾಪ! ತನ್ನ ಕರುಳು ಬಳ್ಳಿಯೇ ಕತ್ತರಿಸಿ ಹೋಗಿರಲು, ಕಮ್ಮರುವ ಹೀಚಿನಂತಿದ್ದ ಆ ಮರಿಗೆ ನಮ್ಮ ಆರೈಕೆಯು ವಿಷವಾಯಿತೋ, ಅಮೃತವಾಯಿತೋ - ಯಾರು ಹೇಳಬೇಕು?

೭

ಅಷ್ಟೊತ್ತಿಗೆ ನನ್ನ ತಾಯಿ-ಅಕ್ಕ ಮತ್ತೊಮ್ಮೆ ಬಂದು ಬಲವಂತದಿಂದ ಎಬ್ಬಿಸಿಕೊಂಡು ಹೋದರು. ಮುಂದೆ ಸುರಗಿ-ಪುಣ್ಯಾಹವಾಚನ-ಆರತಿ ಅಕ್ಷತಿಗಳೆಲ್ಲ, ಯಥಾಕ್ರಮವಾಗಿ ಸಾಂಗವಾದವು. ಮದುವೆಯ ಪ್ರಮೋದವು ಮೈ ತುಂಬಿದಂತಿದ್ದ ನಾವೆಲ್ಲರು ನಮ್ಮ ನಮ್ಮ ಸಂತೋಷದಲ್ಲಿ ಈಸುತ್ತಿದ್ದೆವು. ಆದರೆ ಸರಿಯಾಗಿ ಅಕ್ಕಿಯಕಾಳು ಬೀಳುವ ಹೊತ್ತಿಗೆ ಬಂತು ಸುದ್ದಿ - ಅದೂ ಒಂದು ಮರಿಯು ಹಾಲಿನ ದೊನ್ನೆಯಲ್ಲಿಯೇ ಪ್ರಾಣನೀಗಿತೆಂದು.

ಅಂತೂ, ಹೀಗೆ ಹನ್ನೆರಡು ತಾಸಿನ ಅವಧಿಯಲ್ಲಿ ಆ ಗುಬ್ಬಿಯ ಸಂಸಾರದ ಮೂಲೋತ್ಪಾಟನವಾಗಿ ಬಿಟ್ಟಿತೆಂದು ಹೇಳಿದರೆ, ಇದೂ ಒಂದು ಕಟ್ಟಿದ ಕತೆಯೆಂದು ತೋರುವದು. ಆದರೂ ಆ ಸಂಗತಿಯು ನನ್ನ ಮದುವೆಯ ಕಾಲದಲ್ಲಿ ನಡೆದ ಪ್ರತಿಯೊಂದು ಸಂಗತಿಯಂತೆ ನಿತ್ಯಸತ್ಯವಾದ ಮಾತಾಗಿತ್ತು.

ಹೊಸ ಸಂಸಾರದ ಹೊಸ್ತಿಲಲ್ಲಿ ಕಾಲಿಡುತ್ತಿದ್ದ ನನ್ನ ಮನೆಯಲ್ಲಿ ಅಂದು ಮದುವೆಯ ಮಾಂಗಲ್ಯ ನಡೆದಾಗ ಆ ಗುಬ್ಬಿಗಳ ಸಂಸಾರದಲ್ಲಿ ಅಂತಕನ ಕೋಲಾಹಲವು ನಡೆದುಹೋಯಿತು.

೮

ಇದೀಗ ನನಗೆ ಚಿನ್ನರನ್ನದಂತಹ ಎರಡು ಮಕ್ಕಳಿವೆ. ನಮ್ಮಿಬ್ಬರಿಗೂ ಆ ಮಕ್ಕಳೆಂದರೆ ಹೆಚ್ಚಿನ ವ್ಯಾಮೋಹ. ಅವುಗಳಿಂದಲೇ ನಮ್ಮ ಸಂಸಾರದಲ್ಲೆಲ್ಲೆಲ್ಲಿಯೂ ಸುಖ ಸಂತೋಷಗಳು ಓಲಾಡುತ್ತಿವೆ. ನಮ್ಮ ಬಾಳ್ವೆಗೆ ಇಂಥದು ಕಡಮೆ ಎಂಬ ಮಾತೇ ಇಲ್ಲ. ದುಃಖವೆಂದರೆ ಏನೋ!- ಎಂಬಂತೆ ನಾವಿದ್ದೇವೆ. ಈ ಜಗತ್ತಿನಲ್ಲಿ ನಮ್ಮಂಥ ಸಂಸಾರ ಸುಖಿಗಳು ಇನ್ನಾರೂ ಇರಲಾರರೆಂದೇ ನನ್ನ ಭಾವನೆಯಾಗುತ್ತಲಿದೆ.

ನಾವು ಗಂಡ-ಹೆಂಡತಿ, ಮಕ್ಕಳೊಂದಿಗೆ ಒಟ್ಟಿಗೆ ಕೂಡಿ ಕುಳಿತೆವೆಂದರೆ ನನ್ನ ಹರೆಯದ ಕನಸು ಕೈಯಲ್ಲಿಳಿದು ಕುಣಿಯುವಂತೆ ಭಾಸವಾಗುವದು........ಆದರೆ ಹೀಗಿರುವಾಗಲೇ ಎಂದಾದರೊಮ್ಮೊಮ್ಮೆ ಆ ಗುಬ್ಬಿಗಳ ಸಂಸಾರದ ನೆನಪು ಒಮ್ಮಿಂದೊಮ್ಮೆ ನನ್ನ ತಲೆಯಲ್ಲಿ ತೋರಿಬಿಡುವದು. ಆಗ ಹಿಂದಿನಂತೆಯೆ ಈಗಲೂ ಆ ಗುಬ್ಬಿಗಳ ಸಂಸಾರದೊಂದಿಗೆ ಒಂದು ಬಗೆಯ ತನ್ಮಯತೆಯು ಎನ್ನಿಸುವದು. ಆದರೆ ಅಂದಿನ ಸೊಗಸಿನ ಬದಲು, ಇಂದು ನನ್ನೆದೆಯು ಒಂದು ಬಗೆಯ ವೇದನೆಯಿಂದ ಗಡಗಡ ನಡುಗುವದು..... ಮನುಷ್ಯನ ಬುದ್ಧಿ ಭಾವನೆಗಳನ್ನು ಲೆಕ್ಕಿಸದೆ, ಆತನ ಕಲ್ಪನೆಯ ಕಣ್ಮರೆಯಾಗಿ, ಎಲ್ಲಿಯೋ ಯಾವದೋ ಒಂದು ಹೋರಿನಲ್ಲಿ ಹೊಂಚಿ ಕುಳಿತ ಸಾವೆಂಬ ಹಾವು ಎಲ್ಲಿ ನನ್ನ ಸಂಸಾರವನ್ನು ಸೂರೆಗೊಂಡೀತೋ ಎಂದು ನನಗೆ ಇಲ್ಲದ ಭಯವುಂಟಾಗಿ ದಿಗ್ಭ್ರಮೆಯಾದಂತೆನಿಸುವದು. ಹೀಗೆ ಬೇಡಬೇಡವೆಂದರೂ ಬಲುಮೆಯಿಂದ ಆ

ಒಂದಿನ ನೆನಪು ನನ್ನ ಮನದಲ್ಲಿ ಮೂಡಿಕೊಂಡಾಗೆಲ್ಲ, ನನ್ನ ಕಣ್ಮನಗಳೂ ಬುದ್ಧಿಭಾವನೆಗಳೂ ಕುರುಡಾದಂತೆನಿಸಿ ನಾನು ಯಾವದೋ ಒಂದು ಲೋಕಾಂತರದಲ್ಲಿ ಹವಣು ತಪ್ಪಿ ಅಲೆಯುತ್ತಿರುವಂತೆ ಭಾಸವಾಗುವದು.

(ಜುಲೈ ೧೯೩೧)

# ಆಚೆಯ ಬೆಳಕು

## ೧

ಸಿಮ್ಲಾ
೨೨ನೇ ಡಿಸೆಂಬರ್ ೧೯೦೫
ರಾತ್ರಿ ೧೦॥

ಕುಮುದಿನಿ,

ನಿನ್ನ ಪತ್ರವನ್ನು ಕಂಡೆ. ಚಿಕ್ಕ ಕೂಸಿನೊಡನೆ ನೀನು ನೆಮ್ಮದಿಯಾಗಿರುವೆಯೆಂದು ತಿಳಿದು ಸಂತೋಷವಾಯಿತು. ಮಗುವಿಗೆ ಹೆಸರಿಡುವ ಬಗೆಗೆ ನೀನು ಬರೆದಿರುವೆ. ಅದೇನು? ನೀನು ಇಲ್ಲಿಂದ ಹೊರಡುವ ಮೊದಲೇ ನಾವು ಆ ಮಾತನ್ನು ಗೊತ್ತೇ ಮಾಡಿದ್ದೆವಲ್ಲ! ಅದೇ ಹೆಸರನ್ನು ಇಟ್ಟಿರುವರೆಂದ ಮೇಲೆ ಸರಿ.

ಕುಮುದ, ನಾನೀ ಪತ್ರವನ್ನು ಬರೆಯುವದಕ್ಕೆ ಒಂದು ಕಾರಣವಿದೆ. ಅದೇಕೆ, ಒಂದು ಇತಿಹಾಸವೇ ಇದೇ ಎನ್ನು. ಈಗ ನನ್ನೆದುರಿಗಿರುವ ನಿನ್ನ ಪತ್ರದಲ್ಲಿ, ನೀನು ನಿನ್ನ ಜೀವಿತದ ಒಂದು ತಪ್ಪನ್ನು ಒಪ್ಪಿಗೊಂಡು, ಅದಕ್ಕಾಗಿ ನನ್ನ ಕ್ಷಮೆಯನ್ನು ಕೇಳಿರುವೆ. ಕುಮು, ಪ್ರೇಮಕ್ಕೆ ಕ್ಷಮೆಯೆಂಬುದು ನೆರಳಿದ್ದಂತೆ. ಕ್ಷಮೆಯು ಪ್ರೇಮದ ನೆರಳು. ಎಂದ ಮೇಲೆ ನೀನು ನನ್ನಲ್ಲಿ ಕ್ಷಮೆಬೇಡುವ ಅಗತ್ಯವಾದರೂ ಎಲ್ಲಿಯದು? ಅದರೂ, ನೀನು ಬರೆದುದು ಬರೀ ವಾಡಿಕೆಯ ಮಾತು ಎಂದು ನಾನು ಬಗೆಯುತ್ತೇನೆ ಅಷ್ಟೆ.

ಅಲ್ಲದೆ, ಕುಮುದ, ನನಗೆ ಅನಿಸುವ ಮಟ್ಟಿಗೆ ಮನುಷ್ಯರೆಂಬವರಲ್ಲಿ ಪ್ರತಿಯೊಂದು ವ್ಯಕ್ತಿಯೂ ತಿಳಿದಾಗಲೀ ತಿಳಿಯದಾಗಲೀ ಏನಿಲ್ಲೊಂದು ತಪ್ಪನ್ನು ಮಾಡಿಯೇ ಮಾಡಿರುತ್ತಾನೆ. ತಪ್ಪನ್ನು ಹೇಗೂ ಮಾಡಬಹುದು, ಆದರೆ ಮಾಡಿಹೋದ ಮೇಲೆ ಆವರೂ ಅದರ ಅರಿವುಂಟಾಗಬೇಕು. ಇಂಥ ಅರಿವಿನ ನೆರವಿನಿಂದಲೇ ವಿಚಾರಿಯಾದವರೆಲ್ಲ, ತಪ್ಪು ಮಾಡುತ್ತಿರುವಾಗಲೇ ತಮ್ಮನ್ನು ತಿದ್ದಿಕೊಂಡರು. ತಪ್ಪು ದೊಡ್ಡದಲ್ಲ; ಅದರ ತಿಳಿವು ದೊಡ್ಡದು, ಕುಮುದ. ನಾವು ನಮ್ಮನ್ನೆ ಕ್ಷಮಿಸಿಕೊಳ್ಳಲು ಶಕ್ತರಾಗಬೇಕು. ಅದನ್ನೂ ಮಾಡಲಾರೆವಾದರೆ ಆಗಲೇ ನಮಗೆ ಅಧೋಗತಿ. ತಮ್ಮ ಗುಡ್ಡದಂಥ ತಪ್ಪನ್ನು ಮುಚ್ಚಿಟ್ಟು, ಹೆರವರ ಕಡ್ಡಿಯನ್ನೇ ಗುಡ್ಡವನ್ನಾಗಿ ಮಾಡಿ ಹೀಯಾಳಿಸುವುದು ಹೀನತನ. ಪ್ರಪಂಚದಲ್ಲಿ ಒಂದಿಲ್ಲೊಂದು ಬಗೆಯಿಂದ ಪಾಪಿಯಾಗದ ಪ್ರಾಣಿಯೇ ಇಲ್ಲವಾದರೂ ಎಲ್ಲರೂ ಹೆರವರನ್ನು ಹಳಿಯುವಾಗ ಮಾತ್ರ ತಾವು ಆದರ್ಶಪುರುಷರೆಂದು ತಿಳಿದುಕೊಂಡಿರುವರು. ಪಾಪ! ಅವರಿಗೆ ತಮ್ಮ ಅರಿವೇ ಇರುವದಿಲ್ಲ.

ಕುಮುದ, ನಾನೂ ಈಗ ಒಂದು ಮಾತನ್ನು ಒಪ್ಪಿಕೊಳ್ಳಲು ಈ ಪತ್ರವನ್ನು ಬರೆಯುತ್ತಲಿರುವೆ. ಅದನ್ನು ನಾನೀಮೊದಲೇ ನಿನಗೆ ಹೇಳಿರಬೇಕಾಗಿತ್ತು. ಆದರೆ ಹೇಗೊ ಪ್ರಸಂಗವೇ ಬಾರದೆ ಉಳಿದು ಬಿಟ್ಟಿದೆ. ಅದಕ್ಕೆ ನೀನು ಮಹಾಪರಾಧವೆಂದು ಹೆಸರಿಟ್ಟು ನನ್ನ ಮೇಲೆ ಕೊನೆಗೂ ಮುನಿದುಕೊಳ್ಳಬಹುದೇನೋ, ಎಂದು ಒಮ್ಮೆರಡು ಸಲ ಬಲವಾದ ಹೆದರಿಕೆಯಾಯಿತು. ಆದರೆ ಕುಮೀ, ನೀನು ನನ್ನವಳು. ನಮ್ಮ ಪ್ರೇಮದ ನೆಲೆಯನ್ನರಿತ ನೀನು ಆ ಮಾತನ್ನು ಮೀರಿ ನಿಲ್ಲಬಲ್ಲೆಯೆಂಬ ವಿಶ್ವಾಸವಿದೆ. ಅದಕ್ಕಾಗಿ ನಾನು ನಿನ್ನ ಮುಂದೆ ಆ ಮಾತನ್ನು ಹೇಳಲು ಹೆದರುವ, ಹೇಸುವ ಕಾರಣವಿಲ್ಲ. ಅಲ್ಲದೆ ನನ್ನ ನಿನ್ನಲ್ಲಿ ಮುಚ್ಚುಮರೆಯೆಂಬುದಾವುದೂ ಇರಲಾಗದು ನೋಡು. ವ್ಯಕ್ತಿಗಳಿಗೆ ತಮ್ಮ ತಮ್ಮ ಅರಿವೇ ಒಂದು ಗುರಿಯಾಗಿರುವಂತೆ, ನಮ್ಮಂಥ ಪ್ರೇಮಿಜೀವಿಗಳಿಗೆ ಒಬ್ಬರನ್ನೊಬ್ಬರು ಅರಿತುಕೊಳ್ಳುವದೇ ಒಂದು ಹಿರಿಯಗುರಿ.

ಆದರೆ ಕುಮುದಿನೀ, ನಾನೀಗ ನಿನ್ನೆದುರು ನನ್ನೆದೆಯನ್ನು ಬಿಚ್ಚಿ

ಇಡುತ್ತಿರುವಂತೆ, ಲೋಕದೆದುರಿಗೆ ಇದೇ ಮಾತನ್ನು ಇಟ್ಟರೆ, ಇದನ್ನೋದುವ ಪ್ರತಿಯೊಂದು ವ್ಯಕ್ತಿಯೂ, ತಾನೊಬ್ಬ ಸತ್ಯಲೋಕದ ಪುಣ್ಯಪುರುಷ ಎಂದು ಬಗೆದು, ನಾನು ಮಾಡಿದುದು ಅಕ್ಷಮ್ಯ ಅಪರಾಧ, ಮಹಾಪಾಪ, ಎಂದು ನನ್ನ ಮೇಲೆ ಹರಿಹಾಯದಿರಲಾರನೆಂಬುದು ಇಟ್ಟ ಆಣೆ. ಕುಮುದ, ಈ ಲೋಕದಲ್ಲಿ, ತನ್ನ ಪಾಪದ ಗೋಪುರಕ್ಕೆ, ಪುಣ್ಯದ ಸುಣ್ಣಬಣ್ಣ, ಧರ್ಮದ ಕಾರಣೆ ಸಾರಣೆ ಮಾಡಬಲ್ಲವನೇ ನಿಜವಾದ ಜೀವನ್ಮುಕ್ತ. ಹೀಗಿದೆ ಈ ಜಗತ್ತು.

ಇನ್ನು ನೆಟ್ಟಗೆ ನನ್ನ ಮಾತಿಗೇ ಬರುತ್ತೇನೆ ಕುಮು. ನನ್ನ ಜೀವನದಲ್ಲಿ ಇಪ್ಪತ್ತೆರಡನೆಯ ತಾರೀಖು ಎಂದರೆ, ಅದಕ್ಕೆ ಏನೋ ಒಂದು ಮಹತ್ತ್ವ ಬಂದು ಬಿಟ್ಟಿದೆ. ಅದೊಂದು ಬರೀ ಸಂಘಟನೆಯೋ ಹೇಳಲಾರೆ. ಅಂತೂ ಬಹಳ ತರದ ಮಹತ್ತ್ವದ ಮಾತುಗಳು ಇಪ್ಪತ್ತೆರಡನೆಯ ತಾರೀಖಿನ ದಿನವೇ ಕೂಡಿ ಬಂದು ಬಿಟ್ಟಿವೆ. ಇದು ನೋಡು ನಾನು ಹುಟ್ಟಿದ್ದು ಅದೇ ತಾರೀಖು. ನನ್ನ ಬಿ.ಎ.ಎಮ್.ಎ. ಪರೀಕ್ಷೆಯಾದದ್ದೂ ಅದೇ ತಾರೀಖು. ನನ್ನ ನಿನ್ನ ಮದುವೆಯಾದದ್ದೂ ಇಪ್ಪತ್ತೆರಡನೆಯ ತಾರೀಖು. ಮುಂದೆ ನನಗೆ ಡಾಕ್ಟರ್ ಪದವಿ ಬಂದದ್ದೂ ಅದೇ ದಿನ. ಆ ಮೇಲೆ ನೀನು ಮೊನ್ನೆ ಮೊನ್ನೆ ಉಷಾಕುಮಾರಿಯನ್ನು ಹೆತ್ತದ್ದೂ ಅಂದೇ. ಮತ್ತೂ ಹೆಚ್ಚೆಂದರೆ, ನಾನೀಗ ಪತ್ರ ಬರೆಯುತ್ತಿರುವುದೂ ಇಪ್ಪತ್ತೆರಡನೇ ತಾರೀಖೇ. ಏನೋ ವಿಚಿತ್ರ ನೋಡು ಕುಮುದ. ಸಂಗತಿಗಳು ಈ ಪರಿ ಕೂಡಿಬರುವದೆಂದರೆ ನನಗೂ ನಂಬಿಗೆ ಆಗುವದಿಲ್ಲ. ಆದರೂ ಸಂಸಾರದಲ್ಲಿ ಹೀಗೆ ನಂಬಿಗೆಯ ನಿಲುವನ್ನು ಮೀರಿದ ಮಾತುಗಳೆಷ್ಟೋ ಆಗುವದುಂಟು. ಹಾಗೆಯೆ, ಪ್ರತಿಯೊಬ್ಬನ ಜೀವನದಲ್ಲೂ ಇಂತಹದೇ ಏನಾದರೊಂದು ವಿಚಿತ್ರವಾದ ಬೆಡಗು ಇದ್ದೇ ಇರುವುದು.

೨

ಅಂದು ಕೂಡ ಇಪ್ಪತ್ತೆರಡನೆಯ ತಾರೀಖೇ ಆಗಿತ್ತು. ಆಗಿನ್ನೂ ನಮ್ಮ ಮದುವೆಯಾಗಿರಲಿಲ್ಲ. ನನ್ನ ನಿನ್ನ ಹೃದಯಗಳು ಒಂದನ್ನೊಂದು ಕಾದುಕೊಂಡು ಎಲ್ಲಿಯೋ ಕಾತರಿಸುತ್ತ ಕುಳಿತಿದ್ದವು.

ಅಂದಿನ ದಿನವೇ ಬೆಳಿಗ್ಗೆ ಸಿಮ್ಲಾದಿಂದ ತಂತಿ ಬಂತು. ನೌಕರಿಯ ದಾರಿಯನ್ನೇ ಕಾಯುತ್ತಿದ್ದ ನಾನು ಸರಕಾರದ ಅಪ್ಪಣೆ ಬಂದೊಡನೆ ಹೊರಡುವದೆಂದು ಮೊದಲೇ ಎಲ್ಲ ಏರ್ಪಾಡು ಮಾಡಿಕೊಂಡಿದ್ದರಿಂದ ನಾನು ನಿಶ್ಚಿಂತನಾಗಿ ಯಾವ ಗಡಿಬಿಡಿಯೂ ಇಲ್ಲದೆ ಇದ್ದೆ. ಮರುದಿನವೇ ಹೊರಡುವುದು ಗೊತ್ತಾಯಿತು.

ಅಂದು ಮಂಗಳವಾರ, ಧಾರವಾಡದ ಸಂತೆ. ಊರಲ್ಲಿ ಬಲು ಗಡಿಬಿಡಿ. ಅದರಲ್ಲೂ ಬೆಳಗಿನಿಂದ ಊರೆಲ್ಲ ಅಲೆದಾಡಿ ಬೇಸತ್ತ ನಾನು ತಿರುಗಾಡಿ ಬರುವದಕ್ಕಾಗಿ ಸಂಜೆಯ ಆರುವರೆ ಗಂಟೆಗೆ ಮನೆಯಿಂದ ಹೊರಬಿದ್ದೆ.

ಧಾರವಾಡ, ನಾನು ಹುಟ್ಟಿ ಬೆಳೆದೂರಲ್ಲವೆ! ಹೆತ್ತು, ಎತ್ತಿ ಮುದ್ದಾಡಿ ಬೆಳೆಸಿದ ತಾಯಿಯಂತೆ. `ನಾನಿನ್ನು ನೌಕರಿಯ ಬೆನ್ನು ಹತ್ತಿ ಸಿಮ್ಲಾಕ್ಕೆ ಹೋಗಿ ಬಿಡುವವ. ಮತ್ತೆಂದು ಇತ್ತ ಬರುವದೋ ಏನೊ! ಒಮ್ಮೆ ನನ್ನ ಹಡೆದೂರಿನ ಕೊನೆಯ ಬೆಟ್ಟಿ ತೆಗೆದುಕೊಂಡು ಬರೋಣ' ಎಂದು ಅಂದಿನ ಹಗಲೆಲ್ಲ ಊರಿನ ಪೇಟೆ ಕೋಟೆಗಳನ್ನೂ ಬೀದಿ ಕೇರಿಗಳನ್ನೂ ತಿರುಗಿಹಾಕಿದೆ. ಸಂದಿಗೊಂದಿಗಳಲ್ಲಿ ಸುತ್ತಾಡಿದೆ. ಆ ಮೇಲೆ ಇಳಿಹೊತ್ತಿಗೆ, ಊರಾಚೆಯ ಪ್ರತಿಯೊಂದು ಕೆರೆ ಕೊಳ್ಳಗಳಿಗೂ, ದಿನ್ನೆ ದಿಬ್ಬಗಳಿಗೂ, ಗಿಡಮರಗಳಿಗೂ, ಹಕ್ಕಿ ಪಕ್ಷಿಗಳಿಗೂ, ನಿರೋಪ ಮುಟ್ಟಿಸುವದೆಂದು ಬಗೆದು, ಅಂದಿನ ದಿನ ತಿರುಗಾಡುತ್ತ ತಿರುಗಾಡುತ್ತ ಹಾಗೆ ಊರಿನಿಂದ ಬಲುದೂರ ಹೋಗಿಬಿಟ್ಟೆ.

ನನ್ನ ಎಣಿಕೆಗಳಲ್ಲಿ ಮುಳುಗಿ ಮೈಮರೆತ ನಾನು ಎಚ್ಚತ್ತು ಕೈಗಡಿಯಾರವನ್ನು ನೋಡುವ ಹೊತ್ತಿಗೆ ಏಳು ಗಂಟೆಯಾಗಿತ್ತು. ಆಗ ಊರಿನಿಂದ ನಾನು ಎಷ್ಟು ದೂರ ಹೋಗಿದ್ದೇನೆಂಬುದರ ಅರಿವೂ ಆಗಲಿಲ್ಲ. ಅಂತೂ ಗಡಬಡಿಸಿ ಹಿಂದಿರುಗಿ ಹೊರಟೆ.

ನಾನು ರೇಲಿನ ಗೇಟಿಗ ಬರುವ ಹೊತ್ತಿಗೆಂದರೆ ಹೊತ್ತು ಹತ್ತರ ಮನೆಗೆ ಬಂತು. ಇನ್ನೂ ಊರು ಎರಡುವರೆ ಮೈಲು ದೂರವಾಗಿತ್ತು. ಆಗ ನಾನು ದಣುಕೊಂಡಿದ್ದೆ. ಮೇಲೆ ಮೋಡವೂ ಬಲವಾಗಿ ಏರಿ ಬಂದು ಮುಗಿಲೆಲ್ಲ ಕವಿದುಕೊಂಡಿತು. ಕೊಡೆಯಿದ್ದುದರಿಂದ ನನಗೇನು ಚಿಂತೆಯಿರಲಿಲ್ಲ. ಮೆಲ್ಲಗೆ ಮುಂದೆ ಸಾಗುತ್ತಿದ್ದೆ.

ನಾನು ಹತ್ತು ಹೆಜ್ಜೆ ಮುಂದೆ ಹೋಗುವಷ್ಟರಲ್ಲಿಯೇ ಬಿರುಗಾಳಿಯು ಭೋರೆಂದು ಬೀಸುತ್ತ ಗುಡುಗು ಮಿಂಚಿನ ಆರ್ಭಟದೊಡನೆ ನನ್ನನ್ನು ತೂರಿಕೊಂಡು ಹೋಗುವದೇನೋ ಎನ್ನುವ ಹಾಗೆ ಬೀಸತೊಡಗಿತು. ಮುಂದೆ ಕಣ್ಣೆಳುಕಿಸುವಷ್ಟರಲ್ಲಿಯೇ ಮಳೆಯು ರಪರಪನೆ ಸುರಿಯಹತ್ತಿತು. ಪ್ರಕೃತಿಯ ಆ ಪ್ರಕೋಪದೆದುರಿಗೆ ನನ್ನ ಕೊಡೆಯೊಡನೆ ವಿಚಾರದಾಲಸ್ಯವೂ ಹಾರಿಹೋಗುವಂತಾಯಿತು. ಹಲವು ಎಣಿಕೆಗಳಲ್ಲಿ ಮುಳುಗಿದ ನನ್ನ ಬಗೆಯು ನಿಚ್ಚಳವಾಗಿ ಎಚ್ಚತ್ತಿತು. ನಿರ್ವಾಹವಿಲ್ಲದೆ ಒಂದು ಮರದ ಆಸರೆಯನ್ನು ಹುಡುಕಲೆಂದು ಅತ್ತಿತ್ತ ಅಲೆದಾಡತೊಡಗಿದೆ. ನನ್ನ ಕೊಡೆಯ ಒಂದು ಕುರುಹಾದರೂ ಮನೆಯನ್ನು ಕಂಡೀತೇ ಎಂದೆನಿಸಹತ್ತಿತು.

ದೊಡ್ಡ ಮರದಾಸರೆಗಾಗಿ ದಾರಿಗುಂಟ ಹೇಗೋ ಸಾಗಿದ ನಾನು ಮುಂದೆ ಐದು ನಿಮಿಷಗಳಲ್ಲಿ ಹಾಗೂ ಹೀಗೂ ಒಂದು ಆಲದ ಮರದೆಡೆಗೆ ಬಂದೆ. ಇನ್ನು ನಾನು ಆ ಮರದ ಹೊದರಿನಲ್ಲಿ ಅವಿತುಕೊಳ್ಳಲು ಮುಂದರಿಯುವವನು; ಅಷ್ಟರಲ್ಲೇ ಆ ಹೊದರಿನಲ್ಲಿ ಒಮ್ಮೆಲೆ ಸಪ್ಪಳವೆದ್ದಿತು. ಗಾಬರಿಗೊಂಡು ನಾನು ಮೆಟ್ಟಿಬಿದ್ದೆ. ಮೈಯೆಂತ ಮೈಯೆಲ್ಲ ಅಂಜಿಕೆ ತುಂಬಿತು. ನನಗೆ ಏನೊಂದು ತಿಳಿಯದಾಯಿತು. ಆದರೂ ಉತ್ತರಕ್ಷಣದಲ್ಲಿ ಎಲ್ಲಿಂದಲೋ ಧೈರ್ಯತಂದುಕೊಂಡು ಒಮ್ಮೆ ಬಲವಾಗಿ ಚೀರಿಸಿ, ``ಯಾರದು'' ಎಂದು ಗದ್ದರಿಕೆಯ ದನಿಯಲ್ಲಿ ನುಡಿದೆ. ಮತ್ತೆ ಒಂದು ಬಗೆಯ ಸ್ವರವು ಆ ಹೊದರಿನಿಂದ ಹುಟ್ಟಿಬಂತು. ಆ ಮೇಲೆ ಸ್ವಲ್ಪ ತಡೆದು `ಯಾಕ್ರಿಯಪ್ಪಾ'- ಎಂಬ ಮಾತು ಕೇಳಿ ಬಂತು. ಅದೊಂದು ಎಳೆಯದಾದ ಹೆಂಣುದನಿ. ಅದರಿಂದ ನನ್ನಂತೆ ಯಾವುದೋ ಹೆಂಗುಸೊಬ್ಬಳು ಅಲ್ಲಿಗೆ ಚಾಟಿಗಾಗಿ ಬಂದಿದ್ದಾಳೆಂದು ಬಗೆದುಕೊಂಡೆ.

೩

ಪಾಪ, ಹೆಂಗುಸೊಬ್ಬಳು ಆ ಮರದ ಆಶ್ರಯದಲ್ಲಿದ್ದುದರಿಂದ ನಾನು ತಟ್ಟನೆ ಬೇರೆಡೆಗೆ ಹೋಗುವ ವಿಚಾರಮಾಡಿದೆ. ಆದರೆ ಆ ಕತ್ತಲಲ್ಲಿ, ಆ ಮಳೆಯ

ಸೆಳೆತದ ಆರ್ಭಟದಲ್ಲಿ ನನಗೆ ಬೇರೆ ಆಸರೆ ಕಾಣಲೇ ಇಲ್ಲ. ಸುತ್ತೆಲ್ಲಾ ಅಲೆದಾಡಿಯೇ ಆ ಮರಕ್ಕೆ ಬಂದಿದ್ದೆ. ಅಲ್ಲಿಯಾದರೂ ಮರೆಯೆಂಬದಿರಲಿಲ್ಲವಾದರೂ, ಮಳೆಯ ಹೊಡೆತವನ್ನು ತಪ್ಪಿಸಿಕೊಳ್ಳುವ ಮಟ್ಟಿಗೆ ಆಸರವಿತ್ತು. ಆದರೆ ಅಲ್ಲಿ ಆ ಹೆಂಗಸು ಇದ್ದುದರಿಂದ ನನ್ನ ಮನಸ್ಸು ಅಲ್ಲಿಂದೋಡಲು ಯತ್ನಿಸಿತು. ನಾನು ಒಂದೆರಡು ಹೆಜ್ಜೆ ಮುಂದುವರಿದು ಬಂದೆ. ಆದರೆ ಎಲ್ಲೆಲ್ಲಿಯೂ ಕಾಲಿಡಲು ಅನುವಿಲ್ಲದಂತಹ ನೀರು-ಕೆಸರುಗಳ ಹೊಯ್ದಾಟ. ಮೇಲೆ ಆ ಮರವನ್ನು ಬಿಟ್ಟರೆ ಬೇರೆ ಆಸರವೆಲ್ಲಿ ಎಂಬ ಅನುಮಾನ. ಸಾಲದ್ದಕ್ಕೆ ಗುಡುಗು ಮಿಂಚಿನ ಅಬ್ಬರ. ಹೀಗಾಗಿ, ನಾನು ಅಲ್ಲಿಂದ ಹೊರಟೂ ಹೊರಡಲಾರದೆ ನಿಂತುಬಿಟ್ಟೆ.

ಅಷ್ಟರಲ್ಲಿ, ನಾನು ಮರದಿಂದ ಸ್ವಲ್ಪ ದೂರ ಸರಿದು ನಿಂತುದು ಆ ಹೆಂಗಸಿಗೆ ಕಾಣಿಸಿತು ಮಿಂಚಿನ ಬೆಳಕಿನಲ್ಲಿ. ``ಇತ್ಲಾಗ ತುಸಾ ಚಾಟು ಐತಿ; ಹೀಗ ಬರ‍್ರಿಯಪ್ಪಾ'' ಎಂದಳು ಅವಳು. ಅವಳು ಎಂದಂತೆ ಆ ನಿಟ್ಟಿನಲ್ಲಿ ಮರದ ಬೀಳಲುಗಳ ಮಗ್ಗುಲಲ್ಲಿ ಸ್ವಲ್ಪ ಮರೆಯಿತ್ತು. ಅವಳಾಗಿಯೇ ಮಾತನಾಡಿದುದ್ದರಿಂದ ನನಗಾವುದೋ ಸಮಾಧಾನವಾಗಿ ನಾನು ಅವಳು ಸೂಚಿಸಿದ ಸ್ಥಳದಲ್ಲಿ ನಿಂತುಕೊಂಡೆ. ನನ್ನ ಕೊಡೆಯೂ ನನಗೆ ಸ್ವಲ್ಪ ಆಧಾರವಾಗಿದ್ದುದರಿಂದ, ಆ ಸ್ಥಳ ಪರವಾ ಇಲ್ಲ ಎನ್ನಿಸಿತು.

ನಿಜವಾಗಿ ನೋಡಿದರೆ ಆ ಮರದ ಆಸರದಲ್ಲಿಯೂ ನನಗೆ ಚಾಟು ದೊರೆತಿರಲಿಲ್ಲ. ಮಳೆಯು ನಾಲ್ಕೂ ಕಡೆಯಿಂದಲೂ ಬೀಸಿ ಬೀಸಿ ಹೊಡೆಯುತ್ತಿದ್ದುದರಿಂದ ಎಲ್ಲಿ ನಿಂತರೂ ಮರೆಯೆಂಬುದೇನಿರಲೇ ಇಲ್ಲ. ಮೈಯೆಂತ ಮೈಯೆಲ್ಲ ತಪತಪನೆ ತೊಯ್ದು ಬಟ್ಟೆಗುಂಟ ನೀರು ಧಾರೆಯಾಗಿ ಹರಿಯುತ್ತಿದ್ದಿತು. ಮರದ ಕೆಳಗೆ ನಿಂತಿದ್ದೇನೆಂಬುದೊಂದೇ ಸಮಾಧಾನ.

೪

ಗಾಳರ ಮಳೆಯೆಂದು ಬಿಟ್ಟರೆ ಸಾಕು; ಅದನ್ನೆಲ್ಲರೂ ಬಲ್ಲರು. ಅದನ್ನು ಬೇರೆಯಾಗಿ ಬಣ್ಣಿಸಲೇ ಬೇಕಿಲ್ಲ. ಅಂದು ಆ ಮರದ ಆಸರದಲ್ಲಿ ನಾನು

ನಿಂತುಕೊಂಡಾಗ, ಹಳ್ಳ-ಕೊಳ್ಳ, ಕೆರೆ ಕಾಲುವೆ, ಹೊಲಗದ್ದೆಗಳೆಲ್ಲಾ ಮಳೆಯ ಮಡಲಲ್ಲಿ ಅಡಗಿ ಹೋಗುತ್ತಿರುವದನ್ನು ಕಂಡರೆ ಅದೊಂದು ಪ್ರಳಯಕಾಲದ ಒಂದು ಮಾದರಿಯೆಂದೆನ್ನುವಂತಿದ್ದಿತು. ನೋಡಿದಲ್ಲೆಲ್ಲಾ ಕೇವಲ ಜಲಮಯ ಜಗತ್ತು. ಚಿರವಿರಹಿಯೊಬ್ಬನು ತನ್ನ ಪುನರ್ಮಿಲನ ಮಂಗಲದಲ್ಲಿ ತನ್ನ ಪ್ರಣಯಿನಿಯ ಹೃದಯ ಪದ್ಮವನ್ನು ತನ್ನ ಕಣ್ಣೀರ ಕಾಸಾರದಲ್ಲಿ ತೇಲ್ಬಿಸಿಬಿಡುವಂತೆ, ಆಕಾಶರಾಜ ಅದಾವ ಆವೇಶದಲ್ಲಿಯೋ ಅಖಂಡವಾಗಿ ನೀರು ಕರೆಯುತ್ತ ಭೂಲಕ್ಷ್ಮಿಯ ವಕ್ಷ ಸ್ಥಲವನ್ನೆಲ್ಲ ತೋಯಿಸುತ್ತಲಿದ್ದ. ನೆಲ-ಮುಗಿಲುಗಳ ಆ ಲೀಲಾವಿಲಾಸವನ್ನು ಪ್ರಚೋದಿಸುವವಳಂತೆ ಪ್ರಕೃತಿದೇವಿ ಆ ಪ್ರಣಯ ಸಂಭ್ರಮದೊಡನೆ ತಾನೂ ತನ್ನ ನಗ್ನನೃತ್ಯದ ಲಾಸ್ಯತಾಂಡವದಲ್ಲಿ ಮಗ್ನಳಾಗಿದ್ದಳು. ಅಂದಿನ ಆ ನೋಟ ನನ್ನ ಜೀವನದ ಮಹಾನುಭವಗಳಲ್ಲೊಂದು ಎನ್ನಬಹುದು.

ಕುಮುದಿನೀ, ಆಗ ನನ್ನ ಹೃದಯದ ಹಂಬಲವೊಂದು ತಾನಾಗಿ ಹೊರಗೆ ಬಂದು ಆ ಅನುಭವದ ಒಡಲಲ್ಲಿ ಅಡಗಿದ ಅವುದೋ ಒಂದು ಅನುಭೂತಿಯನ್ನು ಅರಸುತ್ತಲಿದ್ದಿರಬೇಕು. ಏಕೆಂದರೆ, ಮೈಯೆಲ್ಲಾ ತೊಯ್ದು, ಚಳಿ ನರನರಗಳಲ್ಲೆಲ್ಲಾ ತುಂಬಿ ತೊನೆದಾಡುತ್ತಿದ್ದರೂ, ನಾನು ಅಂದಿನ ಆ ನೋಟದ ನಿಸ್ಸೀಮತೆಯಲ್ಲಿ ನಿಮಗ್ನನಾಗಿ ಎಷ್ಟೋ ಹೊತ್ತು ಹಾಗೆಯೇ ನಿಂತುಬಿಟ್ಟಿದ್ದೆ. ಮಳೆರಾಯನ ಕಾರುಣ್ಯಕ್ಕೇ ಸಿಲುಕಿದುದರಿಂದ ಬೇರೊಂದು ಉಪಾಯವೂ ಇರಲಿಲ್ಲ.

ಅರ್ಧಗಂಟೆಯಾಯಿತು; ಗಂಟೆಯಾಯಿತು. ಆದರೆ ಮಳೆಗೆ ಗಂಟೆಗಿಂಟೆಗಳ ಗೊಡವೆಯಿದ್ದಂತಿರಲಿಲ್ಲ. ದಿಕ್ಕಾಲಾತೀತವಾಗಿ ಸುರಿಯುತ್ತಿದ್ದಿತು ಕೊನೆಮುಗಿಯಿಲ್ಲದೆ. ದೂರದಲ್ಲಿ ಊರಿನ ದೀಪಗಳು ಕಣ್ಬೆವುಟಿ ಮಿಣುಕುತ್ತಿದ್ದವು. ಚಿಮ್ಮಂಡಿ ಜೀರುಂಡೆಗಳ ಚೀತ್ಕಾರದ ಗಾನ ಮಳೆಯ ಆರ್ಭಟದಲ್ಲಿ ಬೆರೆತು ದಿಕ್ಕು ದಿಕ್ಕಿನಲ್ಲೆಲ್ಲಾ ಹಬ್ಬಿಕೊಂಡಿತ್ತು. ಆ ಗಾನಕ್ಕೆ ಕಪ್ಪೆಗಳು ತಾಳ ಹಾಕುತ್ತಿದ್ದವು. ಎಲ್ಲೆಲ್ಲಿಯೂ ಮುತ್ತಿ ಮುಸುಕಿದ ಕತ್ತಲೆಯ ಕೊನೆಮುಸುಕನೋಸರಿಸಿ ಕಿಡಿಗೇಡಿ ಮಿಂಚುಗಳು ಹಣುಕುತ್ತಲಿದ್ದವು. ಗಾಳಿಯ ಬೀಸಿಗೂ ಮಳೆಯ ಹೊಡೆತಕ್ಕೂ ಸಿಕ್ಕಿ ಗಿಡಮರಬಳ್ಳಿಗಳೆಲ್ಲಾ ಮುಗಿಲನ್ನೇ ಮೊರೆ ಇಡುತ್ತಿದ್ದವು. ಅಂಥ ಆ ವಿಚಿತ್ರ

ಸನ್ನಿವೇಶದಲ್ಲಿ ಆ ಮರದಡಿಯಲ್ಲಿ ಎರಡು ಜೀವಗಳು ಇದ್ದೇವೊ ಸತ್ತೇವೊ ಎಂಬ ಹೊಯ್ದಾಟದಲ್ಲಿ ಸಿಕ್ಕು ಸುತ್ತಾಡುತ್ತಿದ್ದವು.

ಮಳೆಯ ಸಿಡಿಹೊಡೆತದಿಂದ ನನ್ನ ಮೈಯೆಲ್ಲಾ ನೆನೆದು ಹೋಗಿತ್ತು. ಮೈಜುಮ್ಮೆನಿಸುವ ಕಟಕಟ ನಡುಗು ಎಲುಬುಗಳಲ್ಲೆಲ್ಲ ವ್ಯಾಪಿಸಿ ಬೆನ್ನು ಬಿರಿಯುತ್ತಲಿತ್ತು. ಅತ್ತ ಹೊತ್ತು ಹೆಚ್ಚುತ್ತಲಿದ್ದಂತೆ ಇತ್ತ ಮಳೆಯ ಆವೇಗವೂ ಹೆಚ್ಚುತ್ತಲೇ ಇದ್ದಿತು. ಧಾರೆಧಾರೆಯಾಗಿ ಮರದ ತುದಿಯಿಂದ ಬೇರಿನವರೆಗೆ ನೀರು ಇಳಿಯುತ್ತಲಿತ್ತು. ನನಗೆ ಆವರೆಗೆ ಆಶ್ರಯ ಕೊಟ್ಟಿದ್ದ ಬೀಳಲುಗಳು ಈಗ ತಮ್ಮ ಧಾರಾಸಂಪಾತದಿಂದ ಎರೆಯ ಹತ್ತಿದವು. ನನಗೆ ಅಲ್ಲಿ ಎಲ್ಲೆಲ್ಲಿಯೂ ನಿಲ್ಲುವದಕ್ಕೆ ಎಡೆಯಿಲ್ಲದಾಯಿತು.

೫

ಕುಮುದ, ನನ್ನ ಪಾಡೇ ಹೀಗಾಗಿರುವಾಗ, ಪಾಪ ಹೆಣ್ಣು ಮಗಳ ಪಾಡೇನಾಗಿರಬಹುದೆಂದು ನೀನು ಯೋಚಿಸುತ್ತಿದ್ದಿರಬಹುದಲ್ಲವೆ! ಆದರೆ ನಿಜವಾಗಿ ಅವಳು ನನ್ನಷ್ಟು ಕಷ್ಟದ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ, ಆ ಮರದ ಹೊಟ್ಟೆಯಲ್ಲಿ ಒಂದು ಚಿಕ್ಕ ಹೊದರಿದ್ದಿತು. ಆ ಹೊದರಿಗೆ ಎಡಬಲಕ್ಕೆ ಮೂರು ನಾಲ್ಕು ಕಾಡುಗಲ್ಲುಗಳನ್ನು ಹೊಂದಿಸಿ ನೆರೆಹೊರೆಯ ಹೊಲದವರು, ಅದನ್ನೊಂದು ಭರಮಪ್ಪನ ಗುಡಿ ಮಾಡಿದ್ದರು. ಆ ಭರಮಪ್ಪನ ಬಳಿಯಲ್ಲಿ ಮಾತ್ರ ಸ್ವಲ್ಪ ಬೆಚ್ಚಗಿನ ಮರೆಯಿದ್ದಿತು. ನಾನು ಆ ಮರಕ್ಕೆ ಬಂದದೂ ಆ ಮರೆಯನ್ನು ನೆನೆಸಿಕೊಂಡೇ. ಆ ಹೆಣ್ಣುಮಗಳು ಅಲ್ಲಿ ಕುಳಿತಿದ್ದಳು. ಆದುದರಿಂದ ನಾನು ಮರದ ಕೆಳಗೆ ನಿಂತೂ ಮರೆಯಿಲ್ಲದೆ ಪೇಚಾಡಬೇಕಾಯಿತು.

ಇಳಿ ಮುಳುಗಿದ ಮೇಲೆ ಮಳೆಯಂಜಿಕೆಯಿಲ್ಲವಂತೆ, ಆದರೆ ನನ್ನ ಸ್ಥಿತಿ ಹಾಗಿರಲಿಲ್ಲ. ನನ್ನ ದೇಹದ ಕೆಳಗಿನ ಅರ್ಧಭಾಗ ಪೂರಾ ನೆನೆದುಹೋಗಿತ್ತು. ಕೊಡೆಯ ಉಪಕಾರವಾಗಿ ಮೇಲಿನ ಅರ್ಧಭಾಗ ಹೆಚ್ಚಾಗಿ ನೆನೆದಿರಲಿಲ್ಲ. ಆದರೆ ಅರೆಯರೆಯಾಗಿ ತೊಯ್ದುಕೊಂಡುದರಿಂದ ನನ್ನ ಮೈಚಳಿ ಇನ್ನೂ ಹೆಚ್ಚಿತ್ತು. ಆಗ

ನನ್ನ ಕೊಡೆ ನನಗೆ ಉಪಕಾರದ ಬದಲು ಹೇಗೆ ಅಪಕಾರವನ್ನೇ ಮಾಡಿತ್ತೆಂಬುದು ಹೊಳೆಯಿತು.

ಆಗ ಮಾಡುವದೇನು ಕುಮುದ! ಆದದ್ದಾಗಲಿ ಎಂದು ಇದ್ದ ಪರಿಸ್ಥಿತಿಯನ್ನೊಪ್ಪಿಕೊಂಡು ಹಾಗೇ ನಿಂತುಬಿಟ್ಟೆ. ಹಾಗಿರುವಂತೆಯೇ, ನನ್ನ ತಲೆಯಲ್ಲಿ ಆ ಹೆಣ್ಣುಮಗಳ ಬಗೆಗೆ ಒಂದೊಂದೇ ವಿಚಾರ ಸುಳಿದಾಡತೊಡಗಿದ್ದುದರಿಂದ ಹೊರಗಿನ ಮಳೆ-ಚಳಿಗಳ ಕಾಟ ಮರೆಯತೊಡಗಿತು. ಆ ಹೆಣ್ಣುಮಗಳು ಅಂತಹ ಅಡ್ಡ ಹೊತ್ತಿನ ಅಪರಾತ್ರಿ ಅಲ್ಲಿ ಏಕೆ ಬಂದಿರಬಹುದು? ಹಾಗೆ ನಾನು ಅವಳ ಬಳಿಯಲ್ಲಿ ನಿಲ್ಲುವದರಿಂದ ನನಗೇನಾದರೂ ಗಂಡಾಂತರ ಬಂದರೆ ಹೇಗೆ? ಎಂದು ಯೋಚಿಸುತ್ತಿದ್ದೆ. ಒಮ್ಮೊಮ್ಮೆ ಅವಳು ಹೆಂಗಸು ಹೌದೇ ಅಲ್ಲವೇ ಎಂಬ ಅನುಮಾನ ಕೂಡ ಬರುತ್ತಿತ್ತು.

೬

ಹೀಗಿರುವಂತೆಯೇ ಅವಳು ಕೂತಲ್ಲಿಂದ ಚಿಟ್ಟನೆಯ ಚೀರುದನಿ ಕೇಳಬಂತು. ನಾನು ಒಮ್ಮೆಲೆ ಮೆಟ್ಟಿಬಿದ್ದೆ. ದನಿ ಒಂದು ಕೂಸಿನದೇನೋ ಎನ್ನಿಸಿತು. ಅಲ್ಲಿಯವರೆಗೆ ನೀರವವಾದ್ದು, ಈಗೊಮ್ಮೆಲೆ ಹಾಗೆ ಚೀರುವುದಕ್ಕೆ ಕೂಸೆಲ್ಲಿಂದ ಬಂತೋ ಎಂದೆನ್ನಿಸಿತು. ಅಷ್ಟು ಹೊತ್ತೆಲ್ಲ ನಾನು ಆ ಹೆಂಗಸಿನ ಬಗೆಗೆ ವಿಚಾರಿಸುತ್ತಲಿದ್ದೆನಾದರೂ ನಾನಾಗಿಯೇ ಅವಳೊಡನೆ ಮಾತೆತ್ತುವ ಸಾಹಸ ಮಾಡಿರಲಿಲ್ಲ. ನನ್ನ ವಿಚಾರ ಮಾತ್ರ ಅತ್ತಿತ್ತ ತಾಕಲಾಡುತ್ತ ಸಾಗಿತ್ತು. ಅಂತಹದರಲ್ಲಿ ಆ ಹೊಸದನಿಯ ಚೀತ್ಕಾರವೊಂದು ಕೇಳಬಂದುದರಿಂದ ನನ್ನ ಗಾಬರಿಯ ಕೈ ಓಡಿದು ಕುತುಹಲವೂ ಓಡಿಬಂದಿತು.

ಆದರೂ ನಾನು ಅವಳನ್ನು ಮಾತನಾಡಿಸಲೇ ಬೇಡವೇ ಎಂಬ ಸಂದೇಹದಲ್ಲೇ ಇದ್ದೆ. ಅಷ್ಟರಲ್ಲಿ ಆ ಹೆಂಗಸೂ ಬಿಕ್ಕಿ ಬಿಕ್ಕಿ ಅಳುವುದಕ್ಕೆ ಮೊದಲು ಮಾಡಿದಳು. ಆಗಂತೂ ನನ್ನ ಗಾಬರಿ ಮತ್ತಷ್ಟು ಗಡಬಡಿಸಿತು. ನನಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಮಾತನಾಡಿಸಲು ಮುಂದುವರಿದ ಮನಸ್ಸಿನೊಡನೆ ನಾಲಗೆ

ಮುಂದರಿಯುತ್ತಿರಲಿಲ್ಲ. ಹಾಗೇ ಕೆಲಹೊತ್ತು ದಿಙ್ಮೂಢನಾಗಿ ನಿಂತುಕೊಂಡೆ. ಮಗುವಿನ ಅಳುವಿಕೆ, ಅವಳ ಬಿಕ್ಕಳಿಕೆ ಸಾಗಿಯೇ ಇದ್ದುವು. ಕೊನೆಗೊಮ್ಮೆ ಮಾತನಾಡಿಸಿದೆ.

ಏನವ್ವಾ; ಕೂಸಿನ್ನ ಯಾಕ ಅಳ್ಸಿತಿದ್ವೀ?"

ಅವಳಿಂದ ಉತ್ತರವಾದರೂ ಬರಲಿಲ್ಲ. ಬಿಕ್ಕಳಿಕೆಯ ಅಳುವು ಮಾತ್ರ ಹೆಚ್ಚಿತು. ಮಿಂಚಿನ ಬೆಳಕಿನಲ್ಲಿ ಅವಳು ಒಂದು ದೇಹದ ಮುದ್ದೆಯಂತೆ ಕುಳಿತುಕೊಂಡುದು ಕಾಣಿಸಿತು. ನಾನು ನನ್ನ ಬ್ಯಾಟರಿಯನ್ನು ತೆಗೆದು ಬೆಳಕು ಮಾಡಲು ಯತ್ನಿಸಿದೆ. ಬ್ಯಾಟರಿ ಚಕ್ಕನೆ ಒಮ್ಮೆ ಬೆಳಕು ಪಸರಿಸಿ ಆರಿಯೇ ಹೋಯಿತು. ಆದರೂ ಆ ಹೆಣ್ಣುಮಗಳು ಮಡಲಲ್ಲಿದ್ದ ಬಟ್ಟೆಯ ಸುರುಳಿಯ ಮೇಲೆ ತನ್ನ ಎದೆಯಾನಿಸಿ ಒರಗಿಕೊಂಡು ತನ್ನೆರಡೂ ಕೈಗಳಿಂದ ಆ ಸುರುಳಿಯನ್ನು ಬಿಗಿಯಾಗಿ ಅಪ್ಪಿಕೊಂಡುದು ಕಂಡುಬಂತು. ನಾನು ಇನ್ನೂ ಹತ್ತಿರ ಹೋಗಿ ಬಗ್ಗಿ ನೋಡಿದೆ. ನಾನು ತೀರ ಸನಿಯಕ್ಕೆ ಬಂದುದು ಅವಳಿಗೆ ಅರಿವಾಗಲಿಲ್ಲವೆಂದು ತೋರುತ್ತೆ. ಹಾಗೇ ಅಳುತ್ತಿದ್ದಳು. ಮಗು ನಡುನಡುವೆ ಸುಮ್ಮನಾಗಿ ಮತ್ತೆ ಮತ್ತೆ ಚೀರಿಕೊಳ್ಳುತ್ತಿತ್ತು.

೭

ನಾನು ಸ್ವಲ್ಪ ಧೈರ್ಯ ಮಾಡಿದೆ. ಮೆಲ್ಲನೆ ಅವಳ ಭುಜವನ್ನು ತಟ್ಟಿ ಮತ್ತೆ ಹೇಳಿದೆ-

``ಮಗು ಯಾಕ ಅಳ್ತದವ್ವಾ; ಸುಮ್ಮನಾಗಿಸು ಅದನ್ನು." ಅವಳು ಮತ್ತೂ ನೀರವವಾಗಿಯೇ ಇದ್ದಳು. ನಾನು ಭುಜ ತಟ್ಟಿದುದರಿಂದ ಅವಳು ಯಾವುದೊಂದೂ ಸಂಕೋಚವನ್ನು ಮಾಡಿಕೊಳ್ಳಲಿಲ್ಲ. ಅವಳಿಗೆ ನನ್ನಲ್ಲಿ ಯಾವದೋ ಒಂದು ಬಗೆಯ ಆಕಸ್ಮಿಕ ವಿಶ್ವಾಸವುಂಟಾಗಿರಬೇಕು. ಇಲ್ಲವೆ, ಅವಳ ಹೃದಯದ ದುಃಖ ಬಹಿರಂಗದ ಆಗುಹೋಗುಗಳಿಗೆ ಎಡೆಗೊಡುವಂತಿದ್ದಿರಲಾರದು.

ನಾನು ಮತ್ತೂ ಎರಡುಮೂರು ಸಲ ಅವಳನ್ನು ಮಾತನಾಡಿಸಿದೆ.

ಕೊನೆಗೊಮ್ಮೆ ಅವಳು ಬಿಕ್ಕುದನಿಯಲ್ಲೆ ಮರುನುಡಿಯಿತ್ತಳು-

``ಕೂಸೂ ತಂಡಿಗೆ ಅಳ್ಳೈತ್ರಿಯಪ್ಪಾ.....!'' ಅವಳ ಆ ಮಾತಿನಲ್ಲಿ ಚಳಿಯ ಗದ್ಗದದೊಡನೆ ದುಃಖದ ಉಬ್ಬಳಿಕೆಯೂ ಬೆರೆತುಕೊಂಡಿತ್ತು.

ಕೂಸು ಚಳಿಗೆ ಅಳುವುದಾದರೆ ಅವಳೇಕೆ ಅಷ್ಟು ಎದೆಬಿರಿಯುವಂತೆ ಉದ್ವೇಗಪಡುತ್ತಿದ್ದಾಳೆಂಬುದೊಂದು ನನಗೆ ತೊಡಕೇ ಆಯಿತು. ಆದರೂ ನನಗೆ ಅವಳ ಆ ಕೂಸಿನ ಕಷ್ಟ ತತ್‌ಕ್ಷಣದಲ್ಲಿ ಹೆಚ್ಚಾಗಿ ತೋರಿತು.

``ಕೂಸನ್ನ ನೆಟ್ಟಗೆ ಹೊಚ್ಚಿ ಮಲಗಿಸಬಾರದೇನವ್ವಾ.''

``ಬಟ್ಟೆಯೆಲ್ಲಾ ತೊಯ್ದು ತಪ್ಪಡಿ ಆಗ್ಯಾವ್ರಿ. ಮಳೀನೀರು ಒಳತನಕ ಇಳ್ದು ಕೂಸಿನ ಮೈ ಕೊರ್ಯಾಕ ಹತ್ಯಾವು''

ಕೂಸಿನ ಮೈ ಕೊರೆವ ಮಳೆನೀರಿನ ತಣ್ಣನ್ನು ಇನಿಸಾದರೂ ಕಡಮೆ ಮಾಡುವದಕ್ಕಿದ್ದಿರಬೇಕು, ಅವಳ ಎದೆ ಆ ಕೂಸಿನ ಮೇಲೆ ಕಣ್ಣೀರ ಬಿಸಿಯನ್ನು ಸೂಸುತ್ತಿದ್ದಿತು.

ನಾನು ತಟ್ಟನೆ ನನ್ನ ಕೋಟನ್ನು ಕಳೆದು ಅವಳ ಕೈಗೆ ಕೊಟ್ಟೆ, ``ಇದನ್ನು ಮಗುವಿಗೆ ಹೊದಿಸವ್ವಾ'' ಎಂದು.

ಅವಳು ನನ್ನ ಮಾತು ಕೇಳಿ ಮೊಗವನ್ನು ಮೇಲೆತ್ತಿದಳು. ಆ ಕತ್ತಲಲ್ಲಿ ನನಗಾವುದೂ ಕಾಣಿಸುತ್ತಿರಲಿಲ್ಲವಾದರೂ ನನ್ನ ಕೈಯಿಂದ ಕೋಟನ್ನು ತೆಗೆದುಕೊಳ್ಳುವಾಗ, ಅವಳ ಕಂಣಲ್ಲಿಯ ಕರುಣೆ ಯಾವದೋ ಒಂದು ಬೆಳಕಿನ ಆಧಾರದಿಂದ ನನ್ನ ಕಣ್ಣುಗಳನ್ನು ಹುಡುಕುತ್ತಲಿದ್ದಂತೆ ನನಗೆನ್ನಿಸಿತು.

ಆ

ನನ್ನ ಕೋಟೂ ಸ್ವಲ್ಪ ಸ್ವಲ್ಪ ಒದ್ದೆಯಾಗಿಯೇ ಇತ್ತು. ಆದರೆ ಅವಳು ಮಟ್ಟಿಗೆ ಅದರಿಂದ ಬಹಳ ಸಮಾಧಾನಪಟ್ಟುಕೊಂಡಳು. ಆವರೆಗೆ ಅಳುತ್ತಲಿದ್ದ

ಆ ಕೂಸು ಎಲ್ಲಿದೆಯೆಂಬುದೇ ನನಗೆ ತಿಳಿದಿರಲಿಲ್ಲ; ಅಲ್ಲದೆ ವಿಶೇಷ ಶಿಷ್ಟಾಚಾರವಿಲ್ಲದೆ ನಾನು ಕೊಟ್ಟ ಕೋಟನ್ನು ಇಸಿದುಕೊಂಡುದರಿಂದ ನನಗೆ ಅವಳಲ್ಲಿ ಸ್ವಲ್ಪ ಸಲಿಗೆಯೂ ಆದಂತಾಯಿತು. ಅಂತೆಯೆ, ನಾನು ಇನ್ನೂ ತುಸು ಹತ್ತಿರ ಸರಿದು ನೋಡಿದೆ. ಮಿಂಚಿನ ಬೆಳಕಿನ ಕೃಪೆಯಿಂದ ನನಗೆ ಅವಳ ಕಾರ್ಯ-ಕಲಾಪ ಅಸ್ಪಷ್ಟವಾಗಿ ಕಾಣುತಿದ್ದಿತು. ಅವಳು ತನ್ನ ಮಡಿಲಲ್ಲಿದ್ದ ಬಟ್ಟೆಯ ಸುರುಳಿಯನ್ನು ತೊಯ್ದು ನೀರು ಬಸಿಯುತ್ತಿದ್ದ ತನ್ನ ಸೆರಗಿನ ಮುಸುಕಿನಿಂದ ಹೊರತೆಗೆದಳು. ಮಳೆಯ ರಭಸವಿನ್ನೂ ಹೆಚ್ಚುತ್ತಲೆ ಇದ್ದುದರಿಂದ ಸಿಡಿಹನಿಗಳನ್ನು ತಡೆಯಲೆಂದು ನಾನು ಕೊಡೆಯನ್ನು ಅವಳಿಗೂ ಮಗುವಿಗೂ ಮರೆಮಾಡಿ ಹಿಡಿದೆ. ಅವಳು ಮೆಲ್ಲಮೆಲ್ಲನೆ ಬಟ್ಟೆ ಸುರುಳಿಯನ್ನು ಬಿಚ್ಚತೊಡಗಿದಳು. ಉಸಳಿಗಾಗಿ ನೆನೆಹಾಕಿದ ಮಡಕೆಯ ಕಾಳಿನಂತೆ, ಆರೇಳು ಪದರಿನೊಳಗೆ ತೊಯ್ದು ತಣ್ಣಗೆ ಆಣೆಕಲ್ಲಿನಂತಾಗಿ ಆ ಮಗು ಮಲಗಿಕೊಂಡಿತ್ತು. ಆ ಬಟ್ಟೆಗಳಿಂದ ಹೊರ ಬಂದೊಡನೆ ಉಸಿರು ಸುಲಭವಾಗಿ ಆಡ ಹತ್ತಿದ್ದರಿಂದ ಮಗು ಸ್ವಲ್ಪ ಸಮಾಧಾನವಾಯಿತು.

ಅವಳು ತೋರಿಯೂ ತೋರದ ಹರ್ಷದಿಂದ ಮಗುವಿಗೆ ನನ್ನಕೋಟನ್ನು ಹೊದಿಸಹೋದಳು. ಆದರೆ ಮಗುವಿನ ಮೈ ಬಲು ಹಸಿಯಾದುದರಿಂದ ಒರೆಸುವದಕ್ಕೆಂದು, ಜೇಬಿನಿಂದ ನನ್ನ ಕೈವಸ್ತ್ರ ತೆಗೆದುಕೊಟ್ಟೆ. ಅವಳು ಎರಡೂ ಕೈಗಳಿಂದ ಮಗುವನ್ನು ಅವುಚಿಕೊಂಡುದರಿಂದ ಒರೆಸುವ ಕೆಲಸವನ್ನು ನಾನೇ ಮಾಡಬೇಕಾಯಿತು. ಆ ಮೇಲೆ ಅರೆಹಸಿಯಾದ ಕೋಟನ್ನು ಮಗುವಿಗೆ ಹೊದಿಸುವದು ನನಗೆ ಸರಿಬೀಳಲಿಲ್ಲ. ಅದಕ್ಕೂ ಬೆಚ್ಚಗಾದ ಶರ್ಟನ್ನು ತೆಗೆದುಕೊಟ್ಟೆ. ಅವಳು ಮಗುವನ್ನು ಅದರಲ್ಲಿ ಮಲಗಿಸಿ ಮೇಲೆ ಕೋಟನ್ನು ಹೊದಿಸಿದಳು. ಮಗುವಿಗೆ ಬೆಚ್ಚನ್ನ ಹೊದಿಕೆಯಿಂದ ನೆಮ್ಮದಿಯೆನಿಸಲು ಅದು ಅಲ್ಲಿಯೆ ತೆಪ್ಪಗೆ ಬಿದ್ದುಕೊಂಡು ಬಿಟ್ಟಿತು.

ಕುಮುದ, ನೀನು ನನ್ನ ಹೃದಯ ಮಂದಿರದ ಅಧಿದೇವಿ ಎಂಬುದನ್ನು ಬಗೆದು ನಿನ್ನೆದುರು ಏನನ್ನೂ ಬಚ್ಚಿಡದೆ ಎಲ್ಲವನ್ನೂ ಹೇಳಿಬಿಡುತ್ತೇನೆ. ನಾನು ನನ್ನ ಶರ್ಟನ್ನು ಬಿಚ್ಚಿ ಕೊಟ್ಟಾಗ ಅವಳ ಜೀವನದ ಕೃತಜ್ಞತೆಯೆಲ್ಲಾ ಅವಳ ಮೈ ತುಂಬ

ಹರಿದಾಡಿ ಕೋಡಿಯೊಡೆದು ಕೈಗುಂಟ ಇಳಿದು ಬಂದಿರಬೇಕು. ಅಂತೇ ಅವಳು ಸಲೀಲವಾಗಿ ನನ್ನ ಕೈಯನ್ನು ತನ್ನ ಕೈಯಿಂದ ಅವಚಿ ಬಿಗಿಯಾಗಿ ಒತ್ತಿ ಬಿಟ್ಟಳು. ಅವಳು ಹಾಗೆ ಮಾಡಿದುದರಲ್ಲಿ ನನಗೆ ಯಾವ ವೈಚಿತ್ರ್ಯವೂ ಎನಿಸಲಿಲ್ಲ. ಮೈ ಮಾತ್ರ ಒಮ್ಮೆ ಜುಮ್ಮೆಂದಿತು.

೯

ನಾನೂ ಅವಳೂ ಸೇರಿ, ಆ ಮಗುವಿನ ಆರೈಕೆ ಮಾಡುತ್ತಲಿದ್ದಾಗ, ಕುಮು, ನಿನ್ನೆದುರು ಸತ್ಯವನ್ನು ಹೇಳುತ್ತೇನೆ- ಆ ಮಗುವಾಗಲಿ ಆ ಹೆಣ್ಣು ಮಗಳಾಗಲೀ, ಜನ್ಮಾಂತರದಲ್ಲಿ ನನ್ನವರೇ ಆಗಿದ್ದಿರಬಹುದೇ ಎನ್ನಿಸಿತು ನೋಡು. ಆ ಮಗುವಿನ ಆರೈಕೆಯಲ್ಲಿ ತೆಗೆದುಕೊಂಡ ಆಸ್ಥೆಯನ್ನು ನೆನೆಸಿದರೆ ನನ್ನಲ್ಲಿ ಇಂದಿಗೂ ಒಂದು ಬಗೆಯ ಸೋಜಿಗ ಹುಟ್ಟಿದ್ದು ಕುಣಿದಾಡುತ್ತಿದೆ. ಆಗ ನಾನೂ ಅವಳೂ ಒಂದ ತೆರದ ತನ್ಮಯತೆಯಿಂದ ಆ ಮಗು ಬೆಚ್ಚಗೆ ಮಲಗಿಸುತ್ತಿದ್ದಾಗಿನ ನಮ್ಮ ಕೇವಲ ಸಲಿಗೆಯ ವರ್ತನದಿಂದ, ನಾನೂ ಅವಳೂ ಅದೆಷ್ಟೋ ದಿನ ಕೂಡಿಬಾಳುವೆ ಮಾಡಿದವರಂತೆನಿಸಿತು.

ಮಗು ಸುಮ್ಮನಾಗಿ ಮಲಗಿತು. ಅವಳೂ ಸಮಾಧಾನ ತಾಳಿ ಮಗುವನ್ನು ಎದೆಗವಚಿಕೊಂಡೇ ಕುಳಿತಿದ್ದಳು. ಮಳೆ ಮಾತ್ರ ತನ್ನ ರೊಚ್ಚಿನಲ್ಲಿ ಜಗವನ್ನೇ ಕೊಚ್ಚಿಕೊಂಡೊಯ್ಯುವಂತೆ ಘೋರಾಡುತ್ತಿದ್ದಿತು. ಮಗುವಿನ ಜೋಪಾನವೇ ನಮ್ಮ ಮುಖ್ಯ ಕಾರ್ಯವಾದುದರಿಂದ, ನಾನು ಕೊಡೆಯನ್ನು ಆ ಹೊದರಿನ ಬಾಗಲಿಗೆ ಮರೆಯಾಗಿ ಹಿಡಿದು ಅವಳ ಬಳಿಯಲ್ಲೇ ಕುಳಿತೆ. ಆಗ ನಮ್ಮಿಬ್ಬರಲ್ಲಿ ಯಾವ ಬಗೆಯ ಸಂಕೋಚವೂ ಇರಲಿಲ್ಲ. ಅಂತೇ ಅವಳು ತಾನು ಕೂತಲ್ಲಿಯೇ ಮತ್ತಿಷ್ಟು ಮೂಲೆಗೆ ಸರಿದು ನನಗೆ ಸ್ಥಳ ಮಾಡಿಕೊಟ್ಟಳು.

೧೦

ಕುಮುದ, ಹಾಗೆ ನಾವಿಬ್ಬರೂ ಮೈಗೆ ಮೈಗೆ ಹಚ್ಚಿಕೊಂಡು ಕುಳಿತಾಗ, ನನ್ನ ಮನಸ್ಸು ಏನಾಗಿರಬಹುದೆಂದು ಭಾವಿಸುತ್ತೀ; ಹೇಳು ನೋಡೋಣ.

ಚಂಚಲವಾಯಿತೆನ್ನುವಿಯಾ? ಪಾಪವಿಚಾರಗಳದೊಂದು ನರಕವಾಗಿರಬಹುದಲ್ಲವೇ ನನ್ನ ಮನಸ್ಸು. ಇಲ್ಲ; ಇಲ್ಲ; ಕುಮುದಿನೀ;ನಿಜವಾಗಿಯೂ ಇಲ್ಲ. ನೀನೊಬ್ಬಳಾದರೂ ನಂಬು, ನನ್ನ ಕುಮೂ. ಜಗತ್ತೆಲ್ಲ ಇದೊಂದು ಬಣ್ಣನೆಯ ಮಾತು ಎಂದು ಹೀಗಳೆದರೆ ಪರವಿಲ್ಲ. ನೀನು ಮಾತ್ರ ನಾನೆಂದುದನ್ನು ನಂಬಿದರೆ ನನಗದು ಸಾಕು; ಕುಮುದ.

ನಾನು ನನ್ನ ಬಲಗೈಯಿಂದ ಕೊಡೆಹಿಡಿದುಕೊಂಡಿದ್ದೆ. ಅವಳು ತನ್ನ ಎಡಗೈಯಿಂದ ಮಗುವನ್ನವಚಿ, ಬಲಗೈಯಿಂದ ನನ್ನ ಎಡಗೈಯನ್ನು ಬಿಗಿಯಾಗಿ ಹಿಡಿದುಕೊಂಡು ಇನ್ನಾವ ಹಾವಭಾವ ಚಲನೆವಲನೆಗಳಿಲ್ಲದೆ ತುಟಿ ಎರಡು ಮಾಡದೆ ನೀರವತೆಯಿಂದ ಕೀಳ್ಮೊಗಳಾಗಿ ಕಣ್ಣೀರಿಡುತ್ತ ಕುಳಿತುಬಿಟ್ಟಿದ್ದಳು. ಆಗ ಅವಳ ಚಿತ್ತರಂಗದಲ್ಲಿ ಯಾವ ಬಗೆಯ ನಾಟಕ ನಡೆದಿದ್ದಿತೋ ಹೇಳಲಾರೆ. ನನ್ನ ಚಿತ್ತ ಮಾತ್ರ ಯಾವದೋ ಒಂದು ಚಿರವಿನೂತನವಾದ ಅನನುಭೂತ ಅನುಭೂತಿಯ ಅದೃಶ್ಯರಂಗದಲ್ಲಿ ಅನಂತಲೀಲೆಯಾಡುತ್ತಿದ್ದಂತೆನಿಸಿತು. ಅಂತಹ ಆ ರಾತ್ರಿಯಲ್ಲಿ ಅಪರಿಚಿತಳಾದ ಹೆಂಗಸೊಬ್ಬಳು ನನ್ನಲ್ಲಿ ಹಾಗೆ ಅನಿಮಿತ್ತ ಶ್ರದ್ಧೆಯಿಂದ ಕೈ-ಮೈ ತಟ್ಟಿ ನಿಶ್ಶಂಕೆಯಿಂದ ನಿರ್ಭೀತಿಯಿಂದ ನನ್ನ ಬಳಿಯಲ್ಲಿ ಕುಳಿತ ಸಂಗತಿಯೇ ನನ್ನ ದೃಷ್ಟಿಯನ್ನು ಅಂತರ್ಮುಖಿಯಾಗಿ ಮಾಡಿತು. ನಾನು ಅವಳ ಹೃದಯದಲ್ಲಿ ಹೊಕ್ಕು ನೋಡಲು ಯತ್ನಿಸಿದೆ, ಅವಳ ಜೀವನ ಚಾರಿತ್ರ್ಯವನ್ನು ಹೆಣೆದು ನೋಡಲು ಹೆಣಗಿದೆ. ಅವಳೊಬ್ಬ ಬಿದ್ದ ಹೆಂಗಸೇ ಎನ್ನಿಸಿತೊಮ್ಮೆ. ಆದರೆ ನನ್ನ ಹೃದಯ ಈ ವಿಚಾರಕ್ಕೆಡೆಗೊಡಲಿಲ್ಲ. ಏನಿದ್ದರೇನು; ಅವಳೊಬ್ಬ ನೊಂದಜೀವ ಎಂಬುದು ಒಡೆದು ಕಾಣುತ್ತಿತ್ತು. ಅದಕ್ಕೂ ಹೆಚ್ಚಿನದೇನನ್ನೂ ಅವಳಲ್ಲಿ ನೋಡಲು ನನ್ನ ಹೃದಯ ಸಿದ್ಧವಾಗಲಿಲ್ಲ. ಒಮ್ಮೆ ಅವಳ ಇತಿಹಾಸವನ್ನೂ ಕೇಳಿ ನೋಡೋಣವೇ ಎನ್ನಿಸಿತೇನೋ ನಿಜ. ಆದರೆ ಅವಳು ಅಂಥದೇನನ್ನೂ ಹೇಳುವ ಪರಿಸ್ಥಿತಿಯಲ್ಲಿಲ್ಲವೆಂಬುದು ಕಂಡ ಮಾತಾಗಿತ್ತು. ಮೇಲಾಗಿ ಆ ಮಾತೆತ್ತುವದೆಂದರೆ, ಅವಳ ಹೃದಯದ ದುಃಖಾಗ್ನಿಯನ್ನು ಹೊತ್ತಿಸಿದಂತಾದೀತು, ಎಂದೂ ಹೆದರಿದೆ. ಒಂದು ಮಾತು; ಅವಳ ಆಗಿನ ಪರಿಸ್ಥಿತಿಯಲ್ಲಿ, ಅವಳ ಬಗೆಗೆ ನನ್ನ ಹೃದಯದಲ್ಲಿ

ನಾನು-ಕಂಪವೊಂದಲ್ಲದೆ ಉಳಿದ ಭಾವನೆಗಳಿಗಾಗಲೀ ವಿಚಾರಗಳಿಗಾಗಲೀ ಎಡೆಯಿರಲಿಲ್ಲ.

೧೧

ಇಷ್ಟೊತ್ತಿಗೆಂದರೆ ನಾನಲ್ಲಿಗೆ ಬಂದು ಎರಡು ಗಂಟೆಯಾಗಿರಬಹುದು. ಆವರೆಗೆ ಅವಳು ಸೆರಗಿನಿಂದ ತುದಿಯವರೆಗೆ ಇಡಿಯಿಡಿಯಾಗಿ ತೊಯ್ದ ಸೀರೆಯಲ್ಲೇ ಇದ್ದುದರಿಂದ ಅವಳ ಮೈಯೆಂತ ಮೈಯೆಲ್ಲ ಗದಗುಟ್ಟಿ ನಡುಗಹತ್ತಿತು. ಹಲ್ಲುಗಳ ಕಟಗುಟ್ಟುವಿಕೆಯ ಸಪ್ಪಳವೂ ಕೇಳಿಬರಹತ್ತಿತು. ನೋಡು ಕುಮುದ, ಅದೇನು ಅನುಕಂಪದ ಬಲುಮೆಯೋ, `ಚಳಿಯಾಕೆ'ಯ ಜುಲುಮೆಯೋ ಹೇಳಲಾರೆ; ಬೇಡ ಬೇಡವೆಂದರೂ ನನ್ನ ಮೈ ಕೇಳದೆ ನಡುಗಹತ್ತಿತು. ಚಳಿಯು ರಕ್ತವನ್ನೇ ಹೆಪ್ಪುಗಟ್ಟಿಸುವದೇನೋ ಎನ್ನಿಸುವಂತಾಯಿತು. ನಾನು ಅವಳ ನಡುಗುವ ದೇಹಕ್ಕೆ ಆಧಾರವಾಗಲೆಂದು ನನ್ನ ತೋಳನ್ನು ಅವಳ ಬೆನ್ನಿಗಾನಿಸಿ ಹಿಡಿದುಕೊಂಡೆ. ಅವಳೂ ತನ್ನ ತೋಳಿಂದ ನನ್ನ ಮೈಯನ್ನು ಸುತ್ತುಗಟ್ಟಿದಳು. ಅವಳ ವಾತ್ಸಲ್ಯದಾಳವನ್ನು ನಾನು ಆಮೊದಲೆ ಕಂಡಿದ್ದೆನಾದ್ದರಿಂದ ಅಂದಿನ ಆ ಅಪ್ಪುಗೆಯಲ್ಲಿ ಸ್ತ್ರೀ ಹೃದಯದ ಅಗಾಧವಾದ, ಅವರ್ಣನೀಯವಾದ, ಅನಿರ್ವಚನೀಯವಾದ ಒಂದು ಭಾವನಾ ಲೋಕದ ದೃಷ್ಟಾಂತ ನನ್ನ ಕಣ್ಣೆದುರು ಸುಳಿದಾಡಿತು. ಆ ಕಣಸಿನ ನೋಟದಿಂದ ಮಂತ್ರಮುಗ್ಧವಾದ ನನ್ನ ಚೈತನ್ಯ ನನ್ನ ಭೌತಿಕ ಶರೀರದ ಮೇರೆಯನ್ನು ಮೀರಿ ತೇಲಿ ತೇಲಿ ಮೇಲಕ್ಕೇರುವಂತೆನಿಸಿತು. ಅವಳಿಗೂ ಹಾಗೇ ಹಾಗಿರಬೇಕು. ಆ ಚಿತ್ತೋನ್ಮಾದಾವಸ್ಥೆಯಲ್ಲಿ ನಾವು ಎಷ್ಟು ಹೊತ್ತನ್ನು ಹಾಗೇ ಕಳೆದೆವು ಎಂಬುದರ ಅರಿವೇ ಆಗಲಿಲ್ಲ. ಮಳೆನಿಂತುದು ತಿಳಿಯಬರಲಿಲ್ಲ. ನಮ್ಮ ನಮ್ಮ ಮನೆಗಳಿಗೆ ಹೋಗಬೇಕೆಂಬ ಎಚ್ಚರವಿರಲಿಲ್ಲ. ಅಂತೂ, ಆಗ ನಾವೀ ಸೃಷ್ಟಿಯಲ್ಲಿದ್ದೆವೋ ಇಲ್ಲವೊ ಎನ್ನುವಂತಿತ್ತು.

೧೨

ಬೆಳಗಿನ ಐದು ಗಂಟೆಯಾಗಿರಬಹುದು. ತ್ರಯೋದಶಿಯ ಚಂದ್ರಾಮ ಅದೇ ಮೂಡಿ ಸ್ವಲ್ಪ ಮೇಲಕ್ಕೇರಿದ್ದ. ಅಲ್ಲೊಂದು ಇಲ್ಲೊಂದಾಗಿ ತಾರಗೆಗಳು

ಈಣುಕುತ್ತಿದ್ದವು. ಅಷ್ಟೊತ್ತಿಗೆ ಸರಿಯಾಗಿ ಮಗು ನಿದ್ದೆತೀರಿಸಿ ಎದ್ದು ಒಮ್ಮೆ ಕಿರಿಚಿಕೊಂಡಿತು. ನನ್ನ ಅಪ್ಪಿಗೆಯಲ್ಲಿದ್ದು, ಭಾವನಾಪ್ರಪಂಚದ ಚಿಕ್ಕೆ ಚಂದ್ರಾಮರೊಡನೆ ಚಕ್ಕಂದವಾಡುತ್ತಲಿದ್ದ ಅವಳ ಚೈತನ್ಯ ಒಮ್ಮೆಲೆ ಚಲಮಲಿಸಿ ಮಾತೃಸ್ವರೂಪವನ್ನು ಧರಿಸಿ ಮಗುವಿದ್ದಲ್ಲಿ ಇಳಿದು ಬಂತು. ತಾಯಿಮಕ್ಕಳ ಪ್ರೇಮದಾಟದಲ್ಲಿ ನಾನು ಅಷ್ಟು ಬರಲಾರದೆ ದೂರ ಸರಿದು ನೋಡುತ್ತ ನಿಂತೆ.

ಅವಳು ಮಗುವನ್ನು ಮೈದಡವಿ, ಮುದ್ದಾಡಿ ಸಂತವಿಸತೊಡಗಿದಳು. ಹಿಂದಿನ ರಾತ್ರಿಯ ದುಃಖವನ್ನು ಮರೆತು, ಆ ಮಗುವನ್ನು ಎದೆಗವಚಿ ನಲಿದಾಡಿದಳು. ಆ ನೋಟ ನನಗೊಂದುಕಣ್ಣಹಬ್ಬವಾಗಿರಲು, ನಾನು ಮೈಮರೆತು ನೋಡುತ್ತ ನಿಂತೆ.

೧೩

ಇದ್ದಕ್ಕಿದ್ದಂತೆಯೆ ಅವಳು ಮಗುವಿನೊಡನೆ ಚಂಗನೆಂದು ನಿಂತಳು. ನಾನು ಗಾಬರಿಯಾದೆ. ಅದೇ ಅರೆಯರೆಯಾಗಿ ಮೂಡಿದ ನಸುಕಿನ ಮಸುಕು ಬೆಳಗಿನಲ್ಲಿ ತನ್ನ ಬೊಗಸೆಗಂಗಳುಗಳನ್ನು ಚಾಚಿ ಸುತ್ತಲೂ ನೋಡಿದಳು. ಹೃದಯದ ಕಳವಳವನ್ನು ಕಣ್ಣೀರಾಗಿ ಹರಿಸಿ ಹರಿಸಿ ಕೊನೆಗೆ ಯಾವದೊ ಒಂದು ತರದ ಸಮಾಧಾನ ತಾಳುವ ದುಃಖಿ ಜೀವಿಯಂತೆ ಜಗತ್ತು ಸ್ತಬ್ಧವಾಗಿದ್ದಿತು.

ಆ ಜಗತ್ತು ಅವಳಿಗೇನನ್ನು ತೋರಿತೋ ಯಾರು ಬಲ್ಲರು! ದೀರ್ಘನಿಶ್ವಾಸವೊಂದನ್ನು ಅಂತರೀಕ್ಷದ ಶೂನ್ಯತೆಯಲ್ಲಿ ತೇಲಿಬಿಟ್ಟು, ತಟ್ಟನೆ ಯಾವುದೋ ಒಂದು ನಿಟ್ಟು ಹಿಡಿದು ಸಾಗಿಹೋದಳು. ನಾಲ್ಕೆಂಟು ಹೆಜ್ಜೆಹೋಗಿ, ಹೇಗೋ ತಡೆದು ನಿಂತು, ನನ್ನನ್ನೊಮ್ಮೆ ನೋಡಿದಳೇನೊ, ಆದರೆ ಗಾಬರಿಯ ಗುಂಗಿನಲ್ಲಿದ್ದ ನನಗೆ ಅದಾವುದು ಗೋಚರವಾಗಲಿಲ್ಲ. ಮೇಲೆ ಹತ್ತರಿದ್ದರೂ ಮೋರೆಯ ಗುರುತು ಕಾಣಿಸದಷ್ಟು ಮುಸುಕುಗತ್ತಲೆ. ನನ್ನಿಂದ ಅವಳಿಗೆ ಯಾವ ಮಾರ್ಗದರ್ಶಿಯೂ ದೊರೆಯದೆ ಹೋಯಿತೆಂದೋ ಏನೋ ಅವಳು ಅಲ್ಲಿಂದ ಮುಂದೆ ಬಲುರಭಸದಿಂದ ಸಾಗಿ ನಸುಕಿನ ಮುಸುಕಿನಲ್ಲಿ ಮರೆಯಾಗಿ ಅನಂತವಾದ ಶೂನ್ಯದಲ್ಲಿ ಬೆರೆತು ಹೋದಳು.

ಬೆಳಗು ಹರೆಯುವವರೆಗೆ ನಾನಲ್ಲಿಯೇ ದಿಙ್ಮೂಢನಾಗಿ ನಿಂತುಬಿಟ್ಟಿದ್ದೆ. ಚುಮುಚುಮು ನಸುಕಿನಲ್ಲಿ ಹೊಲಗಳಿಗೆ ಹೊರಟ ದನ್ಗಳ ಗಂಟೆಗಳ ನಿನಾದಕ್ಕೆ ಎಚ್ಚತ್ತು ನೋಡಿದೆ. ನಡೆದ ಸಂಗತಿ ಒಂದು ಕನಸಿನ ಕಣ್ಕೆಂಚೆಂಬಂತೆ ತೋರುತ್ತಿರಲು, ನನ್ನ ಶರ್ಟು-ಕೋಟುಗಳ ಪರವೆಯನ್ನೂ ಮರೆತು ಊರದಾರಿ ಹಿಡಿದೆ.

❋ ❋ ❋ ❋ ❋

೧೪

ನಾನು ಕೇವಲ ದಿಙ್ಮೂಢನಾದಂತಾಗಿ ನೆಟ್ಟನೋಟದಿಂದ ಅವಳು ಹೋದ ನಿಟ್ಟಿನಲ್ಲಿಯೇ ನೋಡುತ್ತ ಎಷ್ಟೋ ಹೊತ್ತು ನಿಂತುಕೊಂಡೆ. ಅವಳು ಗುಡ್ಡದೊರೆಯನ್ನೇರಿಯೇರುತ್ತ ನನ್ನ ಕಣ್ಣಳವನ್ನು ಮೀರಿ ಹೋದರೂ ನನ್ನ ಕಣ್ಣುಗಳೂ ವಿಮುಖವಾಗಲೊಲ್ಲವು. ಏಕೆಂದರೆ, ನನ್ನ ಹೊರಗಣ್ಣುಗಳು ಅವಳನ್ನು ಕಳೆದುಕೊಂಡ ಮೇಲೆ ಅದೆಷ್ಟೊ ಹೊತ್ತಿನವರೆಗೆ ನನ್ನ ಒಳಗಣ್ಣಿನ ಅಪಾರವಾದ ಆಕಾಶದ ಕ್ಷಿತಿಜದಂಚಿನ ತುತ್ತ ತುದಿಯಲ್ಲಿ ಮಗುವನ್ನು ಅವಚಿ ಅಲೆದಾಡುತ್ತಲಿದ್ದ ರೂಪವೊಂದು ಮಿಣುಮಿಣುಕಿ ಸುಳಿದಾಡುತ್ತಲಿದ್ದಿತು. ಇಂದಿಗೂ, ಕುಮುದ, ಆ ನೋಟ ಒಮ್ಮೊಮ್ಮೆ ಹಠಾತ್ತಾಗಿ ನನ್ನೆದುರು ತೂರಿಕೊಂಡು ಬಂದು ಬಿಡುತ್ತದೆ. ಆಗ ಆಮೇಲೆ ಅವಳಿಗಾದ ಗತಿಯನ್ನು ಬಗೆದು ಪ್ರಾಣ ಭಯವಿಹ್ವಲವಾಗುತ್ತದೆ.

ನಾನು ಹಾಗೆ ತದೇಕಧ್ಯಾನದಿಂದ ಅವಳು ಮರೆಯಾದ ನಿಟ್ಟಿನಲ್ಲೇ ನೋಡುತ್ತ ನಿಂತಾಗ ಬೆಳಕಿನರುಣನ ಕಿರಣಗಳು ಆ ಗುಡ್ಡದಾಚೆಯ ಮೋಡಗಳನ್ನು ಬಣ್ಣ ಬಣ್ಣದ ತೆರೆಗಳನ್ನಾಗಿ ಮಾಡಿ ಮುಗಿಲಲ್ಲಿ ಒಂದು ಹೊಸ ರಂಗಭೂಮಿಯನ್ನು ಏರ್ಪಡಿಸಿದವು. ಆ ರಂಗದಲ್ಲಿ ಅವಳ ಜೀವನದ ಈ ಬಗೆಯ ಕಲ್ಪನಾ-ನಾಟ್ಯವೊಂದು ನನ್ನ ಕಣ್ಣೆದುರು ಕಾಣಿಸಿಕೊಳ್ಳಹತ್ತಿತು:-

``ಯಾವುದೋ ಹಳ್ಳಿ; ಅಲ್ಲೊಬ್ಬ ಎಳೆಹರೆಯದ ಗರತಿ; ಅವಳಿಗೊಂದು ಮಗು; ದೈವದುರ್ವಿಪಾಕದಿಂದ ವಿಧವೆಯಾಗುವಳು; ಮುಂದೆ ಮನೆಯಲ್ಲಿ ಮೈದುನನ ಜುಲುಮೆಗೆ ಒಳಗಾಗಲೊಲ್ಲದೆ ತನ್ನ ಚಿಕ್ಕಪ್ಪನ ಮನೆ ಸೇರುತ್ತಾಳೆ; ಚಿಕ್ಕಮ್ಮನ

ಗಂಡ ಅವಳ ಇದ್ದಬಿದ್ದ ಆಸ್ತಿಯನ್ನೆಲ್ಲ ಎತ್ತಿಹಾಕಿ ಹೊಟ್ಟೆಗೆ ಹಾಕಲಾರೆನೆಂದು ಅವಳನ್ನು ಮನೆಯಿಂದೋಡಿಸುತ್ತಾನೆ; ಆ ಮೇಲೆ ಅವಳೊಬ್ಬ ಭಿಕಾರಣಿ; ಭಿಕಾರಿಣಿಯ ಬೆನ್ನ ಹಿಂದೆ ನಾಲ್ಕಾರು ನಾಯಿ-ಗಂಡಸರು; ಅವರ ಬಲೆಯಿಂದ ಹೇಗೋ ತಪ್ಪಿಸಿಕೊಂಡು ಈ ಪಶುವೃತ್ತಿಯ ಪುರುಷಲೋಕವನ್ನಗಲಿಕೊಂಡು ಹೊರಡುವಳು; ದಾರಿಯಲ್ಲಿ ಮಳೆಗೆ ಸಿಕ್ಕು, ಒಂದು ಮರ ಆಶ್ರಯಿಸುವಳು; ಆಗ ಅವಳ ಮಗುವೇ ಅವಳಿಗೊಂದು ಆಧಾರ; ಅವಳ ಹೃದಯದ ವಾತ್ಸಲ್ಯವೇ ಅವಳಿಗೊಂದು ಬೆಳಕು; ಆ ಬೆಳಕು ಬೆಳಗುತ್ತಲಿರುವಾಗಲೇ ಅದರಲ್ಲಿ ಒಬ್ಬ ಆದರ್ಶೋನ್ಮುಖನಾದ ಮನುಷ್ಯ ಗಂಡಸನ್ನು ಕಾಣುವಳು; ಆತನ ಎದೆಯಲ್ಲಿ ಅರೆಯರಳಿದ ಕಮಲಕುಸುಮದ ಪರಿಮಳವನ್ನು ಮೂಸಿನೋಡಗೊಂಡರೂ, ತನ್ನ ಪಾಲಿಗೆ ಆ ಪರಿಮಳ ಕ್ಷಣಿಕವಾದುದೆಂದು ಬಗೆದು, ನಿತ್ಯವಾದ ನಿರಂತರವಾದ ಅನಂತತೆಯನ್ನು ಹುಡುಕುತ್ತ ಎತ್ತಲೊ ಸಾಗಿ ಎಲ್ಲಿಯೋ ನೋಡದಾಚೆ ಮರೆಯಾಗಿ ಬಿಡುವಳು."

ಕುಮುದಿನಿ, ಈ ಬಗೆಯಾಗಿ ನಾನೇ ಕಟ್ಟಿಕೊಂಡ ಆ ಕನಸು ಮುಂದೆ ಎಷ್ಟೋ ದಿನಗಳವರೆಗೂ ನನ್ನ ಚಿತ್ತರಂಗದಲ್ಲಿಳಿದು ಕುಣಿದಾಡಿ ನನ್ನ ಜೀವನವನ್ನೇ ದಣಿಸಿ ಬಿಡುತ್ತಿತ್ತು.

೧೫

ಕುಮುದಿನೀ, ಅಂದು ನಡೆದ ಆ ಮಾತೆಲ್ಲ ಒಂದು ಸ್ವಪ್ನವಿಹಾರದಂತೆ ತೋರುತ್ತಿದೆ ಈಗಲೂ. ಆ ಸ್ವಪ್ನ ಸತ್ಯವೊ ಮಿಥ್ಯವೊ ಎಂಬುದರ ವಿಚಾರ ನನ್ನನ್ನು ಬಾಧಿಸಿಲ್ಲ. ಒಂದು ಮಾತು ಮಾತ್ರ ಖಂಡಿತ; ಅಂದಿನಿಂದ ನನ್ನಲ್ಲಿ ಒಂದು ಅನಪೇಕ್ಷಿತವಾದ ಆಕಸ್ಮಿಕ ಪರಿವರ್ತನೆಯಾಗಿ ಹೋಯಿತು. ಅಂದಿನವರೆಗೂ ನಾನು ಹೆಂಗುಸೆಂದರೆ ಅದೊಂದು ಹೇಯವಸ್ತು; ಮನುಷ್ಯನನ್ನು ಅಧೋಗತಿಗೆಳೆಯುವ ಮಾಯಾಶಕ್ತಿ ಎಂದು ಬಗೆದಿದ್ದೆ. ಆದರೆ ಅಂದು, ಯಾವುದೊ ಒಬ್ಬ ಪ್ರೇಮಶಕ್ತಿ ಆ ಹೆಂಗಸಿನ ರೂಪದಿಂದ ನನ್ನ ಬಳಿಸಾರಿ, ``ಹೆಣ್ಣು ಹೃದಯದಲ್ಲಡಗಿದ ಜಗದ ಹೆಣ್ಣು-ಗಂಡುಗಳೆಲ್ಲರ ಕಣ್ಣು ಕಳೆಯಾದ ಜ್ಯೋತಿಯ ದರ್ಶನವನ್ನು ದಯಪಾಲಿಸಿತು.

ಆ ಹೆಂಣುಮಗಳಾರೋ; ಎಲ್ಲಿಂದ ಬಂದಳೋ; ಹೋದಳೆಲ್ಲಿಗೋ ಎಂಬುದು ನನಗೆ ಎಂದೆಂದಿಗೂ ಗೊತ್ತಾಗಲೆ ಇಲ್ಲ. ಆದರೆ ಅಂದು ಅವಳು ನನಗೂ ತಿಳಿಯದಂತೆ ನನ್ನ ಹೃದಯದಲ್ಲಿ ಪ್ರೇಮದ ಹೋಮಾಗ್ನಿಯನ್ನು ಹೊತ್ತಿಸಿ ಹೋದಳು. ಕುಮುದಿನಿ, ಆ ಮೇಲೆ ನೀನು ಅಧ್ವರ್ಯುವಿನಂತೆ ಬಂದು ಅದೇ ಬೆಂಕಿಯನ್ನೇ ಆರಗೊಡದೆ ಜೋಕೆ ಮಾಡುತ್ತಿರುವೆ. ನಿನ್ನ ಸ್ನೇಹ ಸಂವರ್ಧಿತವಾದ ಆ ಬೆಂಕಿ ಎಂದೆಂದಿಗೂ ನನ್ನ ಜೀವನದ ಬೆಳಕಾಗಬಲ್ಲದು. ಕುಮುದ!

೧೬

೨೩ನೇ ಡಿಸೆಂಬರ್ ೧೯೧೫
ಬೆಳಗಿನ ೪ ಗಂಟೆ

ಕುಮುದಿನಿ,

ನಿನ್ನೆ ರಾತ್ರಿ ಇಲ್ಲಿಯವರೆಗೆ ಬರೆದು ಪತ್ರವನ್ನು ಮುಗಿಸಿದ್ದೆ. ಪತ್ರ ಮುಗಿಮುಗಿಯುತ್ತಿರುವಂತೆಯೇ ಒಂದು ಬಗೆಯ ತನ್ಮಯತೆಯಲ್ಲಿ ನನ್ನ ಕಣ್ಣುಗಳು ಮೆಲ್ಲನೆ ಮುಚ್ಚಿಕೊಂಡವು. ಆಗ ಆರು ವರ್ಷಗಳ ಹಿಂದೆ ತೋರಿ ಅಡಗಿದ ಆ ಸಂಗತಿ ಮತ್ತೆ ಕನಸಾಗಿ ಮರುಕಳಿಸಿತು. ಅದೇ ಸ್ಥಳ; ಅದೇ ಮರ; ಅದೇ ಹೊದರು ಆ ವ್ಯಕ್ತಿ ಮಗುವನ್ನು ಮಡಲಲ್ಲಿ ತುಂಬಿಕೊಂಡು ಕೀಳ್ಮೊಗವಾಗಿ ಕುಳಿತುಕೊಂಡಿದೆ! ಆದರೆ ಅಂದಿನ ಆ ಘೋರ್ಗರೆವ ಮಳೆಯ ಭೀಷಣತೆಗೆ ಬದಲಾಗಿ ಹುಣ್ಣಿಮೆ ಚಂದ್ರಾಮನ ಹಾಲು-ಬೆಳದಿಂಗಳು ವಿಶ್ವದ ಅಕ್ಷಯಪಾತ್ರವನ್ನು ತುಂಬಿ ತುಳುಕಿಸುತ್ತಿದೆ.

ನಾನು ಹಿಂದಣ ಸಲಿಗೆಯಿಂದಲೇ ಅವಳ ಬಳಿ ಸಾರಿ ಮಾತನಾಡಿಸಿದೆ:-

``ನೀನು ಮತ್ತೆ ಯಾಕಮ್ಮಾ ಇಲ್ಲಿಗೆ ಬಂದಿದ್ದೀಯಾ?''

``ಹೌದು; ನಿಮ್ಮನ್ನೇ ಅರಸಿಕೊಂಡು ಬಂದಿದ್ದೇನೆ.''

``ಆಗ ನೀನು ನನ್ನನ್ನೂ ಲೆಕ್ಕಿಸದೆ ಹೋದೆಯಲ್ಲವೆ!''

``ಸರಿ; ನಾನು ಹಾಗೆ ಮಾಡುವದುಂಟು! ನಾನು ಯಾರು ಗೊತ್ತೇ? ನಾನೊಬ್ಬ ಪ್ರೇಮದೇವತೆ! ನನಗೆ ಅನಂತ ರೂಪಗಳು; ಅನಂತ ಶಕ್ತಿಗಳು! ಆಗ ಹಾಗೆ ಹೋದ ನಾನು, ಇಕೊ, ಈಗ ಹೀಗೆ ಬಂದಿದ್ದೇನೆ ನಿಮಗಾಗಿ ಆತ್ಮಾರ್ಪಣೆ ಮಾಡಲು," ಮಾತನಾಡುತ್ತಿರುವಂತೆಯೆ, ಅವಳು ಮೆಲ್ಲಗೆ ಮೊಗವನ್ನು ಮೇಲಕ್ಕೆತ್ತಿ ತನ್ನ ಮುಗುಳ್ನಗೆಯ ಕಿರಿಬೆಳಕಿನಿಂದ ಆಸ್ಥಲವನ್ನೆಲ್ಲ ಬೆಳಗಿದಳು. ಆ ದನಿ, ಆ ರೂಪ, ಕೇವಲ ಗುರುತಿನವೆನ್ನಿಸಿದವು. ನಾನು ಕಂಣರಳಿಸಿ ನೋಡಿದೆ; ಅವಳು ಮತ್ತಾರೂ ಅಲ್ಲ, ಕುಮುದ; ನೀನೇ! ಕೇವಲ ನಿನ್ನದೇ ಆ ರೂಪು! ಮಡಲಲ್ಲಿ ಮಲಗಿ ಸ್ವಾತ್ಮಲೀಲಾವಿಲೋಲವಾದ ಮಗು, ನಾನಿನ್ನೂ ಕಾಣದ, ನಮ್ಮ ಎಳೆಗೂಸು ಉಷಾಕುಮಾರಿ!

ಕುಮುದಿನಿ, ಈ ಘಟನೆಯೆಲ್ಲವನ್ನು ಹೇಗೆ ಅರ್ಥಯಿಸಬೇಕೋ! ನೀನೇ ಹೇಳು!!

# ಪುನರಾವರ್ತ

ರಾಮಚಂದ್ರನಿಗೆ ಈಗಲೀಗ ಇಪ್ಪತ್ತುಮೂರು ವರ್ಷ, ಕಾಂತರಾಯರ ಕಿರಿಯ ಮಗನು. ಮುಂಬೈಯ ವಿಲ್ಸನ್ ಕಾಲೇಜಿನಲ್ಲಿ ಬೀಯೆಕ್ಕೆ ಓದುತ್ತಿದ್ದಾನೆ. ಮನೆಯಲ್ಲಿ ತುಂಬಾ ಬಳಗ. ತಾಯಿ, ತಂದೆ. ಒಬ್ಬ ಹಿರಿಯಣ್ಣ, ಇಬ್ಬರು ಅಕ್ಕಂದಿರು, ಮೂವರು ತಂಗಿಯಂದಿರು ಮುಂತಾದವರಿಂದ ಮನೆತನಕ್ಕೊಂದು ಸೊಬಗುಂಟಾಗಿದೆ. ತಂದೆ ಕಾಂತರಾಯರು ಒಳ್ಳೇ ಪ್ರತಿಷ್ಠಿತ ವಕೀಲರು. ಈಗೇನೋ ಮುಪ್ಪಿನ ಕಾಲವೆಂದು ಕೆಲಸದಿಂದ ನಿವೃತ್ತರಾಗಿದ್ದಾರೆ. ಅಣ್ಣ ಹನುಮಂತರಾಯರು ಹೆಸರಾದ ಡಾಕ್ಟರರು. ಅವರೇ ಈಗ ಮನೆತನವನ್ನು ಸಾಗಿಸುವವರು. ರಾಮಚಂದ್ರನು ಕಿರಿಯ ಮಗನೆಂದು ತಾಯಿ ತಂದೆಗಳು ಮುದ್ದಿನಿಂದ ಬೆಳೆಸಿದ್ದರು. ಆತನ ಮೇಲೆ ಕಾಂತರಾಯರ ಆಸೆ ಬಹಳ. ತಮ್ಮ ಮನೆತನದ ಕೀರ್ತಿಯನ್ನು ಹಬ್ಬಿಸುವವನು ರಾಮಚಂದ್ರನೇ ಎಂದು ಅವರು ಯಾವಾಗಲೂ ಅನ್ನುವರು. ಹನುಮಂತರಾಯರಿಗೂ ತಮ್ಮನ ಮೇಲೆ ಬಲು ಇಚ್ಛೆ. ತಮ್ಮನನ್ನು ಒಳ್ಳೇ ವಿದ್ಯಾವಂತನನ್ನಾಗಿ ಮಾಡಿ, ಆತ ಹೆಸರಿಗೆ ಬರುವಂತೆ ಮಾಡಬೇಕೆಂದು ಅವರ ಹಂಬಲ.

ಮನೆಯವರ ಹಂಬಲಕ್ಕೊಪ್ಪುವಂತಹ ಶಕ್ತಿಯು ರಾಮಚಂದ್ರನಲ್ಲಿ ಇದ್ದೇ ಇದ್ದಿತು. ಹುಡುಗ ಬಲು ಈಚಕ. ಚುರುಕು ಬುದ್ಧಿ, ಹರವಾದ ವಿಚಾರಗಳುಳ್ಳವನು. ಆತನ ಜಾಣತನವೂ, ಕಾರ್ಯಶಕ್ತಿಗಳೂ ತಂದೆಯ ಹಾಗೂ ಅಣ್ಣನ ಆಸೆ ಹಂಬಲಗಳನ್ನು ಪುಟಗೊಳಿಸುತ್ತಿದ್ದುವು. ಅದಕ್ಕಾಗಿಯೇ, ತಮ್ಮೂರ ಕಾಲೇಜಿನಲ್ಲಿ

ಅಭ್ಯಾಸ ಚೆನ್ನಾಗಿ ಆಗಲಿಕ್ಕಿಲ್ಲವೆಂದು ಅವರು ಆತನನ್ನು ಮುಂಬೈ ಕಾಲೇಜದಲ್ಲಿ ಇಟ್ಟಿದ್ದರು. ಎಲ್ಲಿ ಬಿಟ್ಟರೂ ರಾಮಚಂದ್ರ ತನ್ನ ಬೇಳೆಯನ್ನು ಬೇಯಿಸಿಕೊಳ್ಳಬಲ್ಲನೆಂದು ಅವರು ಬಲ್ಲರು. ಕಾರಣ ರಾಮಚಂದ್ರನ ವಿಷಯಕ್ಕೆ ಮನೆಯವರಿಗೆ ಇಲ್ಲದ ಚಿಂತೆಗಳು ಹತ್ತಿಕೊಂಡಿರಲಿಲ್ಲ.

ಕಾಂತರಾಯರು ಮೊದಲಿನಿಂದಲೂ ರಾಮಚಂದ್ರನನ್ನು ಐ. ಸಿ. ಎಸ್. ಮಾಡಿಸಿ, ಕಲೆಕ್ಟರ ಜಾಗೆಗೆ ತರಬೇತು ಮಾಡಬೇಕೆಂದು ನಿರ್ಧರಿಸಿಕೊಂಡಿದ್ದರು. ಆದರೆ ಅಸಹಕಾರದ ಚಳುವಳಿಯಲ್ಲಿ, ರಾಮಚಂದ್ರನು ಮನೆಯವರ ಮಾತು ಮೀರಿ ಶಾಲೆಗೆ ಶರಣು ಹೊಡೆದದ್ದರಿಂದ ಐ.ಸಿ. ಎಸ್. ಕ್ಕೆ ಹೋಗಬೇಕೆಂದರೆ ಆತನಿಗೆ ವಯಸ್ಸಿರಲಿಲ್ಲವೆಂದು ಕಾಂತರಾಯರು ತಮ್ಮ ಹಂಬಲವನ್ನು ಬಿಡಬೇಕಾಯಿತು. ಅಲ್ಲದೆ ರಾಮಚಂದ್ರನಿಗೆ ಆ ಕಡೆಗೆ ಒಲವೂ ಇರಲಿಲ್ಲ. ಸ್ವಭಾವವಾಗಿ ಆತನ ಲಕ್ಷ್ಯ ದೇಶ ಸೇವೆ, ಸಾರ್ವಜನಿಕ ಕಾರ್ಯಗಳ ಕಡೆಗೆ ಹೆಚ್ಚು. ಆದರೂ, ಅಸಹಕಾರದ ಬೇಗೆ ತುಸು ತಣ್ಣಗಾದ ಮೇಲೆ, ಮನೆಯವರೊಡನೆ ``ಹಾವೇರೀ ನ್ಯಾಯ'' ಮಾಡುವುದಕ್ಕಾಗಿ, ಎಲೆಲ್ಬಿ ಮಾಡಿಕೊಂಡು ಮುಂದೆ `ಬಾರಿ'ಗೆ ಹೋಗುವುದಾಗಿ ನಿಶ್ಚಯಿಸಿಕೊಂಡಿದ್ದ. ಆ ಕಾರಣದಿಂದಲೇ ಆತ ಮತ್ತೆ ಮ್ಯಾಟ್ರಿಕ್ ಮಾಡಿಕೊಂಡು ಕಾಲೇಜು ಸೇರಿದ್ದ.

೨

ಶೇಷಾಚಲನೂ ರಾಮಚಂದ್ರನೂ ಹುಟ್ಟುಗೆಳೆಯರು. ಕೂಡಿ ಓದಿದವರು, ಅಸಹಕಾರದ ಕಾಲದಲ್ಲಿ ಇಬ್ಬರೂ ಸೇರಿಯೆ ಶಾಲೆ ಬಿಟ್ಟರು. ಇಬ್ಬರೂ ಸೇರಿಯೇ ಚಳುವಳಿಯ ಪ್ರಸಾರಕ್ಕಾಗಿ ಹಳ್ಳಿಪಳ್ಳಿ ತಿರುಗಾಡಿದ್ದರು. ಇಬ್ಬರೂ ಒಂದೇ ಶಿಬಿರದಲ್ಲಿ ಸ್ವಯಂಸೇವಕರಾಗಿ ಶಿಕ್ಷಣ ಪಡೆದಿದ್ದರು. ಆ ಕಾಲದಲ್ಲಿ ಅವರಿಗೆ ಬಂದ ಅನುಭವಗಳೂ, ವಿಚಾರಗಳೂ, ಅವುಗಳಿಂದ ಅವರ ಹೃದಯದಲ್ಲಿ ಮೊಳೆತ ದೇಶಪ್ರೀತಿಯೂ ಅವರಿಬ್ಬರನ್ನೂ ಜೀವದ ಗೆಳೆಯರನ್ನಾಗಿ ಮಾಡಿದ್ದವು. ಚಳುವಳಿಯು ಇಳಿತರಕ್ಕೆ ಬಂದನಂತರ ಮತ್ತೆ ಇಬ್ಬರೂ ಸೇರಿಯೇ ಮ್ಯಾಟ್ರಿಕಕ್ಕೆ ಕುಳಿತರು.

ಆದರೆ ಶೇಷಾಚಲನು ರಾಮಚಂದ್ರನೊಡನೆ ಮುಂಬೈಗೆ ಹೋಗಿರಲಿಲ್ಲ. ಆತ ಅದೇ ಊರ ಕಾಲೇಜದಲ್ಲಿಯೇ ಬಿ. ಏ. ದ ಟರ್ಮು ತುಂಬುತ್ತಿದ್ದ.

೩

ರಾಮಚಂದ್ರನು ಜ್ಯೂನಿಯರ್ ಬಿ. ಏ. ದ ಪರೀಕ್ಷೆ ತೀರಿಸಿಕೊಂಡು ಬರುತ್ತಲೆ, ಆತನ ಮದುವೆಯ ನಿಶ್ಚಯವು ಹಾಕಲ್ಪಟ್ಟಿತು. ಕನ್ಯೆ ನಾಯಿಕ ನಾರಾಯಣರಾಯರ ಮಗಳು ಇಂದಿರೆ. ಎರಡೂ ಮನೆತನಗಳಿಗೆ ಮೊದಲಿನಿಂದಲೂ ಬಳಕೆ ಹೆಚ್ಚು. ಏನೋ ಹಳೆಯ ಋಣಾನುಬಂಧ. ಅಲ್ಲದೆ ನಾರಾಯಣರಾಯರೂ ಕಾಂತರಾಯರೂ ಕೆಲವೊಂದು ಕಾಲ ಕೂಡಿಯೇ ವಕೀಲಿ ಮಾಡಿದ್ದರು.

ಇಂದಿರೆಗೆ ಆದೇ ಹದಿನೇಳು ವರ್ಷ. ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಿದ್ದಳು. ಅವಳ ಪರೀಕ್ಷೆ ಮುಗಿಯುವದೊಂದೇ ತಡ, ಮದುವೆ ಗೊತ್ತಾಗಿ ಬಿಟ್ಟಿತು. ಆವರೆಗೆ ಅವಳು ಮದುವೆಯಾಗದೆ ಉಳಿದದ್ದೇ ಹೆಚ್ಚು; ಅದೂ ನಾರಾಯಣರಾಯರು ತುಸು ಹೊಸತರದವರಾದ್ದರಿಂದ.

ಮದುವೆಯ ನಿಶ್ಚಯವಾದ ಮೇಲೆ, ವೈಶಾಖದಲ್ಲಿ ಮುಹೂರ್ತ ಗೊತ್ತಾಗಿತ್ತು. ಆದರೆ ಆಯತ ಹೊತ್ತಿಗೆ, ರಾಮಚಂದ್ರನ ತಾಯಿ ವರದಾಬಾಯಿಯವರು ವಿಷಮಜ್ವರಕ್ಕೆ ಬಲಿಬಿದ್ದು ಈಗೋ ಇನ್ನೊಂದು ಗಳಿಗೆಯೋ ಎನ್ನುವಂತಾಗಿತ್ತು. ನಾಲ್ವತ್ತು ದಿನದ ಕಟ್ಟಿನ ಜ್ವರ-; ಬಂದಿದ್ದವು, ಆರಲೇ ಇಲ್ಲ. ಹೀಗಾಗಿ ಮದುವೆ ಜ್ಯೇಷ್ಠವನ್ನು ಮೀರಿ ಹೋಯಿತು. ಕಾರಣ ಮುಂದೆ ಮಾರ್ಗಶಿರದಲ್ಲೊ , ಚೈತ್ರ ವೈಶಾಖದಲ್ಲೋ ಎಂದು ನಿಂತು ಹೋಗಿತ್ತು.

ಬೇಸಿಗೆ ರಜದಲ್ಲಿ, ರಾಮಚಂದ್ರ ತನ್ನೂರಿನಲ್ಲಿಯೇ ಇದ್ದ. ಇಂದಿರೆಗೂ ಆತನಿಗೂ ಮೊದಲಿನಿಂದ ಗುರುತು. ಆಮೇಲೆ ನಿಶ್ಚಯವೂ ಆಯಿತು. ಅದರಿಂದ ರಾಮಚಂದ್ರನ ಪ್ರೀತಿಯ ಪರೆ ಉಚ್ಚಿದಂತಾಗಿ, ಆತನಿಗೆ ಹರಾಹುರಿಯುಂಟಾಗಿತ್ತು. ಎಂದ ಮೇಲೆ ಕೇಳುವದೇ! ಭಾವೀ ಪತಿಪತ್ನಿಯರ ನೂತನ ತಾರುಣ್ಯದ ಮಂದಮಾರುತಕ್ಕೆ ಅವರ ಎದೆ ಮಲ್ಲಿಗೆಗಳು ಮೆಲ್ಲನೆ ಅರಳಹತ್ತಿದವು.

೪

ಇಂದಿರೆಯನ್ನು ಸ್ವಲ್ಪವಾದರೂ ಬಣ್ಣಿಸದಿದ್ದರೆ ಗತ್ಯಂತರವೇ ಇಲ್ಲ. ಅವಳು ಅಷ್ಟೊಂದು ಸುಂದರಿಯಲ್ಲದಿದ್ದರೂ ಒಳ್ಳೆಯ ಸುರೂಪಿ. ಮೋರೆಯ ಮೇಲೆ ಕಳೆಯು ತುಳುಕುತ್ತಿತ್ತು. ಅವಳಲ್ಲಿ ಒಣ ಒಯ್ಯಾರವಿಲ್ಲದಿದ್ದರೂ ತುಸುಮಟ್ಟಿಗೆ ಡೌಲು ಇಲ್ಲದಿಲ್ಲ. ಕಣ್ಣಲ್ಲಿ ತುಂಬಾ ವಿಲಾಸವಿದೆ. ಆ ವಿಲಾಸದ ಮರೆಗೆ ಅಡಗಿದ ಶಾಂತವಾದ ಕಾಂತಿಯೂ ಅವಳ ಮನದ ಗಂಭೀರತೆಯನ್ನು ಒಡಮೂಡಿಸುವುದು. ಅವಳ ಅಗಲವಾದ ಹಣೆಯು ನಸುಕಿನ ಹೊಂಬಣ್ಣದಂತೆ ಹೊಳೆದು, ಅವಳ ವಿಚಾರದ ಸ್ಥೈರ್ಯವನ್ನು ಸೂಚಿಸುವುದು. ನೇರವಾದ ಅವಳ ಮೂಗು ಸ್ವಭಾವದ ದೃಢತೆಯನ್ನು ತೋರಿಸುವುದು. ನಸುಗೆಂಪಿನ ಅವಳ ಗಲ್ಲತುಟಿಗಳಲ್ಲಿ, ಹೃದಯದ ಮಾರ್ದವತೆಯು ಮರೆತು ಅರಳಿ ನಿಂತಂತಿರುವುದು. ನೀಳವಾದ ನಿಲುವೂ, ಚಪಲವಾದ ನಡಿಗೆಯೂ ಅವಳ ವರ್ಚಸ್ಸನ್ನು ವ್ಯಕ್ತಗೊಳಿಸುವುದು.

ಇಂದಿರೆಯ ಸ್ವಭಾವ ಕೋಮಲವಾದದ್ದು; ಹೃದಯ ಪ್ರೇಮಲವಾದದ್ದು. ಮನಸ್ಸಿನಲ್ಲಿ ಮುನಿಸಿಲ್ಲದಿದ್ದರೂ ತುಸು ಅಭಿಮಾನವಿದ್ದೇ ಇದೆ. ಅದರಿಂದ ಸ್ವಲ್ಪ ಸೆಡುಕಿನ ಹೆಣ್ಣೇನೋ ಎಂದೆನಿಸುವುದು. ಅವಳ ಮನಸ್ಸಿನ್ನೂ ಪೂರ್ಣವಾಗಿ ಅರಳಿಲ್ಲ. ಅರೆತೆರೆದ ಮೊಗ್ಗೆಯಂತಹ ಮಾಟ ಅವಳ ಮನಸ್ಸಿನದು. ಆದರೂ ಹುಡುಗಿ ತೀರ ಸರಳ ಸ್ವಭಾವದವಳು ವಿಚಾರದಲ್ಲಿ ಭಾವನೆಯಲ್ಲಿ ನೆಲೆಯುಂಟು. ಜಾಣತನದಲ್ಲಿಯೂ ಬಲು ಹಿರಿದು. ರಾಮಚಂದ್ರನನ್ನೂ ಮೀರಿಸುವಳೋ ಎನ್ನುವಷ್ಟು ಬುದ್ಧಿಯ ಕಸುವು. ವಿದ್ಯೆಯಲ್ಲಿ ವಿನಯದಲ್ಲಿ ಅವಳಿಗೆ ತುಂಬಾ ಶ್ರದ್ಧೆ.

* * * * *

ರಾಮಚಂದ್ರ ಇಂದಿರೆಗೆ ಎಲ್ಲ ಬಗೆಯಿಂದಲೂ ಒಪ್ಪತಕ್ಕ ವರ. ಅಂತೆಯೇ ಇಬ್ಬರೂ ಒಪ್ಪಿಕೊಂಡಿದ್ದರು. ಆದರೆ ಹೊತ್ತು ಇನ್ನೂ ಒಪ್ಪಿರಲಿಲ್ಲವಾದ್ದರಿಂದ ಮದುವೆ ಮುಂದೆ ಬಿದ್ದಿತ್ತು.

೫

ಆತ್ತ ರಾಮಚಂದ್ರನ ಜ್ಯೂನಿಯರ್ ಬಿ. ಎ. ಪರೀಕ್ಷೆ ಮುಗಿಯುವುದರೊಳಗೇ ಇತ್ತ ಗಾಂಧಿಯವರು ಉಪ್ಪಿನ ಕಾಯದೆ ಮುರಿಯುವ ಚಳವಳಿಯನ್ನು ಹಬ್ಬಿಸಿ ಬಿಟ್ಟಿದ್ದರು. ಹಿಂದೆ ಅಸಹಕಾರದಲ್ಲಿ ಒಂದು ಬಗೆಯಿಂದ ಪೆಟ್ಟು ತಿಂದಿದ್ದರಿಂದಲೂ, ಸಧ್ಯಕ್ಕೆ ಪರೀಕ್ಷೆಗೆ ಹಾಗೂ ಮದುವೆಗಳ ವಿಚಾರದಲ್ಲಿ ಮುಳುಗಿದ್ದರಿಂದಲೂ ರಾಮಚಂದ್ರ ಆ ಚಳವಳಿಯ ಗೋಜಿಗೆ ಹೋಗಲಿಲ್ಲ. ಅಲ್ಲದೆ ನಾಲ್ಕೇ ದಿನಗಳಲ್ಲಿ ಚಳವಳಿಯ ಝುಳವು ಇಡೀ ಮುಂಬೈ ಪಟ್ಟಣವನ್ನು ಮುತ್ತಿ ಮುಸುಕಿದ್ದರಿಂದ ಆತನು ಏನೋ ಒಂದು ವಿಚಾರದಿಂದ, ಹಿಂದೆ ಮುಂದೆ ನೋಡದೆ ಊರಿಗೆ ಓಡಿ ಬಂದು ಬಿಟ್ಟಿದ್ದನು. ನಾಡಿನಲ್ಲೆಲ್ಲಾ ಅಲ್ಲಲ್ಲಿ ಚಳವಳಿಯು ಬಲವಾಗಿ ಬಲಿಯುತ್ತಿದ್ದರೂ, ಮುಖ್ಯತಃ ಅದರ ಸೆಕೆಯು ತಮ್ಮ ಊರಲ್ಲಿ ಇಲ್ಲದ್ದರಿಂದ, ರಾಮಚಂದ್ರನಿಗೆ ನಾಲ್ಕೊಪ್ಪತ್ತು ನಿಶ್ಚಿಂತೆಯಿಂದ ಇರಲು ಅನುವಾಯಿತು. ಅಲ್ಲದೆ ಆತನ ಗೆಳೆಯ ಶೇಷಾಚಲನೂ ಅಲ್ಲಿಯೇ ಇದ್ದ. ಮೇಲೆ ಬೆಣ್ಣೆ ಸಕ್ಕರೆ ಬೆರೆತಂತೆ, ಆತನ ಮುಂದಿನ ರಾಣಿಯೂ ಅಲ್ಲಿಯೇ ಇದ್ದಳು. ಆದುದರಿಂದ ಆಗೀಗೊಮ್ಮೆ ಕಳವು ನೆವದಿಂದ ಅವಳ ತೆರೆಮರೆಯ ಬೆಟ್ಟಿ ತೆಗೆದುಕೊಳ್ಳಲಿಕ್ಕೂ ಅನುಕೂಲವಿತ್ತು. ಹೀಗೆ ಒಂದು ತೆರದ ಚಕ್ಕಂದದ ಮರೆಗೆ ಅಡಗಿ ಕುಳಿತು, ದೇಶದಲ್ಲೆಲ್ಲಾ ಅಖಂಡವಾಗಿ ಪ್ರಜ್ವಲಿಸುವ ಚಳವಳಿಯ ಸುಡುಗಿಚ್ಚಿನಿಂದ ಆತ ತನ್ನನ್ನು ಮರಸಿಕೊಂಡಿದ್ದ.

೬

ರಾಮಚಂದ್ರನಿಗೆ ಊರಲ್ಲಿ ಎರಡು ಬಗೆಯ ಎಳೆತ ಸೆಳೆತಗಳಿದ್ದುವು. ಒಂದು ಆತನ ಇಂದಿರೆ. ಇನ್ನೊಂದು ಸೃಷ್ಟಿದೇವಿಯ ಸಹಜ ರಾಮಣೀಯಕವಾದ ಮಂದಹಾಸ. ಸಹ್ಯಾದ್ರಿಯ ಕಟ್ಟಡವಿಗಳಲ್ಲಿಯಂತೆ ಸೃಷ್ಟಿ ಸೌಂದರ್ಯವು ತನ್ನ ಆರ್ಭಟವನ್ನು ತೋರದೆ, ಇಲ್ಲಿ ಅದು ತನ್ನ ಮುಗುಳುನಗೆಯ ಮೆರಗನ್ನು ಬೀರುತ್ತಿತ್ತು. ರಾಮಚಂದ್ರನಿಗೆ ಪ್ರಕೃತಿಯ ಈ ಚಲ್ವಿಕೆಯನ್ನು ಕಂಡರೆ, ಹಬ್ಬದ

ಹಾಲೂಟ ಉಂಡಷ್ಟು ಸಂತೋಷ. ಅಲ್ಲದೆ ಮುಂಬೈಯಂಥ ಜನಸಂದಣಿಯ ಕಟ್ಟಡವಿಯಿಂದ ಹೊರಗೆ ಬಂದುದರಿಂದ ತನ್ನೂರಿನ ಪಚ್ಚೆ ಪಸಲೆಗಳು ಆತನಿಗೆ ಒಂದು ಕಣ್ಣ ಹಬ್ಬವನ್ನುಂಟುಮಾಡುತ್ತಿದ್ದವು. ಇದನ್ನೂ ಮೀರಿ ಆತ ಕವಿ. ಎಂದು, ಆತನು ತನ್ನ ಗಾಳಿಯೆಣಿಕೆಗಳಲ್ಲಿಯೇ ಮುಳುಗಿ ತನ್ನದೇ ಇನ್ನೊಂದು ಸೌಂದರ್ಯಲೋಕವನ್ನು ರಚಿಸಿಕೊಳ್ಳಬಲ್ಲವನಾಗಿದ್ದ. ಈ ಕಾರಣಗಳಿಂದ ಚಳವಳಿಯ ಉರಿಯಿಂದ ತನ್ನನ್ನು ಕಾಯ್ದುಕೊಳ್ಳುವುದು ಆತನಿಗೆ ಅತಿ ಹಗುರಾಗಿತ್ತು. ಇಂದಿರೆಯ ಪತ್ರಗಳನ್ನೋದುವದರಲ್ಲಿ, ತಿರಿಗಿ ಅವಳಿಗೆ ಬರೆಯುವುದರಲ್ಲಿ; ತನ್ನ ಸೌಂದರ್ಯಾನುಭೂತಿಯ ಭಾವನೆಗಳು ತೆರೆತೆರೆಯಾಗಿ ಉಕ್ಕಿ ಏರಿ ಏರಿ ಬರಲು ಕಾವ್ಯಲಹರಿಗಳನ್ನು ರಚಿಸುವುದರಲ್ಲಿ, ಅದೂ ತಪ್ಪಿದರೆ ಊರ ಹೊರದ ಸೃಷ್ಟಿಯ ಸೊಬಗಿನ ಸವಿಯೂಟವನ್ನುಂಡು ತನ್ನನ್ನೇ ಮರೆತುಕೊಳ್ಳುವದರಲ್ಲಿ ಆತ ತನ್ನ ಹೊತ್ತುಗಳೆಯುತ್ತಿದ್ದ. ರಜದ ದಿನಗಳೆಲ್ಲ ಹೆಚ್ಚಾಗಿ ಈ ಬಗೆಯಿಂದಲೇ ಕಳೆದು ಹೋದವು.

೭

ರಾಮಚಂದ್ರನಲ್ಲಿ ದೇಶಪ್ರೀತಿಯ ಕಿಡಿಯು ಚಕಚಕಿಸುತ್ತಿದ್ದುದೇನೋ ನಿಜವೇ. ಆದರೆ ಆತನಿಗೀಗ ಜೀವಗಳ್ಳತನ. ಪರಿಸ್ಥಿತಿಯು ತನ್ನನ್ನು ದೇಶಸೇವೆಗೆ ಅಯೋಗ್ಯನನ್ನಾಗಿ ಮಾಡಿಟ್ಟಿದೆಯೆಂದು ಆತನ ಬಗೆ. ತಂದೆಯ ಮುಪ್ಪು, ತಾಯಿಯ ಕಾರುಣ್ಯಾವಸ್ಥೆ, ಅಣ್ಣನ ಹಿರಿ ಹಿರಿದಾದ ಹಂಬಲ, ದಿಕ್ಕುತಪ್ಪಿ ಅದೇ ಹೊಸದಾಗಿ ತೌರು ಸೇರಿದ ಅಕ್ಕನ ಗೋಳು, ಮದುವೆಗಾಗಿ ಬೆಳೆದು ನಿಂತ ತಂಗಿಯರ ಸ್ಥಿತಿ, ಅಲ್ಲದೆ ತನ್ನ ವಿದ್ಯೆಗಾಗಿ ಹಿಡಿತ ತಪ್ಪಿ ಬೆಳೆಯುತ್ತಿದ್ದ ವೆಚ್ಚ, ಇವೆಲ್ಲವೂ ಸಿನೇಮಾದ ಗೊಂಬೆಗಳಂತೆ ಒಂದೊಂದಾಗಿ ಆತನ ಕಣ್ಣೆದುರಿಗೆ ಸಾರಿ ಬಂದು ಆತನೆದೆಯನ್ನು ಅಳುಕಿಸುತ್ತಿದ್ದವು. ಕುಟುಂಬದ ಹೊಣೆಯೂ ಮನೆತನದವರ ಆಸೆಯೂ ತನ್ನ ಮೇಲೆ ಬಹಳವಾಗಿರುವುದರಿಂದ, ತಾನು ಅವುಗಳನ್ನು ತಪ್ಪಿಸಿಕೊಳ್ಳಲಾರದಾಗಿದ್ದನು. ಅಲ್ಲದೆ ತನ್ನನ್ನೇ ನಂಬಿ, ಬೆಳಗಾದರೆ ಮನೆಯನ್ನು ತುಂಬಲು ಬರುವ

ಭಾಗ್ಯಲಕ್ಷ್ಮಿಯಂಥ ಇಂದಿರೆಯ ಚಿತ್ರವೂ, ಅವಳಿಗಾಗಿ ತಾನು ಹೊತ್ತ ಕರ್ತವ್ಯಭಾರವೂ, ಆತನ ದೇಶಪ್ರೀತಿಗೆ ಕಡಿವಾಣ ಕಣ್ಣುಕಟ್ಟುಗಳನ್ನು ಹಾಕಿ ಅತ್ತಿತ್ತ ಮಿಸುಕದಂತೆ ಮಾಡಿದ್ದವು.

ದೇಶಸೇವೆಯ ಮೊದಲ ಪಾಠವನ್ನು ಕುಟುಂಬದ ಸೇವೆಯಲ್ಲಿ ಕಲಿತುಕೊಳ್ಳಬೇಕೆಂದು ಎನ್ನುತ್ತಿದ್ದ ಆತನ ಕಣ್ಣುಗಳನ್ನು ಪರಿಸ್ಥಿತಿಯು ಬಿಗಿಯಾಗಿ ಮುಚ್ಚಿಬಿಟ್ಟಿತು. ಇಂತು ಆತನ ಎದೆಯಲ್ಲಿದ್ದ ದೇಶಪ್ರೀತಿಯ ಕಿಡಿಯ ಮೇಲೆ ಆತನು ಮಾನಸಿಕ ಆಲಸ್ಯದ ಬೂದಿಯನ್ನು ಮುಚ್ಚಿದ್ದ. ಪಾಪ! ದೇಶಕ್ಕೆ ದೇಶವೇ ಹಾಳಾಗಿ ಹೊಳೆಗೂಡಿ ಹೋಗುತ್ತಿರುವಾಗ ಕುಟುಂಬ ಸೇವೆಯ ತತ್ತ್ವವು ಒರೆಗೆ ಹತ್ತಲಾರದೆಂದು ಆತ ತಿಳಿಯದೆ ಹೋದ. ಅದೇನೋ ಎನ್ನುವರಲ್ಲ- ಒಳ್ಳೊಳ್ಳೆಯವರು ಹಳ್ಳಾ ಹಿಡಿದು ಹೋಗುವಾಗ ಗುಂಗೀ ಹುಳ ಗುಡಾರ ಹಾಸುತ್ತಿತ್ತಂತೆ- ಹಾಗೆ ರಾಮಚಂದ್ರನ ಸ್ಥಿತಿಯಾಗಿತ್ತು.

ಈ ತನ್ನ ಎಣಿಕೆಗಳಲ್ಲಿ ಮುಳುಗಿದ್ದ ಆತನು, ಪೇಶಾವರ, ಧರಸ್ನಾ, ವಿರಮಗಾವ, ವಢಾಳಾ, ಸೊಲ್ಲಾಪುರಗಳಲ್ಲಿಯೂ, ಬಂಗಾಲ, ಆಂಧ್ರ, ಮೊದಲಾದ ಪ್ರಾಂತ್ಯಗಳಲ್ಲಿಯೂ ದಬ್ಬಾಳಿಕೆಯು ನಡೆಸಿದ ಚಿತ್ರಹಿಂಸೆಗಳನ್ನು ಕೇಳಿಯೂ ಕಿವಿಯ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ಓದುವ ಒಲವಿದ್ದರೂ ವರ್ತಮಾನ ಪತ್ರಗಳನ್ನು ನೋಡುತ್ತಿರಲಿಲ್ಲ. ಓದಿದರೆ ಎಲ್ಲಿ ತನ್ನ ತಲೆತಿರುಗುವದೋ, ಮತ್ತೆಲ್ಲಿ ಅಸಹಕಾರದ ಚಳವಳಿಯಲ್ಲಿಯಂತೆ ತಾಯ್ತಂದೆಗಳ ಮನಸ್ಸು ಮುರಿಯಬೇಕಾದೀತೋ, ಎಂದು ಆತನಿಗೆ ಅಂಜಿಕೆ. ಅಸಹಕಾರದಲ್ಲಿ ತಾನು ತೀರ ಚಿಕ್ಕವನು. ತಿಳಿಯದೆ ಮನೆಯವರನ್ನು ನೋಯಿಸಿದ್ದ. ಈಗಲೋ ತಾನು ಬೆಳೆದು ದೊಡ್ಡವನಾಗಿದ್ದಾನೆ. ನಾಲ್ಕು ತರದ ವಿಚಾರವಿದೆ. ಸಂಗತಿಗಳನ್ನು ತೂಗಿ ನೋಡವಂತಹ ಶಕ್ತಿಯಿದೆ. ಮನೆತನದ ಹೊಣೆಯಿದೆ. ತನ್ನ ವಿದ್ಯಾಭ್ಯಾಸದ ಆಸೆಯಿದೆ. ಮೇಲೆ ಇಂದಿರೆಯೊಡನೆ ತಾನು ಕಟ್ಟಬೇಕಾಗಿದ್ದ ಗಾಳಿಗೋಪುರಗಳ ಹಾರೈಕೆಯು ಹಂಬಲಿಸುತ್ತಿದೆ. ಇಂಥ ಬಿಕ್ಕಟ್ಟಿನಲ್ಲಿ ಆತನೂ ದೇಶ ಸೇವೆಗೆ ಬಿದ್ದರೆ, ಪಾಪ! ಆತನ ಪಾಡೇನು, ಮನೆಯವರ ಗತಿಯೇನು!

೮

ಆದರೆ ಚಳವಳಿಯು ಪ್ರಚಂಡವಾಗಿ ಪ್ರಜ್ವಲಿಸುತ್ತ, ದಿಕ್ಕುದಿಕ್ಕಿನಲ್ಲೆಲ್ಲ ಹಬ್ಬಿಕೊಂಡು ತನ್ನ ಉರಿನಾಲಿಗೆಯಿಂದ ಸಿಕ್ಕಸಿಕ್ಕದ್ದನ್ನೆಲ್ಲ ಸವರುತ್ತ, ಹೊಟ್ಟೆಯಲ್ಲಿಯ ಕಿಚ್ಚು ತಣಿಯದೆ ಇನ್ನೂ ಯಾರನ್ನು ನುಂಗಲಿ, ಯಾರನ್ನು ನೊಣೆಯಲಿ, ಯಾರನ್ನು ತಿಕ್ಕಲಿ ಮುಕ್ಕಲಿ ಎನ್ನುತ್ತ, ಪ್ರಳಯ ಝುಂಝಾವಾತದೊಡನೆ ಭೋರ್ಗರೆಯುತ್ತ, ಬರುವ ಕಾಲಾಗ್ನಿಯಂತೆ ಸರ್ವಭಕ್ಷಕವಾಗಿ ತನ್ನ ರೌದ್ರತಾಂಡವದೊಡನೆ ಸಾಗಿಸಾಗಿ ಬರುತ್ತಿರುವಾಗ ಈ ರಾಮಚಂದ್ರನೆಂಬ ಹುಲ್ಲು ತಾನೊಂದು ಮಾಮರವಾಗಿ ಬೆಳೆದರೆ ಅದಕ್ಕೊಂದು ಮಲ್ಲಿಗೆ ಬಳ್ಳಿ ಹಬ್ಬಿಕೊಂಡರೆ ಎಷ್ಟು ಚೆನ್ನಾಗಿದ್ದೀತಲ್ಲ ಎಂದು ಎಣಿಕೆ ಹಾಕುತ್ತ ತನ್ನಲ್ಲೇ ತಾನು ನಕ್ಕು ನಲಿಯುತ್ತಿದ್ದಿತು.

೯

ಶೇಷಾಚಲನ ಬಗೆ ಬೇರೆಯಿತ್ತು. ರಾಮಚಂದ್ರನ ದೇಶಪ್ರೀತಿಯಂತೆ ಆತನದು ಗಾಳಿದೀವಿಗೆಯಾಗಿ ಹೊಯ್ದಾಡದೆ, ಪರ್ವತದಂತೆ ಅಚಲವಾಗಿತ್ತು. ಚಳವಳಿಯ ಮೊದಲಿನ ಸೆಳೆಕಿಗೇ ಆತ ಸಿಕ್ಕುಬಿದ್ದಿದ್ದ. ಅಂಕೋಲೆಯಾತ್ರೆ ಮಾಡಿದ. ಉಪ್ಪು ಮಾರಿದ, ಈಚಲಗಿಡಗಳನ್ನು ಕಡಿದ. ಸೊಲ್ಲಾಪುರದ ದಂಡಯಾತ್ರೆಗೆ ಅತಿಥಿಯೂ ಆಗಿದ್ದ. ಆದರೂ, ತಿನ್ನಾಸಕನು ಕಕ್ಕಸಬಡುತ್ತ ಬಾಯಲ್ಲಿ ತುತ್ತು ತುರುಕುವಾಗ ತುಟಿಮೀರಿ ಕೆಳಗೆ ಬಿದ್ದ ತುಣುಕಿನಂತೆ ಆತನು ಸೆರೆಮನೆಯ ದವಡೆಯಿಂದ ಜಾರಿಕೊಂಡು ಉಳಿದಿದ್ದ.

ಹಿಂದಿನಂತೆ ಈ ಚಳವಳಿಯಲ್ಲಿಯೂ, ತಾನು ರಾಮಚಂದ್ರನೊಡನೆ ಕೂಡಿ ಕೆಲಸ ಮಾಡಬೇಕೆಂದು ಶೇಷಾಚಲನ ಹಂಬಲ. ಅದಕ್ಕಾಗಿ ಆತ ರಾಮಚಂದ್ರನು ಮುಂಬೈಯಿಂದ ಮರಳಿ ಬರುವ ದಾರಿಯನ್ನೇ ಎದುರು ನೋಡುತ್ತಿದ್ದ. ಆದರೆ ಆಸಾಮಿ ಬಳಗಾ ಹರಿದುಕೊಂಡೇ ಬಂದುದರಿಂದ, ಶೇಷಾಚಲನಿಗೆ ಎಣಿಕೆ ತಪ್ಪಿತು. ರಾಮಚಂದ್ರನಂತವನು ಹೀಗೆ ಬದಲಾಗಿ ಹೋಗಿದ್ದರ ಅರ್ಥ ಅವನಿಗೆ ಅಚ್ಚರಿಯನ್ನು

ಉಂಟುಮಾಡಿತು. ರಾಮಚಂದ್ರನ ಮಾತುಗಳನ್ನು ನಂಬದಿರಬೇಕೋ ಇಲ್ಲವೇ ತನ್ನ ಕಿವಿಗಳನ್ನೇ ನಂಬದಿರಬೇಕೋ ಹೊಳೆಯದಾಯಿತು.

೧೦

ಆದರೆ ರಾಮಚಂದ್ರನಂಥ ಇಸಮನ್ನು ಹಾಗೇ ಬಿಡುವದು ಶೇಷಾಚಲನಿಗೆ ಒಪ್ಪಲಿಲ್ಲ. ಅಲ್ಲದೆ ಆತನು ತನ್ನೊಡನಿಲ್ಲದೆ ತಾನು ಕೆಲಸ ಮಾಡುವುದೂ ಶೇಷಾಚಲನ್ನಿಗೆ ಸೇರದಾಯಿತು.

ಒಂದು ದಿನ ಮೊರುಸಂಜೆಯ ಹೊತ್ತು. ಗೆಳೆಯರಿಬ್ಬರೂ ಊರ ಹೊರದ ಕೆರೆಯ ಕಡೆಗೆ ಹವೆ ತಿನ್ನುವದಕ್ಕೆಂದು ಹೊರಟರು. `ಮೂಕಂ ಕರೋತಿ ವಾಚಾಲಂ' ಎಂಬ ಶಕ್ತಿಯುಳ್ಳ ಚಳವಳಿಯ ವಿಚಾರವು ಅವರನ್ನು ತನ್ನ ಮಾತಿಗೇ ಎಳೆಯಿತು. ಆ ವಿಚಾರವನ್ನು ಹತ್ತಿರ ಬರಗೊಡಬಾರದೆಂದು ರಾಮಚಂದ್ರನು ಎಷ್ಟು ಎತ್ತುಗಡೆ ಮಾಡುತ್ತಿದ್ದನೋ ಅಷ್ಟೇ ಶೇಷಾಚಲನು ಅವನನ್ನು ಅದರಲ್ಲಿ ಹಿಡಿದು ಹಾಕಬೇಕೆಂದು ಯತ್ನಿಸುತ್ತಿದ್ದ.

೧೧

``ರಾಮೂ, ನೀನು ಬೀಯೇ ಆದನಂತರ ಏನು ಮಾಡಬೇಕೆಂದಿರುವೆ. ಎಂ. ಎ. ಕ್ಕೆ ಹೋಗುವಿಯಷ್ಟೆ!''

``ಇಲ್ಲ ಶೇಷು! ಎಲೆಲ್‌ಬಿಕ್ಕೆ ಹೋಗಬೇಕೆಂದಿರುವೆ.''

``ಮುಂದೆ-ಒಬ್ಬ ದೊಡ್ಡ ವಕೀಲನಾಗುವಿ.''

``ಆದರೆ ಅದಕ್ಕೂ ಮೊದಲೂ `ಬಾರಿ'ಗೆ ಹೋಗಬೇಕೆನ್ನುವೆ.''

``ಸರಿ! ಅಂತೂ ಬ್ಯಾರಿಷ್ಟರ ರಾಮಚಂದ್ರರಾಯರಾಗಬೇಕೆನ್ನುವಿ ಅನ್ನು. ಆಮೇಲೆ ಕೇಳುವದೇನು, ನಮ್ಮಂಥವರನ್ನು ಕಣ್ಣೆತ್ತಿ ಕೂಡ ನೋಡಲಿಕ್ಕಿಲ್ಲ.''

``ಹಾಗೆನ್ನಬೇಡ ಶೇಷಾದ್ರಿ. ನಾನು ನಿನ್ನನ್ನು ಮರೆಯುವದೆಂದರೇನು! ನಿನ್ನ ಚೇಷ್ಟೆ ಹುರುಳಿಲ್ಲದ್ದು, ಬಿಡು.''

``ಚೇಷ್ಟೆಯಲ್ಲ ರಾಮು! ನನ್ನ ಮಾತಿನಲ್ಲಿ ಪೂರಾ ಹುರುಳೂ ತಿರುಳೂ ಎರಡೂ ಇವೆ.''

``ಇದೇನು ಶೇಷ! ನೀನು ನನ್ನ ಅಪಮಾನ ಮಾಡುತ್ತಿರುವೆ.''

``ಸಿಟ್ಟಿಗೇಳಬೇಡ ರಾಮು! ಆ ಮಾತಿನ ಸತ್ಯಾಂಶವನ್ನು ನಾನು ಹಿಂದಿನಿಂದ ತೋರಿಸಿಕೊಡುವೆನಂತೆ. ಆದರೆ ನೀನು ಒಳ್ಳೇ ಸಾಹಿತಿಯಾಗಿರುವಾಗ, ಎಂ. ಎ. ಕ್ಕೆ ಹೋಗುವುದನ್ನು ಬಿಟ್ಟು ಎಲೆಲ್ಬಿ ಹುಚ್ಚನ್ನೇಕೆ ತಲೆಯಲ್ಲಿ ಹಾಕಿಕೊಂಡೆ?''

``ಅದು ಸರಿ; ಶೇಷ; ಆದರೆ ಎಂ. ಎ. ಆಗಿ ಮಾಡುವುದೇನು! ಮತ್ತೇನಾದರೂ ನೌಕರಿಯಷ್ಟೇ! ಅದರಲ್ಲೂ ಆಗ ತಂದೆಯವರು ತಮ್ಮ ಇದ್ದ ಬಿದ್ದ ಮುರವತ್ತನ್ನೆಲ್ಲ ವೆಚ್ಚಮಾಡಿ ನನ್ನನ್ನು ಒಂದು ಸರಕಾರೀ ನೌಕರಿಗೆ ಸೇರಿಸದೆ ಬಿಡರು. ಆದರೆ ನೀನು ಬಲ್ಲೆ-ನಾನು ಸರಕಾರೀ ನೌಕರಿಯನ್ನು ಜೀವ ಹೋದರೂ ಮಾಡುವವನಲ್ಲವೆಂದು.''

``ಸರಿ, ರಾಮು, ನಿನ್ನಲ್ಲಿ ಇನ್ನೂ ದೇಶಭಕ್ತಿಯು ಪ್ರಜ್ವಲಿಸುತ್ತದೆ ನೋಡು. ಮೊನ್ನಿನ ನಿನ್ನ ಮಾತಿನಿಂದ ನಾನು ಬೇರೊಂದು ಅರ್ಥವನ್ನೇ ಮಾಡಿಕೊಂಡಿದ್ದೆ.''

``ನೀನು ನನ್ನ ವಿಷಯಕ್ಕೆ ಬೇರೆ ಅಭಿಪ್ರಾಯ ಮಾಡಿಕೊಳ್ಳಬೇಕೆ? ಶೇಷ!''

ಮಾತನಾಡುತ್ತ ಆಡುತ್ತ ಗೆಳೆಯರಿಬ್ಬರು ಕೆರೆಯನ್ನು ಸಾರಿದರು. ಕೆರೆಯ ಒಡ್ಡಿಗೆ ಹೊಂದಿ, ನೀರಲ್ಲಿ ನಿಂತ ಬೆಣಗಟ್ಟೆಯ ವರ್ತುಲದಲ್ಲಿ ಕುಳಿತು, ಗಾಳಿಯೊಡನಾಡುವ ತೆರೆಗಳನ್ನು ನೋಡುತ್ತ ಮಾತು ಮುಂದರಿಸಿದರು.

## ೧೨

``ಇಲ್ಲಿ ನೋಡು ಶೇಷ, ನಾನು ಬ್ಯಾರಿಸ್ಟರನಾಗಬೇಕೆನ್ನುವದರಲ್ಲಿ ಒಂದು ಅರ್ಥವಿದೆ. ಅದರಿಂದ ನಾನು ಸ್ವತಂತ್ರ ಜೀವನವನ್ನು ಕಲ್ಪಿಸಿಕೊಳ್ಳಬಲ್ಲೆ. ಯಾರ ಹಂಗಿಲ್ಲದೆ, ಮುಖ್ಯತಃ ಸರಕಾರದ ಹಂಗಿಲ್ಲದೆ ಇರಬಹುದು. ಆಗ ನನಗೆ ದೇಶಸೇವೆಗೆ ಅಣಿಯಾಗಲು ಹೆಚ್ಚು ಅನುವಾಗುವುದು. ಬ್ಯಾರಿಷ್ಟರನಾಗಿ ಬರುವುದರಿಂದ

ಜನತೆಯಲ್ಲಿ ವರ್ಚಸ್ಸುಂಟಾಗುವದು. ಮೇಲೆ ಹಳ್ಳಿಯ ಜನರೇ ನಮ್ಮ ಕೈಯಲ್ಲಿ ಆಡುವರು. ಹಿಂದುಸ್ತಾನಕ್ಕೆ ಬೇಕಾದದ್ದು ಗ್ರಾಮಸಂಘಟನೆಯಲ್ಲವೆ? ರಷ್ಯಾ, ಡೆನ್ಮಾರ್ಕ್ ದೇಶಗಳು ಇದನ್ನು ಸಾಧಿಸಿದ್ದರಿಂದಲೇ ಇಷ್ಟೊಂದು ಮುಂದೆ ಬಂಧವು."

``ಸರಿ, ನಿನ್ನ ಯೋಜನೆಗಳೆಲ್ಲ ಯೋಗ್ಯವಾದುವೇ."

``ಇನ್ನೂ ಒಂದು ಮಾತು ಶೇಷ; ಲೋಕಮಾನ್ಯ ತಿಲಕ, ಮಹಾತ್ಮಾ ಗಾಂಧಿಯವರಿಂದ ಹಿಡಿದು ಜವಾಹರಲಾಲ ನೆಹ್ರು ಅವರವರೆಗೆ ಪ್ರಮುಖ ದೇಶಭಕ್ತರಲ್ಲಿ ಬಹಳ ಮಂದಿ ವಕೀಲರೇ. ವಕೀಲನಾಗುವದರಿಂದ ದೇಶಸೇವೆಗೊಂದು ಅಲಭ್ಯ ಲಾಭವಿದೆ. ಸರಕಾರದವರು ಯಾವ ಕಟ್ಟಳೆಗಳಿಂದ ನಮ್ಮ ದೇಶವನ್ನು ಕಟ್ಟಿರುವರೋ ಅವುಗಳ ಗುಟ್ಟು ನಮಗೆ ಗೊತ್ತಾಗುವದು."

``ಆದರೆ ದೇಶಸೇವೆಗೆ ಇಷ್ಟೊಂದು ಮುನ್ನುಡಿಯ ಅವಶ್ಯಕತೆಯಿದೆಯೆಂದು ನನಗನಿಸುವದಿಲ್ಲವಲ್ಲ!"

``ಅಲ್ಲಿಯೇ ನೀವು ತಪ್ಪುತ್ತಿರುವದು. ನಾವಿನ್ನೂ ಎಳೆಕರು. ಅನುಭವ ಕಡಿಮೆ. ಅದರಲ್ಲಿಯೂ ನಾವು ಎಂಥ ಬಲಾಢ್ಯ ಸರಕಾರದೊಡನೆ ಹೋರಾಡಬೇಕೆಂಬುದನ್ನು ಮರೆಯಲಾಗದು. ನಾವು - ದೇಶಸೇವೆಗೆ ನಿಲ್ಲುವವರು-ಕಾಯಿದೆ ಕಾನೂನುಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಸಮಾನ ಪ್ರಸಂಗಗಳಲ್ಲಿ, ಪರರಾಷ್ಟ್ರಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಏನೇನು ಎತ್ತುಗಡೆ ಮಾಡಿದವೆಂಬುದನ್ನು ತಿಳಿದುಕೊಳ್ಳಬೇಕು. ಅದಿಲ್ಲದೆ ಧುಡುಂ ಪ್ರವೇಶ ಮಾಡುವುದು ಹುಚ್ಚುತನ. ಶೇಷ, ಅದಕ್ಕಾಗಿಯೇ ನೀನೂ ಈಗಿನ ಗದ್ದಲದಲ್ಲಿ ಸೇರಬೇಡ ಎನ್ನುವದು. ಮೊದಲು ಬಿ. ಎ. ಪಾಸಾಗೋಣ. ನೀನು ನಿನಗೆ ತಕ್ಕಂತೆ ತಯಾರಿ ಮಾಡಿಕೋ. ಇಬ್ಬರೂ ಮೆಟ್ಟಿಗೆ ಹತ್ತಿದವೆಂದರೆ, ಕೂಡಿಯೇ ದೇಶಸೇವೆಯನ್ನು ಕೈಕೊಳ್ಳೋಣವಂತೆ."

``ಅದು ಸರಿಯಪ್ಪಾ ರಾಮು! ಆದರೆ ಬೀಬಿಯು ಸಿಂಗಾರಾಗುವಷ್ಟರಲ್ಲಿ ಮುಲ್ಲಾನ ಗೋರಿಯಮೇಲೆ ಎರಡೆರಡು ಮೊಳ ಹುಲ್ಲು ಬೆಳದೀತು; ತಿಳಿಯಿತೇ!"

``ಎಂದರೆ----?''

``ಎಂದರೇನು ಎಂದರೆ! ನಾವೆಲ್ಲ ಅಷ್ಟೊಂದು ಪ್ರತಿಷ್ಠಿತರಾಗಿ ಬರುವಷ್ಟರಲ್ಲಿ ಹಿಂದೂಸ್ಥಾನ ಹಾಳಾಗಿ ಹತ್ತೀ ಬಿತ್ತಿ ಹೋಗುವದು. ಈಗ ನಮ್ಮ ನಾಡಿನಲ್ಲಿ ನಡೆದ ಕೋಲಾಹಲವನ್ನು ಕೇಳಬಾರದೆಂದು ಬೇಕೆಂತಲೇ ಕಿವಿ ಮುಚ್ಚಿಕೊಂಡ ನಿನಗೇನು ಹೇಳುವದು!''

``ಹಾಗಲ್ಲ, ಶೇಷಗಿರಿ, ನಾನೇನು ಕಿವಿ ಮುಚ್ಚಿಕೊಂಡಿಲ್ಲ. ದೇಶದಲ್ಲೆಲ್ಲ ನಡೆದ ಹಾಹಾಕಾರವನ್ನು ಕೇಳಿ ನನಗೂ ಕರುಳು ಕೊರೆಯುತ್ತಿದೆ. ಜೀವ ತಳಮಳಿಸುತ್ತಿದೆ, ಹುರುಪು ಹಾತೊರೆಯುತ್ತದೆ. ಆದರೆ ನನ್ನ ಪರಿಸ್ಥಿತಿಯನ್ನು ನೀನು ಬಲ್ಲೆ. ಆ ಕೆಸರೊಳಗಿಂದ ನನ್ನ ಕಾಲು ಕೀಳಲೊಲ್ಲವು.''

``ರಾಮು, ಪರಿಸ್ಥಿತಿಯ ವಿಚಾರ ಮಾಡುತ್ತ ನಿಲ್ಲುವ ಹೊತ್ತಲ್ಲವಿದು. ಪರಿಸ್ಥಿತಿಯು ಎಲ್ಲರಿಗೂ ಉಂಟು. ನನಗಿಲ್ಲವೆ! ನನಗೂ ತಾಯಿ ತಂದೆಗಳುಂಟು. ಬಂಧು ಬಳಗದವರುಂಟು. ಮದುವೆ ಮಾಡಿ ಕೊಳ್ಳುವೆನೆಂದರೆ ಇವತ್ತೇ ಹತ್ತು ಹೆಣ್ಣು ಬಂದು ಮುಗಿಬಿದ್ದಾವು. ಆದರೆ, ಅದರ ವಿಚಾರ ಮಾಡುತ್ತ ಹೋದಂತೆ ನಮಗೆ ಪರಿಸ್ಥಿತಿಯೇ ಒಂದು ದೊಡ್ಡ ಕಗ್ಗಂಟಾಗಿ ಬಿಡುವದು. ಒಂದು ವೇಳೆ ಆ ಕಗ್ಗಂಟನ್ನು ಬಿಚ್ಚಲು ಬರದಿದ್ದರೆ ಅದನ್ನು ಕತ್ತರಿಸುವದೇ ಲೇಸು.''

``ಆದರೆ ನೀನು ಮಾಡುವದನ್ನು ನಾನು ಒಪ್ಪುತ್ತಿಲ್ಲ ಶೇಷ! ನೀನು ನಿನ್ನ ಪರಿಸ್ಥಿತಿಯ ವಿಚಾರವನ್ನು ಮಾಡಬೇಕೆಂದೇ ನನ್ನ ಅಭಿಪ್ರಾಯ. ದೇಶದ ಜನರ ಸುಖಕ್ಕಾಗಿಯೇ ಆಗಲಿ, ನಮಗೆ ಹತ್ತಿ ಹೊಂದಿದ ಒಂದೆರಡೇ ಜೀವಗಳನ್ನೇ ಆದರೂ ನಾವೇಕೆ ನೋಯಿಸಬೇಕಂತೆ! ಮನೆಗೆದ್ದು ಮಾರು ಗೆದೆಯಬೇಕು.''

``ಹೌದು, ಮನೆ ಗೆದ್ದು ಮಾರು ಗೆದೆಯಬೇಕು, ರಾಮು. ಹಿಂದೂಸ್ಥಾನವೇ ಈಗ ನಮ್ಮ ಮನೆ, ತಿಳಿದುಕೋ. ನೀನು ಇಷ್ಟು ಸಂಕುಚಿತ ದೃಷ್ಟಿಯಿಂದ

ನೋಡುತ್ತಿರುವದನ್ನು ಕಂಡು ನನಗೆ ಬಲು ಕೆಡಕೆನಿಸುತ್ತದೆ.'

``ಶೇಷ, ನೀನು ಬರೇ ಮಾತು ಹೊರಳಿಸಿದೆ ಅಷ್ಟೇ. ಆದರೆ ನಿಜವಾಗಿ ನೋಡಿದರೆ, ಹಿಂದೂಸ್ಥಾನದಲ್ಲಿ ಈಗ ನಡೆದ ಚಳವಳಿಯು ಅಷ್ಟೊಂದು ಸರಿಯಾಗಿ ನಡೆದಿಲ್ಲವೆಂದೇ ನನಗನಿಸುವದು. ನೋಡು ಈ ನಮ್ಮ ಪರಾಧೀನ ಭಾರತದಲ್ಲಿ ಈಗ ದಿನ ಒಂದಕ್ಕೆ ನೂರಾರು ಜನರು ಗಾಯಹೊಂದಿಯೇ, ಸಾವಿಗೆ ತುತ್ತಾಗಿಯೇ ಇಷ್ಟು ಗೋಳಾಡುತ್ತಿರುವಾಗ, ಹೀಗೇ ಹೋದರೆ ಹಿಂದೂಸ್ಥಾನವು ಎಷ್ಟು ದಿನ ತಡದೀತು. ಕಾರಣ, ನಾವು ಚಳವಳಿಯನ್ನೇ ಸಾಗಿಸುವುದಾದರೆ, ಹಿಂಸಾಮಾರ್ಗವನ್ನೇ ಕೈಕೊಳ್ಳಬೇಕು. ಇಲ್ಲದಿದ್ದರೆ ಎಲ್ಲವನ್ನೂ ಬಿಡಬೇಕು. ಇದು ನೋಡು. ೧೮೮೫ರಲ್ಲಿ ಕಾಂಗ್ರೆಸು ಆರಂಭವಾಯಿತಷ್ಟೇ. ಆಗಿನ ಮುಂದಾಳುಗಳು ಸಾಮೋಪಾಯವನ್ನು ಉಪಯೋಗಿಸಿದರು. ಮಹಾಯುದ್ಧದ ಕಾಲದಲ್ಲಿ, ದುಡ್ಡು ದಂಡನ್ನು ಒದಗಿಸಿ ಹಿಂದುಸ್ಥಾನವು ದಾನೋಪಾಯವನ್ನು ನೋಡಿತು. ಆ ಅನಂತರ ಮಹಾತ್ಮಾಜಿಯವರು, ಅಸಹಕಾರದಿಂದ ಭೇದೋಪಾಯವನ್ನೂ ಕಲ್ಪಿಸಿದರು. ಈಗ ಉಳಿದುದು ದಂಡೋಪಾಯವೊಂದೇ.''

``ಚೆನ್ನಾಯಿತು ರಾಮು, ಚೆನ್ನಾಯಿತು. ನನಗೆ ಮಾತು ಹೊರಳಿಸಿದೆನೆಂದೆ. ನೀನು ಮಾತ್ರ ಮಾತನ್ನು ಮುಂದೆ ಹಾಕುತ್ತಿರುವೆಯಷ್ಟೆ! ಬರಿಗೈಲಿ ಮೊಳ ಹಾಕುವ ನಿನಗೇನನ್ನಬೇಕು. ಅಲ್ಲೋ! ರಾಮು, ಅಟ್ಟಕ್ಕೆ ಹಾರದ ಮರಿ ಬೆಟ್ಟಕ್ಕೆ ಹಾರೀತೇ? ನೀನೇ ನೋಡು. ಹಿಂದುಸ್ಥಾನವೀಗ ನಿಃಶಸ್ತ್ರವಾಗಿರುವಾಗ, ಹಿಂಸಾಮಾರ್ಗವು ಶಕ್ಯವೇ? ಅಲ್ಲದೆ ರಾಮು, ಹಿಂದೂಸ್ಥಾನವು ನಿಃಶಸ್ತ್ರವಾಗಿರುವಾಗಲೇ ಇಷ್ಟೊಂದು ಸಹನಶಕ್ತಿಯನ್ನು ತೋರುತ್ತಿರುವಾಗ, ನಾಳೆ ಶಸ್ತ್ರಪಾಣಿಯಾದರೆ ಅದು ಎಂಥ ಅದ್ಭುತ ಸಾಮರ್ಥ್ಯವನ್ನು ಗಳಿಸಬಹುದು ಬಲ್ಲೆಯಾ? ಈಗ ದೇಶವು ಮಾಡುತ್ತಿರುವದೆಲ್ಲ ಮುಂದಿನ ಗುರಿಯ ಸಾಧನವೇ. ಕಾರಣ, ನಾವೀಗ ಇಲ್ಲದ ನೆವಕ್ಕೆ ಇಂಬುಗೊಡದೆ ಸಧ್ಯಕ್ಕೆ ದೇಶವು ಮಾಡುತ್ತಿರುವ ಕಾರ್ಯದಲ್ಲಿ ಭಾಗ ತೆಗೆದುಕೊಳ್ಳಲೇ ಬೇಕು.''

``ಏನೇ ಎನ್ನು ಶೇಷ, ನನಗೇನು ನಿನ್ನ ಮಾತು ಮನವರಿಕೆಯಾಗದು.

ಉದ್ಯೋಗವಿಲ್ಲದವರು ಉದ್ದು ಹುರಿದು ಮೆದ್ದರೆಂಬಂತೆ, ಸುಮ್ಮನೇ ಏನಾದರೂ ಮಾಡಬೇಕೆಂದು ಹುಯಿಲೆಬ್ಬಿಸುವವರಲ್ಲಿ ಅರ್ಥವಿಲ್ಲ. ಹೊಡೆವರೆ ಹೊಡೆಯಬೇಕು- ಒಂದು ಹೊಡೆತ ಎರಡು ತುಂಡು. ಒಟ್ಟಿನ ಮೇಲೆ,-- ನಿನಗೆ ಪಾಲಿಟಿಕ್ಸ್ ಗೊತ್ತಿಲ್ಲ ನೋಡೋ-- ಅದಕ್ಕೇ ನಾನು ಹೇಳುವದು. ನಮಗಿನ್ನೂ ಪೂರ್ವಸಿದ್ಧತೆ ಇಲ್ಲವೆಂದು. ಸುಮ್ಮನೇ ಒಬ್ಬರು ಏನಾದರೂ ಮಾಡುತ್ತಾರೆಂದು, ನಾನೂ ಕುರಿಯಂತೆ ಬೆನ್ನು ಹತ್ತಲಾರೆ. ಅದಕ್ಕೆಲ್ಲ, ದೀರ್ಘವಿಚಾರ ಬೇಕು, ಶೇಷ, ಒಳ್ಳೇ ತಯಾರಿ ಬೇಕು."

೧೩

ಮತ್ತೊಂದು ದಿನ ಬೆಳಗಿನ ಎಂಟು ಗಂಟೆಯಾಗಿತ್ತು. ಶೇಷಾಚಲನೂ ರಾಮಚಂದ್ರನೂ ಚಹಪಾನ ಮಾಡುತ್ತ ಕುಳಿತಿದ್ದಾರೆ. ಎಷ್ಟು ಪ್ರಯತ್ನ ಪಟ್ಟರೂ ರಾಮಚಂದ್ರನನ್ನು ತಾನು ಮನಗಾಣಿಸದೆ ಹೋದುದಕ್ಕಾಗಿ ಶೇಷಾಚಲನಿಗೆ ಬಲು ನಿರುತ್ಸಾಹ. ರಾಮಚಂದ್ರನೆಂದರೆ ಗಳಿಗೆ ಸಹ ಬಿಟ್ಟಿರದ ಆತನಿಗೆ, ಈಗ ಮಾತ್ರ ರಾಮಚಂದ್ರನ ಗೊಡವೆಯನ್ನೇ ಬಿಟ್ಟರೆ ಒಳಿತೆಂದು ಎನಿಸುವದು. ಆದರೆ ಹೃದಯ ಒಪ್ಪುತ್ತಿರಲಿಲ್ಲ. ಎರಡು ದಿನ ಬಿಟ್ಟರೆ ಮತ್ತೆ ಮೂರನೆಯ ದಿನ ತಪ್ಪದೆ ತಾನೇ ರಾಮಚಂದ್ರನ ಮನೆಮುಟ್ಟಿ ಬಂದು ಬಿಡುವ. ಅಂದಿನ ದಿನವೂ ಹಾಗೇ ಬಂದಿದ್ದರೂ, ರಾಮಚಂದ್ರನನ್ನು ನೋಡಿದೊಡನೆ ಒಂದು ನಿರಾಶೆಯೆ ತಲೆದೋರಿತು. ಬಂದ ತಪ್ಪಿಗೆ ನಿರ್ವಾಹವಿಲ್ಲದೆ ಆತನೊಡನೆ ಚಹ ಕುಡಿಯಲು ಕುಳಿತಿದ್ದ. ಅವರೊಂದಿಗೆ ಕಾಂತರಾಯರೂ ಹನುಮಂತರಾಯರೂ ಸಹ ಕುಳಿತುಕೊಂಡಿದ್ದರು. ಶೇಷಾಚಲನು ಬರುವ ಹೊತ್ತಿಗೆ ಹನುಮಂತರಾಯನು ಕಾಲೇಜ ಆರಂಭವಾಗುವ ದಿನಗಳು ಹತ್ತಿರ ಬಂದದ್ದರಿಂದ ರಾಮಚಂದ್ರನು ಮುಂಬೈಗೆ ಹೊರಡುವುದರ ಬಗ್ಗೆ ಮಾತೆತ್ತಿದನು. ಶೇಷಾಚಲನು ಬಳಿಯಲ್ಲಿ ಇದ್ದುದರಿಂದ ರಾಮಚಂದ್ರನಿಗೆ ಉತ್ತರ ಕೊಡಲು ನಾಚಿಕೆಯಾಯಿತು. ಕೊನೆಗೆ ಗಟ್ಟಿ ಧೈರ್ಯಮಾಡಿ ಹೇಳಿದನು.

"ಹನುಮಣ್ಣಾ ನಾನೀಸಲ ಮುಂಬೈಗೆ ಹೋಗುವದಿಲ್ಲ. ಇಲ್ಲಿಯ ಕಾಲೇಜದಲ್ಲೇ ಸೇರಿಕೊಳ್ಳುವೆ."

ಹನುಮಂತರಾಯನಿಗೆ ಬಲು ಸೋಜಿಗವಾಯಿತು.

"ಅದೇಕೊ ರಾಮು! ನಿನ್ನ ಅಭ್ಯಾಸಕ್ಕೂ ಪರೀಕ್ಷೆಗೂ ಅನುಕೂಲವಾಗಲೆಂದು ಮುದ್ದಾಂ ಮುಂಬೈಗೆ ಕಳಿಸುತ್ತಿರಲು, ನೀನೇಕೆ ಒಲ್ಲೆನೆನ್ನುವಿ, ಇಲ್ಲೇನಿದೆ ಈ ಊರ ಕಾಲೇಜದಲ್ಲಿ ಹಳೇ ಹುಣಿಸೇಹಣ್ಣು!"

"ಹಾಗಲ್ಲ ಹನುಮಣ್ಣ! ನಾನೀಗ ಮುಂಬೈಗೆ ಹೋದರೆ ಅಲ್ಲಿ ನನ್ನಿಂದ ಅಭ್ಯಾಸವೇ ಆಗಲಿಕ್ಕಿಲ್ಲ. ಮುಂಬೈಯಲ್ಲೀಗ ಚಳವಳಿಯ ಜೋರು. ಅದರಿಂದ ಶಾಲಾ ಕಾಲೇಜುಗಳು ಕೂಡ ಬಂದಾಗಬಹುದೆಂದು ತೋರುತ್ತದೆ. ಈ ಊರಲ್ಲಿ ವಿಶೇಷ ತೊಂದರೆ ಇಲ್ಲ. ಅದಕ್ಕೇ ನಾನು ಹಾಗೆನ್ನುವುದು."

"ಚಳವಳಿ ನಿನಗೇನು ಮಾಡೀತು ರಾಮು! ನಿನ್ನಷ್ಟಕ್ಕೆ ನೀನು ಇದ್ದುಬಿಡು. ಇಲ್ಲದ ಒಣ ಉಸಾಬರಿ ಮಾಡಬೇಡ. ಬೇಕಾದವರು ಹಾಳುಭಾವಿ ಬೀಳಲೊಲ್ಲರೇಕೆ! ಬೇಕಾದರೆ ನೀನು ಈ ಸಲ ಎಲ್ಫಿನ್‌ಸ್ಟನ್ ಕಾಲೇಜಕ್ಕೆ ಹೋಗಿಬಿಡು. ಸರಕಾರಿ ಕಾಲೇಜವಾದ್ದರಿಂದ ಅಲ್ಲೇನು ಅಷ್ಟು ಭಯವಿಲ್ಲ. ಅಲ್ಲದೆ ನಿನಗೆ ಅಲ್ಲಿಯ ಪ್ರೊಫೇಸರರ ಗುರುತಾದರೆ ಪರೀಕ್ಷೆಯಲ್ಲೂ ಅನುಕೂಲ. ಅದನ್ನು ಬಿಟ್ಟು ಇಲ್ಲಿಯೇ ಉಳಿದರೆ ಈ ಶೇಷಾಚಲನ ಸಂಗತಿಗೆ ಬಿದ್ದು ಪೂರಾ ಘಾತಮಾಡಿಬಿಟ್ಟೀ."

ಗೆಳೆಯನ ವಿಷಯವಾಗಿ ಅಣ್ಣನು ಹಾಗೆಂದದ್ದರಿಂದ ರಾಮಚಂದ್ರನಿಗೆ ಕಟ್ಟೆನಿಸಿತು. ಶೇಷಾಚಲನಿಗೂ ರೊಚ್ಚು ಉಕ್ಕೇರಿ ಬಂತು; ರಾಮಚಂದ್ರನ ಮೋರೆ ನೋಡಿ ಸುಮ್ಮನಿದ್ದನಷ್ಟೇ.

ಮನೆಯವರೊಡನೆ ವಿಶೇಷ ವಾದಿಸಲಾರದೆ, ಗೆಳೆಯನ ಮೇಲೆ ಸುಮ್ಮನೆ ಅಪವಾದ ಹೊರಿಸಲಾರದೆ ರಾಮಚಂದ್ರನು, ಮುಂಬೈಗೆ ಹೊರಟು ಹೋದ. ಹೋದುದಕ್ಕೆ ಇನ್ನೊಂದು ಕಾರಣವೆಂದರೆ, ಶೇಷಾಚಲನೊಡನೆ ಸಂಭಾಳಿಸಿಕೊಂಡು ಇರುವದು ಆತನಿಗೆ ಕಠಿಣವೆನಿಸಿತ್ತು.

ಆದರೆ ರಾಮಚಂದ್ರನು ಮುಂಬೈಯಲ್ಲಿ ಕಾಲಿಟ್ಟ ತುಸು ದಿನಗಳಲ್ಲೇ, ಎಲ್ಫಿನ್‌ಸ್ಟನ್ ಕಾಲೇಜದ ಬಳಿಯಲ್ಲಿ ಭಯಂಕರವಾದ ಹತ್ಯಾಕಾಂಡವಾಯಿತು. ಪೋಲೀಸರ ಲಾಠಿ ಹೊಡೆತಕ್ಕೆ ಗುರಿಯಾಗಿ, ಹಲವೊಂದು ಜನರು ಹುಳಗಳಂತೆ ಒರೆಸಿಕೊಂಡು ಘಾಯಕ್ಕೀಡಾದರು. ಅದನ್ನೆಲ್ಲ ನೋಡಿ, ಅದರ ಬಣ್ಣನೆಯನ್ನು ಓದಿ, ಕೇಳಿ, ರಾಮಚಂದ್ರನಿಗೆ ಜೀವ ಆಡದಂತಾಯಿತು. ಉಕ್ಕುವ ರೊಚ್ಚನ್ನು ಹತ್ತಿಟ್ಟುಕೊಂಡು, ಹೇಗೋ ಮನಸ್ಸು ಮುದುಡಿಕೊಂಡು ಆತನು ಮರಳಿ ಊರಿಗೆ ಓಡಿಬಂದ. ತಮ್ಮೂರ ಕಾಲೇಜವನ್ನೇ ಸೇರಿಕೊಂಡ.

೧೪

ರಾಮಚಂದ್ರನಿಗೆ ಯಾವ ಶನಿ ಗಂಟು ಬಿದ್ದಿತ್ತೋ ಬಲ್ಲವನಾರು! ಮುಂಬೈಯಿಂದ ಚಳವಳಿಯ ಸುಂಕನ್ನು ಹಚ್ಚಿಕೊಂಡೇ ಬಂದ. ಅದನ್ನು ಆತನೂ ಅರಿತಿರಲಿಲ್ಲ. ಮನೆಯಲ್ಲೇನೋ ಅಣ್ಣನೂ ತಂದೆಯೂ, ``ಆಯಿತು ತಿರುಗಿ ಬಂದದ್ದೇ ಒಳಿತಾಯಿತು'' ಎಂದು ಬಗೆದರು. ರಾಮು ಮೊದಲೇ ತಲೆತಿರುಕ. ಹಿಂದೆ ಅಸಹಕಾರದ ಚಳವಳಿಯಲ್ಲಿ ಯಾರು ಎಷ್ಟು ಹೇಳಿದರೂ ಕೇಳದೆ ಶಾಲೆ ಬಿಟ್ಟು ವಯಸ್ಸು ಹಾಳುಮಾಡಿಕೊಂಡ. ಈಗ ಯಾವ ದೇವರು ಹೊಟ್ಟೆಯಲ್ಲಿ ಹೊಕ್ಕಿರುವನೋ-ತುಸು ಬುದ್ಧಿ ಬಂದಿದೆ. ತಾನೇ `ಕಾಲೇಜು, ಪರೀಕ್ಷೆ' ಎನ್ನುತ್ತಿರುವ. ತಲೆಗೆ ತಾಗಿದರಲ್ಲವೆ ಬಾಗುವದು! ಆಗಲಿ ಇಲ್ಲಿಯೇ ಓದಿಕೊಂಡಿರಲೊಲ್ಲನೇಕೆ! ಹುಡುಗ ಒಮ್ಮೆ ಬಿ.ಎ. ಪ್ಯಾಸಾದರೆ ಮುಂದೆ ಮನೆತನದ ದೈವವೇ ತೆರೆದಂತಾಗುವದು.' ಎಂದು ರಾಮಚಂದ್ರನ ಅಣ್ಣನೂ ತಂದೆಯೂ ಬಗೆದುಕೊಂಡರು.

ಆದರೆ ಪಾಪ! ಅವರಿಗೆ ರಾಮಚಂದ್ರನ ಎದೆಯಲ್ಲಿಯ ಬೇಗುದಿಯ ಪರಿಯು ಅರಿವಾಗದೆ ಹೋಯಿತು. ಆತನು ನಿಜವಾಗಿಯೂ ಪರಿಸ್ಥಿತಿಯ ಸಂಕೋಲೆಗಳಲ್ಲಿ ಸಿಕ್ಕುಬಿದ್ದಿದ್ದನು. ಅಸಹಕಾರದ ಚಳವಳಿಯು ತಮ್ಮಗೆಯಾದ ಮೇಲೆ ಕೆಲವು ವರ್ಷ ಬಾಳು ಸುಗಮವಾಗಿತ್ತು. ಆಗ ಬಳಗದವರೆಲ್ಲರೊಡನೆ ಒಂದು ಬಗೆಯ ಎಳೆಗರುಳಿನ ಸಂಬಂಧವು ಬೆಳೆದುಬಿಟ್ಟಿತು. ಆತನ ಕುಟುಂಬದಲ್ಲಿ ಒಂದು ತರದ

ಸಹಜಪ್ರೇಮವು ನಲಿದಾಡುತ್ತಿತ್ತು. ಅದರಲ್ಲಿ ರಾಮಚಂದ್ರನು ಸಂಪೂರ್ಣವಾಗಿ ಮುಳುಗೇಳುತ್ತಿದ್ದ. ಇಂಥ ಹೊತ್ತಿನಲ್ಲೇ ಇತ್ತ ದೇಶದಲ್ಲೆಲ್ಲ ಒಮ್ಮಿಂದೊಮ್ಮೆ ಆಕಾಶ ಪಾತಾಳ ಒಂದು ಮಾಡುವಂತಹ ಕೋಲಾಹಲ. ಆ ಕೋಲಾಹಲದ ಸ್ವರದಲ್ಲಿ ಮಾತೃಭೂಮಿಯ ಆರ್ತಧ್ವನಿಯು ಬೆರೆತುಕೊಂಡು ತನ್ನನ್ನು ಕೂಗಿ ಕೂಗಿ ಕರ್ತವ್ಯಕ್ಕೆ ಎಚ್ಚರಿಸುವಂತೆ ಎನಿಸುವದು. ಹೀಗೆ ಇತ್ತ ಬಿದ್ದರೆ ಕೆರೆ, ಅತ್ತ ಬಿದ್ದರೆ ಕೊಳವೆಂಬಂತಾಗಿ, ರಾಮಚಂದ್ರನು ಒಂದು ಬಗೆಯ ನಾಚಿಕೆಯಿಂದ ಗೊಂದಲಗೆಟ್ಟು ತನ್ನ ಕಿವಿ, ಕಣ್ಣು, ಮನಸ್ಸುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡಿದ್ದ.

೧೫

ಇದೊಂದು ಬಗೆ. ಇನ್ನೊಂದು ಬಗೆಯೆಂದರೆ, ಇಂದಿರೆಯೊಡನೆ ತಾನು ಬಾಳುವೆ ಮಾಡಬೇಕೆಂಬ ಸವಿಗನಸು. ಆ ಕನಸು ಸವಿಯಾದುದಕ್ಕಿಂತ ಹೆಚ್ಚು ಮೋಹಕವಾಗಿತ್ತು. ಇಂದಿರೆಯು ಪಟ್ಟಣದವಳು. ಸಿರಿವಂತಿಕೆಯಿಂದ ಕಣ್ಣುಮುಚ್ಚಿ ಕಣ್ಣು ತೆಗೆಯುತ್ತಿದ್ದವಳು. ಮೇಲಾಗಿ ಒಳ್ಳೇ ಕಲಿತವಳು. ಮನಸ್ಸು ಬುದ್ಧಿ ಹೃದಯಗಳಿಗೆ ಸಾಕಷ್ಟು ಸಂಸ್ಕಾರವಿದೆ. ಅವಳೊಡನೆ ರಸಿಕನಂತೆ ಸುಖಮಯವಾದ ಸಂಸಾರ ಸ್ವರ್ಗವೊಂದನ್ನು ಕಟ್ಟಿಕೊಳ್ಳಬೇಕೆಂದು ಆತ ತೂಕ ಹಾಕಿದ್ದನು. ಇಂದಿರೆಯ ಸಿರಿವಂತಿಕೆಗೂ ತನ್ನ ಸ್ಥಿತಿವಂತಿಕೆಗೂ ಒಪ್ಪುವಂತಹ ಪದವಿಯಲ್ಲಿ ಬಾಳಬೇಕೆಂದು ಆತನ ಹಂಬಲ. ಆತನ ಹಂಬಲಕ್ಕೆ ಮನೆಯವರ ಹಾಗೂ ಮನೆತನದ ಬೆಂಬಲವೂ ಇದ್ದಿತು.

ಇಂದಿರೆಯು ಕೂಡ ಇಂಥ ಹಂಬಲದವಳೇ. ರಾಮಚಂದ್ರನು ತನ್ನ ಗಂಡನಾಗಬೇಕೇನೋ ನಿಜ. ಆದರೆ ಎಲ್ಲೋ ದೇಶಸೇವೆಯ ನೆವದಿಂದ ಬಡಪೋಲಿಯಾಗಿ ತಿರುಗುವಂತಹ ರಾಮಚಂದ್ರನಲ್ಲ; ಆದರೆ, ಶ್ರೀ-ಸರಸ್ವತಿಯರಿಂದ ಸನ್ಮಾನಿತರಾಗಿ, ನಾಲ್ಕು ಜನರಲ್ಲಿ ಪ್ರತಿಷ್ಠಿತನಾದ ರಾಮಚಂದ್ರನು ಅವಳಿಗೆ ಬೇಕಾದ ಗಂಡ. ಇದನ್ನು ರಾಮಚಂದ್ರನು ಅರಿತೇ ಇದ್ದ. ಅವಳ ಆ ಆಕಾಂಕ್ಷೆಗೆ ತಾನು ಒಪ್ಪುವಂಥವನಾಗಬೇಕೆಂದು ಆತನು ಮನಮುಟ್ಟಿ ಎತ್ತುಗಡೆ ಮಾಡುತ್ತಲಿದ್ದ.

ಈ ತರದ ಎತ್ತುಗಡೆಯಲ್ಲಿದ್ದ ಆತನು ದೇಶಸೇವೆಯ ಕಲ್ಪನೆಯನ್ನು ಹಿಂದೆ ಬಿಟ್ಟು ಬಿಟ್ಟಿದ್ದ. ಆದರೆ ಮತ್ತೀಗ ಮಾತೃಭೂಮಿಯ ಆರ್ತಧ್ವನಿಯು ಆತನ ಕಿವಿಗಳಲ್ಲಿ ನಿಡುಸರದಿಂದ ಕೂಗಿಡುವದನ್ನು ಕೇಳಿ ಆತನ ಎದೆಯು ಕಕ್ಕಾವಿಕ್ಕಿಯಾಗತೊಡಗಿತು. ಹಿಂದೂಸ್ಥಾನದ ನಿಜವಾದ ಸಂಕಟದ ಗೋಳಾಟವೂ ಇಂಗ್ಲೆಂಡದ ಕೆಲವು ಒಳ್ಳೆಯ ಕಿವಿಗಳಿಗೆ ಮುಟ್ಟದ ಹಾಗೆ ಇಲ್ಲಿಯ ಅಧಿಕಾರಿಗಳು ಮನಮುಟ್ಟಿ ಯತ್ನಿಸುವಂತೆ, ರಾಮಚಂದ್ರನೂ, ತನ್ನೆದೆಯಲ್ಲಿ ನಡೆದ ಈ ಬಗೆಯ ಕೋಲಾಹಲದ ಸುದ್ದಿಯು ತನ್ನ ಸದಸದ್ವಿವೇಕ ಬುದ್ಧಿಗೆ ತಗಲದಂತೆ ಯತ್ನಮಾಡುತ್ತಲ್ಲಿದ್ದ. ಆದರೆ ಆತನ ಯತ್ನವನ್ನು ಮೀರಿ ಆ ಕೋಲಾಹಲದ ಗುಡುಗು ಆಗೊಮ್ಮೆ ಈಗೊಮ್ಮೆಯಾದರೂ ಆತನ ವಿವೇಕವನ್ನು ಜಾಗೃತಗೊಳಿಸದೆ ಇರುತ್ತಿರಲಿಲ್ಲ.

## ೧೬

ಭಗೀರಥನ ಬೆಂಬತ್ತಿ ಬರುವ ಭಾಗೀರಥಿಯಂತೆ ಶಾಲೆ ಕಾಲೇಜುಗಳ ಬಹಿಷ್ಕಾರದ ಬೇಗೆ ರಾಮಚಂದ್ರನ ಬೆನ್ನು ಹಿಡಿದು ಬಂದು ಆತನೂರಿಗೂ ಹತ್ತಿತ್ತು. ಉರಿ ಹತ್ತಿದ ಮನೆಯಲ್ಲಿಯೇ ಎತ್ತ ಓಡಿದರೂ ಅಂಜಿಕೆ ತಪ್ಪಿದ್ದಲ್ಲ. ಉರಿಯನ್ನು ಆರಿಸಲು ಯತ್ನಿಸಬೇಕು. ಇಲ್ಲವೇ ಆ ಮನೆ ಬಿಟ್ಟು ಗುಡಿಚಾಪಿ ಕಟ್ಟಬೇಕು. ಹಿಂದೂಸ್ಥಾನಕ್ಕೇ ಬೆಂಕಿ ಹತ್ತಿದಾಗ, ಬಾಲ ಸುಟ್ಟ ಬೆಕ್ಕಿನಂತೆ, ರಾಮಚಂದ್ರನು ಮುಂಬೈಯಿಂದ ಊರಿಗೋಡಿಬಂದರೆ ಬೆನ್ನು ಹತ್ತಿದ ವಿಧಿ ಬಿಟ್ಟೀತೆ! ಇದು ಇರುತ್ತಲೆ, ಆ ಕಿಚ್ಚು ಜಾಜ್ವಲ್ಯವಾಗಿ ಪ್ರಜ್ವಲಿಸಹತ್ತಿತು. ಅದರ ಸೆಕೆಗೆ ರಾಮಚಂದ್ರನ ದೃಢನಿಶ್ಚಯವು ಇಲ್ಲವೇ ಕರಗಬೇಕು ಅಥವಾ ಕಮರಿಹೋಗಬೇಕು ಎಂಬಂತಾಯಿತು.

## ೧೭

ಮೊದಲಿಗೆ ಕಾಲೇಜಕ್ಕೇ ಪಿಕೆಟಿಂಗು ಗಂಟುಬಿತ್ತು. ಕಾಲೇಜು ಪಿಕೆಟಿಂಗು ಪಂಗಡದವರಿಗೆ ಕಣ್ಮೆಸುರಾಗಿ ಒತ್ತುತ್ತಿತ್ತು. ಅಂತೂ ಚಕ್ರ ಕೊರಳಿಗೇ ಬಂತೆಂದು

ರಾಮಚಂದ್ರ ನಿಶ್ಚಯಿಸಿಕೊಂಡ. ಇನ್ನು ಮೇಲೆ ಈವರೆಗೆ ಇದ್ದಂತೆ ಅಲಿಪ್ತನಾಗಿರುವುದು ತನಗೆ ಅಸಾಧ್ಯವೆಂದು ಭಾವಿಸಿಕೊಂಡನು. ಆದರೆ ಆತನಲ್ಲಿಯ ಶ್ರೇಯೋಕಾಂಕ್ಷೆಯು ಇಲ್ಲದ ನೆವಗಳನ್ನು ಮುಂದೆ ಒಡ್ಡಿ, ``ಸಧ್ಯಕ್ಕೆ ನಡೆದ ಚಳವಳಿಯು ಹಿಂದುಸ್ಥಾನಕ್ಕೆ ಸಾಧಕವಾಗಿರದೆ ಬಾಧಕವಾಗಿದೆ'' ಯೆಂಬುದಾಗಿ ಆತನ ಮನಸ್ಸಿನ ಮರೆಯಲ್ಲಿ ಅಡಗಿದ ಕಲ್ಪನೆಯೊಂದನ್ನು ಏರಿಸಿ ಕೊಡಿಸಿತ್ತು. ಆದ್ದರಿಂದ ಆತನಲ್ಲಿ ಒಂದು ಬಗೆಯ ಹಟಮಾರಿತನವು ತಲೆದೋರಿ, ತಾನು ಏನೇ ಆದರೂ ಕಾಲೇಜಕ್ಕೆ ಹೋಗಿಯೇ ತೀರುವೆನೆಂದು ಗಟ್ಟಿಯಾಗಿ ಗೊತ್ತು ಮಾಡಿಕೊಂಡನು.

ಮರುದಿನ ಬೆಳಗಿನ ಏಳು ಗಂಟೆಯಿಂದಲೇ ಪಿಕೆಟಿಂಗ ಪಂಗಡಗಳು ಕಾಲೇಜವನ್ನು ಸುತ್ತುಗಟ್ಟಿ, ದ್ರವ್ಯನಿಧಿಯನ್ನು ಕಾಯುವ ಘಟಸರ್ಪದಂತೆ ಜಡಿಯೂರಿ ಕುಳಿತಿದ್ದರು. ಹತ್ತು ಗಂಟೆಯ ಸುಮಾರಿಗೆ ಪೋಲೀಸ ಪಾರ್ಟಿಯೂ ಆ ಸ್ಥಳಕ್ಕೆ ಬಂದು ಹಾಜರಾಯಿತು. ಪೋಲೀಸರಿಗೆ ವಿಶೇಷ ಅಪ್ಪಣೆ ಯಾವುದೂ ಇರದಿದ್ದರಿಂದ ಅವರು ಪಿಕೆಟಿಂಗ ಪಂಗಡದವರನ್ನು ತಡವಲಿಲ್ಲ. ಸುಮ್ಮನೆ ಈರಣ್ಣನ ಮುಂದೆ ಬಸವಣ್ಣ ಎಂದು ಅವರು ಬಿಸಿಲು ಹಣ್ಣು ತಿನ್ನುತ್ತ ಕುಳಿತರು.

ಪಿಕೆಟಿಂಗದ ಸುದ್ದಿಯು ಊರಲ್ಲೆಲ್ಲ ಮೊದಲೇ ಹಬ್ಬಿತ್ತು. ದೂರದಲ್ಲಿ ನಿಂತು ನೋಡುವದಕ್ಕೆ ಊರವರೂ ಹಲವರು ಬಂದಿದ್ದರು. ಹನ್ನೊಂದರ ನಂತರ ಪಿಕೆಟಿಂಗದ ಕೆಲಸ ಆರಂಭವೇ ಆಯಿತು. ಕಾಲೇಜ ಕಾಂಪೌಂಡಿನ ಬದಿಗೆ ದೂರದಲ್ಲಿ ನಿಂತು, ಪ್ರಿನ್ಸಿಪಾಲನೂ ಕೆಲವು ಪ್ರೊಫೇಸರರೂ ಉಲುಕೊಚೀತನದ ಆಢ್ಯತೆಯಿಂದ ಮೋಜು ನೋಡುವುದಕ್ಕೆ ನಿಂತಿದ್ದರು. ಸಹೃದಯಿಗಳಾದರೂ ಅಳ್ಳೆದೆಯವರಾದ ಕೆಲವರು ಪ್ರೊಫೇಸರರು ಆ ನೋಟವನ್ನು ಹೇಗೋ ತಪ್ಪಿಸಿಕೊಂಡಿದ್ದರು. ಮತ್ತೊಂದಿಬ್ಬರು, ಆ ಹವ್ಯಾಸವನ್ನು ಬಿಡುವದಾಗಿ ದೈನಾಸದಿಂದ ಕೈಮುಗಿದು ಪಿಕೆಟರರಿಗೆ ಬೇಡಿಕೊಂಡು ಕೈಸಾಗದೆ ಉದಾಸೀನರಾಗಿ ಹಿಂದಿರುಗಿದ್ದರು.

೧೮

ಎಲ್ಲ ಹುಡುಗರು ಬರುವ ಹೊತ್ತಿಗೆ ರಾಮಚಂದ್ರನೂ ಕಾಲೇಜದ ಗೇಟಿನ ಕಡೆಗೆ ಮೆಲ್ಲನೆ ಹೆಜ್ಜೆಗಳನ್ನಿಡುತ್ತ ಬಂದ. ಆತನ ಎದೆ ಡಬಡಬಯೆಂದು ಎಡೆತಡೆಯಿಲ್ಲದೆ ಹಾರುತ್ತಿತ್ತು. ಕಾಲಿನ ಕಸುವು ಇಳಿದು ಹೋಗಿತ್ತು. ಕಣ್ಣುಗಳಲ್ಲಿ ನೀರಿನ ತಿಳುವಾದ ಪರೆಯು ಆಡುತ್ತಿತ್ತು. ಹಣೆಯ ಮೇಲೆ ಒಂದೆರಡು ಬೆವರ ಹನಿಗಳು. ಮೂಗು ಆಗಾಗ ಅರಳುತ್ತಿತ್ತು. ತಡೆದು ತಡೆದು, ಎಣಿಕೆ ಹಾಕುಹಾಕುತ್ತ ಮೆಲ್ಲನೆ ಕೆಳದುಟಿಯನ್ನು ಕಚ್ಚುತ್ತ, ಕೆಳಮೋರೆ ಮಾಡಿಕೊಂಡು ಸಾಗಿದ್ದ. ಏನೇ ಆದರೂ ಮೋರೆಯನ್ನು ಮೇಲಕ್ಕೆತ್ತಲಾಗದೆಂದು ನಿರ್ಧರಿಸಿಕೊಂಡಿದ್ದರೂ ಕಾಲೇಜದ ಕೂಟಿನ ಹತ್ತಿರ ಬಂದೊಡನೆ ಆತನ ಕಣ್ಣುಗಳು ಆತನಪ್ಪಣೆಯನ್ನು ಮೀರಿ ಮುಂದೆ ನೋಡಿದುವು.

ಕಾಲೇಜದ ಗೇಟಿನ ಮುಂಬದಿಯಲ್ಲಿ ಕೆಲವು ಸ್ವಯಂಸೇವಕರೂ ಸೇವಿಕೆಯರೂ ನಿಂತು, ವಿದ್ಯಾರ್ಥಿಗಳನ್ನು ಶಾಂತಭಾವದಿಂದ ತಡೆದು ಅಂಗಲಾಚಿ ಬೇಡಿಕೊಳ್ಳುತ್ತ ಹಲವರನ್ನು ಹಿಂದಕ್ಕಟ್ಟುತ್ತಿದ್ದರು. ಅವರ ಬೇಡಿಕೆಗಳನ್ನು ಮನ್ನಿಸದೆ, ಕೆಲವು ವಿದ್ಯಾರ್ಥಿಗಳು ತಮ್ಮ ಪೌರುಷವನ್ನು ಮೆರೆಸುವರಂತೆ, ಹೆಂಗಸರು ಹುಡುಗರು ಎಂಬುದನ್ನು ಲಕ್ಷಿಸದೆ ಕಸುವಿನಿಂದ ಮುಂದೆ ನುಗ್ಗಿ ತಡೆದವರನ್ನು ಹಿಂದೆ ನೂಕಿ, ತನ್ನ ವಿಟನನ್ನು ಕಾಣಲು ಯಾವ ತೊಂದರೆಯನ್ನೂ ಲೆಕ್ಕಿಸದೆ ಮುಂದೋಡುವ ಅಭಿಸಾರಿಕೆಯ ಠೀವಿನಿಂದ ಸಾಗಿದ್ದರು. ಮತ್ತೆ ಕೆಲವರು ವಿದ್ಯಾರ್ಥಿಗಳು, ಮೊದಲೇ ಕಾಲೇಜದ ಹವ್ಯಾಸ ಬಿಟ್ಟು, ಒಳಗೆ ಹೋಗುವವರಲ್ಲಿ ಯಾರ ಯಾರ ಅವಸ್ಥೆ ಏನಾಗುವದೆಂಬುದನ್ನು ನೋಡಲು ನಿಂತಿದ್ದರು.

ಒಂದು ನಿಮಿಷದಲ್ಲಿ, ಈ ನೋಟವೆಲ್ಲ ರಾಮಚಂದ್ರನ ಕಣ್ಣೆದುರು ಹಾದು ಹೋಯಿತು. ಕಾಲು ತಟ್ಟನೆ ತಡವರಿಸಿದವು. ಕೆಲಹೊತ್ತು ನಿಂತಲ್ಲಿಯೇ ನಿಂತು, ಆಮೇಲೆ ತನ್ನ ಸತ್ವದಿಂದ ಕ್ರಿಯಾಸಿದ್ಧಿಯನ್ನು ಸಾಧಿಸುವ ಮಹಾತ್ಮನ ನಿರ್ಧಾರದಿಂದ ಮತ್ತೆ ಮುಂದೆ ಸಾಗಿದ. ಹತ್ತಿರ ಹೋಗಲು ಇಬ್ಬರು ಹೆಣ್ಣುಮಕ್ಕಳು ಆತನನ್ನು ತಡೆದರು. ಬಲುಶ್ರಮಪಟ್ಟು ಹೇಗೋ ಒಮ್ಮೆ `ಪ್ಲೀಜ' ಎಂದು ನುಡಿದ. ಮುಂದೆ

ಬಾಯೇಳಲಿಲ್ಲ. ಆದರೂ ಕೆಲಹೊತ್ತಿನ ಮೇಲೆ ಆ ಹೆಣ್ಣುಮಕ್ಕಳು ಗದ್ದಲದಲ್ಲಿ ತೊಡಗಿಕೊಂಡಾಗ ಅವರನ್ನು ತಪ್ಪಿಸಿ ಮತ್ತೆ ಮುಂದೆ ಹೋದ. ಒಡನೆ ನಾಲ್ವರು ಹೆಣ್ಣುಮಕ್ಕಳೂ, ಇಬ್ಬರು ಗಂಡುಮಕ್ಕಳೂ ಆತನನ್ನು ತಡೆದರು. ಆಗ ಆತನಿಗೆ ದಿಕ್ಕು ತಪ್ಪಿದಂತಾಯಿತು. ಮುಂದೆ ಹೋಗಬೇಕೆಂದರೆ ಎದೆಯ ಕೆಚ್ಚು ಕರಗಿ ಹೋಗಿಬಿಟ್ಟಿದೆ. ಹಿಂದಿರುಗಿದರೆ ಕೈತೋರಿಸಿ ಅವಲಕ್ಷಣ ಮಾಡಿಸಿಕೊಂಡಂತೆ.

ಹೀಗೆ ಗೊಂದಲಗೆಟ್ಟು ನಿಂತಿರುವಾಗಲೇ ಹಿಂದಿನಿಂದ ನಾಲ್ಕೈದು ಕ್ರಿಶ್ಚಿಯನ್ ವಿದ್ಯಾರ್ಥಿಗಳು ಈ ಎಲ್ಲ ಗೊಂದಲವನ್ನು ನೋಡಿಯೂ ತೀರ ವಿಕ್ಷಿಪ್ತರಂತೆ ಖಿಡ್ ಖಿಡ್ ಖಿಡಲ್ಲೆಂದು ಬೂಟಿನ ಸಪ್ಪಳ ಮಾಡುತ್ತ ಬಂದರು. ಅವರಲ್ಲಿ ಒಬ್ಬನು ಬಾಯಲ್ಲಿ ಹಾಡುತ್ತಿದ್ದಾನೆ. ಇನ್ನೊಬ್ಬನು ಕೊಡೆಯನ್ನು ತೂಗಿಸುತ್ತಾನೆ. ಮತ್ತೊಬ್ಬ, ಹ್ಯಾಟು ತಿರುವುತ್ತಿದ್ದಾನೆ, ಮಗದೊಬ್ಬನು ಕಣ್ಣು ಕುಣಿಸುತ್ತಿದ್ದಾನೆ. ಬೇರೊಬ್ಬನು ಸಿಳ್ಳು ಹಾಕುತ್ತಿದ್ದಾನೆ. ಹೀಗೆ ಆಕಾಶದಲ್ಲಿ ಅಡ್ಡಾಡುವ ಬೆಡಗಿಗಳಂತೆ ಬರುವ ಅವರನ್ನು ಕಂಡು ರಾಮಚಂದ್ರನಿಗೆ ಜೀವದಲ್ಲಿ ಜೀವ ಬಂದಂತಾಯಿತು. ನೋಡು ನೋಡುತ್ತಲೇ ಆ ವಿದ್ಯಾರ್ಥಿಗಳು ಎದುರಿಗೆ ಇದ್ದ ಆ ಹೆಣ್ಣುಮಕ್ಕಳಿಬ್ಬರನ್ನು ದಬ್ಬಿ ಮುಂದರಿದರು. ರಾಮಚಂದ್ರನೂ ಇದೇ ಸಂಧಿಯೆಂದು ಅವರಲ್ಲಿ ಸೇರಿ ಅವರೊಡನೆ ಎರಡನೆಯ ಕೋಟೆಯ ಗೋಡೆಯನ್ನೊಡೆದು ಸಾಗಿದ.

ಆದರೆ ಮೂರನೆಯ ಕೋಟೆಯ ಗೋಡೆಯು ಹೆಚ್ಚು ಬಲವಾಗಿತ್ತು. ಅಲ್ಲಿ ಶೇಷಾಚಲನೂ ಮತ್ತೆ ಹತ್ತುಜನ ಸ್ವಯಂಸೇವಕರೂ ಸಜ್ಜಾಗಿ ನಿಂತಿದ್ದರು. ಅವರು ಆ ಕ್ರಿಶ್ಚಿಯನ್ ವಿದ್ಯಾರ್ಥಿಗಳನ್ನೂ, ಅವರೊಡನೆ ಕಳ್ಳನಂತೆ ಒಳಸೇರಲು ಯತ್ನಿಸುವ ರಾಮಚಂದ್ರನನ್ನೂ ತಡೆದರು. ಆ ವಿದ್ಯಾರ್ಥಿಗಳ ಹಿಂದೆ ರಾಮಚಂದ್ರನೂ ಥರಥರ ನಡುಗುತ್ತ ನಿಂತುಕೊಂಡ.

ಸ್ವಯಂಸೇವಕರು ಹಲವು ಪರಿಯಿಂದ ಸೆರಗೊಡ್ಡಿ ಬೇಡಿಕೊಂಡರೂ ಆ ವಿದ್ಯಾರ್ಥಿಗಳೇನೂ ಹಣಿಯಲೆ ಇಲ್ಲ. ಕಡೆಗೆ, ತಾವು ಅಡ್ಡಬೀಳುವದಾಗಿಯೂ

ತಮ್ಮನ್ನು ತುಳಿದು ಹೋಗಬಹುದಾಗಿಯೂ ಸ್ವಯಂ ಸೇವಕರು ಹೇಳಿ ದಾರಿಯಲ್ಲಿ ಮಲಗಿಕೊಂಡರು. ಆ ವಿದ್ಯಾರ್ಥಿಗಳು ಅದಕ್ಕೂ ಹಣೆಯಲಿಲ್ಲ. ಅವರಲ್ಲಿ ಕೆಲವರು ಮಾತ್ರ ಮಡಿಯ ಬ್ರಾಹ್ಮಣರು ಜಿಗಿಜಿಗಿದು ತಮ್ಮ ಮಡಿಯನ್ನು ಕಾಪಾಡಿಕೊಳ್ಳುತ್ತ ಓಣಿಯಲ್ಲಿ ಹೋಗುವಂತೆ, ಅನುವು ಸಿಕ್ಕಲ್ಲಿ ಕಾಲಿಟ್ಟು ದಾಟಿ, ದಾಟಿ, ತಮ್ಮಲ್ಲಿದ್ದ ಭೂತದಯೆಯನ್ನು ವ್ಯಕ್ತಗೊಳಿಸಿದರು. ಉಳಿದವರು, ಇಲ್ಲದ ದಾಕ್ಷಿಣ್ಯಕ್ಕೆ ಬೀಳದೆ ನೆಟ್ಟಗೆ, ದಾರಿಯಲ್ಲಿ ಮಲಗಿದವರನ್ನು ಬೂಟುಗಾಲಿನಿಂದ ತುಳಿಯುತ್ತಲೇ ಸಾಗಿಹೋದರು.

ರಾಮಚಂದ್ರನು ಇದೆಲ್ಲವನ್ನು ನೋಡಿದ. ಆತನ ಮೈಯ್ಯೆಂತ ಮೈಯೆಲ್ಲಿ ಬಲವಾಗಿ ನಡುಗು ಹುಟ್ಟಿತು. ಕಣ್ಣಲ್ಲಿ ನೀರು ಮುತ್ತಿಕೊಂಡಿತು. ನೆಲದಲ್ಲಿ ನೆಟ್ಟ ದೃಷ್ಟಿ ಕೀಳದೆ ನಿಂತುಕೊಂಡಿದ್ದ. ಕಾಲಿನ ಶಕ್ತಿ ತಪ್ಪಿತ್ತು. ಕಣ್ಣು ಕತ್ತಲೆಗೂಡಿಸಿದಂತೆನಿಸಿತು.

ದಾರಿಯಲ್ಲಿ ಮಲಗಿಕೊಂಡವರಲ್ಲಿ ಮೊದಲಿಗೇ ಶೇಷಾಚಲನಿದ್ದ. ಆತನು ಎಲ್ಲರೂ ತಮ್ಮನ್ನು ತುಳಿದು ಹೋದ ಮೇಲೆ ರಾಮಚಂದ್ರನೊಬ್ಬನೇ ಹಾಗೆಯೇ ನಿಂತಿದ್ದನ್ನು ಅರಿತು, ನೆಲಕ್ಕೆ ಹಚ್ಚಿದ ಮೋರೆಯನ್ನು ಮೇಲಕ್ಕೆತ್ತುತ್ತ-``ಸ್ವಾಗತ ರಾಮು! ಹೋಗು, ಬಾ. ನಿನ್ನ `ಕರಿಯರು' (ಅಭ್ಯಾಸ) ನಿನ್ನನ್ನು ಕರೆಯುತ್ತಿದೆ'' ಎಂದು ನುಡಿದ. ಆ ಮಾತುಗಳು ರಾಮಚಂದ್ರನ ಕಿವಿಗೆ ತಗುಲಿದವು. ಮನದಲ್ಲಿ ನಾಟಿ ಎದೆಯಲ್ಲಿ ನೆಟ್ಟುಕೊಂಡವು. ಬಲು ಪ್ರಯಾಸದಿಂದ ಕಣ್ಣೆತ್ತಿ ಶೇಷಾಚಲನನ್ನು ನೋಡಲು ಹವಣಿಸಿದ; ಆಗಲಿಲ್ಲ. ಕೈಲಿದ್ದ ಪುಸ್ತಕಗಳೂ, ಕೊಡೆಯೂ ನೆಲಕ್ಕೆ ಜಾರಿದವು. ಒಡನೆ ಆತನು ಕಣ್ಣಿಗೆ ಬವಳಿ ಬಂದು ಕಪ್ಪರಿಸಿಕೊಂಡು ಬಿದ್ದುಬಿಟ್ಟ.

ಅಷ್ಟೊತ್ತಿಗೆ ಶೇಷಾಚಲನು ಮೇಲಕ್ಕೇಳುತ್ತಿದ್ದ. ರಾಮಚಂದ್ರನನ್ನು ನೋಡಿದೊಡನೆ, ಆತನಿಗೆ ಉಂಟಾದ ಅವಸ್ಥೆಯೆಲ್ಲ ಶೇಷಾಚಲನಿಗೆ ಹೊಳೆದುಹೋಯಿತು. ``ಪಾಪ! ನಿತ್ತರಿಸುವ ತ್ರಾಣವಿಲ್ಲದೆ ರಾಮಚಂದ್ರ ಈ ಕೆಲಸಕ್ಕೆ ಕೈ ಹಾಕಿದ'' ಎಂದು ಗೊಣಗುಟ್ಟುತ್ತ, ಉಳಿದ ಸ್ವಯಂಸೇವಕರ ಸಹಾಯದಿಂದ ಆತನಿಗೆ ಶೈತ್ಯೋಪಚಾರ ಮಾಡಿ ಎಚ್ಚರಿಸಿದ. ಅನಂತರ ಇಬ್ಬರು

ಸ್ವಯಂಸೇವಕರು ಆತನನ್ನು ಅತ್ತಕಡೆಗೆ ಎತ್ತಿಕೊಂಡು ಹೋದರು. ಮರೆಯಾಗುವವರೆಗೂ ರಾಮಚಂದ್ರನ ಕಣ್ಣುನೋಟ ಶೇಷಾಚಲನ ಕಣ್ಣಲ್ಲಿಯೇ ನೆಟ್ಟುಕೊಂಡಿತ್ತು.

೧೯

ಅಂದಿನ ಇರುಳು ಶೇಷಾಚಲನು ರಾಮಚಂದ್ರನ ಹಾಸಿಗೆಯ ಬಳಿಯಲ್ಲಿ ಕುಳಿತ್ತು ಆರೈಕೆ ಮಾಡುತ್ತಿದ್ದ. ರಾಮಚಂದ್ರನಿಗೆ ಆಯಾಸದಿಂದ ತುಸು ಮೈ ಬೆಚ್ಚಗಾಗಿತ್ತು. ಇಡೀ ದಿನವೆಲ್ಲ ಮನದಲ್ಲಿ ಒಂದು ಬಗೆಯ ಕನವರಿಕೆಯುಂಟಾಗಿ ಆತನ ಮೈಯಲ್ಲಿ ರಾವು ಹುಟ್ಟಿತ್ತು. ಬಲುದಿನಗಳ ಮೇಲೆ, ಶೇಷಾಚಲನು ಒಮ್ಮೆ ತನ್ನ ಹತ್ತಿರ ಬಂದು ಕುಳಿತರೆ ಬೇಕೆನ್ನಿಸಿತು. ಶೇಷಾಚಲನಿಗೂ ಅದು ಗೊತ್ತು. ಅಂತೇ ದಿನವೆಲ್ಲ ಪಿಕೆಟಿಂಗದಿಂದ ಬಳಲಿದ್ದರೂ, ರಾತ್ರಿ ತಪ್ಪದೆ ರಾಮಚಂದ್ರನ ಬಳಿಗೆ ಬಂದಿದ್ದ.

``ರಾಮೂ, ನಾನು ಇಡೀ ದಿನವೆಲ್ಲ, ನಿನಗಿಂತ ಎಷ್ಟೋ ಪಾಲು ಹೆಚ್ಚು ಶ್ರಮಪಟ್ಟಿದ್ದೇನೆ. ಆದರೆ ನನಗೇನೂ ಆಯಾಸವಿಲ್ಲ; ಸ್ವಲ್ಪವೂ ಜ್ವರವಿಲ್ಲ. ಇದರ ಗುಟ್ಟೇನು ಗೊತ್ತೇ ನಿನಗೆ?''

``ಗೊತ್ತು ಶೇಷ; ಗೊತ್ತು; ಪೂರ್ಣವಾಗಿ ಗೊತ್ತು. ನನ್ನದು ಮನಸ್ಸಿನ ದಣಿವು, ನಿನ್ನದು ದೇಹದ್ದು. ನೀವೇನೋ ನನ್ನಂತಹ ಕೆಲವು ಹಟಮಾರಿಗಳೊಡನೆ ಹೋರಾಡಿದಿರಿ. ನಾನು ನನ್ನೊಡನೆಯೇ ಹೋರಾಡಿದೆ. ನನ್ನ ಸದಸದ್ವಿವೇಕ ಬುದ್ಧಿಯನ್ನು ಕೊಂದುಬಿಡಲು ಯತ್ನಿಸಿದೆ. ಶೇಷ, ಕಾಲೇಜದೆದುರಿನಲ್ಲಿ ನೀವು ಅಷ್ಟೊಂದು ಜನರು ಕೂಡಿ ನಡೆಸಿದ ಹೋರಾಟಕ್ಕಿಂತಲೂ, ಇಕಾ-ಈ-ನನ್ನ ಹೃದಯದಲ್ಲಿ ನಡೆದ ಯುದ್ಧವು ಹೆಚ್ಚು ತುಮುಲವಾದದ್ದು.''

ಶೇಷಾಚಲನಿಗೆ ಮನಸ್ಸು ಕರಗಿತು. ಬೆಳಗ್ಗೆ ತನ್ನ ಕೊಂಕು ಮಾತೇ ರಾಮಚಂದ್ರನನ್ನು ಎಚ್ಚರದಪ್ಪುವಂತೆ ಮಾಡಿದ್ದನ್ನರಿತೂ, ಮತ್ತೆ ತಾನು ಹಂಗಿಸುವ ಮಾತುಗಳನ್ನಾಡಲು ಹವಣಿಸಿದ್ದಕ್ಕೆ ಶೇಷಾಚಲನು ಹೇಸಿಕೊಂಡನು. ತನ್ನ

ಮಾತುಗಳನ್ನು ರಾಮಚಂದ್ರನು ಶಾಂತರೀತಿಯಿಂದ ಒಪ್ಪಿಕೊಂಡದ್ದರಿಂದ ಆತನ ಮನಸ್ಸು ನಾಚಿಕೊಂಡಿತು. ಆದರೂ ಆ ಒಂದೊಪ್ಪತ್ತಿನಲ್ಲಿ ರಾಮಚಂದ್ರನಲ್ಲಿ ಬಹಳ ಬದಲಾವಣೆಯಾಗಿದೆಯೆಂದರಿತು ಶೇಷಾಚಲನಿಗೆ ಆನಂದವೂ ಆಯಿತು.

``ಹೌದು ರಾಮು; ನಿನ್ನ ಜೀವನದ ಯೋಗ್ಯತೆಯನ್ನು ನಾನು ಬಲ್ಲೆ. ದೇಶದ್ರೋಹವು ನಿನ್ನ ಜೀವನಧರ್ಮವಲ್ಲ. ನೀನು ಸುಮ್ಮನೇ ಒಂದು ತತ್ತ್ವವಾದದ ಹಟಮಾರಿತನಕ್ಕೆ ಬಿದ್ದು, ಹಿಂದುಳಿಯುತ್ತಿದ್ದೆ; ಅಷ್ಟೆ.

``ಶೇಷ, ನೀನನ್ನುವದರಲ್ಲಿ ಸಂತ್ಯಾಂಶವಿಲ್ಲದಿಲ್ಲ. ನಾನು ಕೆಲವು ಮೋಹಗಳನ್ನು ಕಲ್ಪಿಸಿಕೊಂಡಿದ್ದೆ. ಆಮೇಲೆ ಅವುಗಳಿಗೆ ಅನುಕೂಲವಾಗುವಂತೆ, ಕೆಲವು ತತ್ತ್ವಬೋಧನೆಗಳಿಂದ ನಾನು ನನ್ನ ವಿವೇಕವನ್ನು ರಮಿಸಿ ಕುಳ್ಳಿರಿಸಿದ್ದೆ. ಆದರೆ ಅಲ್ಲಿ ಕಾಲೇಜದೆದುರಿನಲ್ಲಿ ನನ್ನಂತೆಯೇ ಬಿರುದು-ಬಾವಲಿಗಳನ್ನು ಪಡೆಯಲು ತಕ್ಕವರಾದ ಅನೇಕರು ಅವುಗಳಿಗೆಲ್ಲ ಎಳ್ಳುನೀರು ಬಿಡುವದಕ್ಕೆ ಸಿದ್ಧರಾಗಿದ್ದುದನ್ನು ನೋಡಿ ನನ್ನ ಹೃದಯ ಕಳಚುವಂತೆನಿಸಿತು. ಆದರೂ ನಾನು ನನ್ನ ಹಟಮಾರಿತನವನ್ನು ಬಿಡಲಿಲ್ಲ. ನೀನು ನಿಂತೆಡೆಯವರೆಗೂ ಹೇಗೋ ಬಂದೆ. ಆಗ ಮಾತ್ರ ನನ್ನಲ್ಲಿ ಉಸಿರಾಡುತ್ತಿದ್ದಿತೆಂದು ನನಗೆನಿಸಲಿಲ್ಲ. ನೀನು ಹಿಂದೊಮ್ಮೆ ನನಗೆ ಹೇಳಿದ್ದೆ- `ನಾನು ನಿನ್ನನ್ನು ಮರೆಯುತ್ತಿರುವೆನೆಂದು;' ಆ ಮಾತು ನಿಜವಯ್ಯ, ಶೇಷ. ನಾನು ನಿಜವಾಗಿಯೂ ನಿನ್ನನ್ನೇ ಮರೆಯುತ್ತಿದ್ದೆ. ನಾವಿಬ್ಬರೂ ಚಿಕ್ಕಂದಿನಿಂದ ಕೂಡಿ ಆಡಿ ಬೆಳೆದು ದೊಡ್ಡವರಾಗಿ ನಮ್ಮ ಆಸೆಆಕಾಂಕ್ಷೆಗಳನ್ನು ಮನಸ್ಸು ಹೃದಯಗಳನ್ನೂ ಬೆರೆಸಿ ಒಂದುಮಾಡಿಯೂ, ನೀನಿತ್ತ ದೇಶಗೋಸುಗ ಬಳಲುವಾಗ ನಾನು ನನ್ನ ಮುಂದಿನ ಸ್ಥಿತಿ-ಪದವಿಗಳ ಹೆಮ್ಮೆಯಿಂದ ಮೂಗುಮೇಲೆ ಮಾಡಿಕೊಂಡು ಹೊರಟಿರಬೇಕೆಂದರೆ, ನಾನು ನಿಜವಾಗಿಯೂ ನಿನ್ನನ್ನು ಮರೆತಿರಬೇಡವೇ! ನೀನು ಅಲ್ಲಿ ನನ್ನೆದುರಿಗೆ ನೆಲದಮೇಲೆ ಅಡ್ಡಬಿದ್ದಿರುವಾಗ, ನನಗೆ ನಿನ್ನ ನಿಜಸ್ವರೂಪವೂ, ನನ್ನ ನಿಜಸ್ವರೂಪವೂ ಏಕರೂಪವಾಗಿ ಕಣ್ಣಿಗೆ ಕಟ್ಟಿದವು.

ಆಗ ನಮ್ಮಿಬ್ಬರ ಗೆಳೆತನದ ಅರಿವು ನನ್ನೆದೆಯ ಗರ್ಭಗುಡಿಯಲ್ಲಿ ಹುಟ್ಟಿ, ಕಿವಿಯಲ್ಲಿ ನಿನದಿಸಿತು. ಆಗ ನಿನ್ನ ನೆನಪು ಪೂರ್ಣವಾಗಿ ಆಗಲು ನಾನು ಮೈಮರೆತೆ.''

``ರಾಮು, ಹಾಗಾದರೆ, ಇಷ್ಟುದಿನ ಎಷ್ಟೋಷ್ಟೋ ವಾದ ವಿವಾದಗಳಿಂದಲೂ ನಾನು ನಿನ್ನನ್ನು ಗೆಲ್ಲದಿರಲು, ಇಂದು ಗೆಳೆಯನಾದುದಕ್ಕೆ, ನನ್ನ ಪ್ರೇಮದಿಂದ ನಿನ್ನನ್ನು ಗೆದ್ದುಕೊಂಡೆನಲ್ಲ. ಅದೆಷ್ಟು ಹೆಮ್ಮೆಪಡಬೇಕು ನಾನು!''

``ಹೌದು ಶೇಷ! ಪ್ರೇಮವು ಜೀವನಧರ್ಮ; ಅದರ ಕಟ್ಟಳೆಯನ್ನು ನಾವು ಮೀರಲಾರೆವು.''

## ೨೦

ಹನುಮಂತರಾಯನಿಗೆ ಪಿತ್ತ ತಲೆಗೇರಿತು. `ನೆಚ್ಚಿದ ಎಮ್ಮೆ ಕೋಣವನ್ನೀಯಿತೆನ್ನುವಂತೆ, ಈವರೆಗೆ ಅಚ್ಚುಮೆಚ್ಚಿನಿಂದ ಲಾಲಿತ ಪಾಲಿತನಾದ ರಾಮಚಂದ್ರನು ಈಗ ತಾನೇ ಕಾಲೇಜ ಪಿಕೆಟಿಂಗಿಗೆ ನಿಲ್ಲುವದಾದರೆ ಏನು!! ಏನೋ ಹುಡುಗ ದಾರಿಗೆ ಬಂದ ಎನ್ನುವುದರಲ್ಲಿಯೇ ಮತ್ತೆ ಆಡುತಾಡುತ್ತ ಅಡವೀ ಬಿದ್ದನಲ್ಲ' ಎಂದು ಆತನ ಎಣಿಕೆ. ಅಂತೂ ಮೂರುಸಂಜೆಗೆ ರಾಮಚಂದ್ರನು ಮರಳಿ ಮನೆಗೆ ಬರುವ ಹೊತ್ತಿಗೆ ಹನುಮಂತರಾಯನು ಸಂತಪ್ತನಾಗಿಯೇ ಕುಳಿತಿದ್ದ.

``ಮತ್ತೇನು ರಾಯರು ಪಿಕೆಟಿಂಗಿಗೆ ಹೋಗಿದ್ದರಂತಲ್ಲ, ಹೌದೇನು! ಯಾಕೆ ಯಾರು ಹೇಳಕೇಳುವವರಿಲ್ಲದಾಯಿತೇ?

``ಹನುಮಣ್ಣಾ ``ನೀನೇನಾದರೂ ಶಾಂತರೀತಿಯಿಂದ ಮಾತನಾಡುವದಾದರೇ ಸರಿ. ಇಲ್ಲದಿದ್ದರೆ ನನಗೆ ನಿನ್ನೊಡನೆ ಮಾತನಾಡುವ ಇಷ್ಟವಿಲ್ಲ.''

``ಇರಲಿಕ್ಕಿಲ್ಲರೀ ಇಷ್ಟ, ರಾಯರಿಗೆ--. ಆದರೆ ಇಷ್ಟುದಿನ ಹಣವನ್ನು ಹುಣಿಸೇಪಕ್ಕದಂತೆ ಹಾಳುಮಾಡಿದೆವಲ್ಲ--. ರಾಮೂ, ಇಕಾ ಇಲ್ಲಿ ನೋಡು, ನೀನು ಸುಮ್ಮನೆ ಒಣಹುಚ್ಚ ಬಡಿಯಲು ಹೋಗಬೇಡ. ಒಳ್ಳೇಮಾತಿನಿಂದ

ನಾನು ಹೇಳಿದಂತೆ ಕೇಳು. ನಿನಗೂ ಮನೆತನಕ್ಕೂ ಶುಭವಾದೀತು."

``ಹನುಮಣ್ಣಾ, ನೀನು ಬೇಕಾದದ್ದು ಹೇಳು, ನಾನೇನು ಇನ್ನು ಕಾಲೇಜಕ್ಕೆ ಹೋಗುವವನಲ್ಲ."

``ಛೀ, ಹುಚ್ಚ, ಹಾಗೆನ್ನಬೇಕೇ ಎಲ್ಲಾದರೂ. ನಿನ್ನ ಮುಂದೆ ತುಸು ಕಣ್ಣುಹಾಕಿದರೂ ನೋಡು. ನಾಳೆ ಬೆಳಗಾದರೆ ನೀನು ಬೀಯೆ ಆಗುವಿ. ಫಸ್ಟ್‌ಕ್ಲಾಸದಲ್ಲಿ ಪಾಸಾಗುವಿಯೆಂದು ನನಗೆ ತುಂಬಾ ನಂಬಿಗೆ. ತಂದೆಯವರು ಈಗಲೇ ಇಲ್ಲಿಯ ಡಿ.ಡಿ.ಸಿ. ಗಾಗಿ ನಿನ್ನ ದೆಸೆಯಿಂದ ವಸೀಲಿ ಹಚ್ಚಿಟ್ಟಿರುವರು. ಬ್ರಾಹ್ಮಣೇತರರೆ ಈ ಚಳವಳಿಯಲ್ಲಿ ಹೆಚ್ಚಾಗಿ ಸೇರುತ್ತಿರುವುದರಿಂದ ಮತ್ತೆ ಬ್ರಾಹ್ಮಣರ ದೈವ ತೆರೆಯುತ್ತಿದೆಯೆನ್ನಬೇಕು. ಈ ಸಂಧಿ ಸಾಧಿಸಿ ನೀನು ಡಿ. ಡಿ. ಸಿ. ಹೊಡೆದರೆ ನಮ್ಮ ಮನೆತನದ ಮಾನ ಉಳಿದೀತು."

``ಹನುಮಣ್ಣಾ, ನೀನು ನಿನ್ನೀ ಭ್ರಮೆಯನ್ನು ತೊರೆಯದೇ ಗತ್ಯಂತರವಿಲ್ಲ. ನಾನೆಂದೆಂದೂ, ಕನಸುಮನಸಿನಲ್ಲಿ ಕೂಡ ಸರಕಾರಿ ನೌಕರಿಗಾಗಿ ಹಾತೊರೆದುದಿಲ್ಲ. ಈಗಂತೂ ಆ ಮಾತು ನೆನೆಸುವದೆಂದರೆ ಆಕಾಶಪುಷ್ಪವನ್ನು ಮೂಸಲು ಯತ್ನಿಸಿದಂತೆಯೇ ಸರಿ."

``ರಾಮಣ್ಣೀ, ನೀನು ವ್ಯರ್ಥವಾಗಿ ನಿನ್ನ ಕಾಲ ಮೇಲೆ ಕಲ್ಲು ಹಾಕಿಕೊಳ್ಳುತ್ತಿರುವಿಯಲ್ಲೋ! ನೀನು ಹೀಗೆ ಮಾಡಿದರೆ ನಿನ್ನನ್ನೇ ನಂಬಿ ಕುಳಿತ ಆ ನಾರಾಯಣರಾಯರು ಇಂದಿರೆಯನ್ನು ನಿನಗೇಕೆ ಕೊಟ್ಟಾರು?"

``ನನ್ನನ್ನೇ ನಂಬಿ ಕುಳಿತಿದ್ದರೆ ಕೊಟ್ಟೇ ಕೊಟ್ಟಾರು! ನನ್ನ ಪದವಿಯನ್ನು ನಂಬಿ ಕುಳಿತಿದ್ದರೆ ಕೊಡಲಿಕ್ಕಿಲ್ಲ; ಬಿಡಲಿ ಇಷ್ಟೂ ಮೀರಿ, ಇಂದಿರೆಯು ಒಂದು ಕೊಡಕೊಳ್ಳುವ ನಿರ್ಜೀವ ವಸ್ತುವಾಗಿದ್ದರೆ, ಆ ಇಂದಿರೆಯಿಂದ ನನಗೇನು ಅಡ್ಡಗಾಣಿಸಿಟ್ಟಿಲ್ಲ. ನೀನೇನೇ ಎಂದರೂ ನನ್ನ ದಾರಿಯನ್ನು ನಾನು ಬಿಡುವವನಲ್ಲ. ಹನುಮಣ್ಣಾ, ನಾನೇನು ಇನ್ನೂ ಚಿಕ್ಕಮಗುವಲ್ಲ. ನನ್ನ ಒಳಿತು ಕೇಡು ನನಗೆ ತಿಳಿಯುತ್ತದೆ. ದಯಮಾಡಿ ನನ್ನ ಗೊಡವೆ ಬಿಟ್ಟುಬಿಡು."

``ಏನು ತಿಳಿಯುತ್ತದೆ ನಿನಗೆ ನಿನ್ನ ಹಿಂಡೇಕೂಳು! ಇಷ್ಟು ದಿನ ನಿನಗಾಗಿ ಹಣವನ್ನು ಹಾಳುಮಾಡಿದ್ದೆಲ್ಲ ವ್ಯರ್ಥವೇ? ಈಗಲಾದರೂ ಇಷ್ಟು ತಿಳಿಯುವ ನೀನು ಇನ್ನು ಮೇಲೆ ಈ ಮನೆಯಲ್ಲಿ ಋಣಗೂಳುತಿನ್ನುತ್ತ ಹೇಗಿರುವೆಯೋ ನೋಡೋಣ,--''

``ಹಾಗೇ ತಿಳಿಯಬೇಡ ಹನುಮಣ್ಣಾ. ಇಷ್ಟು ದಿನ ನನಗಾಗಿ ವೆಚ್ಚ ಮಾಡಿದ ದುಡ್ಡು ವ್ಯರ್ಥ ಹೇಗಾದೀತು. ಆ ನಿನ್ನ ದುಡ್ಡು ತಿಂದು, ಬೆಳೆದು, ಕಲಿತು, ದೊಡ್ಡವನಾಗಿ ನಾನು ದೇಶಕಾರ್ಯಕ್ಕೆ ನಿಂತರೆ, ನೀನು ಅಷ್ಟು ಹಣವನ್ನು ಪ್ರತ್ಯಕ್ಷವಾಗಿ ದೇಶಕಾರ್ಯಕ್ಕೆ ಅರ್ಪಿಸಿ ಪುಣ್ಯಕಟ್ಟಿಕೊಂಡಂತಾಯಿತೆಂದು ತಿಳಿ. ನಾನೇನೂ ಇನ್ನು ಮೇಲೆ ಒಡಕು ಕವಡಿಯನ್ನೂ ಗಳಿಸಲಿಕ್ಕಿಲ್ಲ. ಆದರೂ ನೀನಿಕ್ಕಿದ ಕೂಳನ್ನು ನಾನು ಋಣಗೂಳೆಂದು ತಿಳಿಯಲೊಲ್ಲೆ. ನಾವು ಹೇಗಾದರೂ ದೇಶದ ಬಂಧುಗಳ ಮೇಲೆ ಅವಲಂಬಿಸಿ ಇರುವವರು. ನೀನು ಒಬ್ಬ ದೇಶಬಂಧುವೇ ನನಗೆ. ಹೀಗಿರಲು ಇಂಥದು ಋಣಗೂಳು ಇಂಥದು ಒಣಗೂಳು ಎಂದರೆ ನಮ್ಮ ಕೆಲಸವೆಂತು ಸಾಗೀತು ಹನುಮಣ್ಣಾ. ನೀನು ಹೊರಗೆ ಹಾಕಿದರೂ ಮತ್ತೆ ನಾನಿಲ್ಲಿ ಬರುವವನೇ. ಅದೇನು ತಪ್ಪಿದ್ದಲ್ಲ. ನಿನ್ನ ಸಿಟ್ಟನ್ನಂತೂ ನಾನು ಹಚ್ಚಿಕೊಳ್ಳುವದೇ ಇಲ್ಲ.''

## ೨೧

ಅಂತೂ ಒಮ್ಮೆ ರಾಮಚಂದ್ರನು ಮನೆಯ ಪರಲು ಹರಿದುಕೊಂಡು, ತನ್ನ ಹೊಣೆಯಿಂದ ದೂರಾಗಿ, ಪರಿಸ್ಥಿತಿಯನ್ನು ಮೀರಿ ನಿಲ್ಲಲು ಶಕ್ತನಾದ. ಅದರೊಡನೆ ಚಳವಳಿಯ ಪ್ರವಾಹದಲ್ಲಿ ಧುಮುಕಿಯೂ ಬಿಟ್ಟ. ಇದರಿಂದ ಆತ ತನ್ನ ಶ್ರೇಯಸ್ಸಿಗೆಲ್ಲ ಒಮ್ಮೆಲೇ ಎಳ್ಳುನೀರು ಬಿಟ್ಟುಬಿಟ್ಟಿದ್ದನು. ಆದರೂ ಒಂದು ಎದೆಗುದಿ ಮಾತ್ರ ಒಳಗೊಳಗೆ ಅಳುಕುತ್ತಿತ್ತು. ಅದು ಇಂದಿರೆಯ ಬಗೆಗೆ. ತಾನು ಹೀಗೆ ಒಮ್ಮೆಲೆ ಚಳವಳಿಯಲ್ಲಿ ಸೇರಿಕೊಂಡದ್ದರಿಂದ, ಇಂದಿರೆಯನ್ನು ಕಳೆದುಕೊಂಡು

ಬಿಡಬಹುದೆಂದು ಆತನಿಗೆ ಭಯವಾಗುತ್ತಿತ್ತು. ಮೊದಲಿನಿಂದಲೂ ಒಂದು ಸಿಂಗರದಲ್ಲಿ ಬೆಳೆದ ಆ ಹುಡುಗಿ ಚಳವಳಿ ಪಳುವಳಿಯ ಅರ್ಥವನ್ನೂ ಮಹತ್ತ್ವವನ್ನೂ ಅರಿಯಳು. ಕಾರಣ ರಾಮಚಂದ್ರನು, ತಾನು ಮಾಡಿದುದಕ್ಕಾಗಿ ಒಮ್ಮೊಮ್ಮೆ ಒಳಗೊಳಗೇ ಮಿಡುಕುತ್ತಿದ್ದ. ಇದನ್ನು ಶೇಷಾಚಲನು ಅರಿಯ. ರಾಮಚಂದ್ರನು ಅದನ್ನು ತೋರಗೊಟ್ಟಿರಲೇ ಇಲ್ಲ. ದಿನವೂ ಇಬ್ಬರೂ ಕೂಡಿಯೇ ಅಸಹಕಾರದ ಕಾಲದಲ್ಲಿಯಂತೇ ತಮ್ಮ ಮೈಮನಸುಗಳು ಬೆರೆಸಿ ಪ್ರತಿನಿತ್ಯ ಬಹಳ ವೇಳೆಯನ್ನು ಏಕಕಾರ್ಯದಲ್ಲಿಯೇ ಕಳೆಯುತ್ತಿದ್ದರು.

ಇಂದಿರೆಯು, ಜಾಣಳಾದರೂ, ಮದುವೆಯ ಗೊಂದಲಕ್ಕೆ ಬಿದ್ದುದರಿಂದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಲಿಲ್ಲ. ಮತ್ತೆ ಮ್ಯಾಟ್ರಿಕ್ಕಾಗಿಯೇ ಓದುತ್ತಿದ್ದಳು. ರಾಮಚಂದ್ರನು ತನ್ನ ಒಪ್ಪಿಗೆಯನ್ನು ಕೇಳದೇ ಕಾಲೇಜಕ್ಕೆ ಶರಣು ಹೊಡೆದದ್ದರಿಂದ ಅವಳಿಗೆ ಆಗಲೇ ಆತನ ಮೇಲೆ ಕೋಪ. ಅಲ್ಲದೆ ಯಾವುದನ್ನು ಹೀಸವೆಂದು ಬಗೆಯುತ್ತಿದ್ದಳೋ ಆ ದೇಶೀ ಚಳವಳಿಯಲ್ಲಿಯೇ ಆತ ಸೇರಿದ್ದರಿಂದ, ಅವಳು ಆತನಲ್ಲಿದ್ದ ತನ್ನ ಮನಸ್ಸು ಕೂಡ ತೆಗೆಯಲು ಯತ್ನಿಸುತ್ತಿದ್ದಳು. ಏಕೆಂದರೆ ಆ ರಾಮಚಂದ್ರನಿಂದ ಅವಳ ಕನಸುಗಳೆಲ್ಲ ಮಣ್ಣುಪಾಲಾಗಿದ್ದವು. ರಾಮಚಂದ್ರನ ಭಯಕ್ಕೆ ಅವಳು ಇಂತು ನೀರೆರೆಯುತ್ತಿದ್ದಳು.

## ೨೨

ಕಾಲೇಜದ ಪಿಕೆಟಿಂಗು ಮುಗಿದೊಡನೆ ಹಾಯಸ್ಕೂಲಿನ ಪಾಳಿ ಬಂತು. ಅಲ್ಲಿ ಶೇಷಾಚಲ ರಾಮಚಂದ್ರರೇ ಮುಂದಾಳುಗಳು. ಆಗ ಮಾತ್ರ ಇಂದಿರೆಗೂ ತುಸು ತಡೆದು ಬಿಟ್ಟಂತಾಯಿತು. ಆದರೀಗ ಅವಳು ಪಿಕೆಟಿಂಗದವರನ್ನಾಗಲೀ, ರಾಮಚಂದ್ರನನ್ನಾಗಲೀ ಲೆಕ್ಕಿಸುತ್ತಿರಲಿಲ್ಲ. ತನ್ನಷ್ಟಕ್ಕೆ ತಾನು, ಮನೆಯ ಸಿಪಾಯಿಯೊಂದಿಗೆ ಶಾಲೆಗೆ ಹೋಗಿ ಬರುತ್ತಲೆ ಇದ್ದಳು. ಇದನ್ನು ಕಂಡು ರಾಮಚಂದ್ರನ ಹರಣವೇ ಹಾರಿತು. ತನ್ನ ಭಯವು ಫಲಿಸಿಬಿಟ್ಟಿತೆಂದು ಆತ ಎಣಿಸಿದ. ಆದರೆ ಮಾತು ಆತನನ್ನು

ಮೀರಿ ಹೋದದ್ದರಿಂದ, ಗತ್ಯಂತರವಿಲ್ಲದೆ, ಮುಂನೋಡಿ ತನ್ನ ಕೆಲಸ ಮಾಡಿದರಾಯಿತೆಂದು ಎಲ್ಲಿಂದಲೋ ಧೈರ್ಯ ತಂದುಕೊಳ್ಳುತ್ತಿದ್ದ.

ಒಂದು ಸೋಮವಾರ, ಹೈಸ್ಕೂಲಿನೆದುರಿಗೆ ಎಂದಿನಂತೆ ಪಿಕೆಟಿಂಗು ನಡೆದೇ ಇದೆ. ಆದರೂ ಎಂದಿನಂತೆ ಇಂದಿರೆಯು ಶಾಲೆಗೆ ಹೋಗಿಯೇ ಇದ್ದಳು. ಅಂದಿನ ದಿನ ಪಿಕೆಂಟಿಂಗನ್ನು ಒಳ್ಳೇ ಯಶಸ್ವಿಯಾಗಿ ಮಾಡಬೇಕೆಂದು ಜನರ ಹಟ. ಆ ಹಟ ಬಹುಮಟ್ಟಿಗೆ ಸಾಧಿಸಿತ್ತು. ಇಂದಿರೆಗೂ ಬಹು ಜನರು ಬಹು ಪರಿಯಿಂದ ಹೇಳಿಕೊಂಡರೂ ಅವಳು ಕೇಳಲಿಲ್ಲ. ಅವಳು ಹಾಗೆ ಹಟ ತೊಡುವುದಕ್ಕೆ, ರಾಮಚಂದ್ರನ ಮೇಲಿದ್ದ ಅವಳ ಸಿಟ್ಟೂ ಬಹುಮಟ್ಟಿಗೆ ಕಾರಣವಾಗಿತ್ತು. ಆದರೆ ಇಷ್ಟು ದಿನವಾದರೂ ರಾಮಚಂದ್ರನೇನು ಅವಳಿಗೆ ಆತಂಕ ಮಾಡಿರಲಿಲ್ಲ. ಅವಳ ಎದುರಿಗೆ ಹೋದರೆ ತನ್ನ ಮನಸ್ಸು ತನ್ನ ಕೈಯಲ್ಲುಳಿದೀತೋ ಇಲ್ಲವೋ ಎಂದು ರಾಮಚಂದ್ರನಿಗೇ ಭಯ.

ಅಂತೂ, ಆವತ್ತಿನ ದಿನವೂ ಇಂದಿರೆಯು ಕ್ಲಾಸಿಗೆ ಹೋದಳು. ಆದರೆ ಪ್ರತಿದಿನವೂ ಬರುತ್ತಿದ್ದ ಐದಾರು ಹುಡುಗರು ಕೂಡ ಅಂದು ಬಂದಿರಲಿಲ್ಲ. ಅದಕ್ಕಾಗಿ ಮಾಸ್ತರರೇ ಅವಳಿಗೆ ಹಿಂದಿರುಗಿ ಹೋಗಬಹುದೆಂದು ಹೇಳಿಬಿಟ್ಟರು. ಪಾಪ! ಇಂದಿರೆಗೆ ಮೂಗು ಹಿಡಿದು ಕಪಾಳಕ್ಕೆ ಹೊಡೆದಂತಾಯಿತು. ಅವಳ ಅಭಿಮಾನವು ಮುಕ್ಕಾಗಿ ಹೋಯಿತು. ಸಿಟ್ಟು ಸಿಡಿಮಿಡಿಗೊಳ್ಳಹತ್ತಿತು. ಆದರೆ ನೆರೆದ ಜನರ ಮುಂದೆ ರಾಮಚಂದ್ರ ನೋಡುತ್ತಿರುವಂತೆಯೇ ಎದೆ ಸೆಟೆಸಿಕೊಂಡು ತಾನು ಒಳಗೆ ಬಂದಿರುವಾಗ ಕೂಡಲೇ ಮತ್ತೆ ಹಿಂದಿರುಗಿ ಹೋಗುವದೆಂತು! ಅದಕ್ಕಾಗಿ ಮತ್ತೂ ಒಂದು ಹಟಮಾರಿತನದಿಂದ ನೊಣ ಜಾಡಿಸುತ್ತ ಕ್ಲಾಸಿನಲ್ಲಿಯೇ ಕುಳಿತಳು.

ಇತ್ತ ಪಿಕೆಟಿಂಗು ಭಯದಿಂದ ಸಾಗಿಯೇ ಇತ್ತು. ಅಷ್ಟುಹೊತ್ತಿಗೆ ಮುನಸೂಫರ ಮಗನೊಬ್ಬನು ಮೋಟಾರು ತೆಗೆದುಕೊಂಡು, ತನ್ನ ತಮ್ಮನನ್ನು ಶಾಲೆಗೆ ಮುಟ್ಟಿಸುವದಕ್ಕೆ ಬಂದನು. ಪಿಕೆಟಿಂಗ ಪಂಗಡದವರು, ಒಳಗೆ ಬಿಡುವದಿಲ್ಲವೆಂದರು.

ಹೇಳಿಕೊಂಡರು; ಬೇಡಿಕೊಂಡರು. ಆದರೂ ಆ ಮಗನೇನು ಕೇಳಲಿಲ್ಲ. ಹತ್ತಿರವೇ ನಿಂತಿದ್ದ ಪೋಲೀಸ ಅಧಿಕಾರಿಗೆ ಆತನು ಸಹಾಯ ಕೇಳಿದನು. ಆದರೆ ಆ ಅಧಿಕಾರಿಯು ಒಳ್ಳೆಯುವನಾದುದರಿಂದ, ಮೋಟಾರು ಹಿಂದಿರುಗಿಸಿಕೊಂಡು ಹೋಗುವದುತ್ತಮವೆಂದೂ, ಬೇಕಾದರೆ ನಡೆಯುತ್ತಲೇ ಶಾಲೆಯೊಳಗೆ ಹೋಗಬಹುದೆಂದೂ ಅಭಿಪ್ರಾಯಪಟ್ಟನು.

ಆದರೆ, ತಾನು ಮುನಸೂಫರ ಮಗನೆಂಬ ಹೆಮ್ಮೆಯಿಂದ ಕಾಲು ಕೆದರಿ ಜಗಳವನ್ನೇ ತೆಗೆಯಲು ಬಂದಾತನು ಸುಮ್ಮನೇ ಬಿಡುವನೇ! ಮೋಟಾರು ತೆಗೆದುಕೊಂಡೇ ಒಳಗೆ ಹೋಗುವದಾಗಿ ಹಟತೊಟ್ಟನು. ಪಿಕೆಟಿಂಗ ಪಂಗಡದವರೂ ಕೊನೆಯ ಉಪಾಯವೆಂದು ಅಡ್ಡಬಿದ್ದು ಬಿಟ್ಟರು. ಅವನೂ ಗಂಡಸು, ಮೋಟಾರು ಏರಿಸಲು ತೊಡಗಿಯೇ ಬಿಟ್ಟನು. ಪಾಪ! ಮುಂದಾಳುಗಳಾಗಿ ನಿಂತಿದ್ದ ರಾಮಚಂದ್ರನೇ ಅದರ ಗಾಲಿಯ ಬಾಯಿಗೆ ತುತ್ತಾದನು.

ಇದೆಲ್ಲವನ್ನು ನೋಡುತ್ತಿದ್ದ ಜನರ ಪಿತ್ತವು ಒಮ್ಮೆಲೇ ತಲೆಗೇರಿತು. ಕೂಡಲೇ ಕಲ್ಲು ಇಟ್ಟಂಗಿಯೇಟುಗಳು ಮೋಟಾರನ್ನು ಮುತ್ತಿದವು. ನೋಡು ನೋಡುತ್ತ ನೆರೆದ ಜನರೆಲ್ಲ, ಮೋಟಾರನ್ನು ಸುತ್ತುಗಟ್ಟಿ ಅದನ್ನು ಹಿಂದೆಳೆಯ ಹತ್ತಿದರು. ತುಸು ಹೊತ್ತಿನಲ್ಲಿ ಪೋಲೀಸರೂ ನಡುವೆ ಬಂದು, ಜನರನ್ನು ಹಿಂದೆ ಅಟ್ಟಹತ್ತಿದರು. ಜನರು ಅಸುಗೊಳ್ಳಲಿಲ್ಲ. ಮೋಟಾರದಿಂದ ಆ ಉದ್ಧಟನನ್ನು ಹಿಡಿದೆಳೆಯತೊಡಗಿದರು. ಸ್ವಯಂಸೇವಕರು ಜನರನ್ನು ತಡೆಯಲು ಮಾಡಿದ ಯತ್ನವೂ ವ್ಯರ್ಥವಾಯಿತು. ಮೊದಲೇ ಕೈ ಚುರು ಚುರು ಎನ್ನುತ್ತಿದ್ದ ಪೋಲೀಸರು ಲಾಠಿ ಹೊಡೆತಕ್ಕೆ ಆರಂಭ ಮಾಡಿದರು. ಆ ಆಘಾತಕ್ಕೆ ಸಿಕ್ಕಿ ಗಾಯ ಹೊಂದಿದವರೆಷ್ಟೋ ಮಂದಿ. ತಲೆಬುರುಡೆಯೊಡೆಯುವದು, ಮೂಳೆ ಮುರಿಯುವದು ನೆತ್ತರ ಕಾಲುವೆ ಹರಿಯುವದು ಯಾವುದೂ ಬಾಕಿಯುಳಿಯಲಿಲ್ಲ.

ಇಂದಿರೆಯು ಇದೆಲ್ಲವನ್ನೂ ಒಳಗಿನಿಂದ ನೋಡಿಯೇ ನೋಡಿದಳು.

ರಾಮಚಂದ್ರನು ಮೋಟಾರಿಗೆ ಆಹುತಿಯಾದದ್ದನ್ನೂ ನಂತರ ಪೋಲೀಸರ ಏಟಿಗೆ ಗುರಿಯಾದದ್ದನ್ನೂ ಕಣ್ಣಾರೆ ಕಂಡಳು.

ಈ ಮೊದಲು, ಪಿಕೆಟಿಂಗದವರು ಮಾಡುವ ಕೆಲಸದ ಅರ್ಥವನ್ನು ಅವಳು ಅರಿತಿರಲಿಲ್ಲ. ಅದು ವ್ಯರ್ಥವೆಂದು ಅವಳಿಗೆ ಎನಿಸಿತ್ತು. ಆದರೆ, ಈಗ ತಾನು ಬಲು ಹೆಮ್ಮೆಯಿಂದ ಒಳಗೆ ಬಂದದ್ದರ ಅರ್ಥವೂ, ಅಷ್ಟೇ ಬಲವಂತದಿಂದ, ಆ ಮೋಟಾರಿನ ಹುಡುಗನು ಒಳನುಗ್ಗಲು ಯತ್ನಿಸಿದ್ದರ ಅರ್ಥವೂ ಅವಳಿಗೆ ತಿಳಿಯದಾಯಿತು. ಅವಳು ಒಳಗೆ ಹೋಗಿ ಸುರಿದುಕೊಂಡ ಭಾಗ್ಯವೂ ಅಷ್ಟರಲ್ಲೇ ಇತ್ತು. ಆ ಮೋಟಾರಿನ ಹುಡುಗನಿಗೆ ಬರುವ ಭಾಗ್ಯ ಅದಕ್ಕೂ ಏನು ಹೆಚ್ಚಾಗಿರಲಿಲ್ಲ. ಮುಖ್ಯ ಶಾಲೆಯೇ ತೆರವು ಬಿದ್ದಾಗ ಯಾರು ಮಾಡುವದೇನು?

ಗದ್ದಲವೆಲ್ಲ ತಮ್ಮಣೆಯಾಗುತ್ತಿರಲು, ಗಾಯ ಹೊಂದಿದವರನ್ನು ಆಸ್ಪತ್ರೆಗೆ ಕಳಿಸುವ ಕೆಲಸ ಜೋರಿನಿಂದ ನಡೆಯಿತು. ಎಲ್ಲರೊಡನೆ ರಾಮಚಂದ್ರನು ಆಸ್ಪತ್ರೆಯ ಅತಿಥಿಯಾದ. ಆತನಿಗೆ ಗಾಯವೇನೋ ಬಲವಾಗಿ ಆಗಿತ್ತು. ಮುಂಗೈಯೆಲುಬು ಮುರಿದಿತ್ತು. ಮುಂದಲೆ ಒಡೆದಿತ್ತು. ಕಾಲ್ಬೆರಳುಗಳು ಜಜ್ಜಿ ಹೋಗಿದ್ದವು. ಆದುದರಿಂದ ರಾಮಚಂದ್ರನು ಬಹಳ ದಿನಗಳವರೆಗೆ ಆಸ್ಪತ್ರೆ ಹಿಡಿದು ಬೀಳಬೇಕಾಯಿತು. ಶೇಷಾಚಲನೂ ಆತನೊಂದಿಗೆ ಆಸ್ಪತ್ರೆಯಲ್ಲಿಯೇ ಇದ್ದ. ತಮ್ಮ ಸುಖದುಃಖಗಳಲ್ಲೆಲ್ಲಾ ತಾವು ಕೂಡಿಯೇ ಇದ್ದುದ್ದಕ್ಕಾಗಿ ಆ ಗೆಳೆಯರಿಗೆ ಅದೇ ಒಂದು ಆನಂದ.

## ೨೩

ಅಂದಿನ ಆ ದೃಶ್ಯವನ್ನು ಕಂಡು ಇಂದಿರೆ ಹೌಹಾರಿ ಹೋಗಿದ್ದಳು. ರಾಮಚಂದ್ರನು ಪಟ್ಟ ಕಷ್ಟದಿಂದ ಅವಳ ಕರುಳು ಕರಗಿಹೋಯಿತು. ಸಿಟ್ಟು ಇಳಿಯಿತು. ಅಹಂಕಾರವೆಲ್ಲ ಹಿಮ್ಮೆಟ್ಟಿತು. ಆದರೂ, --ರಾಮಚಂದ್ರನು ತಾನಾಗಿಯೇ ಇಂಥ ಸಂಕಟಗಳಿಗೇಕೆ ಗುರಿಯಾಗಬೇಕು. ಎಲ್ಲರಂತೆ ತಾನೂ ರಾಮ, ಕೃಷ್ಣ ಎನ್ನುತ್ತ ಇರಬಾರದೇ. ವಿಧಿ ಕಟ್ಟಿಕೊಂಡು ಸಮಾಧಿ ಹೋದಂತೆ, ಈ ಚಳವಳಿಯ ಅರಿಷ್ಟವನ್ನೇಕೆ ಹಚ್ಚಿಕೊಳ್ಳಬೇಕು. ಅದರಿಂದ ತನ್ನ ಸವಿಗನಸುಗಳೆಲ್ಲ ಹಾಳಾಗುತ್ತಿವೆಯಲ್ಲ-- ಎಂದು ಮೊದಲಾಗಿ, ಅವಳ ಎಣಿಕೆ. ಆದರೆ ರಾಮಚಂದ್ರನ ಕಷ್ಟಗಳಿಗಾಗಿ ಒಂದು

ಬಗೆಯ ಅನುಕಂಪ, ಆತನ ಜೀವದ ಬಗೆಗೆ ಒಂದು ಬಗೆಯ ಪ್ರೇಮ ಅವಳಲ್ಲಿ ನಿಚ್ಚಳವಾಗಿ ಬೆಳಗುತ್ತಿದ್ದವು. ಆದರೂ ಅವಳ ವಿಚಾರಗಳು ಮಾತ್ರ ತೂಗುಯ್ಯಾಲೆಯಂತೆ ಹೊಯ್ದಾಡುತ್ತಲೇ ಇದ್ದವು.

ಆ ವಿಚಾರಗಳನ್ನು ಬದಿಗೊತ್ತಿ, ಕೇವಲ ತನ್ನ ಪ್ರೇಮಕ್ಕಾಗಿ, ಇಂದಿರೆಯು ಇತ್ತೀಚೆ ರಾಮಚಂದ್ರನ ಆರೈಕೆಯನ್ನು ಕೈಕೊಂಡಿದ್ದಳು. ಅದಕ್ಕಾಗಿ ದಿನವೂ ಕೆಲವೊಂದು ವೇಳೆಯನ್ನು ಆಸ್ಪತ್ರೆಯಲ್ಲಿ ರಾಮನ ಬಳಿಯಲ್ಲಿ ಕಳೆಯುತ್ತಿದ್ದಳು.

೨೪

ರಾಮಚಂದ್ರನಿಗೆ ಗುಣಮುಖವಾಗುತ್ತ ಬಂತು. ಮೆಲ್ಲಗೆ ಸ್ವಲ್ಪ ಎದ್ದು ಓಡಾಡುವದಕ್ಕೂ ತುಸು ಗಟ್ಟಿ ಪದಾರ್ಥಗಳನ್ನು ತಿನ್ನಲಿಕ್ಕೂ, ಸಾಮಾನ್ಯವಾಗಿ ಪುಸ್ತಕಗಳನ್ನು ಓದಲಿಕ್ಕೂ ಡಾಕ್ಟರರು ಅಪ್ಪಣೆ ಕೊಟ್ಟಿದ್ದರು. ಆದರೂ ಮನೆಗೆ ಹೋಗಲು ಅಪ್ಪಣೆ ದೊರೆತಿರಲಿಲ್ಲ.

ಒಂದು ದಿನ ಒಂಭತ್ತು ತಾಸಿನ ಕಡೆಗೆ, ರಾಮಚಂದ್ರನು ಹಾಸಿಗೆಯಲ್ಲಿ ಮಲಗಿಕೊಂಡೇ ಶೇಷಾಚಲನಿಗೆ ಕವಿತೆಯೊಂದನ್ನು ಓದಿ ತೋರಿಸುತ್ತ, ಅದರ ವಿಚಾರದಾಳವನ್ನೂ, ಶೈಲಿಯ ಬಿಗುವನ್ನೂ, ಕಲ್ಪನೆಯ ನಿಲುವನ್ನೂ ಬಣ್ಣಿಸುತ್ತಲಿದ್ದ. ಕವಿತೆ ಕನ್ನಡನಾಡಿನ ದುರವಸ್ಥೆಯ ಬಗೆಗೆ ಬರೆದುದಾಗಿತ್ತು. ಅದನ್ನೋದುತ್ತ ಓದುತ್ತ ರಾಮಚಂದ್ರನು, ನಮ್ಮ ನಾಡಿನ ಸ್ಥಿತಿಯೆಂತು, ಅದಕ್ಕೆ ತರುಣರು ಮಾಡಬೇಕಾದ ಕರ್ತವ್ಯವೇನೆಂಬುದನ್ನು ಚರ್ಚಿಸುತ್ತಲಿದ್ದ.

ಅದೇ ವೇಳೆಗೆ ಇಂದಿರೆಯು ನಿತ್ಯದಂತೆ ಅಲ್ಲಿಗೆ ಬಂದಳು. ದೇಶದ ಪರಿಸ್ಥಿತಿಯ ವಿಚಾರವಾಗಿ ಮಾತು ನಡೆದುದರಿಂದ ಅದನ್ನು ಕೇಳಿಕೊಳ್ಳಬೇಕೆಂದು ಅವಳಿಗೂ ಕುತೂಹಲವುಂಟಾಯಿತು. ಇದುವರೆಗೆ ಬೇಕಾದವರು ಬೇಕಾದಂತೆ ಮಣ್ಣು ಹೊಯಿದುಕೊಂಡು ಹೋಗಿದ್ದರೂ ಅವಳೇನು ಅದರ ಬಗ್ಗೆ ಯೋಚಿಸುವವಳಲ್ಲ.

ಆದರೀಗ ತನ್ನ ರಾಮಚಂದ್ರನೇ ಆ ಚಳವಳಿಯಲ್ಲಿ ಸೇರಿ ಗಾಸಿಯಾದುದರಿಂದ ಅದರಲ್ಲಿ ಏನಾದರೂ ಅರ್ಥವಿರಬೇಕೆಂದು ಅವಳಿಗೆನಿಸಿತು. ಅದರ ಬಗೆಗೆ ಅವಳಲ್ಲಿದ್ದ ಜುಗುಪ್ಸೆಯೂ ಕಡಿಮೆಯಾಗತೊಡಗಿತು. ಏಕೆಂದರೆ ರಾಮಚಂದ್ರನೆಂದರೆ ಅವಳಿಗೆ ಪೂರಾ ನೆಚ್ಚು- ಮೆಚ್ಚಿಗೆ. ಅದಕ್ಕಾಗಿ ಅವಳು ಬಲುದಿನ ಸೆಡವಿನ ಸೋಗು ಹಾಕಿಕೊಳ್ಳಲಾರದಾಗಿದ್ದಳು. ಅಷ್ಟರಲ್ಲೇ ರಾಮಚಂದ್ರನು ಗಾಯಹೊಂದಿ ಆಸ್ಪತ್ರೆ ಸೇರಿದ್ದರಿಂದ ಆ ಸೋಗು ಹೇಳದೇ ಕೇಳದೇ ಓಡಿಹೋಗಿತ್ತು.

ಇಂದಿರೆಯು ಬಂದವಳು ಕವಿತೆಯ ವಿವೇಚನೆ ಕೇಳುತ್ತ ಕುಳಿತಳು. ತುಸುಹೊತ್ತು ತಡೆದು ರಾಮಚಂದ್ರನೇ ಮಾತನಾಡಿದ:-

``ಇಂದಿರಾ, ನಾವಾಡುವ ಮಾತುಗಳು ನಿನಗೆ ರುಚಿಸುತ್ತಿರಲಿಕ್ಕಿಲ್ಲವಲ್ಲವೆ.''

``ಯಾವ ಮಾತುಗಳು!''

``ಇದೇನೋ ದೇಶೀ ಪಾಶೀ ಅನ್ನುತ್ತೇವಲ್ಲ.''

``ಹಾಗೇನಿಲ್ಲ! ನನಗೂ ಆ ವಿಚಾರ ತಿಳಿದುಕೊಳ್ಳುವ ಬಯಕೆಯಿದೆ.''

``ಸರಿಯೆ, ಇಂದಿರಾ! ಹಾಗಾದರೆ ನಾನೀ ಕವಿತೆಯನ್ನು ಇನ್ನೊಮ್ಮೆ ಮೊದಲಿನಿಂದ ಓದಲೇ?''

``ಓದಿದರೆ ಬಹಳ ಚನ್ನಾಗಿದ್ದೀತು. ನಿಮ್ಮದೇ ಕವಿತೆಯಷ್ಟೇ?''

``ಅಲ್ಲ ಮತ್ತೊಬ್ಬ ಕವಿಯದು. ನಮ್ಮ ನಾಡಿನ ದುರವಸ್ಥೆಯ- ಹಾಗೂ ಅದರ ಮುಂದಿನ ಏಳ್ಗೆಯ ಬಗೆಗೆ ಆ ಕವಿಯು ಕನಸಿನಲ್ಲಿ ಕಂಡ ಒಂದು ದೃಷ್ಟಾಂತವನ್ನು ಇಲ್ಲಿ ಬಲು ಮನೋವೇಧಕವಾಗಿ ಬಣ್ಣಿಸಿದ್ದಾನೆ. ಇದರಲ್ಲಿ ಒಂದು ಸಾಲು ಕವಿಯ ಮಾತು; ಎರಡನೇ ಸಾಲು, ಕನಸಿನಲ್ಲಿ ಬಂದ ಆ ರಾಷ್ಟ್ರದೇವಿಯ ಮಾತು.''

ರಾಮಚಂದ್ರನು ಓದತೊಡಗಿದ. ಇಂದಿರೆಯು ಅಂಗ್ಯೆಯಲ್ಲಿ

ಗದ್ದವನ್ನಿಟ್ಟುಕೊಂಡು ಸುಮ್ಮನೆ ಕೇಳುತ್ತ ಕುಳಿತಳು.

``ಯಾರು ನಿಂದವರಲ್ಲಿ-ತಾಯೇ?" ಎಂದೆ

``ಯಾರು ಕೇಳುವರೆನಗೆ! ಯಾಕೆ ತಂದೆ!!

``ಬೇಸರದ ದನಿಯೇಕೆ ಹೆಸರ ಹೇಳಲ್ಲಾ?

``ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ!''

``ನೀನಾರ ಮನೆಯವಳು ಮುತ್ತೈದೆ ಹೇಳು?''

``ನಾನಾರ ಮನೆಯವಳೊ ಬಯಲನ್ನೇ ಕೇಳು!''

``ಆಪ್ತರಿಲ್ಲವೆ ನಿನಗೆ ಇಷ್ಟರಿಲ್ಲೆ?''

``ಗುಪ್ತರಾದರೊ ಏನೊ ಇಷ್ಟರಲ್ಲೆ!''

``ಇರುವರೇ, ಇದ್ದರೇ ಮಕ್ಕಳೆಂಬುವರು?''

``ಇದ್ದರೆಂದರು ಕೂಡ ಯಾರು ನಂಬುವರು!''

``ಮನೆಯಿಲ್ಲವೇ ಇರಲು; ಪರದೇಶಿಯೇನು?''

``ಮನೆಯೆ ಮುನಿದೆದ್ದಿರಲು ಯಾ ದೇಶವೇನು!''

❄ ❄ ❄ ❄ ❄

``ಯಾವದಾದರು ನಾಡ-ದೇವಿಯೇ ನೀನು?''

``ಭಾವಕರ ಕಂಗಳಿಗೆ ದೇವಿಯೆ ನಾನು!''

``ಈಗ ಬಂದಿಹುದೇಕೆ ಏನು ಬೆಸನ?''

``ಯೋಗವಿಲ್ಲದೆ ತಿಳಿಯದೆನ್ನ ವೆಸನ!''

``ಹಾದಿ ಯಾವುದು ಹೇಳು; ಯಾವ ಯೋಗಾ?''

``ಆದಿ ಅಂತವು ಇಲ್ಲದಂಥ ತ್ಯಾಗಾ!''

``ಬೇಡ ಬಂದಿಹೆ ಏನು ಏನಾದರೊಂದು?''

``ಬೇಡಿದರೆ ಬೇಡಿದುದ ಕೊಡುವೆಯಾ ಇಂದು?/''

``ಅಹುದು ಕೊಡುವೆನು ಎಂದು ನಾನೆನ್ನಬಹುದೇ?''

``ಬಹುದುಗಿಹುದಿನ ಶಂಕಿ ವೀರನಹುದೇ?''

``ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯಾ!!''
``ಮುಂಜರಿವ ಹುರುಪಿನಿಂ ಮುಂದೆ ಬಾರಯ್ಯಾ!!''
``ಇಲ್ಲೆನ್ನಲೆನಲಾರೆ; ಅಹುದೆನ್ನಲಮ್ಮೆ-!!''
``ಬಲ್ಲವರು ದೈವವನು ಪರಿಕಿಸುವರೊಮ್ಮೆ!!''
``ಚಂಡಿ, ಚಾಮುಂಡಿ, ಹೇಳ್; ಬೇಕಾದುದೇನು??''
``ಗಂಡುಸಾದರೆ, ನಿನ್ನ ಬಲಿ ಕೊಡುವಿಯೇನು???''

❄ ❄ ❄ ❄ ❄

``ಇಂದಿರಾ, ಈ ಕವಿತೆಯಲ್ಲಿ ನೀನು ನಾವೆಲ್ಲ ನಮ್ಮ ನಾಡಿಗಾಗಿ ಏನು ಮಾಡುತ್ತಿರುವೆವು, ಏಕೆ ಮಾಡುತ್ತಿರುವೆವು ಎಂಬುದರ ಉತ್ತರವನ್ನು ಪಡೆಯಬಹುದು. ನಮ್ಮ ಈ ಭಾರತ ಭೂಮಿಯು ಒಂದು ಕಾಲಕ್ಕೆ ದಿಗಂತ ಕೀರ್ತಿಯನ್ನೂ ಪಡೆದರೂ ಈಗ ಹೇಳಹೆಸರಿಲ್ಲದಂತಾಗಿದೆ ಅದರ ಅವಸ್ಥೆ. ನಮ್ಮ ನಾಡು ತನ್ನ ಪಾಡನ್ನು ತಾನೇ ಕಾಣದಾಗಿದೆ. ಪಾರತಂತ್ರಪಾಶದಲ್ಲಿ ಸಿಲುಕಿದ್ದರಿಂದ ಆಪ್ತರು ಕೂಡ ನಮ್ಮ ನಾಡಿನ ವೈರಿಗಳಾಗಿದ್ದಾರೆ. ಮೂವತ್ತು ಮೂರು ಕೋಟಿ ಮಕ್ಕಳಿದ್ದ ನಮ್ಮ ಭೂಮಿತಾಯಿ ಇಂದು ಪರದೇಶಿಯಾಗಿ ಪರದೇಶಗಳ ತೊತ್ತಾಗಿದ್ದಾಳೆ. ತಾಯ್ನಾಡಿನ ಈ ದುಃಖವನ್ನು ತಿಳಿದುಕೊಳ್ಳಬೇಕಾದರೆ ಒಂದು ಯೋಗ ಸಾಧನೆಯನ್ನು ಮಾಡಬೇಕು. ಮಹಾತ್ಮಾ ಗಾಂಧಿಯವರು ತಮ್ಮ ಜೀವನದಲ್ಲಿ ಇಂಥ ಯೋಗಸಾಧನೆಯನ್ನೇ ಮಾಡಿ ಕೊನೆಗೆ ಈ ನಾಡಿನ ಮುಕ್ತಿ ಮಾರ್ಗವೊಂದನ್ನು ಕಂಡುಹಿಡಿದರು. ಅದಕ್ಕಾಗಿ ಅವರು ನಿಸ್ಸೀಮವಾದ ಆದಿ ಅಂತವಿಲ್ಲದ ಸ್ವಾರ್ಥತ್ಯಾಗವನ್ನು ಮಾಡಿದರು. ಬೇಕಾದಂತಹ ಶ್ರೀಮಂತಿಕೆಯಲ್ಲಿ ಲೋಲಾಡಬಲ್ಲವರಾದ ಅವರು ದೇಶಕ್ಕಾಗಿ, ಬಡತನವನ್ನು ಅಪ್ಪಿಕೊಂಡರು. ಅಂಥ ತ್ಯಾಗಯೋಗದಿಂದಲೇ ಅವರು ತಾಯ್ನಾಡಿನ ವಿಶ್ವರೂಪವನ್ನು ಕಂಡುಕೊಂಡರು. ಅವಳಿಗೆ ತಮ್ಮ ತನುಮನಗಳನ್ನಷ್ಟೇ ಅಲ್ಲ, ಹೃದಯ, ಆತ್ಮಗಳನ್ನೂ ಮುಡುಪು ಮಾಡಿದರು. ಹಾಗೆಯೇ ನಮ್ಮ ದೇಶಮಾತೆಯು, ನಮ್ಮೆಲ್ಲರ ಆತ್ಮಬಲಿಯನ್ನು ಕೇಳುತ್ತಿದ್ದಾಳೆ. ನಾವಾದರೋ ಅಂಜುತ್ತ ಬೆಚ್ಚುತ್ತ ಹಿಂಜರಿಯುತ್ತಿದ್ದೇವೆ.-''

ಬದಿ ಮಂಚದ ಮೇಲೆ ಒರಗಿಕೊಂಡಿದ್ದ ಶೇಷಾಚಲನು ಮೆಲ್ಲಗೆ ಹೇಳಿದ- ``ಹೌದು! ರಾಮೂ, ನೀನನ್ನುವುದು ನಿಜ. ಈ ಸಂಸಾರವೆಲ್ಲ ಹದಗೆಟ್ಟು ಹೋದಾಗ ಕೊನೆಗೊಮ್ಮೆ ಮಹಾಪ್ರಳಯವು ಬಂದು ಎಲ್ಲವನ್ನೂ ನಿರ್ನಾಮ ಮಾಡಿದ ಮೇಲೆ ಮತ್ತೊಂದು ಹೊಸ ಸೃಷ್ಟಿಯ ಉತ್ಪನ್ನವಾಗುವುದೆಂದು ಹೇಳುವುದಿಲ್ಲವೇ? ಹಾಗೆಯೇ ಇಷ್ಟುದಿನ ಪಾರತಂತ್ರ್ಯದಲ್ಲಿ ನರಳಿ ಹದಗೆಟ್ಟ ನಮ್ಮ ರಾಷ್ಟ್ರ ಜೀವನದಲ್ಲಿಯೂ ಒಂದು ಮಹಾಪ್ರಳಯ ಉಂಟಾಗಬೇಕಾಗಿದೆ. ಅಂದರೆ ಈವರೆಗಿನ ಕೊಳಕುತನವೆಲ್ಲ ಅಳಿದುಹೋಗಿ, ನಮ್ಮ ನಾಡಿನಲ್ಲಿ ಹೊಚ್ಚ ಹೊಸದಾದ ಸ್ವತಂತ್ರವಾದ ರಾಷ್ಟ್ರೀಯ ಜೀವನವು ನಿರ್ಮಾಣವಾಗುವುದು.''

ಶೇಷಾಚಲನ ದನಿಗೆ ದನಿಗೂಡಿಸಿ ರಾಮಚಂದ್ರನೆಂದ- ``ಅಹುದು! ಶೇಷಾಚಲ, ಆ ಮಹಾಪ್ರಳಯಕ್ಕೇ ನಾವೀಗ ಬಲಿ ಬೀಳಬೇಕಾದದ್ದು. ಅದರಿಂದ ನಮ್ಮ ಮುಂದಿನ ಪೀಳಿಗೆಯು ಬಾಳುವೆಗೆ ಮೊದಲಿನಂತಹ ಸೌಭಾಗ್ಯ ಉಂಟಾದೀತು! ಹಿಂದೆ ರಾಣಿ ಪದ್ಮಿನಿಯ ಕಾಲಕ್ಕೆ ರಜಪೂತ ರಾಷ್ಟ್ರದೇವಿಯು ಹನ್ನೆರಡು ಜನ ರಾಜಪುತ್ರರನ್ನು ಬಲಿ ಬೇಡಿದಳಂತೆ. ಈಗ ನಮ್ಮ ಭಾರತ ರಾಷ್ಟ್ರದೇವಿಯು ರಣಭೈರವಿಯಾಗಿ ನಮ್ಮೆಲ್ಲರನ್ನೂ ಬಲಿ ಬೇಡುತ್ತಿದ್ದಾಳೆ.''

``ಸರಿ, ರಾಮಚಂದ್ರ! ಆಗ ಆ ರಜಪೂತರು ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲಿಕ್ಕೆ ಆತ್ಮಬಲಿಯನ್ನರ್ಪಿಸಿದಂತೆ ನಾವು ಕೂಡ ಮಾಡಬೇಕಾಗಿದೆ. ಸಾಮ, ದಾನ, ಭೇದ, ದಂಡಗಳೂ ಕೈ ಸಾಗದೆ ಕುಳಿತಾಗ ಆತ್ಮಾರ್ಪಣೆಯೊಂದೇ ಸ್ವಾತಂತ್ರ್ಯದ ದಾರಿ. ಆ ರಜಪೂತರು ತಮ್ಮ ಜೀವ ಟುಕುಟುಕಿಸುತ್ತಿರುವವರೆಗೂ ಕಾದಿ, ತಮ್ಮ ನಾಡು ಪಾರತಂತ್ರ್ಯದಲ್ಲಿ ಮುಳುಗಿದ್ದನ್ನು ಕಣ್ಣಾರೆ ಕಾಣಲಾಗದೆಂದು, ತಮ್ಮ ಹೆಂಡರು ಮಕ್ಕಳನ್ನು ಜೋಹರ ಮಾಡಿ- ಕೊನೆಗೆ ತಾವೂ ಸಾವನ್ನಪ್ಪಿಕೊಳ್ಳುತ್ತಿದ್ದರು. ಇಂದು ನಮ್ಮ ಹಿಂದುಸ್ಥಾನದಲ್ಲೂ ಇದೇ ಅವಸ್ಥೆ. ಹಿಂದುಸ್ಥಾನವು ನಮ್ಮ ಮಾತೃಭೂಮಿಯಾದುದೇ ನಿಜವಾದರೆ, ನಾವದನ್ನು ಸಾವನ್ನಪ್ಪಿಕೊಂಡಾದರೂ ಹಿಂದಿರುಗಿ ಗೆದ್ದುಕೊಳ್ಳಬೇಕು. ನಾವಂಥ ಕೈಲಾಗದ

ಹೇಡಿಗಳೇ ಆಗಿದ್ದ ಪಕ್ಷದಲ್ಲಿ, ನಾವು ನಿರ್ನಾಮರಾಗಿ ಹೋಗಿ ಅದನ್ನು ಸಂಪೂರ್ಣವಾಗಿ ನಮ್ಮ ವೈರಿಗಳಿಗೊಪ್ಪಿಸಿಯಾದರೂ ಬಿಡಬೇಕು. ಈ ಎರಡರಲ್ಲಿ ಯಾವುದನ್ನು ಮಾಡಬೇಕಾದರೂ ನಮ್ಮಗಳ ಆತ್ಮಬಲೆಯು ಅತ್ಯವಶ್ಯವೆ. ಅಂತೆಯೇ ಆ ಕವಿಯ ಕನಸಿನಲ್ಲಿ ಬಂದ ರಾಷ್ಟ್ರದೇವಿಯು ``ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು?'' ಎಂದು ನಮ್ಮೆಲ್ಲರ ಗಂಡಸುತನವನ್ನು ಮೂದಲಿಸಿ ಕೇಳಿದ್ದಾಳೆಯಲ್ಲವೇ?--

ಪ್ರಶಾಂತವಾದ ಸ್ಫೂರ್ತಿಯ ತೆರೆಗಳನ್ನು ತುಳುಕಿಸುತ್ತ ರಾಮಚಂದ್ರನು ಮಾತನಾಡಿದ ``ನೀನನ್ನುವುದು ಬಹುಮಟ್ಟಿಗೆ ಸರಿ, ಶೇಷಾಚಲ; ಆದರೆ, ಅಂದಿನ ರಜಪೂತರಿಗಿಂತಲೂ ನಾವೀಗ ಒಂದು ಹೆಜ್ಜೆ ಮುಂದೆ ಹೋಗಬೇಕಾಗಿದೆ. ಈಗ ನಮ್ಮ ದೇಶದಲ್ಲಿ ನಡೆದ ಯುದ್ಧವು ರಜಪೂತರಂಥಹದಲ್ಲ. ಅದಕ್ಕೂ ತುಸು ಹೆಚ್ಚಿನ ತರಗತಿಯದು. ಇದಕ್ಕೆ ಮಹಾತ್ಮರು ಆತ್ಮಶಕ್ತಿಯ ಯುದ್ಧವೆಂದಿದ್ದಾರೆ. ಆ ರಜಪೂತರಂತೆ ನಾವು ಈಗ ನಮ್ಮ ಹೆಂಗಸರನ್ನು ಮನೆಯಲ್ಲಿ ಸುಟ್ಟು ಹಾಕಿ ಹೊರ ಹೊರಡಬೇಕಾದುದಿಲ್ಲ. ಈ ಯುದ್ಧದಲ್ಲಿ ಹೆಣ್ಣು ಗಂಡು ಎಲ್ಲರೂ ಹೆಗಲಿಗೆ ಹೆಗಲಾನಿಸಿ ನಿಂತು ಹೋರಾಡಬೇಕಾಗಿದೆ. ಭಾರತೀಯ ಮಗುವೆನಿಸಿದ ಪ್ರತಿಯೊಂದು ಜೀವಿಗೂ ಈ ಯುದ್ಧದಲ್ಲಿ ಸಮಾನವಾದ ಅಧಿಕಾರ. ಇಲ್ಲಿ ಹೆಣ್ಣು ಗಂಡೆಂಬ ಭೇದವಿಲ್ಲ; ಜಾತಿ ನೀತಿಯ ಭೇದವಿಲ್ಲ. `ಜಾತಿಯ ನೀತಿಯ ರೀತಿಗಿಂತಲೂ ದೇಶಪ್ರೀತಿಯು ಮಿಗಿಲಿನದು' ಎಂದು ಹಾಡುತ್ತ ನಾವು ಮುಂದುವರಿಯಬೇಕಾಗಿದೆ. ಆಗಲೇ ನೀನೆಂದಂತೆ ಇದೊಂದು ರಾಷ್ಟ್ರೀಯ ಮಹಾಪ್ರಳಯವೇ ಸರಿ.''

ಮುಂಗೈಯಲ್ಲಿ ಗದ್ದವನ್ನಿಟ್ಟುಕೊಂಡು ಕುರ್ಚಿಯ ಮೇಲೆ ಕುಳಿತ ಇಂದಿರೆಯು ಹಾಗೆಯೇ ಕುಳಿತುಕೊಂಡುಬಿಟ್ಟಿದ್ದಳು. ರಾಮಚಂದ್ರನೂ ಶೇಷಾಚಲನೂ ಆಡುವ ಮಾತುಗಳು ಅವಳಿಗೆ ತಿಳಿದಂತೆ ತೋರಿದರೂ, ಅವುಗಳ ಪೂರ್ಣ ಅರ್ಥವು ಅವಳ ಎದೆಯಲ್ಲಿ ನಾಟಲೊಲ್ಲದು. ರಾಮಚಂದ್ರನ ಮೋರೆಯಲ್ಲಿ ಹರಿದಾಡುತ್ತಿದ್ದ ಹುರುಪು ಅವಳನ್ನು ದಂಗುಬಡಿಸಿಬಿಟ್ಟಿತ್ತು. ಅವಳು ಅಲ್ಲಿ ಕೂತಿರುವಂತೆಯೇ, ರಾಮಚಂದ್ರನು ತನ್ನಿಂದ ಆಗಲಿ, ದಿವ್ಯತೇಜಸ್ವಿನಿಯೆಂದು ಆತನು ಬಣ್ಣಿಸಿದ ಆ

ರಾಷ್ಟ್ರದೇವಿಯ ಬೆನ್ನುಹತ್ತಿ ಎಲ್ಲೆಲ್ಲಿಗೂ ಓಡಿಹೋಗುತ್ತಿರುವಂತೆ ಭಾಸವಾಯಿತು. ಒಡನೆ ಕಣ್ಣಲ್ಲಿ ತುಂಬಿ ಬಂದ ಹನಿಗಳನ್ನು ನುಂಗಿಕೊಳ್ಳಲು ಕಷ್ಟಪಡಹತ್ತಿದಳು. ಅವಳ ಆ ಸ್ಥಿತಿಯನ್ನು ಮನಗಂಡು ರಾಮಚಂದ್ರ ಮಾತನಾಡಿದ-``ಇಂದಿರಾ, ಇದೇನು? ನಿನಗೆ ನಮ್ಮ ಮಾತುಗಳು ತಿಳಿದವಷ್ಟೇ??''

ಕಂಠದಲ್ಲಿ ಉಕ್ಕಿಬರುತ್ತಿರುವ ಭಾವನೆಯ ಆವೇಗವನ್ನು ಹತ್ತೊತ್ತಿಕೊಳ್ಳುತ್ತ ಇಂದಿರೆಯು ಹೇಳಿದಳು-- ``ಇಲ್ಲ; ಎಳ್ಳಷ್ಟೂ ಇಲ್ಲ. ಎಲ್ಲವೂ ಗೋಡೆ.''

ಅವಳ ಮಾತನ್ನು ಕೇಳಿ ರಾಮಚಂದ್ರ ಮಂಕನಂತಾದ. ಶೇಷಾಚಲನಿಗೂ ಸೋಜಿಗವಾಯಿತು. ಆವರೆಗೆ ಇಂದಿರೆಯನ್ನು ತಾನು ಗೆಲ್ಲುತ್ತಿರುವದಾಗಿ ತಿಳಿದುಕೊಂಡ ರಾಮಚಂದ್ರನ ಹುಚ್ಚು ಹಾರಿಹೋಯಿತು. ನೀಳವಾದ ನಿಟ್ಟುಸಿರೊಂದನ್ನು ಬಿಟ್ಟು ರಾಮಚಂದ್ರ ನುಡಿದ-- ``ಇಂದಿರಾ-!''

ಇಂದಿರೆಯು, ಕಣ್ಣರೆಪ್ಪೆಗಳ ನಡುವೆ ತೊಡಕಿಕೊಂಡ ನೀರಿನ ತೆಳುವಾದ ಪರೆಯೊಳಗಿನಿಂದ ಮೆಲ್ಲನೆ ತನ್ನ ಅರ್ಥಗರ್ಭಿತವಾದ ನೋಟವನ್ನು ಚಾಚಿ ನೋಡಿದಳು. ಆದರೆ ಅದರ ಅರ್ಥವನ್ನು ರಾಮಚಂದ್ರನೂ ಗ್ರಹಿಸದೆ ಹೋದ; ನಿರಾಶೆಯ ವೇದನೆಯಿಂದ ಒಳದನಿಯಲ್ಲೇ ಮಾತನಾಡಿದ-- ``ಇಂದಿರಾ!.......; ಹಾಗಾದರೇನು ನಾನು ಕಟ್ಟಿಕೊಂಡ ಕನಸುಗಳನ್ನೆಲ್ಲ ನಾನೇ ಮಣ್ಣುಗೂಡಿಸಬೇಕಾಯಿತು. ನನ್ನ ಜೀವನಪಥದಲ್ಲಿ ಶೇಷಾಚಲನು ಊರುಗೋಲಂತೆ; ನೀನು ಕೈ ದೀಪದಂತೆ ಎಂದುಕೊಂಡಿದ್ದೆ. ನೀನಿನ್ನು ಆ ದೀಪವನ್ನು ಕಸಿದುಕೊಳ್ಳುವವಳಷ್ಟೆ........!!!''

ರಾಮಚಂದ್ರನ ಬಲಗೈಯನ್ನು ನಡುಗುತ್ತಿರುವ ತನ್ನ ಕೈಗಳಿಂದ ಓಡಿದುಕೊಂಡು ಇಂದಿರೆಯೆಂದಳು-- ``ನೀವು ಹಾಗೆಲ್ಲ ತಿಳಿದುಕೊಳ್ಳಬೇಡಿ. ವಿಚಾರದ ಹೆಮ್ಮೆಗೊಳಗಾಗಿ ಭಾವನೆಗಳನ್ನು ಕೊಂದುಬಿಡುವವಳು ನಾನಲ್ಲ. ಬುದ್ಧಿಗಿಂತಲೂ ಅಂತಃಕರಣವೂ ಹೆಚ್ಚು ಸತ್ವವುಳ್ಳದೆಂಬುದನ್ನು ನಾನು ಬಲ್ಲೆ. ನನ್ನ ಬುದ್ಧಿಗೆ ನಿಲುಕದ ಎಷ್ಟೋ ಮಾತುಗಳನ್ನು ಈಗಲೀಗ ನಾನು ನನ್ನ ಅಂತಃ

ಕರಣದಿಂದ ತಿಳಿದುಕೊಳ್ಳಬಲ್ಲವಳಾಗಿದ್ದೇನೆ. ಮೊದಮೊದಲು ನನ್ನ ಬುದ್ಧಿಯು ನನ್ನನ್ನು ಹೊಲ್ಲದ ಹೆಮ್ಮೆಗೀಡು ಮಾಡಿದ್ದೇನೋ ನಿಜವೆ. ಆದರೆ ಇಷ್ಟು ದಿನದ ನಿಮ್ಮ ಕಷ್ಟಗಳನ್ನು ಕಣ್ಣಾರೆ ಕಂಡು, ಇನ್ನು ಮುಂದೆ ನೀವು ಪಡಬಹುದಾದ ಸಂಕಟಗಳನ್ನು ನೆನೆದು ನನ್ನ ಅಂತಃಕರಣದ ಬಾಗಿಲು ತೆರೆಯಿತು. ಅಲ್ಲಿ ಕಾವಲು ನಿಂತಿದ್ದ ಬುದ್ಧಿಯು ಮೋರೆಯಡಗಿಸುತ್ತಿದೆ. ಅದರಿಂದ ನಿಮ್ಮ ವಿಚಾರಗಳು ನನಗೆ ತಿಳಿಯದಿದ್ದರೂ, ನನ್ನ ವಿಚಾರಗಳೊಡನೆ ಅವು ಹೊಂದುಗೂಡದಿದ್ದರೂ, ನಿಮ್ಮ ದುಃಖ ಸಂಕಟಗಳಲ್ಲಾದರೂ ನಾನು ಪಾಲುಗಾರ್ತಿಯಾಗಬೇಕೆಂದೆನಿಸುತ್ತಲಿದೆ. ನಮ್ಮ ವಿಚಾರಗಳು ಕೂಡದಿದ್ದರೂ ಅಂತಃಕರಣಗಳು ಕೂಡಿಲ್ಲವೇ--!....!....!"

ಇಂದಿರೆಯ ಮಾತುಗಳನ್ನು ಕೇಳಿ ರಾಮಚಂದ್ರನಿಗೆ ಹೋದಜೀವ ಹಿಂದಿರುಗಿ ಬಂದಂತಾಯಿತು. ತಾನು ಓದಿದ ಆ ಕವಿತೆಯಲ್ಲಿಯ ದೇವಿಯೇ ತನ್ನ ಸತ್ವಪರೀಕ್ಷೆಗಾಗಿ ಅಲ್ಲಿಗೆ ಬಂದು ಹಾಗೆ ಮಾತನಾಡುತ್ತಿರುವಂತೆ ಆತನಿಗೆ ತೋರಿತು. ಎದೆಯಲ್ಲಿ ಹುದುಗಿಕೊಂಡಿದ್ದ ಹಿಗ್ಗು ತನ್ನ ಮೈಯೆಂತ ಹರಿದಾಡುತ್ತಲಿರಲು ರಾಮಚಂದ್ರ ಮಾತನಾಡಿದ--

``ಇಂದಿರಾ, `ಬುದ್ಧಿಗೆ ನಿಲುಕದ ಎಷ್ಟೋ ಮಾತುಗಳನ್ನು ಅಂತಃಕರಣವು ತಿಳಿದುಕೊಳ್ಳಬಲ್ಲದು' ಎಂದು ನೀನು ಹೇಳಿದೆಯಲ್ಲವೆ! ಅದು ನಿತ್ಯಸತ್ಯವಾದ ಮಾತು. ಅಂತಃಕರಣದ ಬೆಂಬತ್ತಿಬುದ್ಧಿಯು ತಾನೇ ಬರುವದೆಂದು ನಾನು ತಿಳಿಯುತ್ತೇನೆ. ನಿನಗೆ ಸರಿದೋರದಿದ್ದರೂ, ನಿನ್ನ ಅಂತಃಕರಣಕ್ಕಾಗಿ - ನಿನ್ನ ಹೃದಯದ ಪ್ರೀತಿಗಾಗಿ ನೀನು ನನಗೆ ಕೈನೆರವನ್ನೀಯುತ್ತಿರುವದು ನನ್ನ ಹಿರದಾದ ಭಾಗ್ಯ. ಇಂದಿರಾ, ನಾನೀವರೆಗೆ ಹಲವೆಡೆಗಳಲ್ಲಿ ಪಿಕೆಟಿಂಗ್ ಮಾಡಿ ಹಲವು ಜನರ ಮನವೊಲಿಸಿದ್ದೇನೆ. ಇನ್ನು ಮುಂದೆಯೂ ಹಾಗೆಯೆ ಸಾವಿರಾರು ಜನರ ಮನವೊಲಿಸಿಕೊಳ್ಳಲೂ ಬಹುದು--ಆದರೆ ಇಂದಿರಾ--, ಇಂದು ನಿನ್ನ ಹೃದಯದ ಬಾಗಿಲಲ್ಲಿ ಪಿಕೆಟಿಂಗ್ ಮಾಡಿ ನಿನ್ನ ಪ್ರೀತಿಯನ್ನು ಸ್ಥಿರವಾಗಿ ಗೆದ್ದುಕೊಂಡದ್ದು ಅವೆಲ್ಲವಕ್ಕಿಂತಲೂ ಮಿಗಿಲಿನದು. ಏತಕ್ಕೆಂದರೆ ನನ್ನಿಂದ

ಜಾರಿಹೋಗುತ್ತಲಿದ್ದ ನನ್ನ ಅರ್ಧಜೀವವು ಮರಳಿ ನನ್ನನ್ನು ಸೇರಿಕೊಂಡಿತು. ನಿನ್ನಿಂದ ನನ್ನ ಜೀವಿತವೂ-ಜೀವನಕಾರ್ಯವೂ ಪರಿಪೂರ್ಣವಾಗಬೇಕು. ನನ್ನ ಗೆಳಯ ಶೇಷಾಚಲನೆದುರಿಗೆ ಹಿಂದೊಮ್ಮೆ ನಾನೆಂದಂತೆ ನಿನಗೂ ಹೇಳುತ್ತೇನೆ, ಇಂದಿರಾ,-- ಪ್ರೇಮವು ನಮ್ಮನಮ್ಮಲ್ಲಿ ಇಟ್ಟುಕೊಂಡಿರುವ ಇಂಥ ಪ್ರೇಮವನ್ನೇ ನಾನು ನಮ್ಮ ತಾಯ್ನಾಡಿನಲ್ಲಿಟ್ಟುಕೊಂಡರೆ, ಅದರ ಶಕ್ತಿಯಿಂದ, -- ನಾವಿಬ್ಬರೂ ಒಬ್ಬರನ್ನೊಬ್ಬರು ಗೆದ್ದುಕೊಂಡಂತೆ--, ನಮ್ಮ ತಾಯ್ನಾಡನ್ನೂ ನಾವು ಮರಳಿ ಗೆದ್ದುಕೊಳ್ಳಬಹುದು."

ಆಗಷ್ಟ (೧೯೩೦)

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು-ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೇ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು 'ಜನಪ್ರಿಯ ಪುಸ್ತಕ ಮಾಲೆ' ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ 'ಜನಪ್ರಿಯ ಪುಸ್ತಕ ಮಾಲೆ'.